ಗುರುವಾರ, ಸೆಪ್ಟೆಂಬರ್ 16, 2021 | ಬೆಂಗಳೂರು | ₹ 6.00 | ಸಂಪುಟ 74| ಸಂಚಿಕೆ 258 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಹು ಆಯ್ಕೆ ಪ್ರಶ್ನೆಗಳಲ್ಲಿ ಉತ್ತರವನ್ನು ಗುರುತಿಸುವಾಗ ಕೆಲವು ಉಪಾಯಗಳನ್ನು ರೂಢಿ ಮಾಡಿಕೊಳ್ಳಬೇಕು. ಜೊತೆಗೆ ಸಾಮಾನ್ಯ ಜ್ಞಾನವನ್ನು ಬಳಸಿ ಉತ್ತರ ಬರೆಯಬೇಕಾಗುತ್ತದೆ.



ಕೋವಿಡ್ ಕಾಲದಲ್ಲಿ ಅಪರಾಧ ಇಳಿಕೆ 9

ಸಂಖ್ಯೆ-ಸುದ್ದಿ 90% ದೂರುಗಳ ತನಿಖೆಯೇ ಇಲ್ಲ 7

ಬೆಲೆ ಏರಿಕೆ ವಿರುದ್ಧ ಗುಡುಗಿದ ಸಿದ್ದರಾಮಯ್ಯ 8

ಸೆನ್ಸೆಕ್ಸ್	ನಿಫ್ಟಿ	₹/$
58,723 ▲	17,519 ▲	73.50 ▲

ಸಿಎಜಿ ವರದಿ: ನಗದು ಶಿಲ್ಕು ಇದ್ದರೂ ₹48,499 ಕೋಟಿ ಸಾಲ

ಖರ್ಚಾಗದ ₹29,826 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2019-20ರಲ್ಲಿ ಅವಾಸ್ತವಿಕ ಬಜೆಟ್ ರೂಪಿಸಿದ ಪರಿಣಾಮವಾಗಿ ₹29,826.44 ಕೋಟಿ ಅನುದಾನ ಬಳಕೆಯಾಗದೆ ವರ್ಷಾಂತ್ಯದಲ್ಲಿ ಆರ್ಥಿಕ ಇಲಾಖೆಗೆ ಮರಳಿತ್ತು ಎಂಬುದನ್ನು ಮಹಾಲೇಖಪಾಲರ (ಸಿಎಜಿ) ವರದಿ ಬಹಿರಂಗಪಡಿಸಿದೆ.

ರಾಜ್ಯ ಸರ್ಕಾರದ 2020ರ ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದಂತೆ ಸಿಎಜಿ ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿಯನ್ನು ಬುಧವಾರ ವಿಧಾನ ಸಭೆಯಲ್ಲಿ ಮಂಡಿಸಲಾಯಿತು. ರಾಜ್ಯದ ಬಜೆಟ್‌ನಲ್ಲಿ ಅನುಮೋದಿತ ಒಟ್ಟು ವೆಚ್ಚದ ಮೊತ್ತದ ಪೈಕಿ 29 ವಿವಿಧ ಅನುದಾನಗಳ ಅಡಿಯಲ್ಲಿ ಬಜೆಟ್‌ನ ಒಟ್ಟು ಅನುಮೋದಿತ ವೆಚ್ಚದ ಶೇ 11ರಷ್ಟು ಬಳಕೆಯಾಗದೇ ಉಳಿದಿತ್ತು ಎಂಬ ಉಲ್ಲೇಖ ವರದಿಯಲ್ಲಿದೆ.

ಉಳಿದಿದ್ದ ಅನುದಾನದಲ್ಲಿ ₹14,484.69 ಕೋಟಿಯನ್ನು (ಶೇ 49) ಮಾತ್ರ ನಿರ್ದಿಷ್ಟ ದಿನಾಂಕದೊಳಗೆ ಆರ್ಥಿಕ ಇಲಾಖೆಗೆ ಮರಳಿಸಲಾಗಿತ್ತು. ₹15,341.75 ಕೋಟಿ (ಶೇ 51) ಅನುದಾನವನ್ನು ಹಿಂದಿರುಗಿಸಿರಲಿಲ್ಲ. ₹11,374.87 ಕೋಟಿಯನ್ನು ಆರ್ಥಿಕ ವರ್ಷದ ಕೊನೆಯ ಎರಡು ದಿನಗಳಲ್ಲಿ ಮರಳಿಸಲಾಗಿತ್ತು ಎಂಬುದನ್ನು ಸಿಎಜಿ ಗುರುತಿಸಿದೆ.

'ರಾಜ್ಯ ಸರ್ಕಾರದ ಬಜೆಟ್ ಹೆಚ್ಚು ವಾಸ್ತವಿಕವಾಗಿರಬೇಕು. ಅನುದಾನಗಳು ಬಳಕೆಯಾಗದೆ ಉಳಿಯುವುದನ್ನು ತಪ್ಪಿಸಲು ಬಜೆಟ್ ಅಂದಾಜು ಪ್ರಕ್ರಿಯೆಯಲ್ಲಿನ ನಿಯಂತ್ರಣವನ್ನು ಎಲ್ಲ ಇಲಾಖೆಗಳಲ್ಲೂ ಬಲಪಡಿಸಬೇಕು' ಎಂದು ಮಹಾಲೇಖಪಾಲರು ಶಿಫಾರಸು ಮಾಡಿದ್ದಾರೆ.

ಅನಗತ್ಯ ಪೂರಕ ಅಂದಾಜು: ಕೆಲವು ಇಲಾಖೆಗಳಲ್ಲಿ ಬಜೆಟ್‌ನಲ್ಲಿ ಮಂಜೂರು ಮಾಡಿದ ಮೊತ್ತವನ್ನು ಸಂಪೂರ್ಣ ಬಳಕೆ ಮಾಡದೇ ಇದ್ದರೂ ಅವಾಸ್ತವಿಕವಾಗಿ ಪೂರಕ ಅಂದಾಜುಗಳನ್ನು ಮಂಡಿಸಿ, ಹೆಚ್ಚುವರಿ ಅನುದಾನ ಪಡೆಯಲಾಗಿತ್ತು. 11 ಅನುದಾನಗಳಲ್ಲಿನ ಒಂಬತ್ತು ಶೀರ್ಷಿಕೆಗಳ ಅಡಿಯಲ್ಲಿ ಈ ರೀತಿ ₹ 340.97 ಕೋಟಿ ಪಡೆಯಲಾಗಿತ್ತು. 14 ಅನುದಾನಗಳಲ್ಲಿನ 12 ಶೀರ್ಷಿಕೆಗಳ ಅಡಿಯಲ್ಲಿ ಅಗತ್ಯಕ್ಕಿಂತಲೂ ಹೆಚ್ಚು ಮೊತ್ತದ ಪೂರಕ ಅಂದಾಜುಗಳನ್ನು ಮಂಜೂರು ಮಾಡಿದ್ದ ಕಾರಣದಿಂದ ₹1,680.15 ಕೋಟಿ ಬಳಕೆಯಾಗದೇ ಉಳಿದಿತ್ತು ಎಂದು ವರದಿ ಹೇಳಿದೆ.

'12 ಅನುದಾನಗಳಲ್ಲಿ ಆರ್ಥಿಕ ವರ್ಷದ ಕೊನೆಯಲ್ಲಿ ₹5,369.27 ಕೋಟಿ ಬಳಕೆಯಾಗದೇ ಉಳಿದಿತ್ತು. ಆದರೆ, ಅದನ್ನು ರಾಜ್ಯ ಸರ್ಕಾರದ ಖಾತೆಗೆ ವಾಪಸ್ ಸಂದಾಯ ಮಾಡದೇ ಇರುವುದು ಕಂಡುಬಂದಿದೆ. ಪೂರಕ ಅಂದಾಜುಗಳನ್ನು ಹೆಚ್ಚು ವಾಸ್ತವಿಕವಾಗಿ ಮತ್ತು ಅಗತ್ಯಕ್ಕೆ ತಕ್ಕಂತೆ ತಯಾರಿಸಬೇಕು. ಇದರಿಂದ ಅನವಶ್ಯಕ ಮತ್ತು ಅಧಿಕ ಅನುದಾನ ಮಂಜೂರಾತಿ ತಪ್ಪಿಸಬಹುದು' ಎಂದು ಸಿಎಜಿ ಶಿಫಾರಸು ಮಾಡಿದೆ.

10ನೇ ಪುಟ ನೋಡಿ



ಪಿ.ಡಿ ಖಾತೆಗಳಲ್ಲೇ ಉಳಿದ ₹ 4,221 ಕೋಟಿ

2020ರ ಮಾರ್ಚ್ ಅಂತ್ಯಕ್ಕೆ ₹ 4,221.56 ಕೋಟಿ ಅನುದಾನ ಬಳಕೆಯಾಗದೇ ಸರ್ಕಾರದ ವಿವಿಧ ಇಲಾಖೆಗಳು ಮತ್ತು ಸಂಸ್ಥೆಗಳ ಅಧಿಕಾರಿಗಳ ವೈಯಕ್ತಿಕ ಠೇವಣಿ (ಪಿ.ಡಿ) ಖಾತೆಗಳಲ್ಲಿ ಉಳಿದಿತ್ತು. 2018-19ಕ್ಕೆ ಹೋಲಿಸಿದರೆ ಪಿ.ಡಿ ಖಾತೆಗಳಲ್ಲಿನ ಶಿಲ್ಕು ಮೂರು ಪಟ್ಟಾಗಿತ್ತು ಎಂದು ಸಿಎಜಿ ಹೇಳಿದೆ.

4 ವರ್ಷ: ಸಾಲ ಶೇ 84ರಷ್ಟು ಹೆಚ್ಚಳ

2015-16ನೇ ಆರ್ಥಿಕ ವರ್ಷದ ಅಂತ್ಯದಲ್ಲಿ ರಾಜ್ಯ ಸರ್ಕಾರದ ಒಟ್ಟು ಸಾಲದ ಮೊತ್ತ ₹ 1,83,322 ಕೋಟಿ ಇತ್ತು. 2019-20ರ ಅವಧಿಯಲ್ಲಿ ಒಟ್ಟು ಸಾಲದ ಮೊತ್ತ ₹ 3,37,520 ಕೋಟಿಗೆ ಏರಿಕೆಯಾಗಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಸಾಲದ ಮೊತ್ತ ಶೇ84ರಷ್ಟು ಹೆಚ್ಚಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಪ್ರತಿಭಟನೆ

ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ಹಾಗೂ ಸಿಐಟಿಯು ಸಹಯೋಗದಲ್ಲಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆದ ಪ್ರತಿಭಟನೆಯಲ್ಲಿ ಸಾವಿರಾರು ಸಿಬ್ಬಂದಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಸುದ್ದಿ 04

ಶಿಕ್ಷಕರ ವರ್ಗಾವಣೆ ತಾತ್ಕಾಲಿಕ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020-2021ನೇ ಸಾಲಿನ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ.

'ವರ್ಗಾವಣೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ಸೆ. 7ರಂದು ತಡೆಯಾಜ್ಞೆ ನೀಡಿದೆ. ಹೀಗಾಗಿ, ಈ ಕ್ರಮ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಾಂಕವನ್ನು ತಿಳಿಸಲಾಗುವುದು' ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಪ್ರಾಥಮಿಕ ಮತ್ತು ಪ್ರೌಢ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ತತ್ಸಮಾನ ವೃಂದದ ಶಿಕ್ಷಕರ ವರ್ಗಾವಣೆಗೆ ಜೂನ್ 30ರಂದು ಅಧಿಸೂಚನೆ ಹೊರಡಿಸಲಾಗಿತ್ತು. ವರ್ಗಾವಣೆ ಬಯಸಿ 75 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅರ್ಜಿ ಸಲ್ಲಿಸಿದ್ದಾರೆ.

ಶಿಕ್ಷಕರ ವರ್ಗಾವಣೆ ಕಾಯ್ದೆಗೆ ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಮಾಡಿ 2019-20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದವರಿಗೆ ಕೌನ್ಸಲಿಂಗ್ ವೇಳೆ ವಿಶೇಷ ಆದ್ಯತೆ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ಕೆಎಟಿ ಮೆಟ್ಟಿಲೇರಿದ್ದ 2016-17ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿರುವ ಶಿಕ್ಷಕರು, 'ತಮಗೂ ವಿಶೇಷ ಆದ್ಯತೆ ನೀಡಬೇಕು' ಎಂದು ಮನವಿ ಮಾಡಿದ್ದರು. ಅರ್ಜಿಯನ್ನು ವಿಚಾರಣೆಗೆ ಪರಿಗಣಿಸಿರುವ ನ್ಯಾಯಮಂಡಳಿ, ವರ್ಗಾವಣೆ ಪ್ರಕ್ರಿಯೆಗೆ ತಡೆಯಾಜ್ಞೆ ನೀಡಿತ್ತು.

ಭೂಸ್ವಾಧೀನಾಧಿಕಾರಿ ಎಸಿಬಿ ಬಲೆಗೆ 04

ಸುಂಟಿಕೊಪ್ಪ: ಡೆಲ್ಟಾ ವೈರಸ್ ಪತ್ತೆ- ಆತಂಕ 10

ಶಿಫಾರಸು ನಿರ್ಲಕ್ಷ್ಯ: 'ಸುಪ್ರೀಂ' ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ನ್ಯಾಯಮೂರ್ತಿಗಳ ನೇತೃತ್ವದ ಶೋಧನಾ ಸಮಿತಿಯು ವಿವಿಧ ನ್ಯಾಯಮಂಡಳಿಗಳಿಗೆ ನೇಮಿಸಲು ಶಿಫಾರಸು ಮಾಡಿದ ಹೆಸರುಗಳಲ್ಲಿ ಕೆಲವನ್ನು ಮಾತ್ರ ಆಯ್ದುಕೊಳ್ಳುವ ಪ್ರವೃತ್ತಿ ಬಗ್ಗೆ ಸುಪ್ರೀಂ ಕೋರ್ಟ್ ತೀವ್ರ ಅಸಮಾಧಾನವನ್ನು ಬುಧವಾರ ವ್ಯಕ್ತಪಡಿಸಿದೆ.

'ನ್ಯಾಯಮಂಡಳಿಗಳಿಗೆ ನೇಮಕದ ವಿಚಾರದಲ್ಲಿ ಸರ್ಕಾರವು ಕೊನೆಯ ಕ್ಷಣದಲ್ಲಿ ತನಗೆ ಬೇಕಾದುದನ್ನು ಮಾಡುವುದಾಗಿದ್ದರೆ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನೇತೃತ್ವದ ಸಮಿತಿಯು ಮಾಡುವ ಶಿಫಾರಸುಗಳಿಗೆ ಏನು ಬೆಲೆ ಇದೆ' ಎಂದು ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ಪೀಠವು ಪ್ರಶ್ನಿಸಿದೆ.

ನ್ಯಾಯಾಂಗ ಕ್ಷೇತ್ರದ ಹುದ್ದೆಗಳಿಗಾಗಿ 534 ಮತ್ತು ತಾಂತ್ರಿಕ ಹುದ್ದೆಗಳಿಗಾಗಿ 425 ವ್ಯಕ್ತಿಗಳ ಸಂದರ್ಶನವನ್ನು ನಡೆಸಲಾಗಿದೆ. ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ ನ್ಯಾಯಾಂಗ ಕ್ಷೇತ್ರದ 11 ಮತ್ತು ತಾಂತ್ರಿಕ ಕ್ಷೇತ್ರದ 11 ವ್ಯಕ್ತಿಗಳ ಹೆಸರನ್ನು ನೇಮಕಕ್ಕೆ ಶಿಫಾರಸು ಮಾಡಲಾಗಿದೆ. ಆದರೆ, ಕೆಲವರಿಗೆ ಮಾತ್ರ ನೇಮಕಾತಿ ಪತ್ರ ಕಳುಹಿಸಲಾಗಿದೆ. ಉಳಿದವರ ನೇಮಕವನ್ನು ಕಾಯ್ದಿರಿಸಲಾಗಿದೆ ಎಂದು ಪೀಠವು ಹೇಳಿದೆ.

'ಆಯ್ಕೆಯಾದ ಅಭ್ಯರ್ಥಿಗಳನ್ನು ಕಡೆಗಣಿಸಿ, ಕಾಯ್ದಿರಿಸಿದ ಪಟ್ಟಿಯಲ್ಲಿರುವವರನ್ನು ನೇಮಕ ಮಾಡಿಕೊಳ್ಳಲಾಗದು. ಇದು ಯಾವ ರೀತಿಯ ನೇಮಕಾತಿ ವಿಧಾನ' ಎಂದು ಕೇಂದ್ರವನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಅಧ್ಯಕ್ಷರು, ನ್ಯಾಯಾಂಗ ಮತ್ತು ತಾಂತ್ರಿಕ ಕ್ಷೇತ್ರದ ಸದಸ್ಯರ ಕೊರತೆ ನ್ಯಾಯಮಂಡಳಿಗಳಲ್ಲಿ ತೀವ್ರವಾಗಿದೆ.

9ನೇ ಪುಟ ನೋಡಿ

'ಸರ್ಕಾರದ ಮಾತೇ ಅಂತಿಮವೇ?'

ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಹೆಸರುಗಳನ್ನೇ ನೇಮಕ ಮಾಡಬೇಕು ಎಂದೇನಿಲ್ಲ. ಶಿಫಾರಸುಗಳನ್ನು ಸ್ವೀಕರಿಸದೇ ಇರುವ ಅಧಿಕಾರ ಸರ್ಕಾರಕ್ಕೆ ಇದೆ ಎಂದು ವೇಣುಗೋಪಾಲ್ ಹೇಳಿದ್ದು ಪೀಠದ ಆಕ್ರೋಶಕ್ಕೆ ಕಾರಣವಾಯಿತು.

'ನಮ್ಮದು ಪ್ರಜಾಪ್ರಭುತ್ವ ದೇಶ. ಇಲ್ಲಿ ಎಲ್ಲರೂ ಕಾನೂನು ಪಾಲಿಸಬೇಕು. ನಾವೆಲ್ಲರೂ ಸಂವಿಧಾನದ ಅಡಿಯಲ್ಲಿ ಕೆಲಸ ಮಾಡುತ್ತಿದ್ದೇವೆ. ನಾವು (ಸರ್ಕಾರ) ಅದನ್ನು ಸ್ವೀಕರಿಸಲಾಗದು ಎಂದು ಹೇಳಲು ಸಾಧ್ಯವಿಲ್ಲ' ಎಂದು ರಮಣ ಹೇಳಿದರು.

ಬೇಗನೆ ಸಂದರ್ಶನ ನಡೆಸಲು ಸರ್ಕಾರ ಕೋರಿತ್ತು. ಕೋವಿಡ್ ಸಮಯದಲ್ಲೂ ವಿವಿಧೆಡೆಗೆ ಭೇಟಿ ಕೊಟ್ಟು ಸಂದರ್ಶನ ನಡೆಸಿದ್ದು ವ್ಯರ್ಥವಾಯಿತು ಅಷ್ಟೇ

ಎನ್.ವಿ. ರಮಣ, ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ

ಕಸಾಪ ಚುನಾವಣೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಧಾರವಾಡ: 'ಕನ್ನಡ ಸಾಹಿತ್ಯ ಪರಿಷತ್‌ಗೆ ಶೀಘ್ರವೇ ಚುನಾವಣೆ ನಡೆಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಕೆಯಾಗಿದ್ದ ಅರ್ಜಿಯನ್ನು ನಿಯಮಾನುಸಾರ ಪರಿಗಣಿಸಿ, ಎರಡು ತಿಂಗಳ ಒಳಗಾಗಿ ಇತ್ಯರ್ಥಗೊಳಿಸಬೇಕು' ಎಂದು ಹೈಕೋರ್ಟ್‌ನ ಧಾರವಾಡ ಪೀಠ ಸರ್ಕಾರಕ್ಕೆ ಬುಧವಾರ ನಿರ್ದೇಶನ ನೀಡಿದೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಗುಮಗೇರಾದ ಶೇಖರ ಗೌಡ ಮಾಲಿಪಾಟೀಲ ಎಂಬುವವರು ಈ ಕುರಿತು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಇದನ್ನು ಪುರಸ್ಕರಿಸಿದ ನ್ಯಾಯಾಲಯ, ಅರ್ಜಿದಾರರ ಮನವಿಯನ್ನು ಶೀಘ್ರದಲ್ಲಿ ವಿಲೇವಾರಿ ಮಾಡುವಂತೆ ಆದೇಶಿಸಿದೆ.

4ನೇ ಪುಟ ನೋಡಿ

7.50 ಲಕ್ಷ ಪಿಂಚಣಿದಾರರ ಭೌತಿಕ ಪರಿಶೀಲನೆ

4.19 ಲಕ್ಷ ಮಂದಿ 'ಅನರ್ಹ'

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ವಿಶೇಷ

ಬೆಂಗಳೂರು: ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವಾ, ಅಂಗವಿಕಲ ಸೇರಿದಂತೆ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಲ್ಲಿನ ಪಿಂಚಣಿ ಫಲಾನುಭವಿಗಳ ಪೈಕಿ, 4.19 ಲಕ್ಷ ಮಂದಿಯನ್ನು ಅನರ್ಹರೆಂದು ಗುರುತಿಸಿ ರಾಜ್ಯ ಸರ್ಕಾರ ಪಿಂಚಣಿ ರದ್ದು ಮಾಡಿದೆ. ಆ ಮೂಲಕ, ವಾರ್ಷಿಕ ₹ 504 ಕೋಟಿ ಬೊಕ್ಕಸದಲ್ಲೆ ಉಳಿದಿದೆ.

ಪಿಂಚಣಿ ಫಲಾನುಭವಿಗಳನ್ನು ನಿಖರವಾಗಿ ಗುರುತಿಸಲು ಆಧಾರ್ ಕಡ್ಡಾಯಗೊಳಿಸಲಾಗಿದೆ. ಈವರೆಗೆ ಶೇ 95.58 ಫಲಾನುಭವಿಗಳ ಆಧಾರ್ ಹೊಂದಿಕೆ ಆಗಿದೆ. ಅಸಮರ್ಪಕ ವಿಳಾಸ, ಅಂಚೆ ಸಂಖ್ಯೆ, ಬ್ಯಾಂಕ್ ಖಾತೆ ಹೊಂದಿಲ್ಲದ ಒಟ್ಟು 7.50 ಲಕ್ಷ ಪ್ರಕರಣಗಳಲ್ಲಿ ಪಿಂಚಣಿದಾರರನ್ನು ಭೌತಿಕವಾಗಿ ಪರಿಶೀಲನೆಗೆ ಒಳಪಡಿಸಿ, ಅನರ್ಹರನ್ನು ಗುರುತಿಸಲಾಗಿದೆ ಎಂದು ಕಂದಾಯ ಇಲಾಖೆ ಮೂಲಗಳು ತಿಳಿಸಿವೆ.

'ಪಿಂಚಣಿ ಅನರ್ಹರ ಪಾಲಾಗಬಾರದು. ಮೃತಪಟ್ಟವರನ್ನು ಯೋಜನೆಯಿಂದ ಹೊರಗಿಡಬೇಕು. ಆದರೆ, ಆಧಾರ್ ಜೋಡಣೆ ಗೊಂದಲ, ತಪ್ಪು ವಿಳಾಸ, ಬ್ಯಾಂಕ್ ಸಮಸ್ಯೆ-ಹೀಗೆ ನಾನಾ ಕಾರಣಗಳಿಗೆ ಪಿಂಚಣಿ ರದ್ದತಿ ಸರಿಯಾದ ಕ್ರಮವಲ್ಲ. ಉಳಿತಾಯದ ಹೆಸರಿನಲ್ಲಿ ಅರ್ಹರ ಹಕ್ಕಿಗೆ ಕತ್ತರಿ ಪ್ರಯೋಗ ಆಗಬಾರದು. ಗ್ರಾಮಗಳಲ್ಲಿ ಸಮೀಕ್ಷೆ ನಡೆಸುವ ನೆಪದಲ್ಲಿ ಅಧಿಕಾರಿಗಳು ಅರ್ಹರನ್ನೂ ಅನರ್ಹಗೊಳಿಸಿದ್ದಾರೆ. ಇಂಥ ಪ್ರಕರಣಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಶೀಲಿಸಬೇಕು' ಎನ್ನುವುದು ಪಿಂಚಣಿದಾರರ ಮನವಿ.

'ಅರ್ಹ ಪಿಂಚಣಿದಾರರನ್ನು ಸ್ಥಳೀಯವಾಗಿ ಪರಿಶೀಲಿಸುವಂತೆ ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ನಿರ್ದೇಶನಾಲಯದಿಂದ ಆಗಾಗ ಪಟ್ಟಿ ಬರುತ್ತದೆ. ಅನೇಕರು ಇನ್ನೂ ಆಧಾರ್ ನೀಡಿಲ್ಲ. ವಾಸ ಸ್ಥಳ, ಬ್ಯಾಂಕಿಗೆ ಆಧಾರ್ ಜೋಡಣೆ, ವಾರ್ಷಿಕ ಆದಾಯ ಮಿತಿ ಹೆಚ್ಚಳ ಪರಿಶೀಲಿಸುವಂತೆ ಕೇಂದ್ರ ಕಚೇರಿಯಿಂದ ಸೂಚಿಸಲಾಗುತ್ತದೆ. ವಾಸ ಬದಲಿಸಿದ ಅನೇಕರು ಆಧಾರ್‌ನಲ್ಲಿ ತಿದ್ದುಪಡಿ ಮಾಡಿರುವುದಿಲ್ಲ. 80-90 ವರ್ಷ ವಯೋಮಾನ ದಾಟಿದವರು ಆಧಾರ್ ತಿದ್ದುಪಡಿಗೆ ಮುಂದಾದರೂ, ಅವರ ಬಯೋಮೆಟ್ರಿಕ್ ತೆಗೆದುಕೊಳ್ಳುವುದೇ ಇಲ್ಲ. ಓಡಾಡಲು ಸಾಧ್ಯ ಇಲ್ಲದೇ ಇರುವುದರಿಂದ ಆಧಾರ್ ಮಾಡಿಸದ ಅಂಗವಿಕಲರೂ ಇದ್ದಾರೆ. ಹೀಗೆ ಅರ್ಹತೆ ಇದ್ದರೂ ಇಂಥ ಸಮಸ್ಯೆಗಳಿಂದ ಅನೇಕರು ಪಿಂಚಣಿ ವಂಚಿತರಾಗಿರುವ ನಿದರ್ಶನಗಳಿವೆ' ಎಂದು ಉಪ ತಹಶೀಲ್ದಾರ್‌ರೊಬ್ಬರು ಅಭಿಪ್ರಾಯ ವ್ಯಕ್ತಪಡಿಸಿದರು.

10ನೇ ಪುಟ ನೋಡಿ

ಅನರ್ಹರ ಪತ್ತೆ ಹೇಗೆ?

'ಪಿಂಚಣಿದಾರರ ವಾರ್ಷಿಕ ಭೌತಿಕ ಪರಿಶೀಲನೆ ನಡೆಸಲಾಗುತ್ತಿದೆ. ವಿವಿಧ ಇಲಾಖೆಗಳ ದತ್ತಾಂಶಗಳಲ್ಲಿನ ಮಾಹಿತಿ ಆಧರಿಸಿ (ಇ-ಜನ್ಮ, ಪಡಿತರಚೀಟಿ) ಮೃತ, ವಲಸೆ, ಅನರ್ಹರನ್ನು ಗುರುತಿಸಲಾಗುತ್ತದೆ. ವಿವಿಧ ಯೋಜನೆಗಳಲ್ಲಿ ನಕಲು ಪತ್ತೆ ಹಚ್ಚಲು ಎಲ್ಲ ಹಂತಗಳಲ್ಲೂ ಆಧಾರ್ ಹಾಗೂ ಬ್ಯಾಂಕ್ ಖಾತೆ ಮತ್ತು ಇತರ ಕಾರ್ಯವಿಧಾನದ ಮೂಲಕ 'ಡಿ-ಡುಪ್ಲಿಕೇಷನ್' ವ್ಯವಸ್ಥೆ ಮಾಡಲಾಗುತ್ತದೆ. ಇ-ಆಡಳಿತ ಇಲಾಖೆಯ ಕುಟುಂಬ ದತ್ತಾಂಶದೊಂದಿಗೆ ಪಿಂಚಣಿ ದತ್ತಾಂಶವನ್ನು ಸಂಪರ್ಕಿಸಿ, ವಯಸ್ಸು, ಕೃಷಿ ಭೂಮಿ, ಮಾಲೀಕತ್ವ, ಆದಾಯ ಸೇರಿದಂತೆ ಲಭ್ಯ ಮಾನದಂಡಗಳ ಆಧಾರದಲ್ಲಿ ಸ್ವಯಂ ಪ್ರೇರಿತವಾಗಿ ಪಿಂಚಣಿ ಸೌಲಭ್ಯ ಒದಗಿಸಲಾಗುತ್ತದೆ' ಎಂದು ಕಂದಾಯ ಇಲಾಖೆ ಮೂಲಗಳು ತಿಳಿಸಿವೆ.

ಪಿಂಚಣಿದಾರರ ಭೌತಿಕ ಪರಿಶೀಲನೆ ಸಂದರ್ಭದಲ್ಲಿ ಕುಟುಂಬ ದತ್ತಾಂಶ ಆಧರಿಸಿ, ಮೃತ, ವಲಸೆ, ಅನರ್ಹ ಫಲಾನುಭವಿಗಳನ್ನು ಗುರುತಿಸಿ ಪಿಂಚಣಿ ರದ್ದುಪಡಿಸಲಾಗುತ್ತದೆ.

ಆರ್. ಅಶೋಕ, ಕಂದಾಯ ಸಚಿವ

ದೂರಸಂಪರ್ಕ: ಶೇ 100ರಷ್ಟು ಎಫ್‌ಡಿಐಗೆ ಅವಕಾಶ

ಪ್ರಜಾವಾಣಿ ವಾರ್ತೆ

ನವದೆಹಲಿ: ದೂರಸಂಪರ್ಕ ವಲಯಕ್ಕೆ ಸಂಬಂಧಿಸಿದ ಸುಧಾರಣಾ ಕ್ರಮಗಳನ್ನು ಬುಧವಾರ ಘೋಷಿಸಿರುವ ಕೇಂದ್ರ ಸರ್ಕಾರ, ಈ ವಲಯದಲ್ಲಿ ಪೂರ್ವಾನುಮತಿ ಇಲ್ಲದೆಯೇ ಶೇಕಡ 100ರಷ್ಟು ವಿದೇಶಿ ನೇರ ಬಂಡವಾಳ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸಿದೆ. ಇದುವರೆಗೆ, ಪೂರ್ವಾನುಮತಿ ಇಲ್ಲದೆ ಶೇ 49ರಷ್ಟು ಎಫ್‌ಡಿಐಗೆ ಅವಕಾಶ ಇತ್ತು.

ಆದರೆ, 'ಶೇ 100ರಷ್ಟು ಎಫ್‌ಡಿಐಗೆ ಅವಕಾಶ' ಎನ್ನುವ ನಿಯಮವು ಭಾರತದ ಜೊತೆ ಗಡಿಯನ್ನು ಹಂಚಿಕೊಂಡಿರುವ ದೇಶಗಳಿಗೆ ಅನ್ವಯ ಆಗುವುದಿಲ್ಲ.

ದೂರಸಂಪರ್ಕ ವಲಯದ ಕಂಪನಿಗಳು ಸರ್ಕಾರಕ್ಕೆ ಕೊಡಬೇಕಿರುವ ಬಾಕಿ ಮೊತ್ತ ಪಾವತಿಗೆ ನಾಲ್ಕು ವರ್ಷಗಳ ಕಾಲಾವಕಾಶ ನೀಡುವ ತೀರ್ಮಾನವನ್ನೂ ಕೇಂದ್ರ ಸಂಪುಟವು ಕೈಗೊಂಡಿದೆ. ಕೇಂದ್ರಕ್ಕೆ ಸಹಸ್ರಾರು ಕೋಟಿ ರೂಪಾಯಿ ಪಾವತಿಸಬೇಕಿರುವ ವೊಡಾಫೋನ್ ಐಡಿಯಾದಂತಹ ಕಂಪನಿಗಳಿಗೆ ಈ ತೀರ್ಮಾನದಿಂದಾಗಿ ಸಹಾಯ ಆಗಲಿದೆ ಎನ್ನಲಾಗಿದೆ.

ಹೊಂದಾಣಿಕೆ ಮಾಡಿದ ಒಟ್ಟು ಆದಾಯದ (ಎಜಿಆರ್) ವ್ಯಾಖ್ಯಾನದಲ್ಲಿ ಬದಲಾವಣೆ ತಂದಿರುವ ಕೇಂದ್ರವು, ದೂರಸಂಪರ್ಕ ವಲಯದ ಕಂಪನಿಗಳು ದೂರಸಂಪರ್ಕ ಸೇವೆ ಅಲ್ಲದೆ ಇತರ ಸೇವೆಗಳಿಂದ ಪಡೆಯುವ ಆದಾಯವನ್ನು ಎಜಿಆರ್ ಲೆಕ್ಕಾಚಾರದಿಂದ ಹೊರಗೆ ಇರಿಸಿದೆ. ಈ ವಲಯದಲ್ಲಿ ಹಣಕಾಸಿನ ಬಿಕ್ಕಟ್ಟು ಸೃಷ್ಟಿಯಾಗಲು ಎಜಿಆರ್ ಒಂದು ಪ್ರಮುಖ ಕಾರಣವಾಗಿತ್ತು.

ಒಳ ಪುಟಗಳು

ಮಕ್ಕಳಿಗೆ ಕೋವಿಡ್ ಪರೀಕ್ಷೆ: ಸೂಚನೆ 3A

ಧಾರಾವಿಯಲ್ಲಿ ಡ್ರೈವರ್ ಆಗಿದ್ದ ಶೇಖ್ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜೆಇಇ: ರಾಜ್ಯದ ಗೌರವ್ ದಾಸ್‌ಗೆ ಮೊದಲ ರ್‍ಯಾಂಕ್

ನವದೆಹಲಿ (ಪಿಟಿಐ): ಜೆಇಇ (ಮೇನ್) ಫಲಿತಾಂಶ ಪ್ರಕಟವಾಗಿದ್ದು, ಕರ್ನಾಟಕದ ಗೌರವ್ ದಾಸ್ ಸೇರಿದಂತೆ 44 ಅಭ್ಯರ್ಥಿಗಳು 100 ಪರ್ಸೆಂಟೈಲ್ ಅಂಕ ಗಳಿಸಿದ್ದಾರೆ.

ಗೌರವ್ ದಾಸ್

18 ಅಭ್ಯರ್ಥಿಗಳು ಅಗ್ರ ಶ್ರೇಯಾಂಕ ಪಡೆದಿದ್ದಾರೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ಶೇಕಡ (ಪರ್ಸೆಂಟ್) ಅಂಕಗಳ ಬದಲಿಗೆ ಒಟ್ಟು ವಿದ್ಯಾರ್ಥಿಗಳಲ್ಲಿ ಶೇಕಡ ಪ್ರಮಾಣವನ್ನು ಪರಿಗಣಿಸಿ, ಫಲಿತಾಂಶ ಪ್ರಕಟಿಸಲಾಗುತ್ತದೆ. ಇದಕ್ಕೆ ಪರ್ಸೆಂಟೈಲ್ ಎಂದು ಹೇಳಲಾಗುತ್ತದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಒಟ್ಟು ನಾಲ್ಕು ಹಂತಗಳಲ್ಲಿ ಜೆಇಇ (ಮೇನ್) ಆಯೋಜಿಸಿತ್ತು. 13 ಭಾಷೆಗಳಲ್ಲಿ ನಡೆದ ಪರೀಕ್ಷೆಗಳಿಗೆ 9.34 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಿದ್ದರು.

ನಾಲ್ಕು ಹಂತಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಅಭ್ಯರ್ಥಿಗಳ ಅಂಕಗಳನ್ನು ಪರಿಗಣಿಸಲಾಗಿದೆ.

ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಹಾಗೂ ಅಂಕ ಗಳಿಕೆಯನ್ನು ಸುಧಾರಿಸಿಕೊಳ್ಳಲು ಅವಕಾಶ ನೀಡುವ ಸಲುವಾಗಿ ಈ ವರ್ಷದಿಂದ ಅನ್ವಯವಾಗುವಂತೆ ಜೆಇಇ (ಮೇನ್) ಅನ್ನು ನಾಲ್ಕು ಹಂತಗಳಲ್ಲಿ ನಡೆಸಲಾಗಿತ್ತು.

ಐಐಟಿ ಸೇರುವ ಗುರಿ...

ಸದ್ಯ ಗೌರವ್ ದಾಸ್ ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ಪಡೆಯಲು ಅಮೆರಿಕದ ಪರ್ಡ್ಯೂ ವಿಶ್ವವಿದ್ಯಾಲಯ ಸೇರಿಕೊಂಡಿದ್ದಾರೆ. ಆದರೆ, ಅವರು ಭಾರತದಲ್ಲಿ ಜೆಇಇ ಅಡ್ವಾನ್ಸ್ಡ್ ಪರೀಕ್ಷೆ ಬರೆಯಲು ನಿರ್ಧರಿಸಿದ್ದಾರೆ. ಅಲ್ಲದೇ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಸೇರುವ ಗುರಿ ಹೊಂದಿದ್ದಾರೆ.

4ನೇ ಪುಟ ನೋಡಿ



This season, make your dreams come true.

Book the Mercedes-Benz C-Class and bring home a rush of adrenaline with DreamFest - a never-before bundle of exclusive benefits. You also stand a chance to win an exhilarating, once-in-a-lifetime trip to an F1 race, gain access to the Paddock Club, and meet the racing legend, Lewis Hamilton.

DREAMFEST Low Interest Rate of 6.99% | Easy10: Lowest EMIs for 10 Years | Star Agility: Assured Buy-back with 40% Lesser EMIs | Complimentary Insurance

Mercedes-Benz Financial

Sundaram Motors: Bangalore, Phone : 96864 56215, Rest of Karnataka, Phone: 90084 42155
www.sundarammotors.mercedes-benz.co.in
Our network : Bengaluru | Chennai | Coimbatore | Madurai | Mangalore | Salem

*Mercedes-Benz Financial is the business division of Daimler Financial Services India Pvt. Ltd. (DFSI CIN: U67190TN2010FTC077890) and the Corporate Agent (License No: CA0180) of IRDA for Reliance General Insurance, Tata AIG General Insurance and ICICI Lombard General Insurance. Insurance is a subject matter of solicitation, for more details on risk factors, terms and conditions, please refer to the product brochure or contact the nearest Mercedes-Benz dealership. Accessories, colours and fitments shown may not be part of standard specification. The C-Class meets Bharat Stage VI equivalent emission norms. Please visit http://mb4.me/C-class14 for accessing the applicable terms & conditions for Lucky draw contest and attending F1 Event. Sundaram Motors - CIN: U34101TN1929PTC002973

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನೈರುತ್ಯ ರೈಲ್ವೆ
E-Tender Notice No. 28/MYS/2021
Dated: 13.09.2021
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಮೈಸೂರು – ರೈಲ್ವೆ ನಿಲ್ದಾಣ ಕಟ್ಟಡ ಮತ್ತು ವಿಭಾಗ ಕಚೇರಿಯಲ್ಲಿ ಛಾವಣಿ ಸೋರಿಕೆ ಮತ್ತು ಬಹಿರಂಗ ರಿಇನ್ಫೋರ್ಸ್ಮೆಂಟ್‌ನ ದುರಸ್ತಿ.	Rs. 55,26,319/-
2	ಸೇತುವೆ ಸಂಖ್ಯೆ 706ಎ ಲೋಕಪಾವನಿ, ಸೇತುವೆ ಸಂಖ್ಯೆ 725ಎ ಕಾವೇರಿ ಉತ್ತರ, ಸೇತುವೆ ಸಂಖ್ಯೆ 726ಎ ಕಾವೇರಿ ದಕ್ಷಿಣ, ಸೇತುವೆ ಸಂಖ್ಯೆ 104ಎ ಯಟಚಿ ಗೆ ಪ್ಲೇಟ್ ಫಾರ್ಮ್‌ನ ತಪಾಸಣೆ ಒದಗಿಸುವುದು (ಮರು–ಟೆಂಡರ್)	Rs. 2,68,10,380/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05–10–2021, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವಿಭಾಗೀಯ ರೈಲ್ವೆ ವ್ಯವಸ್ಥಾಪಕರು/ಕಾಮಗಾರಿಗಳು ಮೈಸೂರು
PUB/192/AAV/PRB/SWR/2021-22
S.W.Railways SWRRLY SWRRLY

ನಿಮ್ಹಾನ್ಸ್: ವಜಾಗೊಂಡಿದ್ದ ಕಾರ್ಮಿಕರ ಮರುನೇಮಕ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) 19 ಕಾರ್ಮಿಕರನ್ನು ಮರುನೇಮಕ ಮಾಡಿಕೊಂಡಿದೆ. ಇದರಿಂದಾಗಿ ಕಾರ್ಮಿಕರ 68 ದಿನಗಳ ಪ್ರತಿಭಟನೆ ಬುಧವಾರ ಅಂತ್ಯಗೊಂಡಿದೆ.

19 ಜನ ಕಾರ್ಮಿಕರಲ್ಲಿ 15 ಮಂದಿ ಮಹಿಳೆಯರಿದ್ದರು. ಇವರನ್ನು ಕಳೆದ ಜು.9ರಂದು ಕೆಲಸದಿಂದ ವಜಾಗೊಳಿಸಲಾಗಿತ್ತು. ಅವರು ನಿಮ್ಹಾನ್ಸ್ ಪ್ರಗತಿಪರ ವರ್ಕರ್ಸ್ ಯೂನಿಯನ್ (ಎನ್‌ಪಿಡಬ್ಲ್ಯುಯು) ನೇತೃತ್ವದಲ್ಲಿ ಸಂಸ್ಥೆಯ ಆವರಣದಲ್ಲಿಯೇ ಪ್ರತಿಭಟನೆ ಕೈಗೊಂಡಿದ್ದರು.

‘ರಾತ್ರಿ ಪಾಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಸಾರಿಗೆ ವ್ಯವಸ್ಥೆ ಕೇಳಿದ್ದಕ್ಕೆ ನಿಮ್ಹಾನ್ಸ್ ಆಡಳಿತ ಮಂಡಳಿ ಕೆಲಸದಿಂದ ವಜಾ ಮಾಡಿದೆ’ ಎಂದು ಎನ್‌ಪಿಡಬ್ಲ್ಯುಯು ಆರೋಪಿಸಿತ್ತು.

‘ಕಾರ್ಮಿಕರ ಹೋರಾಟವು ನಿಮ್ಹಾನ್ಸ್ ಇತಿಹಾಸದಲ್ಲಿ ಐತಿಹಾಸಿಕವಾಗಿ ಉಳಿಯಲಿದೆ. ಕಾರ್ಮಿಕರನ್ನು ಗುಲಾಮರಂತೆ ನೋಡುವುದನ್ನು ಬಿಡಬೇಕು’ ಎಂದು ಯೂನಿಯನ್ ತಿಳಿಸಿದೆ.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ–584115, ಲಿಂಗಸುಗೂರು–ತಾ. ರಾಯಚೂರು ಜಿಲ್ಲೆ, ಕರ್ನಾಟಕ.
ದೂ: 08537–275740/276339/275463 ಇ–ಮೇಲ್: material276339@gmail.com
ವೆಬ್‌ಸೈಟ್: www.huttigold.co.in
ಟಿಎನ್‌ಓ.31/21–22 ಸಂ: ಹೆಚ್‌ಜಿಎಂಎಲ್/ಇಓಐ/02/2021–22 ದಿನಾಂಕ: 16.09.2021
ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ (ಇಓಐ) ಟೆಂಡರ್ ಪ್ರಕಟಣೆ
ಹಟ್ಟಿ, ಊಟಿ, ಹೀರಾಬುದ್ದಿನ್ನಿ ಚಿನ್ನದ ಗಣಿಗಳ ಭೂ ಅನ್ವೇಷಣೆ ಜೊತೆಗೆ ಪರಿಶೋಧನಾತ್ಮಕ, ಗಣಿ ಅಭಿವೃದ್ಧಿಯ ಸಮಗ್ರ ವರದಿಗಾಗಿ/ ಅಧ್ಯಯನಕ್ಕಾಗಿ ಆಸಕ್ತಿ ವ್ಯಕ್ತಪಡಿಸುವುದು(EOI)
ಮೇಲಿನ ಅಂಶಗಳ ಪರಿಣಿತಿ ಮತ್ತು ಅನುಭವ ಹೊಂದಿರುವ ಗಣಿಯ ಸಲಹಾಗಾರರು /ಸಲಹಾ ಸಂಸ್ಥೆ/ಸಲಹಾ ವ್ಯಕ್ತಿಗಳನ್ನು ಈ ಕಾರ್ಯಕ್ಕೆ ಅರ್ಹತಾ ಮಾನದಂಡ ಇತ್ಯಾದಿಯಂತಹ ಅಗತ್ಯ ವಿವರಗಳಿಗಾಗಿ www.eproc.karnataka.gov.in ನೋಡಬಹುದು. ಅಪೇಕ್ಷಿತ ಏಜೆನ್ಸಿಗಳು ಇಓಐನಲ್ಲಿ ಭಾಗವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಜಿಒಕೆ, ಬೆಂಗಳೂರಿನಲ್ಲಿ ನೋಂದಾಯಿಸಿಕೊಳ್ಳಬೇಕು.
ಟೆಂಡರ್ ವೇಳಾಪಟ್ಟಿ.

ಪ್ರಿ–ಬಿಡ್ ಸಭೆ (Zoom)	: 25.09.2021 ಬೆಳಿಗ್ಗೆ 11.30 ಗಂಟೆಗೆ
ಬಿಡ್ ಸ್ವೀಕರಿಸುವ ಕಡೆಯ ದಿನಾಂಕ	: 30.09.2021 ಸಂಜೆ 4.00 ಗಂಟೆಗೆ
ಬಿಡ್ ತೆರೆಯುವ ದಿನಾಂಕ & ಸಮಯ	: 04.10.2021 ಬೆಳಿಗ್ಗೆ 10.00 ಗಂಟೆಗೆ

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)
ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ನಗರದಲ್ಲಿ ಇಂದು

‘ತೇಜಸ್ವಿ ಜೀವಲೋಕ–9, ಕುರಿಂಜಿ ಲೋಕ’ ಛಾಯಾಚಿತ್ರ, ಸಾಕ್ಷ್ಯಚಿತ್ರ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮ: ಆಯೋಜನೆ: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆ, ಕರ್ನಾಟಕ ಚಿತ್ರಕಲಾ ಪರಿಷತ್, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ ಹಾಗೂ ಪೀಣ್ಯ ಕೈಗಾರಿಕಾ ಸಂಘ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪ ರಸ್ತೆ, ಬೆಳಿಗ್ಗೆ 11

ಶಿಕ್ಷಕರ ದಿನಾಚರಣೆ, ಶಿಕ್ಷಣ ಇಲಾಖೆಯಿಂದ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಶಿಕ್ಷಕರಿಗೆ ಸನ್ಮಾನ ಸಮಾರಂಭ: ಉದ್ಘಾಟನೆ: ಸಚಿವ ಬಿ.ಸಿ. ನಾಗೇಶ್, ಅಧ್ಯಕ್ಷತೆ: ಕೊಂಡಜ್ಜಿ ಬ. ಷಣ್ಮುಖಪ್ಪ, ಸನ್ಮಾನಿಸುವವರು: ಪಿ.ಜಿ.ಆರ್. ಸಿಂಧ್ಯ, ಮುಖ್ಯ ಅತಿಥಿಗಳು: ವಿ. ಸುಮಂಗಲಾ, ಗೀತಾ ರಾಮಾನುಜ, ಗೀತಿಕಾ ಕರೋಲಾ, ಆಯೋಜನೆ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಮಧ್ಯಾಹ್ನ 3

ಬೇರೆ ಸಾರಿಗೆ ರಾತ್ರಿವರೆಗೂ ಸಂಚರಿಸುವಾಗ ಬಿಎಂಆರ್‌ಸಿಎಲ್‌ಗೆ ಏನು ಸಮಸ್ಯೆ: ಸಂಸದರ ಪ್ರಶ್ನೆ

ಮೆಟ್ರೊ ಸೇವೆ ಸೀಮಿತ: ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಸೇವೆಯ ಅವಧಿ ಬೆಳಿಗ್ಗೆ 7ರಿಂದ ರಾತ್ರಿ 8ರವರೆಗೆ ಸೀಮಿತಗೊಂಡಿದೆ. ಸೇವೆಯ ಅವಧಿಯನ್ನು ವಿಸ್ತರಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದರೂ ಕ್ರಮ ಕೈಗೊಳ್ಳದ ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಧೋರಣೆಗೆ ನಗರವನ್ನು ಪ್ರತಿನಿಧಿಸುವ ಸಂಸದರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ವಿಮಾನಯಾನ ಸೇವೆಗಳು ಸೇರಿದಂತೆ ಎಲ್ಲ ವಿಧದ ಸಾರಿಗೆಗಳೂ ಮಧ್ಯರಾತ್ರಿವರೆಗೂ ಕಾರ್ಯಾಚರಿಸುತ್ತಿವೆ. ನಮ್ಮ ಮೆಟ್ರೊ ಸೇವೆಯನ್ನು ಮಾತ್ರ ಮೊಟಕುಗೊಳಿಸಿರುವುದು ಯಾವ ನ್ಯಾಯ’ ಎಂದು ಸಂಸದರು ಪ್ರಶ್ನೆ ಮಾಡಿದರು.

ನಿಗಮವು ಆದಷ್ಟು ಬೇಗ ಕಾರ್ಯಾಚರಣೆಯ ಅವಧಿಯನ್ನು ವಿಸ್ತರಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕು ಎಂದು ನಾಲ್ವರು ಸಂಸದರೂ ಒತ್ತಾಯಿಸಿದರು.

ನಮ್ಮ ಮೆಟ್ರೊ

‘ಕೇಂದ್ರ ಸಚಿವರ ಗಮನಕ್ಕೆ ತರುತ್ತೇನೆ’

ಕೋವಿಡ್ ಹರಡುವಿಕೆ ಕಡಿಮೆ ಆದ ಬಳಿಕ ನಿರ್ಬಂಧಗಳನ್ನು ಸಡಿಲ ಮಾಡಬೇಕೇ ಹೊರತು ಮುಂದುವರಿಸುವುದು ಸೂಕ್ತ ಅಲ್ಲ. ಇದು ಉಚಿತವೂ ಅಲ್ಲ. ನಗರದ ಜನರು ಸಂಜೆವರೆಗೂ ಕೆಲಸ ಮಾಡುತ್ತಾರೆ. ಅವರ ದೈನಂದಿನ ವ್ಯವಹಾರ ಹಾಗೂ ಶಾಪಿಂಗ್‌ಗಳೇನಿದ್ದರೂ ಕಚೇರಿ ಅವಧಿಯ ನಂತರವೇ ಜಾಸ್ತಿ. ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ಓಡಾಡುವುದೇ ರಾತ್ರಿ 8 ಗಂಟೆ ನಂತರ. ಈ ಸಂದರ್ಭದಲ್ಲೇ ಜನರ ಸಂಚಾರಕ್ಕೆ ಅನುಕೂಲ ಕಲ್ಪಿಸಲು ಮೆಟ್ರೊ ಸೇವೆ ಒದಗಿಸದಿದ್ದರೆ ಹೇಗೆ.

ನಗರದಲ್ಲಿ ನಮ್ಮ ಮೆಟ್ರೊ ಸೇವೆ ಈ ಹಿಂದೆ ರಾತ್ರಿ 11ಗಂಟೆವರೆಗೂ ಇತ್ತು. ಅದನ್ನು 8 ಗಂಟೆಗೆ ಸೀಮಿತಗೊಳಿಸಬಾರದು ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರಿಗೂ ಹೇಳಿದ್ದೇನೆ. ರಾಜ್ಯ ಸರ್ಕಾರದ ಗಮನಕ್ಕೂ ತಂದಿದ್ದೇನೆ. ಕೇಂದ್ರ ನಗರಾಭಿವೃದ್ಧಿ ಸಚಿವ ಹರ್‌ದೀಪ್ ಸಿಂಗ್ ಪುರಿ ಅವರ ಜೊತೆಗೂ ಈ ಬಗ್ಗೆ ಮಾತನಾಡುತ್ತೇನೆ.

ಡಿ.ವಿ.ಸದಾನಂದ ಗೌಡ, ಸಂಸದ, ಬೆಂಗಳೂರು ಉತ್ತರ

‘ಸರ್ಕಾರದ ಮಟ್ಟದಲ್ಲಿ ಶೀಘ್ರ ತೀರ್ಮಾನ’

ಬೆಂಗಳೂರು ದಿನದ 24x7 ಗಂಟೆಯೂ ಚಟುವಟಿಕೆಗಳಿಂದ ಕೂಡಿರುವ ನಗರ. ಯಾವುದೇ ಅಂತರಾಷ್ಟ್ರೀಯ ನಗರದಲ್ಲಿ ದಿನದ 24 ಗಂಟೆಗಳೂ ಯಾವುದಾದರೂ ಒಂದು ಸಾರ್ವಜನಿಕ ಸಾರಿಗೆ ವ್ಯವಸ್ಥೆ ಲಭ್ಯವಿರುತ್ತದೆ. ಬೆಂಗಳೂರನ್ನು ಮತ್ತಷ್ಟು ಅಭಿವೃದ್ಧಿಗೊಳಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ನಗರವನ್ನಾಗಿ ಮಾಡಬೇಕೆನ್ನುವುದು ಮುಖ್ಯಮಂತ್ರಿಗಳ ಕನಸು ಕೂಡಾ.

‘ನಮ್ಮ ಮೆಟ್ರೊ’ ರಾತ್ರಿ ಬೇಗ ಕಾರ್ಯಾಚರಣೆ ಸ್ಥಗಿತಗೊಳಿಸುತ್ತಿರುವುದು ನನ್ನ ಗಮನಕ್ಕೂ ಬಂದಿದೆ.ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರ ಜೊತೆ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಮಾತನಾಡಿ ಮೆಟ್ರೊ ಸೇವೆ ಪೂರ್ಣಪ್ರಮಾಣದಲ್ಲಿ ಲಭ್ಯವಿರುವಂತೆ ವ್ಯವಸ್ಥೆ ಮಾಡುವಂತೆ ಕೇಳಿಕೊಳ್ಳುತ್ತೇನೆ.

ಕೋವಿಡ್ ಕಾರಣದಿಂದಾಗಿ ಮೆಟ್ರೊ ಸೇವೆಯನ್ನು ರಾತ್ರಿ 8 ಗಂಟೆಗೆ ಸ್ಥಗಿತಗೊಳಿಸಲಾಗುತ್ತಿದೆ. ಈಗ ಬೇರೆಲ್ಲ ಸೇವೆಗಳು ಪೂರ್ಣಪ್ರಮಾಣದಲ್ಲಿ ತೆರೆದಿರುವುದರಿಂದ ಬೆಂಗಳೂರು ಮೆಟ್ರೊ ರೈಲುಗಳು ಸಹ ಪೂರ್ಣ ಪ್ರಮಾಣದಲ್ಲಿ ಚಲಿಸಬಹುದು. ಈ ಕುರಿತು ಸರ್ಕಾರದ ಮಟ್ಟದಲ್ಲಿ ಆದಷ್ಟು ಬೇಗ ತೀರ್ಮಾನ ತೆಗೆದುಕೊಳ್ಳಲಾಗುವುದು.

ತೇಜಸ್ವಿ ಸೂರ್ಯ, ಸಂಸದ ಬೆಂಗಳೂರು ದಕ್ಷಿಣ

‘ಸೇವೆ ವಿಸ್ತರಿಸಲು ನಿಗಮಕ್ಕೆ ಏನು ಸಮಸ್ಯೆ’



ಕೊರೊನಾ ಹರಡುವಿಕೆ ಕಡಿಮೆ ಆಗಿದೆ. ಜನರ ಓಡಾಟ ಹೆಚ್ಚುತ್ತಿದೆ. ಹಾಗಾಗಿ ನಮ್ಮ ಮೆಟ್ರೊ ಸೇವೆಯ ಅವಧಿ ವಿಸ್ತರಣೆ ಮಾಡುವುದು ಒಳ್ಳೆಯದು. ಬಿಎಂಟಿಸಿ ಬಸ್‌ಗಳು ಓಡುತ್ತಿವೆ. ಕೆಎಸ್‌ಆರ್‌ಟಿಸಿ ಬಸ್‌ಗಳೂ ಸಂಚರಿಸುತ್ತಿವೆ. ರೈಲು ಓಡುತ್ತಿದೆ. ವಿಮಾನಗಳೂ ಹಾರಾಟ ನಡೆಸುತ್ತಿವೆ. ಹಾಗಿರುವಾಗ ಮೆಟ್ರೊ ರೈಲು ಸೇವೆ ವಿಸ್ತರಿಸಲು ಬಿಎಂಆರ್‌ಸಿಎಲ್‌ಗೆ ಏನು ಸಮಸ್ಯೆ. ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ಅವರನ್ನು ಭೇಟಿಯಾಗಿ ನಮ್ಮ ಮೆಟ್ರೊ ಸೇವೆಯ ಅವಧಿ ವಿಸ್ತರಣೆ ಮಾಡುವ ಬಗ್ಗೆ ಒತ್ತಾಯಿಸುತ್ತೇನೆ.

ಪಿ.ಸಿ.ಮೋಹನ್, ಸಂಸದ, ಬೆಂಗಳೂರು ಕೇಂದ್ರ

‘ರಾತ್ರಿ 11 ಗಂಟೆವರೆಗಾದರೂ ಸೇವೆ ಲಭಿಸಲಿ’

ಕೋವಿಡ್ ನಿಯಂತ್ರಣಕ್ಕಾಗಿ ಹೇರಲಾದ ಲಾಕ್‌ಡೌನ್ ಅನ್ನು ಈಗಾಗಲೇ ಸಡಿಲಗೊಳಿಸಲಾಗಿದೆ. ಎಲ್ಲ ರೀತಿಯ ಕೈಗಾರಿಕೆಗಳು, ಉದ್ಯಮಗಳ ಕಾರ್ಯಾಚರಣೆಗೆ ಸರ್ಕಾರ ಅವಕಾಶ ಮಾಡಿಕೊಟ್ಟಿದೆ. ಮಾರುಕಟ್ಟೆಗಳು, ಅಂಗಡಿ ಮಳಿಗೆಗಳು ರಾತ್ರಿ 9 ಗಂಟೆವರೆಗೆ ವಹಿವಾಟು ನಡೆಸಲು ಅನುವು ಮಾಡಿಕೊಡಲಾಗಿದೆ. ಖರೀದಿ ಮುಗಿಸಿ ಜನ ಮನೆಗೆ ಮರಳುವಾಗ ರಾತ್ರಿ 10.30ರವರೆಗೂ ಆಗುತ್ತದೆ. ಹಾಗಾಗಿ ನಮ್ಮ ಮೆಟ್ರೊ ಸೇವೆಯನ್ನು ಈ ಹಿಂದಿನಂತೆ ರಾತ್ರಿ 11 ಗಂಟೆವರೆಗಾದರೂ ವಿಸ್ತರಿಸಬೇಕು.

ಗಾರ್ಮೆಂಟ್ಸ್ ಸೇರಿದಂತೆ ವಿವಿಧ ಕಾರ್ಖಾನೆಗಳ ಕಾರ್ಮಿಕರು ಬೆಳಿಗ್ಗೆ ಕೆಲಸಕ್ಕೆ ಹೋಗಲು ಮೆಟ್ರೊವನ್ನು ಅವಲಂಬಿಸಿದ್ದಾರೆ. ಬೆಳಿಗ್ಗೆಯೂ 7 ಗಂಟೆಗಿಂತ ಮುನ್ನವೇ ಮೆಟ್ರೊ ಸೇವೆ ಆರಂಭಿಸಿದರೆ ಒಳ್ಳೆಯದು. ಕನಿಷ್ಠ ಪಕ್ಷ ಹಿಂದೆ ಇದ್ದಷ್ಟು ಹೊತ್ತಾದರೂ ಮೆಟ್ರೊ ಸೇವೆ ಲಭಿಸಬೇಕು. ಬೇರೆ ಸಾರಿಗೆಗಳಿಗೆ ಅವಕಾಶ ಕಲ್ಪಿಸಿ ಮೆಟ್ರೊ ಸೇವೆಯನ್ನು ಮಾತ್ರ ಬೇಗ ಮೊಟಕುಗೊಳಿಸಿದರೆ ಸಾರ್ವಜನಿಕರಿಗೆ ಸಮಸ್ಯೆ ಆಗಲಿದೆ.

ಡಿ.ಕೆ.ಸುರೇಶ್, ಸಂಸದ ಬೆಂಗಳೂರು ಗ್ರಾಮಾಂತರ

‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮುಸ್ಲಿಂ ಲೇಖಕರ ಸಂಘವು ‘ಮುಸ್ಲಿಂ ಸಾಹಿತ್ಯ ಪ್ರಶಸ್ತಿ’ಗೆ ಕೃತಿಗಳನ್ನು ಆಹ್ವಾನಿಸಿದೆ.

ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. 2020ರ ಜ.1ರಿಂದ ಡಿ.31ರೊಳಗೆ ಕನ್ನಡದಲ್ಲಿ ಪ್ರಕಟಗೊಂಡ ಕೃತಿಗಳನ್ನು ಪ್ರಶಸ್ತಿಗೆ ಪರಿಗಣಿಸಲಾಗುತ್ತದೆ. ಬರಹಗಾರರು ಕೃತಿಯ ನಾಲ್ಕು ಪ್ರತಿಗಳನ್ನು ಇದೇ 30ರೊಳಗೆ ಸಂಚಾಲಕರು, ಮುಸ್ಲಿಂ ಸಾಹಿತ್ಯ ಪ್ರಶಸ್ತಿ, ಮುಸ್ಲಿಂ ಲೇಖಕರ ಸಂಘ, ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ, ಮಂಗಳೂರು-575001 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಸಂಘದ ಅಧ್ಯಕ್ಷ ಉಮರ್ ಯು.ಎಚ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಪರ್ಕಕ್ಕೆ: 9845054191 ಅಥವಾ 0824 2410358

ಸೇವಾ ಅವಧಿ ವಿಸ್ತರಣೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಸೇವಾ ಅವಧಿ ವಿಸ್ತರಿಸುವಂತೆ ಆಗ್ರಹಿಸಿ ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಒಂದು ವರ್ಷದ ಎರಡು ತಿಂಗಳಿಂದ ಕೋವಿಡ್ ಸೇವೆ ನೀಡುತ್ತಿರುವ ನಮ್ಮ ಸೇವಾ ಅವಧಿಯನ್ನು ವಿಸ್ತರಿಸಬೇಕು’ ಎಂದು ಗುತ್ತಿಗೆ ಆಧಾರದಲ್ಲಿ ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿ ಆಗ್ರಹಿಸಿದರು.

ಕೆ.ಸಿ. ಜನರಲ್ ಹಾಗೂ ಜಯನಗರ ಸಾರ್ವಜನಿಕ ಆಸ್ಪತ್ರೆಯ ಶುಶ್ರೂಷಕರು, ಪ್ರಯೋಗಾಲಯದ ತಂತ್ರಜ್ಞರು ಹಾಗೂ ಗ್ರೂಪ್ ಡಿ ಸಿಬ್ಬಂದಿ ವಿಕಾಸಸೌಧದ ಮುಂಭಾಗದ ರಸ್ತೆಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು. ‘ಸೇವಾ ಭದ್ರತೆ ಒದಗಿಸಬೇಕು’ ಎಂದು ಆಗ್ರಹಿಸಿದ ಪ್ರತಿಭಟನನಿರತ 70ಕ್ಕೂ ಅಧಿಕ ಮಂದಿ, ಇದೇ 17ಕ್ಕೆ ರಾಜ್ಯ ಮಟ್ಟದ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು. ಕೋವಿಡ್ ಕರ್ತವ್ಯಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಕರಾದವರ ಸೇವಾ ಅವಧಿ ಇದೇ 30ಕ್ಕೆ ಅಂತ್ಯವಾಗಲಿದೆ.

‘ಕೋವಿಡ್ ಮೊದಲ ಹಾಗೂ ಎರಡನೇ ಅಲೆಯ ಅವಧಿಯಲ್ಲಿ ಕುಟುಂಬದಿಂದ ಅಂತರ ಕಾಯ್ದುಕೊಂಡು ಸೋಂಕಿತರಿಗೆ ಸೇವೆ ನೀಡಿದ್ದೇವೆ. ಈ ವೇಳೆ ಹಲವು ಶುಶ್ರೂಷಕರು ಹಾಗೂ ಆರೋಗ್ಯ ಸಿಬ್ಬಂದಿ ಕೋವಿಡ್ ಪೀಡಿತರಾಗಿದ್ದಾರೆ. ನಮ್ಮ ಸೇವೆಯನ್ನು ಸರ್ಕಾರವು ಗುರುತಿಸಿಲ್ಲ. ಕೇವಲ ಹೂಮಳೆ ಸುರಿದು, ಚಪ್ಪಾಳೆ ತಟ್ಟಲಾಯಿತು. ಈಗ ಸೇವಾ ಅವಧಿ ವಿಸ್ತರಿಸದಿದ್ದಲ್ಲಿ ನಮ್ಮನ್ನೇ ಅವಲಂಬಿಸಿರುವ ಕುಟುಂಬಗಳು ಬೀದಿಗೆ ಬೀಳಲಿವೆ’ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ಕೋವಿಡ್ ಸೇವೆಗೆ ಕಾಯಂ ಸಿಬ್ಬಂದಿ ಹಿಂದೇಟು ಹಾಕುತ್ತಿದ್ದ ಅವಧಿಯಲ್ಲಿ ನಾವು ಸೇವೆ ನೀಡಿದ್ದೇವೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಎಚ್ಚರಿಕೆ ನೀಡಿರುವುದರಿಂದ ಸೇವಾ ಅವಧಿಯನ್ನು ವಿಸ್ತರಿಸಿ, ಉದ್ಯೋಗ ಭದ್ರತೆ ಒದಗಿಸಬೇಕು. ಇಲ್ಲದಿದ್ದರೆ ಇಲಾಖೆಯಲ್ಲಿನ ವಿವಿಧ ಯೋಜನೆಗಳಡಿ ನೇಮಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸುವಾಗ ನಮಗೆ ಮೊದಲ ಆದ್ಯತೆ ನೀಡಬೇಕು’ ಎಂದು ಪ್ರತಿಭಟನನಿರತ ಶುಶ್ರೂಷಕಿ ಸೌಮ್ಯಶ್ರೀ ಆಗ್ರಹಿಸಿದರು.

ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗಗಳಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಚಿನ್ನದಪದಕ ಪ್ರದಾನ ಮಾಡಲಾಯಿತು. ಕೆ.ಕೆ.ಅಗರವಾಲ್, ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ ಇದ್ದರು

ರೇವಾ ವಿ.ವಿ ಘಟಿಕೋತ್ಸವ: 3,800 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ 6ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ವಿವಿಧ ವಿಷಯಗಳಲ್ಲಿ ಪದವಿಗಳನ್ನು ಪೂರ್ಣಗೊಳಿಸಿದ 3,800ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಪ್ರತಿಭಾವಂತ ವಿದ್ಯಾರ್ಥಿಗಳು ಹಾಗೂ ವಿವಿಧ ವಿಭಾಗಗಳಲ್ಲಿ ಸಾಧನೆ ಮಾಡಿದ 45 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಹಾಗೂ 31 ಮಂದಿಗೆ ಪಿಎಚ್‌.ಡಿ ಪದವಿಗಳನ್ನು ನೀಡಲಾಯಿತು.

ಈ ವೇಳೆ ಮಾತನಾಡಿದ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯ ಅಧ್ಯಕ್ಷ ಕೆ.ಕೆ.ಅಗರವಾಲ್, ‘ಶಿಕ್ಷಣಾರ್ಥಿಗಳಿಗೆ ಸರ್ವರೀತಿಯ ಶಿಕ್ಷಣ ಮತ್ತು ಜಾಗತಿಕಮಟ್ಟದಲ್ಲಿ ಕಾರ್ಯನಿರ್ವಹಿಸಲು ಅಗತ್ಯ ತಾಂತ್ರಿಕ ತರಬೇತಿ ನೀಡಬೇಕಾದುದು ಇಂದಿನ ಶಿಕ್ಷಣದ ಅವಶ್ಯಕತೆ. ಈ ನಿಟ್ಟಿನಲ್ಲಿ ರೇವಾ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಜಾಗತಿಕಮಟ್ಟದಲ್ಲಿ ಸೇವೆ ಸಲ್ಲಿಸಲು ಅಗತ್ಯ ಶೈಕ್ಷಣಿಕ ಸೌಲಭ್ಯಗಳನ್ನು ನೀಡುವ ಮೂಲಕ ಸಮರ್ಥರೀತಿಯಲ್ಲಿ ಸಜ್ಜುಗೊಳಿಸುತ್ತಿದೆ’ ಎಂದರು.

ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುತ್ತಿರುವುದಕ್ಕೆ ಪೂರಕವಾಗಿ ರೇವಾ ವಿಶ್ವವಿದ್ಯಾಲಯವು ಈಗಾಗಲೇ ಹಲವಾರು ಬಹುಶಿಸ್ತೀಯ ಕೋರ್ಸ್‌ಗಳನ್ನು ಆರಂಭಿಸಿದೆ. ಕೋವಿಡ್ ಪರಿಸ್ಥಿತಿಯಲ್ಲಿ ಆಹಾರ, ಆರೋಗ್ಯ ಹಾಗೂ ಪರಿಸರ ಸಂರಕ್ಷಣೆ ಮಹತ್ವದ ವಿಷಯಗಳಾಗಿದ್ದು, ಈ ನಿಟ್ಟಿನಲ್ಲೂ ಸಹ ಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸಿದೆ. ಎಲ್ಲ ವಿದ್ಯಾರ್ಥಿಗಳಿಗೂ ಎರಡು ಬಾರಿ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡಿರುವ ವಿಶ್ವವಿದ್ಯಾಲಯದ ಕ್ರಮ ಶ್ಲಾಘನೀಯ’ ಎಂದರು.

ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, ‘ಹಲವು ವರ್ಷಗಳಿಂದ ನಮ್ಮಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಂದಿನ ಜಾಗತಿಕ ಸ್ಥಿತಿಗತಿಗೆ ಅಗತ್ಯವಿರುವ ಸಮಗ್ರ ಶಿಕ್ಷಣದ ಜೊತೆಗೆ ಸಾಮಾಜಿಕಸೇವೆ, ಪರಿಸರ ಕಾಳಜಿ, ಕಲೆ-ಸಂಸ್ಕೃತಿ ಹಾಗೂ ರಾಷ್ಟ್ರಪ್ರೇಮದಂತಹ ಉನ್ನತ ಮೌಲ್ಯಗಳನ್ನೂ ಕಲಿಸಲಾಗುತ್ತಿದೆ’ ಎಂದು ಅವರು ತಿಳಿಸಿದರು.

ಕುಲಪತಿ ಡಾ.ಎಂ.ಧನಂಜಯ, ಕುಲಸಚಿವ ಡಾ.ಎನ್.ರಮೇಶ್, ಪರೀಕ್ಷಾ ನಿಯಂತ್ರಣ ವಿಭಾಗದ ಮುಖ್ಯಸ್ಥೆ ಡಾ.ಜಿ.ಬೀನಾ ಉಪಸ್ಥಿತರಿದ್ದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

BUSINESS

Business Offers

Finance

NRI'S INVESTMENT And Finance AvailableOn LowInterest AgainstProperties, Land& Building,Sites,Flats, Converted& AgricultureLandsCall: 7411265189

JOB OPPORTUNITIES

General

NEEDED JUNIOR Lawyers to Law Office, PRABHAT Complex, KG Road, Bnglr-09. Below 30 years preferred. Send biodata to “jayaramkl1@gmail.com” WhatsApp 9901777772

WANTED OFFICE ASSISTANTS, HELPER, DRIVER. Bommanahalli (Bangalore) Ph: 9008755585/ 9344168305 Email: starsilks@gmail.com

Marketing & Sales

REQD. SALES Coordinator Bsc/Diploma in EC/EEE, 1 yr work ex. #080-23670051 ext-202/215/218 sales@convergenttech.in

Walk-in

LIFE INSURANCE- Walk-in Interviews Leading Life Insurance company is looking for Dynamic & Experienced Insurance professionals (Life/ Health) for Bangalore City, Salary + Incentive; Graduates 35 yrs below with required Experience call for details 7993856837. Only Male candidates respond.

PERSONAL

Change of Name

I, 'AME, Kalappa Thimmayya', holding India passport with address: '201 Bilad Dynasty Apartment 14th CR, Kengeri Satellite Town, Bengaluru Rural, PIN 560060, Karnataka, India' have changed my name to 'Ame, Thimmayya Kalappa' wherein 'Ame' is the Last Name (Surname), 'Thimmayya' is the First Name and 'Kalappa' is the Middle Name.

I, A. Seenappa S/o A. Gangappa aged 36 Years Permanent Address #1-195A, Main Road, Chowtakunta Palli, Ananthapur Andhra Pradesh-515501, R/at. #387, Siddhartha Nagar Madiwala, Bangalore-68. have changed my name to A. GANGADRI vide affidavit dated 15.09.2021 before notary A.S. Narayana Reddy, Bangalore.

I, SUSHMA Shankar Acharya ,W/O Pradeep Badiger changed my name to Sushma Acharya vide affidavit dated 14-Sep-21. Sworn before notary Y V Shankar B'luru-32

EDUCATION SPECIAL
We are coming out with special offer for Admission Notice, Education Success Congratulation Ads
DH DECCAN HERALD Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

HEALTH SPECIAL



ಶ್ರವಣ ಸಮಸ್ಯೆಯೇ??
ನಿಮ್ಮ ಶ್ರವಣ ಸಾಮರ್ಥ್ಯವನ್ನು ಇಂದೇ ಪರೀಕ್ಷಿಸಿಕೊಳ್ಳಿ!!!
ನಿಮ್ಮ ಮನೆಯಲ್ಲಿಯೇ ಕುಡುವೇವ್ ಬ್ಲೂಥ್‌ಲೆಸ್ ಆಡಿಯೋಮೀಟರ್ ಮುಖಾಂತರ
ಸೀಮಿತ ಅವಧಿಯ ಕೊಡುಗೆ ಅತ್ಯಾಧುನಿಕ ರಿಚಾರ್ಜೇಬಲ್ ಶ್ರವಣ ಸಾಧನಗಳ ಮೇಲೆ ವಿಶೇಷ ರಿಯಾಯಿತಿ ಪಡೆಯಿರಿ.
HHCC
www.hearingc.com ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್
4 ರಿಂದ 10 ಸೆಪ್ಟಂಬರ್ 2021 ರವರೆಗೆ ಮಾತ್ರ. ಸಂಪರ್ಕಿಸಿ!
99456 11100
ಬೆಂಗಳೂರು ಮತ್ತು ಕರ್ನಾಟಕದಾದ್ಯಂತ ಶಾಖೆಗಳಿವೆ

I, KODURUPATI MANASADEVI resident of No.438, Pyramid Mahika Apartment, 80ft Jakkur Road, Shivanahalli, Yelahanka, Bangalore-560064 have changed my name to KANDULA MANASA DEVI vide affidavit dated 09/09/2021 sworn before notary L.Veena, Bangalore

PARWEJALAM, BROTHER/O, 14868661W, SEP/MT, Share Alam Khan, Khizipur, Zamania, Ghazipur, Uttar Pradesh, have changed my name from PARWEJALAM to PARVEZ ALAM, 30/08/2021, Notary K.V. Mani, Bangalore

GOPIKA, Wife/o, 6494423H, HAV, Remjith T.P, Vill-Pallichal, Nemom, Neyyattinkara, Thiruvananthapuram, Kerala, have changed my name from GOPIKA to GOPIKA R.G, 14/09/2021, Notary K.V.Mani, Bangalore

I, SUSHMA Shankar Acharya W/O Pradeep Badiger, have changed my name to Sushma Acharya vide affidavit dates 14-Sep-21. Sworn before notary Y V Shankar, B'luru-32

I, H.N. VENKATRAMANA RAO resident of No.44, 10th Cross, Sri Hari Layout, Ullalu Main Road, Bangalore-560056 have changed my name to RAMESH H.N vide affidavit dated 15/09/2021, sworn before notary Ambika.S, Bangalore

I, SWASTIK SHASHIDARSHAN PAI R/o.#342, Vrindavan Garden Apartment, Hebbal Kempapura, Bengaluru-560024 Have Changed My Name to SAMARTH SHASHIDARSHAN PAI (Old Passport No. A8515038) vide Affidavit Dated: 15.09.2021 Sworn Before Notary L.Puttaraju, Bengaluru.

I, KOLLEGAL Abdul Rahiman S/o Mohamed Koya Hajee and Amina Residing at No.75, Brigade Road, Shanthinagar, Bangalore-560025. have changed my name to KOLLEGAL ABDUL REHMAN vide affidavit dated 14.09.2021 before notary A.S.Narayana Reddy, Bangalore

I , R.Padmavathi aged about 48 Years W/o R.Lokesh Residing at #6/1-C, 3rd Cross, 2nd Main, Srinivasa Layout, Bannerghatta Road, Arekere, Bangalore- 560076. have changed my name to R.PADMA vide affidavit dated 15.09.2021 before notary Gangaraju B N, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

I LEONARD Paul S/O A Paul Andrew residing at #23 3rd c main 9th cross St Thomas town post Ramaiah layout Bangalore 560084 has changed the name to Mohammed Ameen

I, G. Muniyappa S/o Late. Gangappa, resident of Bangalore, wrongly mentioned my minor Daughter's name as Varsha & my wife's name as Lakshmi in the documents here declaring that my Daughter's actual correct name is VARSHA. M and my wife's name is VIJAYALAKSHMI. V vide affidavit dated 15/09/2021 before notary H. Sridhar Rao, Bangalore

RENTAL PROPERTIES

Accommodation Available

House

RENT 3-BHK House 20000/-PM. & Single Room Attached Bath Room 4000/-PM(Veg Only),24hr Water, Near Ramaiah Engineering Bus Stop, Mattikere, Owner:080-23371030

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ
ಅಸಲು ದಾವಾ ನಂ. 21/2014
ವಾದಿಗಳು: ರೋಸ್ಲಿನ್ ನಳಿನ ಮತ್ತು ಇತರರು –ವಿರುದ್ಧ– ಪ್ರತಿವಾದಿಗಳು: ದಯಾಮಣಿರಾಮ ಮತ್ತು ಇತರರು.
2ನೇ ಪ್ರತಿವಾದಿ: ಆರ್.ಡಿ. ಸುಧೀವರತ್ನ, ಮೃತ ವಾರಸುದಾರರು, 2(ಎ) ಬಬಿತ ಬಿನ್ ಲೇಟ್ ಆರ್.ಡಿ. ಸುಧೀವರತ್ನ, ಸುಮಾರು 45 ವರ್ಷ, ವಾಸ: ನಂ.78, ಹೊಸ ನಂ.9, 2ನೇ ಕ್ರಾಸ್, ದಾಬಸ್ ಪೇಟೆ, ಮಿಲರ್ ರೋಡ್, ವಸಂತನಗರ, ಬೆಂಗಳೂರು. ದೂರವಾಣಿ ಸಂಖ್ಯೆ: 9535030530, 8892396823
ಪತ್ರಿಕಾ ಪ್ರಕಟಣೆ
ಮೇಲೆ ಹೆಸರಿಸಲಾದ ವಾದಿಗಳು ಈ ಮೇಲ್ಕಂಡ ನ್ಯಾಯಾಲಯದಲ್ಲಿ ನಿಮ್ಮ ಮತ್ತು ಇತರರ ವಿರುದ್ಧ ಭಾಗಾಂಶ ಕೋರಿ ಈ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ: 21/2014ರಂತೆ ದಾವೆ ಸಲ್ಲಿಸಿರುತ್ತಾರೆ. 2(ಎ) ಪ್ರತಿವಾದಿಗಳು ನಿಮಗೆ ಸಮನ್ ಮತ್ತು ನೋಟೀಸ್ ಜಾರಿಯಾಗಿರುವುದಿಲ್ಲ. ಇತರೆ ಪ್ರತಿವಾದಿಗಳು ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಆದುದರಿಂದ 2ನೇ ಪ್ರತಿವಾದಿಯ ಮಗಳಾದ ನೀವು ಈ ದಾವೆಯಂ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ವಿರೋಧಿಸುವುದಾದಲ್ಲಿ ಮತ್ತು ತಕರಾರು ಸಲ್ಲಿಸುವುದಾದರೆ ನೀವು ಸ್ವತಃ ಖುದ್ದಾಗಿ ಅಥವಾ ನಿಮ್ಮಿಂದ ಅಧಿಕೃತವಾಗಿ ಅಧಿಕಾರ ಹೊಂದಿರುವ ವಕೀಲರು ಅಥವಾ ನಿಮ್ಮ ಕಾರ್ಯ ನಿರ್ವಹಿಸಲು ಕಾಯ್ದೆ ಹೊಂದಿದ ಯಾವುದೇ ವ್ಯಕ್ತಿಯ ಮೂಲಕ ತಾರೀಖು: 19.10.2021ರಂದು ಬೆಳಿಗ್ಗೆ 11.00 ಗಂಟೆಗೆ ಈ ನ್ಯಾಯಾಲಯದಲ್ಲಿ ಹಾಜರಾಗಲು ನಿಮಗೆ ಈ ನೋಟೀಸ್ ಕೊಡಲ್ಪಟ್ಟಿದೆ ಅಥವಾ ಸಮನ್ ಜಾರಿ ಮಾಡಲು ಆದೇಶಿಸಿದೆ. ಒಂದು ವೇಳೆ ನೀವು ಹಾಜರಾಗಲು ತಪ್ಪಿದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ಈ ದಾವೆಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಿ ತೀರ್ಮಾನಿಸಲಾಗುವುದು. ಈ ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ 2021ನೇ ಇಸವಿ ಸೆಪ್ಟೆಂಬರ್ ತಿಂಗಳು 7ನೇ ದಿನಾಂಕದಂದು ಕೊಡಲ್ಪಟ್ಟಿದೆ.
ನ್ಯಾಯಾಲಯದ ಆದೇಶದ ಮೇರೆಗೆ, ಶಿರಸ್ತೆದಾರರು, ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ, ಗುಬ್ಬಿ.
ವಾದಿಪರ ವಕೀಲರು: ಶಿವಯೋಗಿ ಬಿ.ಆರ್. ತುಮಕೂರು ಜಿಲ್ಲೆ.

PUBLIC NOTICE
Our client intends to purchase the below mentioned properties adjacent to each other and all are situated at **Panathur Village, Varthur Hobli, Bangalore East Taluk,** Portion of land bearing Survey Number 12/1, measuring 36.4 Guntas (converted vide official memorandum bearing No. ALN(EVH)SR - 142/07-08, dated 14.10.2008, passed by the Special Deputy Commissioner Bangalore bounded on-
East by: Land bearing Sy.No.12/2
West by: 18 meters wide Driveway
North by: Remaining land in same Sy.No.12/1
South by : 18 meters wide Driveway
and portion of land bearing Survey Number 12/2, measuring 1 Acre 17.2 Guntas (converted vide official memorandum bearing No. ALN(EVH)SR 142/07-08, dated 14.10.2008, passed by the Special Deputy Commissioner Bangalore bounded on-
East by: Land bearing Sy.No.12/3
West by: Land bearing Sy.No.12/1
North by: Land bearing Sy.No.12/1
South by : 18 meters wide Driveway
and portion of land bearing Survey Number 12/3, measuring 1 Acre 25.95 Guntas (converted vide official memorandum bearing No. ALN(EVH)SR 142/07-08, dated 14.10.2008, passed by the Special Deputy Commissioner Bangalore bounded on-
East by: Land bearing Sy.no.15/2,15/3 & 15/4
West by: Land bearing Sy.No.12/2
North by: Land bearing Sy.No.12/1
South by : 18 meters wide Driveway
From its owner **Smt.A.Vishalakshi** wife Late.Sri.Ambli Kotrappa.and portion of land bearing Survey Number 15/2, measuring 20.65 Guntas (converted vide official memorandum bearing No. ALN(EVH)SR 72/2009-2010, dated 24.03.2010, passed by the Special Deputy Commissioner Bangalore bounded on
East by: Remaining portion of Land bearing Sy.No.15/2,
West by: Land bearing Sy.No.12/3
North by: 15/5 and 15/1
South by : Land bearing Sy.No.15/3
and portion of land bearing Survey Number 15/3, measuring 2 Acres 26 Guntas and 5 Guntas of Kharab and land bearing Survey Number 15/4, measuring 1 Acres 1.32 Guntas, (converted vide official memorandum bearing No. ALN(EVH)SR 63/2008-2009, dated 15.10.2008, passed by the Special Deputy Commissioner Bangalore bounded on -
East by: Land bearing Sy.No.44/1
West by: Land bearing Sy.No.12/3
North by: Land bearing Sy.No.15/2
South by : Land bearing Sy.No.16
From its owner **M/s. Shivakar Infra Private Limited,** a Company incorporated under the Companies Act of 1956, having the registered office at No.10, Vittal Mallya Road, Bangalore – 560001, represented by its Director Sri.B.M.Jayeshankar.
Persons having any right over the said properties may lodge their objections / claims with documentary evidence within 7 days from the date of this publication, to the undersigned.
K. V. Narendra & Associates, Advocates, No.557, 2nd Floor, 9th A Main,1st Stage, Indiranagar, Bangalore - 560 038
Ph: 99451 09229 / 9481868801

ಜನಪ್ರತಿನಿಧಿಗಳಿಲ್ಲದ ಒಂದು ವರ್ಷ: ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ ವೆಬಿನಾರ್

ಬಿಬಿಎಂಪಿ ಚುನಾವಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಗೆ ಜನಪ್ರತಿನಿಧಿಗಳಿಲ್ಲದ ಒಂದು ವರ್ಷದ ಸ್ಥಿತಿ ಕುರಿತು ವಿಶ್ವ ಪ್ರಜಾಪ್ರಭುತ್ವ ದಿನದ ಅಂಗವಾಗಿ ಜನಾಗ್ರಹ ಸಂಘಟನೆಯಿಂದ 'ನಮ್ಮ ಕಾರ್ಪೊರೇಟರ್ ಎಲ್ಲಿ' ಎಂಬ ಸಂವಾದ ಬುಧವಾರ ನಡೆಯಿತು.

'ಸ್ಥಳೀಯ ಸಮಸ್ಯೆಗಳ ಪರಿಹಾರ ಪಾಲಿಕೆ ಸದಸ್ಯರಿಂದ ಮಾತ್ರ ಸಾಧ್ಯ. ಚುನಾವಣೆ ನಡೆಸದಿರುವುದು ಸಂವಿಧಾನ ವಿರೋಧಿ ನಡೆ. ಸರ್ಕಾರ ಕೂಡಲೇ ಚುನಾವಣೆ ನಡೆಸಬೇಕು' ಎಂದು ಪಾಲಿಕೆ ಮಾಜಿ ಸದಸ್ಯರು ಮತ್ತು ಮುಖಂಡರು ಒಕ್ಕೊರಲಿನಿಂದ ಆಗ್ರಹಿಸಿದರು.

ಜನಾಗ್ರಹ ಸಂಘಟನೆಯ ಶ್ರೀನಿವಾಸ ಅಲವಿಲ್ಲಿ ನಡೆಸಿದ ವೆಬಿನಾರ್‌ನಲ್ಲಿ ವ್ಯಕ್ತವಾದ ಅಭಿಪ್ರಾಯ ಹೀಗಿದೆ.

ಪ್ರಜಾಪ್ರಭುತ್ವ ವಿರೋಧಿ ನಿಲುವು

ಸಿ.ಎನ್. ದೀಪಕ್

ಬಿಎಂಪಿಯನ್ನು ಬಿಬಿಎಂಪಿ ಮಾಡುವ ನೆಪದಲ್ಲಿ ಈ ಹಿಂದೆಯೂ 2 ವರ್ಷಗಳ ಕಾಲ ಚುನಾವಣೆ ನಡೆಸದೆ ಸರ್ಕಾರವೇ ಆಡಳಿತ ನಡೆಸುತ್ತಿತ್ತು. ಸುಪ್ರೀಂ ಕೋರ್ಟ್ ಚಾಟಿ ಬೀಸಿದ ಬಳಿಕ ಚುನಾವಣೆ ನಡೆಸಲಾಗಿತ್ತು. ಪ್ರತಿ ಬಾರಿಯೂ ನ್ಯಾಯಾಲಯ ಮಧ್ಯಪ್ರವೇಶ ಮಾಡಿ ಚುನಾವಣೆ ನಡೆಸಲು ಸೂಚನೆ ನೀಡಬೇಕಿದೆ. ಪಾಲಿಕೆಯನ್ನು ಹಿಡಿತದಲ್ಲೇ ಇಟ್ಟುಕೊಳ್ಳುವ ಪ್ರಯತ್ನ ಸರ್ಕಾರದ್ದು. ಇದು ಪ್ರಜಾಪ್ರಭುತ್ವ ವಿರೋಧಿ ನಿಲುವು.

–ಸಿ.ಎನ್. ದೀಪಕ್, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ

ಚಿನ್ನದ ಮೊಟ್ಟೆ ಕೈತಪ್ಪುವ ಆತಂಕ

ಉಷಾ ಮೋಹನ್

ರಾಜ್ಯ ಚುನಾವಣಾ ಆಯೋಗವು ಆಡಳಿತ ಪಕ್ಷದ ಕೈಗೊಂಬೆಯಾಗಿದೆ. ಬಿಬಿಎಂಪಿ ಎಂದರೆ ಚಿನ್ನದ ಮೊಟ್ಟೆ ಇಡುವ ಕೋಳಿ. ಚುನಾವಣೆ ನಡೆದರೆ ಮೊಟ್ಟೆ ಕೈತಪ್ಪುವ ಆತಂಕ ಆಡಳಿತ ಪಕ್ಷದಲ್ಲಿದೆ. ಶಾಸಕರು ಮತ್ತು ಸಂಸದರಿಗೆ ಸ್ಥಳೀಯ ಸಮಸ್ಯೆಗಳ ಬಗ್ಗೆ ಅಷ್ಟಾಗಿ ಅರಿವಿರುವುದಿಲ್ಲ. ವಾರ್ಡ್ ಮಟ್ಟದಲ್ಲಿ ಜನಪ್ರತಿನಿಧಿ ಇದ್ದರೆ ಸ್ಥಳೀಯ ಸಮಸ್ಯೆಗಳು ಪರಿಹಾರವಾಗುತ್ತವೆ. ಒಂದೂವರೆ ವರ್ಷದಿಂದ ಸಮಸ್ಯೆಗಳು ಹಾಗೇ ಉಳಿದಿವೆ.

– ಉಷಾ ಮೋಹನ್, ಆಮ್ ಆದ್ಮಿ ಪಕ್ಷದ ಮುಖಂಡರು

ಚುನಾವಣೆ ಜನರ ಹಕ್ಕು

ಸ್ಥಳೀಯ ಸಣ್ಣ ಸಣ್ಣ ಸಮಸ್ಯೆಗಳನ್ನು ಸರಿಪಡಿಸುವವರು ಪಾಲಿಕೆ ಸದಸ್ಯರು. ನೋಡಲ್ ಅಧಿಕಾರಿಗಳು ಜನರ ಸಮಸ್ಯೆಗಳಿಗೆ ಕಿವಿಗೊಡುವುದಿಲ್ಲ. ಬೆಂಗಳೂರಿನ ರಸ್ತೆಗಳನ್ನು ನೋಡಿದರೆ ಅದು ಅರ್ಥವಾಗುತ್ತಿದೆ. ವಾರ್ಡ್‌ಗಳ ಮರು ವಿಂಗಡಣೆ ಮತ್ತು ಕೋವಿಡ್ ನೆಪದಲ್ಲಿ ಚುನಾವಣೆ ಮುಂದೂಡುವುದು ಸರಿಯಲ್ಲ. ಚುನಾವಣೆ ಮತ್ತು ಪ್ರಜಾಪ್ರಭುತ್ವ ಜನರ ಹಕ್ಕು. ಅದನ್ನೇ ಕಸಿದುಕೊಳ್ಳಲಾಗಿದೆ.

ಶಿಲ್ಪಾ ಅಭಿಲಾಷ್

–ಶಿಲ್ಪಾ ಅಭಿಲಾಷ್, ಪಾಲಿಕೆ ಮಾಜಿ ಸದಸ್ಯೆ(ಕಾಂಗ್ರೆಸ್)

ವಿಳಂಬಕ್ಕೆ ರಾಜಕೀಯ ಕಾರಣ ಗೊತ್ತಿಲ್ಲ

ಶ್ವೇತಾ

ಕೆಲಸಗಳು ಉತ್ತಮವಾಗಿ ನಡೆಯುತ್ತಿದ್ದರೆ ಪಾಲಿಕೆ ಸದಸ್ಯರ ಅಗತ್ಯ ಇಲ್ಲ, ಕೆಲಸಗಳು ನಡೆಯುತ್ತಿಲ್ಲ ಎಂದಾದರೆ ಸದಸ್ಯರ ಅಗತ್ಯವಿದೆ. ಪಾಲಿಕೆ ಅವಧಿ ಮುಗಿದ ಬಳಿಕ ಬಾಕಿ ಕಾಮಗಾರಿ ಹಾಗೇ ಉಳಿದಿದೆ. ಚುನಾಯಿತ ಸದಸ್ಯರಿದ್ದರೆ ವಾರ್ಡ್‌ನಲ್ಲಿ ಕೆಲಸ ಆಗುತ್ತದೆ. ಚುನಾವಣೆ ವಿಳಂಬಕ್ಕೆ ರಾಜಕೀಯ ಕಾರಣ ಏನೆಂಬುದು ಗೊತ್ತಿಲ್ಲ. ಕೂಡಲೇ ಚುನಾವಣೆ ನಡೆಸಲು ನಾವು ಒತ್ತಾಯಿಸಿದ್ದೇವೆ.

–ಶ್ವೇತಾ ವಿಜಯಕುಮಾರ್, ಪಾಲಿಕೆ ಮಾಜಿ ಸದಸ್ಯೆ(ಬಿಜೆಪಿ)

ಸರ್ಕಾರದಿಂದ ದೊಡ್ಡ ಪ್ರಮಾದ

ಯಶೋಧಾ

ಯಾವುದೇ ಸ್ಥಳೀಯ ಸಂಸ್ಥೆಯ ಅವಧಿ ಮುಗಿದ 6 ತಿಂಗಳಲ್ಲಿ ಚುನಾವಣೆ ನಡೆಯಬೇಕಿತ್ತು. ರಾಜ್ಯ ಸರ್ಕಾರದಿಂದ ದೊಡ್ಡ ಪ್ರಮಾದವಾಗಿದೆ. ದುರುದ್ದೇಶ ಮತ್ತು ಸ್ವಾರ್ಥದ ನಡೆ ಇದಾಗಿದೆ. ವಾರ್ಡ್ ಮರು ವಿಂಗಡಣೆ ಮತ್ತು ಕೋವಿಡ್ ನೆಪ ಸರಿಯಲ್ಲ. ಚುನಾಯಿತ ಪ್ರತಿನಿಧಿಗಳಿಲ್ಲದ ಪಾಲಿಕೆ ತಂದೆ ಇಲ್ಲದ ಮನೆಯಂತಾಗಿದೆ. ಅನಗತ್ಯ ವಿಳಂಬದ ಮೂಲಕ ನಗರವನ್ನು ಸ್ಮಶಾನವಾಗಿಸಲು ಸರ್ಕಾರ ಹೊರಟಿದೆ.

– ಕೆ.ವಿ. ಯಶೋಧ ರಾಜಣ್ಣ, ಪಾಲಿಕೆ ಮಾಜಿ ಸದಸ್ಯೆ(ಜೆಡಿಎಸ್)

ಪಾಲಿಕೆ ಬಜೆಟ್ ಮೇಲೆ ಸರ್ಕಾರದ ಕಣ್ಣು

ಬಿಬಿಎಂಪಿಯಲ್ಲಿ ಜನಪ್ರತಿನಿಧಿಗಳು ಇಲ್ಲದ ಕಾರಣ ಅಲ್ಲಿನ ₹10 ಸಾವಿರ ಕೋಟಿ ಬಜೆಟ್ ಮೇಲೆ ಸರ್ಕಾರ ನಿಯಂತ್ರಣ ಹೊಂದಿದೆ. ವಾರ್ಡ್ ಮರು ವಿಂಗಡಣೆಯು ಸಂವಿಧಾನ ಪ್ರಕ್ರಿಯೆಯನ್ನು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುವ ಪ್ರಯತ್ನ. ಆಸ್ತಿ ತೆರಿಗೆಯನ್ನು ದಂಡ ಸಹಿತ ಪಾವತಿಸಲು ಲಕ್ಷಾಂತರ ಜನರಿಗೆ ನೋಟಿಸ್ ಬಂದಿದೆ. ಇದನ್ನು ಕೇಳುವವರು ಯಾರೂ ಇಲ್ಲವಾಗಿದೆ. ಜಾಹೀರಾತು ಫಲಕದ ವಿಷಯದಲ್ಲಿ ನಿರ್ಣಯ ಮಾಡುವ ಅಧಿಕಾರ ಪಾಲಿಕೆಗೆ ಇರಬೇಕೇ ಹೊರತು ಸರ್ಕಾರಕ್ಕೆ ಅಲ್ಲ.

ಲಲಿತಾಂಬಾ

–ಬಿ.ವಿ.ಲಲಿತಾಂಬ, ಬೆಂಗಳೂರು ನವನಿರ್ಮಾಣ ಪಕ್ಷದ ಅಭಿಯಾನ ಉಸ್ತುವಾರಿ

ಪ್ರಜಾಪ್ರಭುತ್ವದ ಕೊಲೆ

ಅಬ್ದುಲ್ ವಾಜಿದ್

ಬಿಬಿಎಂಪಿ ಚುನಾವಣೆ ನಡೆಸದೆ ಪ್ರಜಾಪ್ರಭುತ್ವವನ್ನು ಸರ್ಕಾರ ಕೊಲೆ ಮಾಡಿದೆ. ಚುನಾವಣೆ ನಮ್ಮ ಹಕ್ಕು. ಸ್ಥಳೀಯ ಜನಪ್ರತಿನಿಧಿಗಳು ಇದ್ದಿದ್ದರೆ ಕೋವಿಡ್ ಎರಡನೇ ಅಲೆ ಎದುರಿಸುವುದು ಕಷ್ಟ ಆಗುತ್ತಿರಲಿಲ್ಲ. ಶಾಸಕರು ಮನೆ–ಮನೆಗೆ ತಲುಪಲು ಸಾಧ್ಯವಿಲ್ಲ. ಈಗ ಜನರ ಕಷ್ಟ ಕೇಳುವವರೇ ಇಲ್ಲವಾಗಿದೆ. ಆಸ್ತಿ ತೆರಿಗೆಗೆ ಶೇ 200ರಷ್ಟು ದಂಡ ವಿಧಿಸಲಾಗುತ್ತಿದೆ. ಪಾಲಿಕೆ ಸದಸ್ಯರಿದ್ದಿದ್ದರೆ ಇದಕ್ಕೆ ಅವಕಾಶ ನೀಡುತ್ತಿರಲಿಲ್ಲ.

–ಅಬ್ದುಲ್ ವಾಜಿದ್, ಪಾಲಿಕೆ ಮಾಜಿ ಸದಸ್ಯ(ಕಾಂಗ್ರೆಸ್)

'ವಿದ್ಯಾರ್ಥಿಗಳ ಮೇಲೆ ಹಲ್ಲೆ: ಕಾನೂನು ಕ್ರಮಕ್ಕೆ ಒತ್ತಾಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ಲಾಠಿ ಚಾರ್ಜ್ ಕುರಿತು ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಅತಾವುಲ್ಲಾ ಪುಂಜಾಲಕಟ್ಟೆ ಮಾತನಾಡಿ, 'ಪ್ರತಿಭಟಿಸುವ ಹಕ್ಕನ್ನು ಧಮನಿಸುವ ರಾಜ್ಯ ಸರ್ಕಾರದ ನಡೆ ಖಂಡನೀಯ. ವಿದ್ಯಾರ್ಥಿಗಳ ಮೇಲೆ ಏಕಾಏಕಿ ಪೊಲೀಸರು ಲಾಠಿ ಬೀಸಿ, ದೌರ್ಜನ್ಯ ನಡೆಸಿದ್ದಾರೆ. ಪ್ರತಿಭಟನನಿರತ ಹಲವಾರು ವಿದ್ಯಾರ್ಥಿಗಳಿಗೆ ಗಂಭೀರ ಗಾಯಗಳಾಗಿದ್ದು, ಧ್ವನಿಯನ್ನು ಹತ್ತಿಕ್ಕುವ ಪ್ರಯತ್ನ ಇದಾಗಿದೆ' ಎಂದು ಹೇಳಿದರು.

'ಈ ಹಿಂದೆ ವಿರೋಧ ಪಕ್ಷದ ನಾಯಕರನ್ನು ಭೇಟಿ ಮಾಡಿ, ರಾಷ್ಟ್ರೀಯ ಶಿಕ್ಷಣ ನೀತಿಯ ಲೋಪದೋಷಗಳ ಕರಡು ಪ್ರತಿಯನ್ನು ನೀಡಲಾಗಿದೆ. ವಿಧಾನಸೌಧ ಮುತ್ತಿಗೆ ನಡೆಸುವ ಬಗ್ಗೆ ಈ ಮೊದಲೇ ಸುದ್ದಿಗೋಷ್ಠಿ ಕರೆದು, ತಿಳಿಸಲಾಗಿತ್ತು. ಪೊಲೀಸ್ ಇಲಾಖೆಯಿಂದ ಅನುಮತಿ ಪಡೆದು, ಪ್ರತಿಭಟನೆಗೆ ಮುಂದಾದಾಗ ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆದಿದೆ. ಪೊಲೀಸರು ಯುವತಿಯರನ್ನೂ ಎಳೆದಾಡಿದ್ದಾರೆ' ಎಂದರು.

ಜೆಇಇ: ಚೈತನ್ಯ ಸಂಸ್ಥೆ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಸುಹೇಲ್ ಶಿವರಾಂ

ಸಂಕೇತ್ ಸಿಂಗ್

ಬಿ.ಎಸ್. ನಿರಂಜನ್

ಬಿ. ಈಶ್ವರ್

ಬೆಂಗಳೂರು: ನಗರದ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಜೆಇಇ (ಮೇನ್) ಪರೀಕ್ಷೆಯಲ್ಲಿ 4ನೇ ರ‍್ಯಾಂಕ್ ಸೇರಿದಂತೆ ಹಲವು ರ‍್ಯಾಂಕ್‌ಗಳೊಂದಿಗೆ ಉತ್ತಮ ಸಾಧನೆ ಮಾಡಿದ್ದಾರೆ. ಸಂಸ್ಥೆಯ ವಿದ್ಯಾರ್ಥಿ ಸುಹೇಲ್ ಶಿವರಾಮ್ ಅಖಿಲ ಭಾರತ ಮಟ್ಟದಲ್ಲಿ ನಾಲ್ಕನೇ ರ‍್ಯಾಂಕ್ ಪಡೆದಿದ್ದಾರೆ.

ಸಂಕೇತ್ ಸಿಂಗ್ 90ನೇ ರ‍್ಯಾಂಕ್, ಬಿ. ನಿರಂಜನ ರೆಡ್ಡಿ 153 ಹಾಗೂ ಬಿ. ಈಶ್ವರ್ 164ನೇ ರ‍್ಯಾಂಕ್ ಗಳಿಸಿದ್ದಾರೆ. ಕಾರ್ತಿಕ್ ಅಗರ್ವಾಲ್ 370ನೇ, ಆದಿತ್ಯ ಪ್ರಭಾಷ್ 909ನೇ ರ‍್ಯಾಂಕ್ ಪಡೆದಿದ್ದು, 1,000ದ ಒಳಗಡೆ 20 ರ‍್ಯಾಂಕ್‌ಗಳು ಸಂಸ್ಥೆಗೆ ದೊರಕಿವೆ ಎಂದು ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ಪ್ರಕಟಣೆ ತಿಳಿಸಿದೆ.

'ಕೋವಿಡ್ ಸಂದರ್ಭದಲ್ಲೂ ಸಂಸ್ಥೆಯ ವಿದ್ಯಾರ್ಥಿಗಳು ಓದಿನ ಕಡೆಗೆ ಆದ್ಯತೆ ನೀಡಿದ್ದರು. ಪೋಷಕರೂ ಅವರಿಗೆ ಬೆಂಬಲವಾಗಿದ್ದರು. ವಿದ್ಯಾರ್ಥಿಗಳು ಮತ್ತು ಪೋಷಕರ ಶ್ರಮವೇ ಈ ಸಾಧನೆಗೆ ಕಾರಣ' ಎಂದು ಸಂಸ್ಥೆ ಅಧ್ಯಕ್ಷ ಡಾ.ಬಿ.ಎಸ್. ರಾವ್, ಶೈಕ್ಷಣಿಕ ನಿರ್ದೇಶಕಿ ಸುಷ್ಮಾ ಬೋಪಣ್ಣ ಹೇಳಿದ್ದಾರೆ.

ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್ ತರಬೇತಿ ಸಂಸ್ಥೆಯ ವಿದ್ಯಾರ್ಥಿ ಅನಿರುದ್ಧ್ ಬಿ.ಎಸ್. ಜೆಇಇ (ಮೇನ್) ಪರೀಕ್ಷೆಯಲ್ಲಿ ರಾಷ್ಟ್ರ ಮಟ್ಟದಲ್ಲಿ 38ನೇ ರ‍್ಯಾಂಕ್‌ನೊಂದಿಗೆ ಸಾಧನೆ ಮಾಡಿದ್ದಾರೆ.

ದೀಕ್ಷಾ ತರಬೇತಿ ಸಂಸ್ಥೆಯ ಹಲವು ವಿದ್ಯಾರ್ಥಿಗಳು ಅತ್ಯುತ್ತಮ ರ‍್ಯಾಂಕ್ ಪಡೆದಿದ್ದಾರೆ. ಪಿ.ಕೆ. ಅರ್ಚಿತ್ 127ನೇ ರ‍್ಯಾಂಕ್ ಗಳಿಸಿದ್ದು, 127ರಿಂದ 4907ರವರೆಗೆ 15 ರ‍್ಯಾಂಕ್‌ಗಳು ಸಂಸ್ಥೆಗೆ ಲಭಿಸಿವೆ.

ಆಸ್ಕರ್ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ

ಬೆಂಗಳೂರು: ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ಅವರ ಪಾರ್ಥಿವ ಶರೀರವನ್ನು ಮಂಗಳೂರಿನಿಂದ ವಿಶೇಷ ವಿಮಾನದಲ್ಲಿ ಬುಧವಾರ ಬೆಂಗಳೂರಿಗೆ ತರಲಾಯಿತು.

ಗುರುವಾರ ಬೆಳಿಗ್ಗೆ 10ರಿಂದ 12 ಗಂಟೆವರೆಗೆ ಕೆಪಿಸಿಸಿ ಕಚೇರಿಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿದೆ.

ಪಾರ್ಥಿವ ಶರೀರವನ್ನು ವಿಶೇಷ ವಿಮಾನದಲ್ಲಿ ಮಂಗಳೂರಿನಿಂದ ಸಂಜೆ 5 ಗಂಟೆಗೆ ಬೆಂಗಳೂರಿಗೆ ಏರ್ ಲಿಫ್ಟ್ ಮಾಡಲಾಯಿತು.

ಈ ವೇಳೆ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್, 'ಎಐಸಿಸಿ ನಾಯಕ ರಾಹುಲ್ ಗಾಂಧಿ ಸೇರಿದಂತೆ ಪಕ್ಷದ ಕೇಂದ್ರ ನಾಯಕರು ಪಾರ್ಥಿವ ಶರೀರದ ದರ್ಶನಕ್ಕೆ ಬರಲಿದ್ದಾರೆ. ಕಾರ್ಯಕರ್ತರು ಸೇರಿದಂತೆ ಯಾರು ಬೇಕಾದರೂ ಪಾರ್ಥಿವ ಶರೀರದ ದರ್ಶನ ಮಾಡಬಹುದು' ಎಂದರು.

ಬಳಿಕ ಹೊಸೂರು ರಸ್ತೆಯ ಸೇಂಟ್ ಪ್ಯಾಟ್ರಿಕ್ ಚರ್ಚ್ ಸ್ಮಶಾನದಲ್ಲಿ ಅಂತಿಮ ವಿಧಿ-ವಿಧಾನಗಳು ನಡೆಯಲಿವೆ.

ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕ ಯು.ಟಿ. ಖಾದರ್ ಇದ್ದರು.

ಕರ್ನಾಟಕ ಎಂಜಿನಿಯರಿಂಗ್ ಸೇವಾ ಸಂಘದ ಶತಮಾನೋತ್ಸವದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

'ಪಾರಂಪರಿಕ ಎಂಜಿನಿಯರ್‌ಗಳ ಪಾತ್ರ ಮುಖ್ಯ'

ಪ್ರಜಾವಾಣಿ ವಾರ್ತೆ

ಕರ್ನಾಟಕ ಎಂಜಿನಿಯರಿಂಗ್ ಸೇವಾ ಸಂಘದ ಶತಮಾನೋತ್ಸವದಲ್ಲಿ ಪಾಲ್ಗೊಂಡ ಸಂಘದ ಅಧ್ಯಕ್ಷ ಬಿ. ಪಿತಾಂಬರಸ್ವಾಮಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಪ್ರಜಾವಾಣಿ ಚಿತ್ರ

ಬೆಂಗಳೂರು: 'ಪ್ರಗತಿಪರ ಚಿಂತನೆಯಿಂದ ನಾಡು ಕಟ್ಟಿದವರು ಸರ್ ಎಂ. ವಿಶ್ವೇಶ್ವರಯ್ಯ. ನಾವು ಕೂಡಾ ಅವರ ಹಾದಿಯಲ್ಲಿ ನಾಡು ಕಟ್ಟಲು ಸಂಕಲ್ಪ ಮಾಡಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಕರ್ನಾಟಕ ಎಂಜಿನಿಯರಿಂಗ್ ಸೇವಾ ಸಂಘದ ಶತಮಾನೋತ್ಸವ ಮತ್ತು ಸಂಘದ ವತಿಯಿಂದ ಕೆ.ಆರ್. ವೃತ್ತದಲ್ಲಿ ನಿರ್ಮಿಸಲಾಗಿರುವ ಎಂಜಿನಿಯರ್‌ಗಳ ತರಬೇತಿ ಕೇಂದ್ರ 'ಎಂಜಿನಿಯರ್ ಭವನ'ವನ್ನು ಬುಧವಾರ ಉದ್ಘಾಟಿಸಿ ಅವರು ಮಾತನಾಡಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾತನಾಡಿ, 'ನಾಡು ನಿರ್ಮಾಣದ ಕೆಲಸದಲ್ಲಿ ಪಾರಂಪರಿಕ ಎಂಜಿನಿಯರ್‌ಗಳ ಕೆಲಸ ಅತ್ಯಂತ ಪ್ರಮುಖವಾದದ್ದು. ಆದರೆ, ಇಂದಿನ ತಂತ್ರಜ್ಞಾನ ಆಧಾರಿತ ಮಾರುಕಟ್ಟೆಯಲ್ಲಿ ಮೇಲುಗೈ ಸಾಧಿಸಿ ಪಾರಂಪರಿಕ ಎಂಜಿನಿಯರ್‌ಗಳ ವೃತ್ತಿಗೆ ಮಂಕು ಕವಿದಂತಾಗಿದೆ' ಎಂದರು.

'ಪಾರಂಪರಿಕ ಎಂಜಿನಿಯರ್‌ಗಳಾದ ಸಿವಿಲ್ ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಎಂಜಿನಿಯರ್‌ಗಳು ದೇಶ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಪ್ರತಿಯೊಬ್ಬ ವಿದ್ಯಾರ್ಥಿಗಳು ಇಂದು ಸಾಫ್ಟ್‌ವೇರ್ ಎಂಜಿನಿಯರ್ ಆಗಲು ಬಯಸುತ್ತಿದ್ದಾರೆ. ಪಾರಂಪರಿಕ ಎಂಜಿನಿಯರ್‌ಗಳ ಗೌರವ, ಘನತೆ ಮರು ಅನಾವರಣ ಮಾಡುವ ಕೆಲಸ ಆಗಬೇಕಾಗಿದೆ' ಎಂದು ಆಶಿಸಿದರು.

'ಪದವಿಪೂರ್ವ ತರಗತಿಯಲ್ಲಿ ಓದುವ ಮಕ್ಕಳಿಗೆ ಪಾರಂಪರಿಕ ಎಂಜಿನಿಯರಿಂಗ್ ಕೋರ್ಸ್‌ಗಳ ಮಹತ್ವವನ್ನು ತಿಳಿಸಿಕೊಡಲು ರಾಜ್ಯದಾದ್ಯಂತ ಜಿಲ್ಲಾ ಮಟ್ಟದಲ್ಲಿ ವಿಚಾರಸಂಕಿರಣಗಳನ್ನು ಏರ್ಪಡಿಸಬೇಕು' ಎಂದು ಸಚಿವರು ಸಲಹೆ ನೀಡಿದರು.

ಲೋಕೋಪಯೋಗಿ ಸಚಿವರಾದ ಸಿ.ಸಿ. ಪಾಟೀಲ, ಸಂಘದ ಅಧ್ಯಕ್ಷ ಬಿ. ಪಿತಾಂಬರಸ್ವಾಮಿ, ಪ್ರಧಾನ ಕಾರ್ಯದರ್ಶಿ ವಿ.ಬಿ. ಕಲಕೇರಿ ಇದ್ದರು.

ಮಾಲಾರ್ಪಣೆ : ಅದಕ್ಕೂ ಮೊದಲು, ಎಂಜಿನಿಯರ್‌ಗಳ ದಿನಾಚರಣೆ ಅಂಗವಾಗಿ ಕೆ.ಆರ್. ವೃತ್ತದ ಬಳಿ ಇರುವ ವಿಶ್ವೇಶ್ವರಯ್ಯ ಪ್ರತಿಮೆಗೆ ಮುಖ್ಯಮಂತ್ರಿ ಮಾಲಾರ್ಪಣೆ ಮಾಡಿದರು.

ಚಂದನ್ ಎಂಬ ಐಟಿಐ ಪದವೀಧರನಿಂದಲೂ ವಿಶ್ವೇಶ್ವರಯ್ಯ ಪ್ರತಿಮೆಗೆ ಮುಖ್ಯಮಂತ್ರಿ ಮಾಲಾರ್ಪಣೆ ಮಾಡಿಸಿದರು.

'ಶಿಕ್ಷಣ ನೀತಿ: ಮುಕ್ತ ಚರ್ಚೆ ಸಿದ್ಧ'

ಬೆಂಗಳೂರು: 'ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕುರಿತು ಮುಕ್ತವಾಗಿ ಚರ್ಚೆ ಮಾಡಲು ಸರ್ಕಾರ ಸಿದ್ಧವಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಪ್ರಸ್ತುತ ಕಾಲಕ್ಕೆ ತಕ್ಕಂತೆ ಶಿಕ್ಷಣ ಕೊಟ್ಟು ಯುವಕರಿಗೆ ಒಳ್ಳೆಯ ಭವಿಷ್ಯ ರೂಪಿಸಲು ನೀತಿ ಪೂರಕವಾಗಿದೆ. ಇದರಿಂದ ಕ್ರಾಂತಿಕಾರಿ ಬದಲಾವಣೆ ಸಾಧ್ಯ. ಈ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿ ಹೇಳುತ್ತೇವೆ' ಎಂದರು.

'ನೀತಿ ಜಾರಿಗೂ ಮೊದಲು ಎಲ್ಲ ಕಡೆ ಚರ್ಚೆ ಆಗಿದೆ. ವಿಶ್ವವಿದ್ಯಾಲಯ ಮಟ್ಟದಲ್ಲೂ ಚರ್ಚೆ ನಡೆದಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ಇನ್ನೊಂದು ಸಮಿತಿ ಮಾಡಿ ಚರ್ಚೆ ಮಾಡುತ್ತೇವೆ. ಯಾರೂ ಕೂಡಾ ಆತಂಕಪಡುವ ಅಗತ್ಯ ಇಲ್ಲ' ಎಂದೂ ಹೇಳಿದರು.

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ भारत सरकार का उपक्रम A Government of India Undertaking
सिंडिकेट Syndicate Together We Can

ಆಸ್ತಿ ಮತ್ತು ಭವನ ವಿಭಾಗ, ವೃತ್ತ ಕಚೇರಿ, ನಂ. 86, ಎಂ.ಜಿ. ರಸ್ತೆ, ಬೆಂಗಳೂರು – 560 001 ದೂರವಾಣಿ: 25310039/25310038

ಸ್ಥಳದ ಅವಶ್ಯಕತೆ

ಬೆಂಗಳೂರು ನಗರದಲ್ಲಿ ಈ ಕೆಳಕಂಡ ಸ್ಥಳಗಳಲ್ಲಿ ಶಾಖೆಗಳಿಗೆ ವಾಣಿಜ್ಯ ಸ್ಥಳಕ್ಕಾಗಿ ಸ್ವತ್ತಿನ ಮಾಲೀಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರಸಂ	ಸ್ಥಳ	ಕ್ರಸಂ	ಸ್ಥಳ
1	ವಿಶ್ವೇಶ್ವರಯ್ಯ ಬಡಾವಣೆ	4	ಯಶವಂತಪುರ
2	ಜಯನಗರ 5ನೇ ಬ್ಲಾಕ್	5	ಬಸವೇಶ್ವರ ರಸ್ತೆ
3	ಬನಶಂಕರಿ 3ನೇ ಹಂತ	6	ಬಾಗಲೂರು

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್: http://www.canarabank.com ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಿರುವ ಅರ್ಜಿ ನಮೂನೆಗಳನ್ನು ಮೇಲ್ಕಂಡ ಕಚೇರಿ ಇಲ್ಲವೆ ಬ್ಯಾಂಕಿನ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ಅರ್ಜಿಗಳನ್ನು ಈ ಮೇಲ್ಕಂಡ ಕಚೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ: 30.09.2021 ರಂದು ಮಧ್ಯಾಹ್ನ 3.00 ಗಂಟೆಯವರೆಗೆ.**

ಇತರೆ ತಿದ್ದುಪಡಿ/ಮಾರ್ಪಾಡುಗಳಿದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. **ಮಧ್ಯವರ್ತಿಗಳಿಗೆ ಅವಕಾಶವಿಲ್ಲ.**

ಸ್ಥಳ: ಬೆಂಗಳೂರು ಸಹಿ/–
ದಿನಾಂಕ: 16.09.2021 ಸಹಾಯಕ ಮಹಾ ಪ್ರಬಂಧಕರು

ಬಿಬಿಎಂಪಿ ಜಾಹೀರಾತು ನಿಯಮ ಹಿಂಪಡೆದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ವರದಿ ಫಲಶ್ರುತಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾಹೀರಾತು ಹೋರ್ಡಿಂಗ್‌ಗಳನ್ನು ಅಳವಡಿಸಲು ಅವಕಾಶ ಕಲ್ಪಿಸುವ 'ಬಿಬಿಎಂಪಿ ಜಾಹೀರಾತು ನಿಯಮಗಳು–2021' ಅನ್ನು ರಾಜ್ಯ ಸರ್ಕಾರ ಹಿಂಪಡೆದಿದೆ.

ಹೈಕೋರ್ಟ್ ಸೂಚನೆಯಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಹೋರ್ಡಿಂಗ್ ಅಳವಡಿಕೆ ನಿಷೇಧಿಸಿ 2018ರಲ್ಲಿ ಆದೇಶ ಹೊರಡಿಸಲಾಗಿತ್ತು. ನಿರ್ಬಂಧ ತೆರವುಗೊಳಿಸಿ, ಹೋರ್ಡಿಂಗ್ ಅಳವಡಿಸಲು ಅವಕಾಶ ನೀಡುವಂತೆ ಜಾಹೀರಾತು ಏಜೆನ್ಸಿಗಳು ಪಾಲಿಕೆ ಮತ್ತು ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರಿದ್ದವು. ಅದರನ್ವಯ ನಿಯಮಗಳನ್ನು 2019ರಲ್ಲೇ ರೂಪಿಸಲಾಗಿತ್ತು.

ನಗರದಲ್ಲಿ ಮತ್ತೆ ಹೋರ್ಡಿಂಗ್‌ಗಳಿಗೆ ಹಾಗೂ ಹೊರಾಂಗಣ ಜಾಹೀರಾತುಗಳಿಗೆ ಅವಕಾಶ ಕಲ್ಪಿಸುವ ಈ ನಿಯಮಗಳಿಗೆ ಸಾರ್ವಜನಿಕರಿಂದ ಭಾರಿ ವಿರೋಧ ವ್ಯಕ್ತವಾಗಿತ್ತು. ಹಾಗಾಗಿ ಹಿಂದಿನ ಸರ್ಕಾರಗಳು ಈ ನಿಯಮಗಳಿಗೆ ಅನುಮೋದನೆ ನೀಡಿರಲಿಲ್ಲ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡುವುದಕ್ಕೆ ಕೆಲವೇ ದಿನಗಳ ಹಿಂದೆ ಸರ್ಕಾರವು ಈ ಜಾಹೀರಾತು ನಿಯಮಗಳನ್ನು ಜಾರಿಗೆ ಅನುಮೋದನೆ ನೀಡಿತ್ತು.

ಹೋರ್ಡಿಂಗ್‌ಗಳನ್ನು ಅಳವಡಿಸಲು ಇದ್ದ ನಿರ್ಬಂಧ ತೆರವಿನ ಹಿಂದಿನ ಲೆಕ್ಕಾಚಾರ, ಅದರಿಂದ ಆಗುವ ತೊಂದರೆ, ಜಾಹೀರಾತು ಏಜೆನ್ಸಿಗಳ ಒತ್ತಡ ಹಾಗೂ ಈ ಜಾಹೀರಾತು ನಿಯಮಗಳ ಜಾರಿಯಿಂದ ಮುಂದೆ ಒದಗುವ ಸಮಸ್ಯೆಗಳ ಬಗ್ಗೆ ಗಮನ ಸೆಳೆಯುವ ಸಲುವಾಗಿ 'ಪ್ರಜಾವಾಣಿ'ಯು 'ಹೋರ್ಡಿಂಗ್ ಮಾಫಿಯಾಕ್ಕೆ ಮಣೆ' ಎಂಬ ಶೀರ್ಷಿಕೆಯಡಿ ಸರಣಿ ವರದಿಗಳನ್ನು ಪ್ರಕಟಿಸಿತ್ತು.

ಆ ಬಳಿಕ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದ ಏಳು ಸಚಿವರು ಕೂಡಾ ಹೊಸ ಜಾಹೀರಾತು ನಿಯಮಗಳ ಜಾರಿಯನ್ನು ವಿರೋಧಿಸಿದರು. ಹೋರ್ಡಿಂಗ್ ಅಳವಡಿಸಲು ಅವಕಾಶ ಕಲ್ಪಿಸುವುದನ್ನು ಬಿಜೆಪಿ ಪಾಲಿಕೆಯ ವಿರೋಧ ಪಕ್ಷದಲ್ಲಿದ್ದಾಗ ವಿರೋಧಿಸಿತ್ತು. ಈಗ ಜಾಹೀರಾತು ಏಜೆನ್ಸಿಗಳ ಪರವಾಗಿ ತೀರ್ಮಾನ ಕೈಗೊಂಡರೆ ಕೆಟ್ಟ ಸಂದೇಶ ರವಾನೆಯಾಗುತ್ತದೆ ಎಂದು ಕೆಲವು ಸಚಿವರು ಕಳವಳ ವ್ಯಕ್ತಪಡಿಸಿದ್ದರು.

ಯಡಿಯೂರಪ್ಪ ಅವರು ಅಧಿಕಾರದಿಂದ ಕೆಳಗಿಳಿಯುವ ಮುನ್ನ ತರಾತುರಿಯಲ್ಲಿ ಜಾರಿಗೊಳಿಸಿದ್ದ ಜಾಹೀರಾತು ನಿಯಮಗಳ ಅನುಷ್ಠಾನಕ್ಕೆ ಅವಕಾಶ ನೀಡಕೂಡದು ಎಂದು ಒತ್ತಾಯಿಸಿದ್ದರು.

ಬಳಿಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜಾಹೀರಾತು ನಿಯಮಗಳ ಅನುಷ್ಠಾನದ ಕುರಿತು ಮರು ಪರಿಶೀಲಿಸಿ ವರದಿ ನೀಡುವಂತೆ ಸೂಚಿಸಿದ್ದರು. ನಗರದಲ್ಲಿ ಹೋರ್ಡಿಂಗ್‌ಗಳನ್ನು ಮತ್ತೆ ಅಳವಡಿಸಲು ಅವಕಾಶ ನೀಡದಂತೆ ತಾಕೀತು ಮಾಡಿದ್ದರು.

ಟಿಟಿಡಿ ಸದಸ್ಯರಾಗಿ ಎಸ್.ಆರ್. ವಿಶ್ವನಾಥ್

ಬೆಂಗಳೂರು: ಆಂಧ್ರ ಪ್ರದೇಶದ ತಿರುಮಲ ತಿರುಪತಿ ಟ್ರಸ್ಟ್ ಸದಸ್ಯರಾಗಿ ಶಾಸಕ ಹಾಗೂ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ನೇಮಕಗೊಂಡಿದ್ದಾರೆ.

ಬೆಂಗಳೂರಿನ ತಿರುಮಲ ತಿರುಪತಿ ಟ್ರಸ್ಟ್‌ನ ಸ್ಥಳೀಯ ಸಲಹಾ ಮಂಡಳಿ ಉಪಾಧ್ಯಕ್ಷರಾಗಿ ವಿಶ್ವನಾಥ್ ಅವರು ಮೂರು ವರ್ಷ ಸೇವೆ ಸಲ್ಲಿಸಿದ್ದರು. ಅವರನ್ನು ಟಿಟಿಡಿ ಸದಸ್ಯರನ್ನಾಗಿ ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಆದೇಶ ಹೊರಡಿಸಿದ್ದಾರೆ.

ಮಾಹಿತಿ ಸೋರಿಕೆ: ಸಿಐಡಿ ತನಿಖೆ

ಭುವನೇಶ್ವರ/ಬಾಲಸೋರ್(ಪಿಟಿಐ): ಒಡಿಶಾದ ಚಾಂಡೀಪುರದಲ್ಲಿರುವ ರಕ್ಷಣಾ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ(ಡಿಆರ್‌ಡಿಒ) 'ಐಟಿಆರ್' ಪರೀಕ್ಷಾ ಕೇಂದ್ರದಲ್ಲಿನ ರಹಸ್ಯ ಮಾಹಿತಿಗಳು ಸೋರಿಕೆಯಾಗಿವೆ ಎನ್ನಲಾದ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ.

ಮಂಗಳವಾರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದ ನಾಲ್ವರನ್ನು ಬೇಹುಗಾರಿಕೆ ನಡೆಸಿದ ಆರೋಪದ ಮೇಲೆ ಬಂಧಿಸಲಾಗಿತ್ತು. ವಿದೇಶಿ ಏಜೆಂಟರಿಗೆ ಮಾಹಿತಿಗಳನ್ನು ನೀಡಲಾಗಿದೆ ಎಂದು ಆರೋಪಿಸಲಾಗಿದೆ.

ರಾಜ್ಯಸಭೆಗೆ ಅರ್ಪಿತಾ ಘೋಷ್ ರಾಜೀನಾಮೆ

ನವದೆಹಲಿ(ಪಿಟಿಐ): ಟಿಎಂಸಿ ಸಂಸದೆ ಅರ್ಪಿತಾ ಘೋಷ್ ಅವರು ರಾಜ್ಯಸಭೆಗೆ ರಾಜೀನಾಮೆ ನೀಡಿದ್ದಾರೆ.

ಅರ್ಪಿತಾ ಅವರ ರಾಜೀನಾಮೆಯನ್ನು ರಾಜ್ಯಸಭೆಯ ಸಭಾಪತಿ ಎಂ. ವೆಂಕಯ್ಯ ನಾಯ್ಡು ಅವರು ಅಂಗೀಕರಿಸಿದ್ದಾರೆ ಎಂದು ರಾಜ್ಯಸಭೆಯ ಸಚಿವಾಲಯ ಬುಧವಾರ ತಿಳಿಸಿದೆ.

ರಾಮಚಂದ್ರಾಪುರ ಮಠ: ಎಸಿಎಫ್ ಆದೇಶ ರದ್ದು

ಪ್ರಜಾವಾಣಿ ವಾರ್ತೆ



ಬೆಂಗಳೂರು: 60 ಎಕರೆ ಭೂಮಿ ಮೀಸಲು ಅರಣ್ಯ ಎಂದು ಘೋಷಿಸಿ ಶಿವಮೊಗ್ಗ ಜಿಲ್ಲೆಯ ಹೊಸನಗರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಎಸಿಎಫ್) ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿದೆ. ಈ ಆದೇಶ ಪ್ರಶ್ನಿಸಿದ್ದ ರಾಮಚಂದ್ರಾಪುರ ಮಠವು ಆ ಭೂಮಿ ಗೋಮಾಳ ಎಂದು ವಾದಿಸಿತ್ತು.

ಹೊಸನಗರ ತಾಲ್ಲೂಕಿನ ಸರ್ವೆ ನಂಬರ್ 7ರಲ್ಲಿ 25 ಎಕರೆ ಗೋಮಾಳ ಭೂಮಿಯನ್ನು ಮಂಜೂರು ಮಾಡಲು ಧರ್ಮ ಚಕ್ರ ಟ್ರಸ್ಟ್ ಹೆಸರಿನಲ್ಲಿ ಮಠ ಅರ್ಜಿ ಸಲ್ಲಿಸಿದೆ. ಈ ಜಾಗದಲ್ಲಿ ಹಲವು ಗೋಶಾಲೆಗಳನ್ನು ನಡೆಸುವ ಉದ್ದೇಶವನ್ನು ಮಠ ಹೊಂದಿದೆ.

ಈ ಮಧ್ಯೆ, 'ಅರಣ್ಯ ಜಾಗವನ್ನು ಒತ್ತುವರಿ ಮಾಡಲಾಗಿದೆ. ಅದು ಮೀಸಲು ಅರಣ್ಯ' ಎಂದು 2015ರ ಜುಲೈ 15ರಂದು ಎಸಿಎಫ್ ಆದೇಶ ಹೊರಡಿಸಿದ್ದರು.

ಈ ಆದೇಶ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ ಮಠ, 'ರಾಜ್ಯ ಸರ್ಕಾರ ಈ ಜಾಗವನ್ನು ಗೋಮಾಳ ಎಂದು ಪರಿಗಣಿಸಿದೆ. 160 ಎಕರೆ ಜಾಗ ಮೀಸಲು ಎಂದು ಘೋಷಿಸಿ 2005ರಲ್ಲಿ ಅಧಿಸೂಚನೆ ಹೊರಡಿಸಿರುವ ಸರ್ಕಾರ, ಉಳಿದ 60 ಎಕರೆಯನ್ನು ಗೋಮಾಳ ಎಂದೇ ಉಳಿಸಿದೆ' ಎಂದು ಮಠದ ಪರ ವಕೀಲರು ವಾದಿಸಿದರು.

'2012ರ ನವೆಂಬರ್ 21ರಂದು ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿರುವ ಶಿವಮೊಗ್ಗ ಜಿಲ್ಲಾಧಿಕಾರಿ, ಅದು ಗೋಮಾಳ ಜಾಗ ಎಂದು ತಿಳಿಸಿದ್ದಾರೆ. ಅದಕ್ಕೂ ಮೊದಲೇ ಜಾಗ ಮಂಜೂರು ಮಾಡಲು ಕೋರಿ ಮಠ ಮನವಿ ಸಲ್ಲಿಸಿದೆ' ಎಂದು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ಪೀಠ ಗಮನಿಸಿತು.

'ಎಸಿಎಫ್ ಆದೇಶ ಆಧರಿಸಿ ಕಂದಾಯ ಇಲಾಖೆ ದಾಖಲೆಗಳನ್ನು ಬದಲಾಯಿಸಿದ್ದರೆ ಅದನ್ನು ಗೋಮಾಳ ಎಂದು ಮಾರ್ಪಡಿಸಿ ಎರಡು ತಿಂಗಳಲ್ಲಿ ವರದಿ ಸಲ್ಲಿಸಬೇಕು. ಭೂ ಮಂಜೂರಾತಿ ಕೋರಿರುವ ಅರ್ಜಿದಾರರ ಮನವಿಗಳನ್ನು ಪರಿಗಣಿಸಿ ಆರು ತಿಂಗಳಲ್ಲಿ ನ್ಯಾಯಾಲಯಕ್ಕೆ ತಿಳಿಸಬೇಕು' ಎಂದು ಪೀಠ ಸೂಚಿಸಿತು.

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ


ಶ್ರೀ ಬಸವರಾಜ ಬೊಮ್ಮಾಯಿ
ಸನ್ಮಾನ್ಯ ಮುಖ್ಯ ಮಂತ್ರಿಗಳು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ಕಾರ್ಮಿಕರಿಗೆ

ಉಚಿತ ಕೋವಿಡ್-19 ಲಸಿಕಾ ಅಭಿಯಾನ

ಕಾರ್ಮಿಕ ಫಲಾನುಭವಿಗಳೇ ಪಾಲ್ಗೊಳ್ಳಿ

ಇದುವರೆಗೆ ಲಸಿಕೆ ಪಡೆಯದೇ ಇರುವವರು ಮೊದಲನೆ ಡೋಸ್ ಲಸಿಕೆಯನ್ನು ಹಾಗೂ ಬಾಕಿ ಇರುವವರು ಎರಡನೇ ಡೋಸ್ ಲಸಿಕೆಯನ್ನು ತಮ್ಮ ಸಮೀಪದ ಲಸಿಕಾ ಕೇಂದ್ರಕ್ಕೆ ತೆರಳಿ ಲಸಿಕೆಯನ್ನು ಪಡೆಯಿರಿ.

ಕಾರ್ಮಿಕ ಇಲಾಖೆಯ ವತಿಯಿಂದ ಆಯೋಜಿಸಲಾಗಿದ್ದ ಲಸಿಕಾ ಶಿಬಿರಕ್ಕೆ ಮಾನ್ಯ ಕಾರ್ಮಿಕ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಾದ ಶ್ರೀ ಅರಬೈಲ್ ಶಿವರಾಮ ಹೆಬ್ಬಾರ ರವರು ಭೇಟಿ ನೀಡಿದ ಕ್ಷಣ.

ದಿನಾಂಕ: 17–09–2021

ಅನುಮಾನ ಬೇಡ ಲಸಿಕೆ ಸುರಕ್ಷಿತ ಮತ್ತು ಪರಿಣಾಮಕಾರಿ, ಲಸಿಕೆ ಪಡೆಯಿರಿ ಸುರಕ್ಷಿತವಾಗಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಕಾರ್ಮಿಕ ಸಹಾಯವಾಣಿ 155214 (24/7), ಕಾರ್ಮಿಕ ಅಧಿಕಾರಿಗಳು ಹಾಗೂ ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ.

ಡಾ. ಜಿ. ಕಲ್ಪನ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ

ಕೋವಿಡ್–19 ಮತ್ತು ಲಸಿಕೆ ಸಂಬಂಧಿತ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಿ, ಕೋವಿಡ್ ಮುಕ್ತ ಭಾರತವನ್ನಾಗಿಸಲು ಸರ್ಕಾರದೊಂದಿಗೆ ಕೈಜೋಡಿಸಿ.

ಅಕ್ರಂ ಪಾಷ, ಭಾ.ಆ.ಸೇ.
ಕಾರ್ಮಿಕ ಆಯುಕ್ತರು ಮತ್ತು ಸಿ.ಇ.ಒ. ಕ.ಕ. ಮತ್ತು ಇ.ನಿ.ಕಾ.ಕ. ಮಂಡಳಿ

http://karbwwb.karnataka.gov.in | /workerswelfare | /kbocwwb | /workersBoard | /kbocwwb

2ಕ್ಕಿಂತ ಹೆಚ್ಚು ದಿನ ಸೋಂಕು ಲಕ್ಷಣ ಇದ್ದರೆ ತಪಾಸಣೆ: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ

ಮಕ್ಕಳಿಗೆ ಕೋವಿಡ್ ಪರೀಕ್ಷೆ: ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಮಕ್ಕಳಲ್ಲಿ ಕೋವಿಡ್ ಸೋಂಕು ನಿಯಂತ್ರಿಸುವ ನಿಟ್ಟಿನಲ್ಲಿ ನಗರದ ಎಲ್ಲಾ ಶಾಲೆಗಳಲ್ಲಿ ನೋಡಲ್ ಅಧಿಕಾರಿಗಳನ್ನು ಗೊತ್ತುಪಡಿಸಲಾಗಿದೆ. ಎರಡಕ್ಕಿಂತ ಹೆಚ್ಚು ದಿನ ಕೊರೊನಾ ಸೋಂಕು ಗುಣಲಕ್ಷಣಗಳು ಕಂಡುಬಂದರೆ, ಅಂತಹ ಮಕ್ಕಳಿಗೆ ಕೋವಿಡ್ ಪರೀಕ್ಷೆ ಮಾಡಲು ಕ್ರಮವಹಿಸಬೇಕು ಎಂದು ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೊರೊನಾ ಸೋಂಕು ನಿಯಂತ್ರಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಕ್ಕಳ ತಜ್ಞರ ಸಮಿತಿ ಹಾಗೂ ತಾಂತ್ರಿಕ ತಜ್ಞರ ಸಮಿತಿಗಳ ಜೊತೆ ಅಧಿಕಾರಿಗಳು ಬುಧವಾರ ಸಭೆ ನಡೆಸಿದರು. ಮಕ್ಕಳಿಗೆ ಸೋಂಕು ತಗುಲದಂತೆ ತಡೆಯಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ, ಮಕ್ಕಳಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಹಾಗೂ ಅವರಿಗಾಗಿ ಆಸ್ಪತ್ರೆಗಳಲ್ಲಿ ಪ್ರತ್ಯೇಕ ಹಾಸಿಗೆ ವ್ಯವಸ್ಥೆ ಕಲ್ಪಿಸುವ ಬಗ್ಗೆ ಚರ್ಚಿಸಲಾಯಿತು.

‘ಪ್ರತಿ ಶಾಲೆಯ ನೋಡಲ್ ಅಧಿಕಾರಿಯೂ ಆ ಶಾಲಾ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ವೈದ್ಯಾಧಿಕಾರಿ ಜೊತೆ ಸಂಪರ್ಕ ಹೊಂದಿರಬೇಕು. 2 ದಿನಗಳಿಗಿಂತ ಹೆಚ್ಚು ದಿನಗಳ ಸೋಂಕು ಲಕ್ಷಣ ಕಂಡುಬರುವ ಮಕ್ಕಳು ಶಾಲೆಗೆ ಬಾರದಂತೆ ತಿಳಿ ಹೇಳಬೇಕು. ಅಂತಹ ಮಕ್ಕಳ ಮಾಹಿತಿಯನ್ನು ಪಿಎಚ್‌ಸಿಯ ವೈದ್ಯರಿಗೆ ನೀಡಬೇಕು. ಅಂತಹ ಮಕ್ಕಳ ಮನೆಗೆ ವೈದ್ಯಾಧಿಕಾರಿ ತಂಡವು ತೆರಳಿ ಪರೀಕ್ಷೆ ನಡೆಸಬೇಕು’ ಎಂದು ಮುಖ್ಯ ಆಯುಕ್ತರು ಸೂಚಿಸಿದರು.

‘ನಗರದಲ್ಲಿ ಮಕ್ಕಳಲ್ಲಿ ಸೊಂಕು ಅಷ್ಟಾಗಿ ಕಂಡುಬರುತ್ತಿಲ್ಲ. ಎರಡು ದಿನಕ್ಕಿಂತ ಹೆಚ್ಚು ಸೋಂಕು ಲಕ್ಷಣ ಹೊಂದಿರುವವರಿಗೆ ಆಸ್ಪತ್ರೆಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ ನಡೆಸಲಾಗುತ್ತಿದ್ದು, ಇಂತಹ ಬಹುತೇಕ ಮಕ್ಕಳಲ್ಲಿ ಸೋಂಕು ದೃಢಪಡುತ್ತಿಲ್ಲ. 12 ವರ್ಷದವರೆಗಿನ ಶೇ 7.21ರಷ್ಟು ಮಕ್ಕಳಲ್ಲಿ ಹಾಗೂ 13 ರಿಂದ 18 ವರ್ಷದೊಳಗಿನ ಶೇ. 8.21ರಷ್ಟು ಮಕ್ಕಳಲ್ಲಿ ಸೋಂಕು ಕಂಡುಬರುತ್ತಿದೆ’ ಎಂದರು.

‘ಶಾಲೆಗೆ ಹೋಗುವ ಮಕ್ಕಳ ಸಂಪರ್ಕ ಹೊಂದಿರುವವರಿಗೆ ಲಸಿಕೆ ನೀಡಬೇಕು. ಇದರಿಂದ ಎಲ್ಲರೂ ಸುರಕ್ಷಿತವಾಗಿರಬಹುದು. ಈ ಸಮಯದಲ್ಲಿ ಸಾಮಾನ್ಯವಾಗಿ ಜ್ವರ, ನೆಗಡಿ, ಕೆಮ್ಮು ರೀತಿಯ ಲಕ್ಷಣಗಳು ಕಂಡುಬಂದರೂ ವಾರದೊಳಗೆ ಗುಣಮುಖರಾಗುತ್ತಾರೆ’ ಎಂದು ಹೇಳಿದರು.

ಸಭೆಯಲ್ಲಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ. ಬಿ.ಕೆ. ವಿಜಯೇಂದ್ರ, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ. ನಿರ್ಮಲಾ ಬುಗ್ಗಿ ಉಪಸ್ಥಿತರಿದ್ದರು.

ಜೀನೋಮ್ ಸೀಕ್ವೆನ್ಸಿಂಗ್: ಹೆಚ್ಚು ಡೆಲ್ಟಾ ತಳಿ ಪತ್ತೆ

ನಗರದಲ್ಲಿ ನಡೆಸಲಾದ ಸೆರೊ ಸಮೀಕ್ಷೆ ಹಾಗೂ ಜಿನೋಮ್ ಸೀಕ್ವೆನ್ಸಿಂಗ್ ಕುರಿತು ತಾಂತ್ರಿಕ ತಜ್ಞರ ಸಮಿತಿ ಜೊತೆಗಿನ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಯಿತು.

‘ಜೀನೋಮ್ ಸೀಕ್ವೆನ್ಸಿಂಗ್‌ನಲ್ಲಿ ಡೆಲ್ಟಾ ತಳಿಗಳು ಹೆಚ್ಚು ಕಂಡುಬಂದಿವೆ. ನಗರದಲ್ಲಿ ಬೇರೆ ಯಾವುದೇ ರೂಪಾಂತರ ತಳಿಗಳು ಕಂಡುಬಂದಲ್ಲಿ ಪರೀಕ್ಷಿಸಲು ತಜ್ಞರ ಸಮಿತಿ ಸಲಹೆ ನೀಡಿದೆ. ಜೀನೋಮ್ ಸೀಕ್ವೆನ್ಸಿಂಗ್ ಮುಂದುವರಿಸುವಂತೆಯೂ ಸಮಿತಿ ಸೂಚಿಸಿದೆ. ಅದರ ಪ್ರಕಾರ, ಬಿಬಿಎಂಪಿ ಮಾದರಿಗಳನ್ನು ಸಂಗ್ರಹಿಸುತ್ತದೆ ಮತ್ತು ನಗರದಲ್ಲಿ ಬೇರೆ ಯಾವುದೇ ರೂಪಾಂತರಗಳು ಕಂಡುಬಂದಿವೆಯೇ ಎಂದು ಪರೀಕ್ಷಿಸಲಾಗುತ್ತದೆ’ ಎಂದು ಗೌರವ್ ಗುಪ್ತ ತಿಳಿಸಿದರು.

‘ಎರಡು ಬಾರಿ ಲಸಿಕೆ ಪಡೆದ ಬಳಿಕವೂ ಕೋವಿಡ್ ಸೋಂಕು ಕಂಡುಬಂದವರ ಮಾದರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಡೆದು ಜಿನೋಮ್ ಸೀಕ್ವೆನ್ಸಿಂಗ್ ಮಾಡಲಾಗುತ್ತದೆ. ಇದರ ವರದಿಯನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು’ ಎಂದರು.

‘ಸೆರೊ ಸಮೀಕ್ಷೆಗೆ ಸಂಬಂಧಿಸಿದಂತೆ ಇನ್ನೂ ವಿವರವಾದ ಮಾಹಿತಿ ನೀಡುವಂತೆ ಸಮಿತಿಯ ತಜ್ಞರು ತಿಳಿಸಿದ್ದಾರೆ. ವಿವರವಾದ ಮಾಹಿತಿಯನ್ನು ಸಂಗ್ರಹಿಸಿದ ನಂತರವೇ ಅದರ ವರದಿಯನ್ನು ಬಿಡುಗಡೆಗೊಳಿಸಲಿದ್ದೇವೆ’ ಎಂದು ಅವರು ತಿಳಿಸಿದರು.

ಜೀನೋಮ್‌ಸೀಕ್ವೆನ್ಸಿಂಗ್‌ನಲ್ಲಿ ಒಟ್ಟು 418 ಮಾದರಿಗಳ ಫಲಿತಾಂಶ ಲಭ್ಯವಾಗಿವೆ. ಅವುಗಳಲ್ಲಿ ಎವೈ.1 (ಡೆಲ್ಟಾ ಪ್ಲಸ್ ವಂಶಾವಳಿ), ಬಿ.1.1.7 (ಆಲ್ಫಾ), ಬಿ.1.351 (ಬೀಟಾ); ಪಿ.1 (ಗಾಮಾ) ಹಾಗೂ ಎಪ್ಸಿಲಾನ್‌ನ ಯಾವುದೇ ತಳಿಗಳು ಪತ್ತೆಯಾಗಿಲ್ಲ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	22.69 ಕೋಟಿ ▲	3.33 ಕೋಟಿ
ಸಕ್ರಿಯ ಪ್ರಕರಣ	1.85 ಕೋಟಿ ▼	3.36 ಲಕ್ಷ ▲
ಗುಣಮುಖ	20.37 ಕೋಟಿ ▲	3.25 ಕೋಟಿ ▼
ಸಾವು	46.67 ಲಕ್ಷ ▲	4.43 ಲಕ್ಷ
ದಿನದ ಮಾಹಿತಿ		
ಹೊಸ ಪ್ರಕರಣ	5.15 ಲಕ್ಷ ▲	30,346 ▲
ಗುಣಮುಖ	5.97 ಲಕ್ಷ ▲	38,346 ▲
ಸಾವು	8,948 ▲	432 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

1.42 ಲಕ್ಷ ▲ ಅಮೆರಿಕ; 27,802 ಟರ್ಕಿ; 26,386 ▼ ಬ್ರಿಟನ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

94.29 ▼ ಅಮೆರಿಕ; 13.00 ▼ ಬ್ರಿಟನ್; 5.94 ▼ ಇರಾನ್

(*ರಾತ್ರಿ 12 ಗಂಟೆವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)

1.38 ಲಕ್ಷ ಮಹಾರಾಷ್ಟ್ರ; 35,246 ▲ ತಮಿಳುನಾಡು; 25,083 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

65.07 ಮಹಾರಾಷ್ಟ್ರ ▲; 44.24 ಕೇರಳ ▲; 26.38 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,42,332 ಒಟ್ಟು ಪ್ರಕರಣಗಳು ▲ (12,41,870 ನಿನ್ನೆಯ ವಿವರ)

7,328 ▲ ಸಕ್ರಿಯ ಪ್ರಕರಣ; 12,18,938 ▲ ಗುಣಮುಖ ಆದವರು; 16,065 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ 462 ▲

ಗುಣಮುಖ 265 ▼

ಸಾವು 05 ▲

ಆಧಾರ: ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ಜೀನೋಮ್ ಸೀಕ್ವೆನ್ಸಿಂಗ್‌ನಲ್ಲಿ ಪತ್ತೆಯಾದ ತಳಿಗಳು

ತಳಿ	ಸಂಖ್ಯೆ
ಬಿ.1.617.2 (ಡೆಲ್ಟಾ)	268
ಬಿ.1.617.1 (ಕಪ್ಪಾ)	2
ಎವೈ.3 (ಡೆಲ್ಟಾ ವಂಶಾವಳಿಯ ರೂಪಾಂತರಿ)	3
ಎವೈ.6 (ಡೆಲ್ಟಾ ವಂಶಾವಳಿಯ ರೂಪಾಂತರಿ)	38
ಎವೈ.4 (ಡೆಲ್ಟಾ ವಂಶಾವಳಿಯ ರೂಪಾಂತರಿ)	4
ಇತರ ರೂಪಾಂತರಿಗಳು	16
ಮಾದರಿಯಲ್ಲಿ ದೋಷವಿದ್ದುದು	87

ಸುದ್ದಿ 2 ನಿಮಿಷ

ಕಲಾಪ ನೇರ ಪ್ರಸಾರ: ನಿಯಮ ರೂಪಿಸಲು ಸೂಚನೆ

ಬೆಂಗಳೂರು: ನ್ಯಾಯಾಲಯಗಳ ಕಲಾಪ ನೇರ ಪ್ರಸಾರ ಸಂಬಂಧ ನಿಯಮಗಳನ್ನು ರೂಪಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್‌ಗೆ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮ ನೇತೃತ್ವದ ವಿಭಾಗೀಯ ಪೀಠ ಸೂಚನೆ ನೀಡಿದೆ.

‘ನಿಯಮ ರೂಪಿಸುವ ಪ್ರಕ್ರಿಯೆ ಹೈಕೋರ್ಟ್ ಸಮಿತಿ ಮುಂದೆ ಬಾಕಿ ಇದೆ’ ಎಂದು ಪೀಠಕ್ಕೆ ರಿಜಿಸ್ಟ್ರಾರ್ ಮಾಹಿತಿ ನೀಡಿದರು. ಮುಂದಿನ ವಿಚಾರಣೆ ವೇಳೆಗೆ ನಿಯಮ ಅಂತಿಮಗೊಳಿಸಿ ಮಾಹಿತಿ ಒದಗಿಸಬೇಕು ಎಂದು ಪೀಠ ತಿಳಿಸಿತು.

ನೇರ ಪ್ರಸಾರ ನಡೆಸುವ ಬಗ್ಗೆ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳು ಕ್ರಮ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ 2018ರಲ್ಲಿ ತಿಳಿಸಿತ್ತು. 2021ರ ಮೇ ತಿಂಗಳಿನಲ್ಲಿ ಕೆಲ ಕಲಾಪಗಳ ನೇರ ಪ್ರಸಾರವನ್ನು ಪ್ರಾಯೋಗಿಕವಾಗಿ ಹೈಕೋರ್ಟ್ ಆರಂಭಿಸಿದೆ.

ದೆಹಲಿ ಅತ್ಯಾಚಾರ ಪ್ರಕರಣ ಆರೋಪಿ ಬಂಗಾರಪೇಟೆಯಲ್ಲಿ ಸೆರೆ

ಬಂಗಾರಪೇಟೆ (ಕೋಲಾರ): ಪಟ್ಟಣದಲ್ಲಿ ತಲೆ ಮರೆಸಿಕೊಂಡಿದ್ದ ದೆಹಲಿ ಅತ್ಯಾಚಾರ ಪ್ರಕರಣದ ಆರೋಪಿಯನ್ನು ದೆಹಲಿ ಪೊಲೀಸರು ಮಂಗಳವಾರ ಬಂಧಿಸಿ, ಕರೆದೊಯ್ದಿದ್ದಾರೆ.

ದೆಹಲಿಯಲ್ಲಿ ಇತ್ತೀಚೆಗೆ ನಡೆದಿದ್ದ ಅತ್ಯಾಚಾರ ಪ್ರಕರಣದ ಆರೋಪಿ ವಸೀವುಲ್ಲಾ (34) ಘಟನೆಯ ನಂತರ ರೈಲಿನಲ್ಲಿ ಪಟ್ಟಣಕ್ಕೆ ಬಂದಿದ್ದ.

ಆರೋಪಿಯ ಜಾಡು ಹಿಡಿದು ಬಂಗಾರಪೇಟೆಗೆ ಬಂದಿಳಿದ ದೆಹಲಿಯ ಲಕ್ಷ್ಮೀನಗರ ಠಾಣೆ ಪೊಲೀಸರು ಸ್ಥಳೀಯ ಪೊಲೀಸರ ನೆರವಿನಿಂದ ಆರೋಪಿಯನ್ನು ಬಂಧಿಸಿ, ದೆಹಲಿಗೆ ಕರೆದೊಯ್ದಿದ್ದಾರೆ.

ಆರೋಪಿಯು ಅಕ್ಕಿ ಗಿರಣಿ ಮಾಲೀಕರೊಬ್ಬರ ಮಗ ಎಂದು ಗೊತ್ತಾಗಿದೆ. ಪ್ರಕರಣದ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

5 ಲಕ್ಷ ಮಂದಿಗೆ ಲಸಿಕೆ ಹಾಕುವ ಗುರಿ:ಬಿಬಿಎಂಪಿ

ಬೆಂಗಳೂರು: ಕೋವಿಡ್ ಲಸಿಕೆ ವಿತರಣೆಗೆ ಇದೇ 17 ರಂದು ಬಿಬಿಎಂಪಿಯು ಬೃಹತ್ ಮೇಳವನ್ನು ಹಮ್ಮಿಕೊಂಡಿದೆ. ಪಾಲಿಕೆ ಹಾಗೂ ಖಾಸಗಿ ಆಸ್ಪತ್ರೆಗಳು ಸೇರಿದಂತೆ 5 ಲಕ್ಷ ಮಂದಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

ನಗರದ ಕೊಳೆಗೇರಿ ಪ್ರದೇಶಗಳು, ಲಸಿಕೆ ಪಡೆದವರ ಸಂಖ್ಯೆ ಕಡಿಮೆ ಇರುವ ಪ್ರದೇಶಗಳು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಲಸಿಕೆ ವಿತರಣೆಗೆ ವಿಶೇಷ ಶಿಬಿರಗಳನ್ನು ವ್ಯವಸ್ಥೆ ಮಾಡಲಾಗಿದೆ. ಬೀದಿ ಬದಿ ವ್ಯಾಪಾರಿಗಳು, ಕಾರ್ಖಾನೆಗಳು, ಕಟ್ಟಡ ನಿರ್ಮಾಣ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿರುವ ಕಡೆಗಳಲ್ಲೂ ವಿಶೇಷ ಶಿಬಿರಗಳನ್ನು ಏರ್ಪಡಿಸಲಾಗುತ್ತಿದೆ. ವಾರ್ಡ್‌ಗಳಲ್ಲಿ ಎಲ್ಲೆಲ್ಲಿ ಲಸಿಕೆ ನೀಡಬೇಕು ಎಂಬುದರ ಬಗ್ಗೆ ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ವೈದ್ಯಕೀಯ ಅಧಿಕಾರಿಗಳು ತಳಮಟ್ಟದ ಯೋಜನೆ ಸಿದ್ಧಪಡಿಸಿಕೊಂಡಿದ್ದಾರೆ.

ಪ್ರತಿ ವಾರ್ಡ್‌ನಲ್ಲೂ ಕನಿಷ್ಠ 10 ರಿಂದ 12 ಲಸಿಕಾ ಸೆಷನ್ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಪ್ರತಿ ವಾರ್ಡ್‌ನಲ್ಲಿ ಒಂದು ಅಥವಾ ಎರಡು ಕಡೆ ಸ್ಥಿರ ತಾಣಗಳಲ್ಲಿ ಲಸಿಕೆ ನೀಡಲಾಗುತ್ತದೆ. ದೂರದ ಸ್ಥಳಗಳಿಗೆ ಅಥವಾ ಹಿರಿಯ ನಾಗರಿಕರು ಅಥವಾ ವಿಶೇಷ ಸಾಮರ್ಥ್ಯದವರ ಮನೆಗಳಿಗೆ ಆಂಬುಲೆನ್ಸ್‌ನಲ್ಲಿ ಭೇಟಿ ನೀಡಿ ಲಸಿಕೆ ಹಾಕಲಾಗುವುದು.

ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಬೆಳಗ್ಗೆ 8ರಿಂದ ರಾತ್ರಿ 8 ಗಂಟೆಯವರೆಗೆ ಹಾಗೂ ವಿಸ್ತರಿತ ಸೆಷನ್‌ಗಳಲ್ಲಿ ಬೆಳಗ್ಗೆ 8ರಿಂದ ಸಂಜೆ 5 ಗಂಟೆಯವರೆಗೆ ಲಸಿಕೆ ನೀಡಲಾಗುತ್ತದೆ. ಖಾಸಗಿ ಆಸ್ಪತ್ರೆಗಳ ತಂಡಗಳು, ವೈದ್ಯಕೀಯ ಅಥವಾ ನರ್ಸಿಂಗ್ ಕಾಲೇಜುಗಳ ತಂಡಗಳು, ಅಜೀಂ ಪ್ರೇಮ್‌ಜಿ ಫೌಂಡೇಷನ್ ಮತ್ತು ಇತರ ಸರ್ಕಾರೇತರ ಸಂಘಟನೆಗಳ ವ್ಯಾಕ್ಸಿನೇಟರ್ ತಂಡಗಳೂ ಈ ಅಭಿಯಾನದಲ್ಲಿ ಕೈಜೋಡಿಸಲಿವೆ.

ಅಂಕಿ-ಅಂಶ

760 ಕೊಳೆಗೇರಿಗಳಲ್ಲಿ ಲಸಿಕೆ ನೀಡಲು ಬಿಬಿಎಂಪಿ ಸಿದ್ಧತೆ ಮಾಡಿಕೊಂಡಿದೆ

2,178 ತಾಣಗಳಲ್ಲಿ ಲಸಿಕಾ ಕೇಂದ್ರಗಳನ್ನು ಸ್ಥಾಪಿಸಲು ವ್ಯವಸ್ಥೆ ಕಲ್ಪಿಸಲಾಗಿದೆ

225 ಡೋಸ್ ಪ್ರತಿ ತಾಣದಲ್ಲಿ ನೀಡುವ ಲಸಿಕೆ

ಗೊಂದಲದಲ್ಲಿ ನಗರದ ಸರ್ಕಾರಿ ಆಸ್ಪತ್ರೆಗಳು

ಹಾಸಿಗೆ ಮೀಸಲು: ಶೇ 5ರಷ್ಟು ಮಾತ್ರ ಭರ್ತಿ!

• ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಸದ್ಯ 7 ಸಾವಿರಕ್ಕೂ ಅಧಿಕ ಕೋವಿಡ್ ಸಕ್ರಿಯ ಪ್ರಕರಣಗಳಿವೆ. ಆದರೆ, ಆಸ್ಪತ್ರೆಗಳಲ್ಲಿ ಸೋಂಕಿತರಿಗೆ ಮೀಸಲಿಟ್ಟ ಹಾಸಿಗೆಗಳಲ್ಲಿ ಶೇ 5ರಷ್ಟು ಹಾಸಿಗೆಗಳು ಮಾತ್ರ ಬಳಕೆಯಾಗುತ್ತಿವೆ.

ಸೋಂಕಿತರಲ್ಲಿ ಬಹುತೇಕರು ಮನೆ ಆರೈಕೆಗೆ ಒಳಗಾಗಿದ್ದಾರೆ. ಸದ್ಯ 115 ಮಂದಿ ಮಾತ್ರ ಸರ್ಕಾರಿ ಕೋಟಾದಡಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ಮೀಸಲಿಟ್ಟ 1,964 ಹಾಸಿಗೆಗಳಲ್ಲಿ 1,847 ಹಾಸಿಗೆಗಳು ಖಾಲಿ ಉಳಿದಿವೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಮುನ್ನೆಚ್ಚರಿಕೆ ಕ್ರಮವಾಗಿ ಹಾಸಿಗೆಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ.

ಕೋವಿಡ್ ಪ್ರಕರಣಗಳ ಸಂಖ್ಯೆ ಮಾರ್ಚ್ ಎರಡನೇ ವಾರದ ಬಳಿಕ ಏರಿಕೆ ಕಂಡಿದ್ದರಿಂದ ಸರ್ಕಾರವು ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಸೋಂಕಿತರಿಗೆ ಚಿಕಿತ್ಸೆ ಒದಗಿಸುವ ವ್ಯವಸ್ಥೆ ರೂಪಿಸಿತ್ತು. ಸರ್ಕಾರಿ ಕೋಟಾದಡಿ ಶಿಫಾರಸು ಆಧಾರದಲ್ಲಿ ಚಿಕಿತ್ಸೆ ನೀಡಲು ಶೇ 50 ರಷ್ಟು ಹಾಸಿಗೆಗಳನ್ನು ಮೀಸಲಿಡುವಂತೆ ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿ, ಆದೇಶ ಹೊರಡಿಸಿತ್ತು. ಇದರಿಂದಾಗಿ ಕೋವಿಡ್ ಚಿಕಿತ್ಸೆಗೆ ನಗರದಲ್ಲಿ 5 ಸಾವಿರಕ್ಕೂ ಅಧಿಕ ಹಾಸಿಗೆಗಳು ದೊರೆತಿದ್ದವು. ಸೋಂಕು ದೃಢ ಪ್ರಮಾಣವು ಶೇ 2ರ ಒಳಗಡೆ ಬಂದಿರುವುದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಎಲ್ಲ ಸೋಂಕಿತರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಗೊಂದಲದಲ್ಲಿ ಆಸ್ಪತ್ರೆಗಳು: ಕೋವಿಡ್ ಆಸ್ಪತ್ರೆಯಾಗಿ ಮಾರ್ಪಟ್ಟಿರುವ ವಿಕ್ಟೋರಿಯಾದಲ್ಲಿ 416 ಎಚ್‌ಡಿಯು ಹಾಸಿಗೆಗಳು ಮೀಸಲಿವೆ. ಅವುಗಳಲ್ಲಿ 398 ಹಾಸಿಗೆಗಳು ಖಾಲಿ ಉಳಿದಿವೆ. ಕೋವಿಡೇತರ ಚಿಕಿತ್ಸೆ ಪ್ರಾರಂಭಿಸಲು ಅನುಮತಿ ನೀಡದಿರುವುದರಿಂದ ಅನ್ಯ ಕಾಯಿಲೆ ಎದುರಿಸುತ್ತಿರುವ ರೋಗಿಗಳು ಬೇರೆ ಆಸ್ಪತ್ರೆಗಳನ್ನು ಅವಲಂಬಿಸಬೇಕಾಗಿದೆ. ಅಲ್ಲಿ ವೆಂಟಿಲೇಟರ್ ಸಹಿತ 54 ಐಸಿಯು ಹಾಸಿಗೆಗಳಲ್ಲಿ 52 ಖಾಲಿ ಉಳಿದಿವೆ.

ಸಿ.ವಿ. ರಾಮನ್, ಜಯನಗರ ಸಾರ್ವಜನಿಕ ಆಸ್ಪತ್ರೆ, ಇಂದಿರಾನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆ ಸೇರಿದಂತೆ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಕೋವಿಡ್ ಚಿಕಿತ್ಸೆಗೆ ಕೆಲವಷ್ಟು ಹಾಸಿಗೆಗಳನ್ನು ಮೀಸಲಿಡಲಾಗಿದೆ. ಈ ಆಸ್ಪತ್ರೆಗಳಿಗೆ ಕೋವಿಡೇತರ ರೋಗಿಗಳು ಕಳೆದೊಂದು ತಿಂಗಳಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಅವರಿಗೆ ಹಾಸಿಗೆ ಸಮಸ್ಯೆ ತಲೆದೋರಿದೆ.

‘ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗೆ ಬರುವವರ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ. ದಾಖಲಾದವರು ಕೂಡ ಬೇಗ ಚೇತರಿಸಿಕೊಂಡು ಮನೆಗೆ ತೆರಳುತ್ತಿದ್ದಾರೆ. ಸಂಭಾವ್ಯ ಕೋವಿಡ್ ಮೂರನೇ ಅಲೆಯ ಸಂಬಂಧ ಹಾಸಿಗೆಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ. ಅನ್ಯ ರೋಗಿಗಳ ಚಿಕಿತ್ಸೆಗೆ ಅವಕಾಶ ನೀಡಿದಲ್ಲಿ ದಾಖಲಿಸಿಕೊಂಡು, ಚಿಕಿತ್ಸೆ ನೀಡಲಾಗುತ್ತದೆ’ ಎಂದು ಬೆಂಗಳೂರು ನಗರ ಜಿಲ್ಲಾ ಶಸ್ತ್ರಚಿಕಿತ್ಸಕ ಹಾಗೂ ಇಂದಿರಾ ನಗರದ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಅನ್ಸರ್ ಅಹಮದ್ ತಿಳಿಸಿದರು.

‘ಕೋವಿಡ್ ಮೊದಲ ಅಲೆಯಲ್ಲಿ ಕಳೆದ ವರ್ಷಾಂತ್ಯಕ್ಕೆ ಪ್ರಕರಣ ಸಂಖ್ಯೆ ನಿಯಂತ್ರಣಕ್ಕೆ ಬಂದಿತ್ತು. ಮಾರ್ಚ್ ಬಳಿಕ ಎರಡನೇ ಅಲೆ ಕಾಣಿಸಿಕೊಂಡು, ಪ್ರಕರಣಗಳ ಸಂಖ್ಯೆ ಏರಿಕೆ ಕಂಡಿತು. ಮೂರನೇ ಅಲೆಯ ಬಗ್ಗೆ ತಜ್ಞರು ಮುನ್ನೆಚ್ಚರಿಕೆ ನೀಡಿರುವುದರಿಂದ ಹಾಸಿಗೆಗಳನ್ನು ಹಾಗೇ ಉಳಿಸಿಕೊಳ್ಳಲಾಗಿದೆ’ ಎಂದು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರೊಬ್ಬರು ವಿವರಿಸಿದರು.

ತಡವಾಗಿ ಮರಣ ವರದಿ

ನಗರದಲ್ಲಿ ಕೆಲದಿನಗಳಿಂದ ಕೋವಿಡ್ ಮರಣ ಪ್ರಕರಣಗಳ ಸಂಖ್ಯೆ ಇಳಿಮುಖ ಮಾಡಿದ್ದು, ಸಾವಿನ ಸಂಖ್ಯೆ ಒಂದಂಕಿಯಲ್ಲಿದೆ. ಆದರೆ, ಮೃತರು ಕೋವಿಡ್ ಪೀಡಿತರಾಗಿದ್ದರು ಎನ್ನುವುದು ತಡವಾಗಿ ವರದಿಯಾಗುತ್ತಿವೆ. ಕೆಲವು ಪ್ರಕರಣಗಳಲ್ಲಿ ತಿಂಗಳ ಬಳಿಕ ಕೋವಿಡ್ ಸಾವು ಎಂದು ಪರಿಗಣಿಸಲಾಗುತ್ತಿದೆ. ಬುಧವಾರ ದೃಢಪಟ್ಟ ಐದು ಮರಣ ಪ್ರಕರಣಗಳಲ್ಲಿ ಮೂವರು ಜುಲೈ ತಿಂಗಳಲ್ಲಿ ಮೃತಪಟ್ಟವರು. 76 ವರ್ಷದ ವೃದ್ಧೆಯೊಬ್ಬರು ಆ.1ರಂದು ಸಾವಿಗೀಡಾಗಿದ್ದಾರೆ. ‘ತಾಂತ್ರಿಕ ಸಮಸ್ಯೆಯಿಂದ ಕೆಲ ಪ್ರಕರಣಗಳಲ್ಲಿ ನೋಂದಣಿ ವಿಳಂಬವಾಗುವ ಸಾಧ್ಯತೆ ಇರುತ್ತದೆ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಕೋವಿಡ್‌ಗೆ ಮೀಸಲಿಟ್ಟ ಹಾಸಿಗೆಗಳ ವಿವರ

ವಿಧ	ಮೀಸಲು	ಖಾಲಿ
ಸಾಮಾನ್ಯಹಾಸಿಗೆ	744	709
ಐಸಿಯು ಹಾಸಿಗೆ	138	125
ಎಚ್‌ಡಿಯು ಹಾಸಿಗೆ	871	814
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	211	199

ಟಿ.ಟಿ. ಡಿಕ್ಕಿ: ಬೈಕ್ ಸವಾರ ಸಾವು

ಬೆಂಗಳೂರು: ದಾಸರಹಳ್ಳಿಯ ಚೊಕ್ಕಸಂದ್ರಕೆರೆರಸ್ತೆಯಲ್ಲಿಚಾಲಕನೊಬ್ಬಅಡ್ಡಾದಿಡ್ಡಿಯಾಗಿ ಟಿ.ಟಿ. ಓಡಿಸಿ ಎರಡು ಬೈಕ್‌ಗಳಿಗೆ ಡಿಕ್ಕಿ ಹೊಡೆದಿದ್ದು, ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಮೃತಪಟ್ಟಿದ್ದಾರೆ.

ರಸ್ತೆಯಲ್ಲಿ ವೇಗವಾಗಿ ಬರುತ್ತಿದ್ದ ಟಿ.ಟಿ.ವಾಹನ ಇಬ್ಬರು ಸವಾರರಿದ್ದ ಬೈಕ್‌ಗೆ ಮೊದಲು ಡಿಕ್ಕಿ ಹೊಡೆದಿದೆ. ಅವರ ಹಿಂದೆ ಬರುತ್ತಿದ್ದ ಮತ್ತೊಂದು ಬೈಕ್‌ಗೂ ಗುದ್ದಿದೆ. ಬಳಿಕ ಮರವೊಂದಕ್ಕೆ ಡಿಕ್ಕಿ ಹೊಡೆದು ನಿಂತಿದೆ. ಅದರೊಳಗಿದ್ದ ಇಬ್ಬರು ಕೂಡಲೇ ಕೆಳಕ್ಕಿಳಿದು ಪರಾರಿಯಾಗುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

‘ಸ್ಥಳದಲ್ಲಿ ಜಮಾಯಿಸಿದ ಜನ ಸವಾರರಿಬ್ಬರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಚಾಲಕನನ್ನು ವಶಕ್ಕೆ ಪಡೆದಿರುವ ಪೀಣ್ಯ ಸಂಚಾರ ಠಾಣೆ ಪೊಲೀಸರು ವಿಚಾರಣೆ ಕೈಗೊಂಡಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ರೌಡಿ ಹತ್ಯೆ: ನಾಲ್ವರ ಬಂಧನ

ಬೆಂಗಳೂರು: ರೌಡಿ ಅರವಿಂದ್ ಹತ್ಯೆ ಪ್ರಕರಣದಲ್ಲಿ ಭಾಗಿಯಾಗಿದ್ದ ನಾಲ್ವರನ್ನು ಅಶೋಕನಗರ ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

‘ಸ್ಟಾಲಿನ್, ವಿಜಯ್, ಅರುಣ್ ಹಾಗೂ ಜಾಕ್ ಅವರನ್ನು ಹಳೆ ಬಾಗಲೂರು ಬಳಿ ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿ ಹಾಗೂ ಖಚಿತ ಮಾಹಿತಿಯನ್ನು ಆಧರಿಸಿ ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಅರವಿಂದ್ ಹಲವು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದ. ಸ್ಟಾಲಿನ್‌ನ ತಮ್ಮನ ಮೇಲೂ ಹಲ್ಲೆ ಮಾಡಿದ್ದ. ಈ ಸಂಬಂಧ ದೂರು ಕೂಡ ದಾಖಲಾಗಿತ್ತು. ಬಂಧಿತ ಆರೋಪಿಗಳ ಪೈಕಿ ಒಬ್ಬನ ಪತ್ನಿಯ ಮೇಲೂ ಅರವಿಂದ್ ಹಲ್ಲೆ ನಡೆಸಿದ್ದ. ಇದಕ್ಕೆ ಸೇಡು ತೀರಿಸಿಕೊಳ್ಳುವ ಸಲುವಾಗಿ ಕೊಲೆ ಮಾಡಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ’ ಎಂದು ಪೊಲೀಸ್ ಮೂಲಗಳು ವಿವರಿಸಿವೆ.

‘ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) ಕ್ರೀಡಾಂಗಣದ ಎದುರಿನ ಬಿಬಿಎಂಪಿ ಮೈದಾನದಲ್ಲಿ ಫುಟ್‌ಬಾಲ್ ಆಡುತ್ತಿರುವುದಾಗಿ ಅರವಿಂದ್ ವಾಟ್ಸ್‌ಆ್ಯಪ್‌ನಲ್ಲಿ ಸ್ಟೇಟಸ್ ಹಾಕಿಕೊಂಡಿದ್ದ. ಇದನ್ನು ನೋಡಿದ್ದ ಆರೋಪಿಗಳು ಮಾರಕಾಸ್ತ್ರಗಳೊಂದಿಗೆ ಮೈದಾನಕ್ಕೆ ಬಂದು ಹಲ್ಲೆ ನಡೆಸಿದ್ದರು’ ಎಂದೂ ಹೇಳಿವೆ.

ಸಿಎನ್‌ಜಿ ಉತ್ತೇಜನಕ್ಕೆ ‘ಗೇಲ್’ ವಿಶೇಷ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ವಾಹನಗಳ ಬಳಕೆ ಉತ್ತೇಜಿಸಲು ಗೇಲ್ ಗ್ಯಾಸ್ ಲಿಮಿಟೆಡ್ ಕಂಪನಿಯು ‘ಸಿಎನ್‌ಜಿ ಉತ್ತೇಜನ ಯೋಜನೆ’ ಆರಂಭಿಸಿದೆ.

ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಯು ಸಿಎನ್‌ಜಿ ಸೌಲಭ್ಯದ ಹೊಸ ಕಾರು, ಆಟೊ, ಟ್ಯಾಕ್ಸಿ, ಎಲ್‌ಸಿವಿ, ಎಚ್‌ಸಿವಿ ಖರೀದಿಸಿದರೆ ಅಥವಾ ಹಾಲಿ ಇರುವ ವಾಹನವನ್ನು ಸಿಎನ್‌ಜಿಗೆ ಪರಿವರ್ತಿಸಿದರೆ ಈ ಯೋಜನೆಯ ಪ್ರಯೋಜನ ಪಡೆಯಬಹುದು.

ಯೋಜನೆಯ ಅಡಿಯಲ್ಲಿ, ಗೇಲ್ ಗ್ಯಾಸ್ ಲಿಮಿಟೆಡ್ ಕಂಪನಿಯು ₹ 14 ಸಾವಿರದಿಂದ ₹ 25 ಸಾವಿರದವರೆಗಿನ ಮೌಲ್ಯದ ಸಿಎನ್‌ಜಿ ಪ್ರಿಪೇಯ್ಡ್ ಕಾರ್ಡ್‌ಅನ್ನು ಸಿಎನ್‌ಜಿ ವಾಹನ ಮಾಲೀಕರಿಗೆ ನೀಡಲಿದೆ. ಈ ಕಾರ್ಡ್ ಬಳಸಿ ಬೆಂಗಳೂರಿನ ಯಾವುದೇ ಸಿಎನ್‌ಜಿ ಕೇಂದ್ರದಲ್ಲಿ ಗ್ಯಾಸ್ ಭರ್ತಿ ಮಾಡಿಸಬಹುದು. ದಿನದ ಗರಿಷ್ಠ ಬಳಕೆ ಮೊತ್ತದ ಮಿತಿಯು ₹ 150ರಿಂದ ₹ 300ರವರೆಗೆ ಇರಲಿದೆ.

ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಸಾರಿಗೆ ಸಚಿವ ಬಿ. ಶ್ರೀರಾಮುಲು, ‘ಪರಿಸರ ರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದ್ದು, ಈ ನಿಟ್ಟಿನಲ್ಲಿ ಸರ್ಕಾರವು ಸಹಕಾರ ನೀಡಲು ಸಿದ್ಧವಿದೆ. ಬೆಂಗಳೂರಿನಲ್ಲಿ ಸಿಎನ್‌ಜಿ ಜಾಲವನ್ನು ವಿಸ್ತರಿಸುವ ಪ್ರಯತ್ನಗಳು ನಡೆಯುತ್ತಿವೆ. ಬೆಂಗಳೂರಿನಲ್ಲಿ ಶುದ್ಧ ಇಂಧನ ಬಳಕೆ ಮಾಡುವಂತೆ ಜನರನ್ನು ಉತ್ತೇಜಿಸುವಲ್ಲಿ ಈ ಯೋಜನೆಯು ಒಂದು ಪ್ರಮುಖ ಹೆಜ್ಜೆ’ ಎಂದರು.

ಗೇಲ್ ಗ್ಯಾಸ್ ಕಂಪನಿಯು ಸದ್ಯ ಬೆಂಗಳೂರಿನಲ್ಲಿ 49 ಸಿಎನ್‌ಜಿ ಕೇಂದ್ರಗಳನ್ನು ಹೊಂದಿದ್ದು, ಅವುಗಳಲ್ಲಿ 37 ಕೇಂದ್ರಗಳು ಕಾರ್ಯಾಚರಿಸುತ್ತಿವೆ. ಇನ್ನುಳಿದ 12 ಕೇಂದ್ರಗಳು ಅಕ್ಟೋಬರ್ ಕೊನೆಯೊಳಗೆ ಬಳಕೆಗೆ ಲಭ್ಯವಾಗಲಿವೆ. ಮುಂದಿನ ಹಣಕಾಸು ವರ್ಷದಲ್ಲಿ ಇನ್ನೂ 50 ಕೇಂದ್ರಗಳನ್ನು ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಗೇಲ್ ಗ್ಯಾಸ್‌ನ ಸಿಇಒ ರಮಣ್ ಛಡ್ಡಾ ತಿಳಿಸಿದರು.

ಮಾರುತಿ ಸುಜುಕಿ, ಟಾಟಾ ಮೋಟರ್ಸ್, ಹುಂಡೈ ಮೋಟರ್ಸ್, ಬಜಾಜ್ ಆಟೊ, ಪಿಯಾಜಿಯೊ, ಮಹೀಂದ್ರ, ಟಿವಿಎಸ್ ಮೋಟರ್ಸ್, ಅಶೋಕ್ ಲೇಲ್ಯಾಂಡ್, ಐಷರ್ ಮೋಟರ್ಸ್ ಕಂಪನಿಗಳು ಸಿಎನ್‌ಜಿ ವಾಹನಗಳನ್ನು ನೀಡುತ್ತಿವೆ.

ಮುಖ್ಯಾಂಶಗಳು

- ಸೆ. 10 ರಿಂದ ಅ.9ರ ಅವಧಿಯೊಳಗೆ ಖರೀದಿಸುವ ವಾಹನಗಳಿಗೆ ಅನ್ವಯ
- ಬೆಂಗಳೂರು ವಲಯದಲ್ಲಿ ಇರುವ 16 ಆರ್‌ಟಿಒಗಳಲ್ಲಿ ನೋಂದಣಿ ಆಗಿರಬೇಕು

ಯೋಜನೆಯ ವಿವರ

ವಾಹನ	ಕಾರ್ಡ್ ಮೌಲ್ಯ	ದಿನದ ಬಳಕೆ ಮಿತಿ	ಕಾರ್ಡ್ ಬಳಕೆಯ ಗರಿಷ್ಠ ಅವಧಿ
ಹೊಸ ಪ್ರಯಾಣಿಕ ಆಟೊ ರಿಕ್ಷಾ (3 ಚಕ್ರ)	₹14,000	₹150	180 ದಿನ
ಹೊಸ ಕಾರ್ಗೊ ಆಟೊ ರಿಕ್ಷಾ (3 ಚಕ್ರ)	₹25,000	₹150	180 ದಿನ
ಹೊಸ ಟ್ಯಾಕ್ಸಿ/ಖಾಸಗಿ ಕಾರು	₹25,000	₹300	120 ದಿನ
ಹೊಸ ಎಲ್‌ಸಿವಿ/ಎಚ್‌ಸಿವಿ	₹25,000	₹300	120 ದಿನ
ರೆಟ್ರೊ ಫಿಟ್ಟೆಡ್ ಪ್ರಯಾಣಿಕ ಆಟೊ (3 ಚಕ್ರ)	₹23,000	₹150	180 ದಿನ
ರೆಟ್ರೊ ಫಿಟ್ಟೆಡ್ ಟ್ಯಾಕ್ಸಿ	₹23,000	₹300	120 ದಿನ
ರೆಟ್ರೊ ಫಿಟ್ಟೆಡ್ ಖಾಸಗಿ ಕಾರ್	₹25,000	₹300	120 ದಿನ

ಗೇಲ್ ಗ್ಯಾಸ್ ಸಿಇಒ ರಮಣ್ ಛಡ್ಡಾ ಮತ್ತು ಸಚಿವ ಬಿ. ಶ್ರೀರಾಮುಲು ಅವರು ಪ್ರಿಪೇಯ್ಡ್ ಕಾರ್ಡ್ ಪಡೆದಿರುವ ಸಿಎನ್‌ಜಿ ವಾಹನಕ್ಕೆ ಹಸಿರು ನಿಶಾನೆ ತೋರಿದರು

ಯುವತಿಯ ಖಾಸಗಿ ದೃಶ್ಯ ಸೆರೆಹಿಡಿದು ಹಣಕ್ಕಾಗಿ ಬೇಡಿಕೆ: ಆರೋಪಿ ಬಂಧನ

ಬೆಂಗಳೂರು: ಯುವತಿಯರೊಂದಿಗೆ ಸಲುಗೆ ಬೆಳೆಸಿ ಬಳಿಕ ಮೊಬೈಲ್‌ನಲ್ಲಿ ಅವರ ಖಾಸಗಿ ದೃಶ್ಯಗಳನ್ನು ಸೆರೆಹಿಡಿದು ಹಣಕ್ಕಾಗಿ ಪೀಡಿಸುತ್ತಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘24 ವರ್ಷದ ಯುವತಿ ನೀಡಿದ ದೂರಿನ ಆಧಾರದಲ್ಲಿ ಬ್ಯಾಡರಹಳ್ಳಿಯ ರಾಕೇಶ್ (26) ಎಂಬಾತನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಸಂತ್ರಸ್ತ ಯುವತಿಯು ಲಗ್ಗೆರೆಯಲ್ಲಿ ಫ್ಯಾನ್ಸಿ ಸ್ಟೋರ್ ನಡೆಸುತ್ತಿದ್ದರು. ಆಟೊ ಚಾಲಕನಾಗಿರುವ ಆರೋಪಿ ಯುವತಿಯನ್ನು ಪರಿಚಯಿಸಿಕೊಂಡಿದ್ದ. ಇಬ್ಬರ ನಡುವೆ ಸ್ನೇಹ ಬೆಳೆದು ಅದು ಪ್ರೀತಿಗೆ ತಿರುಗಿತ್ತು. ಯುವತಿಯನ್ನು ಮದುವೆಯಾಗುವುದಾಗಿ ನಂಬಿಸಿದ್ದ ಆರೋಪಿ, ತನ್ನ ತಂದೆ ತಾಯಿಯ ಪರಿಚಯ ಮಾಡಿಸುವುದಾಗಿ ಆಕೆಯನ್ನು ಕೆಂಪೇಗೌಡನಗರದಲ್ಲಿರುವ ತನ್ನ ಅಕ್ಕನ ಮನೆಗೆ ಕರೆದೊಯ್ದಿದ್ದ. ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಆಕೆಯನ್ನು ಲೈಂಗಿಕವಾಗಿ ಬಳಸಿಕೊಂಡು, ಖಾಸಗಿ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರಿಸಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕೆಲ ದಿನಗಳ ಬಳಿಕ ತಾನು ಚಿತ್ರಿಸಿಕೊಂಡಿದ್ದ ದೃಶ್ಯವನ್ನು ಯುವತಿಗೆ ವಾಟ್ಸ್‌ಆ್ಯಪ್ ಮೂಲಕ ಕಳುಹಿಸಿದ್ದ ಆರೋಪಿ, ಹಣಕ್ಕೆ ಬೇಡಿಕೆ ಇಟ್ಟಿದ್ದ. ಹಣ ಕೊಡದಿದ್ದರೆ ಅದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುವುದಾಗಿ ಬೆದರಿಸಿದ್ದ. ಇದರಿಂದ ಹೆದರಿದ್ದ ಯುವತಿಯು ₹2.75 ಲಕ್ಷ ಹಣ ನೀಡಿದ್ದರು. ಇಷ್ಟಕ್ಕೆ ಸುಮ್ಮನಾಗದ ಆತ ಮತ್ತೆ ಹಣಕ್ಕಾಗಿ ಪೀಡಿಸಲು ಆರಂಭಿಸಿದ್ದ. ಆತನ ಕಿರುಕುಳ ತಾಳಲಾರದೆ ಯುವತಿ ಠಾಣೆಗೆ ಬಂದು ದೂರು ನೀಡಿದ್ದರು’ ಎಂದು ವಿವರಿಸಿದ್ದಾರೆ.

‘ಆರೋಪಿಯು ಮತ್ತಷ್ಟು ಯುವತಿಯರಿಗೆ ಇದೇ ರೀತಿ ವಂಚನೆ ಮಾಡಿರುವುದಾಗಿ ಸಂತ್ರಸ್ತ ಯುವತಿ ದೂರಿನಲ್ಲಿ ವಿವರಿಸಿದ್ದಾರೆ. ಆತನ ವಿಚಾರಣೆ ನಡೆಯುತ್ತಿದೆ. ವಂಚನೆಗೊಳಗಾದವರು ಠಾಣೆಗೆ ಬಂದು ದೂರು ನೀಡಬಹುದು’ ಎಂದರು.

ಕಾರು ಡಿಕ್ಕಿ: 200 ಮೀಟರ್ ದೂರ ಉರುಳಿದ ದೇಹಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿಯ ಮೇಲ್ಸೇತುವೆಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ್ದ ಅಪಘಾತಕ್ಕೆ ಕಾರು ಚಾಲಕ ಪಿ.ನಿತೀಶ್ (23) ಅಜಾಗರೂಕತೆಯೇ ಕಾರಣ ಎಂದು ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಬೊಮ್ಮಸಂದ್ರದ ತಿರುಪಾಳ್ಯ ಗ್ರಾಮದ ನಿತೀಶ್, ಸಿಲ್ಕ್ ಬೋರ್ಡ್ ಕಡೆಯಿಂದ ಎಲೆಕ್ಟ್ರಾನಿಕ್ ಸಿಟಿಯತ್ತ ಬಲೆನೊ ಕಾರಿನಲ್ಲಿ ಅತಿ ವೇಗವಾಗಿ ಹೊರಟಿದ್ದ. ಆತನ ನಿಯಂತ್ರಣ ತಪ್ಪಿದ ಕಾರು ತಡೆಗೋಡೆ ಭೇದಿಸಿಕೊಂಡು ಮೇಲ್ಸೇತುವೆಯ ಪಕ್ಕದ ವಾಹನ ನಿಲುಗಡೆ ಸ್ಥಳದಲ್ಲಿ (ಲೇ ಬೇ) ನಿಂತಿದ್ದ ಪ್ರೀತಂಕುಮಾರ್ (30) ಹಾಗೂ ಕೃತಿಕಾರಾಮನ್ (28) ಅವರಿಗೆ ಡಿಕ್ಕಿ ಹೊಡೆದಿತ್ತು. ಡಿಕ್ಕಿಯ ರಭಸಕ್ಕೆ ಇಬ್ಬರೂ ಕೆಳಗಿನ ರಸ್ತೆಗೆ ಬಿದ್ದು ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೃತಪಟ್ಟಿದ್ದರು’ ಎಂದು ಹೇಳಿದ್ದಾರೆ.

‘ಜೆ.ಪಿ.ನಗರದ 8ನೇ ಹಂತದಲ್ಲಿರುವ ಅಕ್ಷಯ್ ಪ್ರೈಡ್ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ನೆಲೆಸಿದ್ದ ಪ್ರೀತಂ, ಸರ್ಜಾಪುರ ರಸ್ತೆಯಲ್ಲಿರುವ ಕಂಪನಿಯೊಂದರಲ್ಲಿ ಕ್ವಾಲಿಟಿ ಕಂಟ್ರೋಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರು. ಚೆನ್ನೈನವರಾದ ಕೃತಿಕಾ ಮಹದೇವಪುರದಲ್ಲಿರುವ ಕಾಯಿನ್ ಸ್ವಿಚ್ ಕಂಪನಿಯಲ್ಲಿ ಇತ್ತೀಚೆಗಷ್ಟೇ ಉದ್ಯೋಗಕ್ಕೆ ಸೇರಿದ್ದರು.

ಮರಣೋತ್ತರ ಪರೀಕ್ಷೆಯ ನಂತರ ಮೃತದೇಹಗಳನ್ನು ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ’ ಎಂದರು.

‘ಆರೋಪಿ ನಿತೀಶ್ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾನೆ. ಆತನನ್ನು ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಕಾವೇರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪ್ರಜ್ಞೆ ಬಂದ ಬಳಿಕ ಆತನಿಂದ ಘಟನೆ ಕುರಿತು ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತದೆ’ ಎಂದು ತಿಳಿಸಿದ್ದಾರೆ.

‘ಕಾರು ಚಾಲಕನ ರಕ್ತದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಕಳುಹಿಸಲಾಗಿದೆ. ಆತ ಮದ್ಯಪಾನ ಮಾಡಿದ್ದನೊ ಅಥವಾ ಡ್ರಗ್ಸ್ ಸೇವಿಸಿದ್ದನೊ ಎಂಬುದು ವರದಿ ಬಂದ ಬಳಿಕ ಗೊತ್ತಾಗಲಿದೆ. ಪ್ರೀತಂ ಮತ್ತು ಕೃತಿಕಾ ಸ್ನೇಹಿತನ ಬೈಕ್ ಪಡೆದು ನಗರದಲ್ಲಿ ಸುತ್ತಾಡಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆ

ಮಂಗಳವಾರ ರಾತ್ರಿ 9.15ರ ಸುಮಾರಿಗೆ ನಡೆದಿರುವ ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

‘ಪ್ರೀತಂ ಅವರು ಹೆದ್ದಾರಿಯಲ್ಲಿ ‘ಒನ್ ವೇ’ಯಲ್ಲಿ ನಿಧಾನವಾಗಿ ಬೈಕ್ ಓಡಿಸಿಕೊಂಡು ಹೋಗುತ್ತಿದ್ದು ಅವರ ಹಿಂದೆ ಕೃತಿಕಾ ನಡೆದು ಸಾಗುತ್ತಿರುವ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇವರಿಬ್ಬರು ಲೇ ಬೇಯಲ್ಲಿ ಬೈಕ್ ನಿಲ್ಲಿಸಿಕೊಂಡು ನಿಂತಿದ್ದ ವೇಳೆ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆಯುತ್ತದೆ. ಸುಮಾರು 40 ಅಡಿ ಎತ್ತರದಿಂದ ಸರ್ವಿಸ್ ರಸ್ತೆ ಮೇಲೆ ಬಿದ್ದ ದೇಹಗಳು ಒಮ್ಮೆ ಪುಟಿದು 200 ಮೀಟರ್ ದೂರ ಉರುಳಿಕೊಂಡು ಹೋಗುತ್ತವೆ. ಇದನ್ನು ಕಂಡು ಪಾದಚಾರಿಯೊಬ್ಬರು ಹೌಹಾರುತ್ತಾರೆ’.

ದರ್ಗಾಕ್ಕೆ ಪ್ರವೇಶಿಸಿದ ಗಣೇಶ ವಿಸರ್ಜನಾ ಮೆರವಣಿಗೆ

ಗಣಪನಿಗೆ ಮೌಲ್ವಿಯಿಂದ ಪೂಜೆ

ಪ್ರಜಾವಾಣಿ ವಾರ್ತೆ

ದಾಂಡೇಲಿ (ಉತ್ತರ ಕನ್ನಡ): ಇಲ್ಲಿನ ವಿನಾಯಕ ನಗರದ ಗಜಾನನ ಮಂಡಳಿಯ ಗಣೇಶ ವಿಸರ್ಜನಾ ಮೆರವಣಿಗೆಯು ಮಂಗಳವಾರ ರಾತ್ರಿ ಸಾಗುತ್ತಿದ್ದಾಗ ಅನಿರೀಕ್ಷಿತವಾಗಿ ಮಾರ್ಗಮಧ್ಯದಲ್ಲಿ ದರ್ಗಾ ಪ್ರವೇಶಿಸಿದ ಸಂದರ್ಭದಲ್ಲಿ ಮಸೀದಿಯ ಮೌಲ್ವಿ ಗಣೇಶನಿಗೆ ಪೂಜೆ ಸಲ್ಲಿಸಿ ಬೀಳ್ಕೊಟ್ಟರು.

ಐದನೇ ದಿನದ ಗಣೇಶ ವಿಸರ್ಜನಾ ಸಮಯದಲ್ಲಿ ಹಳಿಯಾಳ ರಸ್ತೆಯ ರೋಷನಿ ಮೋಹರಂ ಕಮಿಟಿಯ ದರ್ಗಾದ ಆವರಣದಲ್ಲಿ ಈ ಅಪರೂಪದ ಪ್ರಸಂಗ ನಡೆದಿದೆ.

ಪ್ರತಿ ವರ್ಷವು ತಡ ರಾತ್ರಿಯವರೆಗೆ ಗಣೇಶ ವಿಸರ್ಜನೆಯ ಮೆರವಣಿಗೆ ನಡೆಯುತ್ತಿತ್ತು. ಆದರೆ ಈ ಬಾರಿ ಕೋವಿಡ್ ನಿಯಮಗಳನ್ನು ಪಾಲಿಸುವ ಸಲುವಾಗಿ ಸಂಜೆ 7 ಗಂಟೆಗೇ ಗಣೇಶ ವಿಸರ್ಜನಾ ಮೆರವಣಿಯನ್ನು ಪ್ರಾರಂಭಿಸಲಾಯಿತು. ಗಣೇಶನ ಮೆರವಣಿಗೆ ದರ್ಗಾ ಪ್ರವೇಶಿಸಿದ್ದನ್ನು ಕಂಡು ಮೌಲ್ವಿ ಮುಜಾವರ್ ಇಬ್ರಾಹಿಂ ಗಣಪನಿಗೆ ಕಾಯಿ, ಕರ್ಪೂರ ಅರ್ಪಿಸಿ ಪೂಜೆ ಸಲ್ಲಿಸಿ ಬೀಳ್ಕೊಟ್ಟರು.

ನಗರದಲ್ಲಿ ಇದೇ ಮೊದಲ ಬಾರಿಗೆ ಈ ರೀತಿ ನಡೆದಿದೆ ಎನ್ನಲಾಗಿದ್ದು ಈ ಸೌಹಾರ್ದದ ಕ್ಷಣಕ್ಕೆ ನೂರಾರು ಜನರು ಸಾಕ್ಷಿಯಾದರು.

ದಾಂಡೇಲಿಯ ವಿನಾಯಕ ನಗರದ ಗಜಾನನ ಮಂಡಳಿಯ ಗಣೇಶ ವಿಸರ್ಜನಾ ಮೆರವಣಿಗೆಯು ಮಂಗಳವಾರ ರಾತ್ರಿ ದರ್ಗಾ ಪ್ರವೇಶಿಸಿದ ಸಂದರ್ಭದಲ್ಲಿ ಮಸೀದಿಯ ಮೌಲ್ವಿ ಗಣೇಶನಿಗೆ ಪೂಜೆ ಸಲ್ಲಿಸಿ ಬೀಳ್ಕೊಟ್ಟರು

ಮಳೆ ನೀರು ನಿರ್ವಹಣೆಗೆ ನಿರ್ಲಕ್ಷ್ಯ– ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರ ವರದಿ ಕಳವಳ

ಪ್ರಾಥಮಿಕ, ದ್ವಿತೀಯ ಹಂತದ ರಾಜಕಾಲುವೆ ಕಣ್ಮರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಳೆ ನೀರಿನ ನಿರ್ವಹಣೆ ಬಗ್ಗೆ ಸರ್ಕಾರ ಹಾಗೂ ಸ್ಥಳೀಯ ಸಂಸ್ಥೆಗಳು ನಿರ್ಲಕ್ಷ್ಯ ತೋರಿಸಿರುವುದರ ಬಗ್ಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೇಖಪಾಲರ (ಸಿಎಜಿ) ವರದಿ ತೀವ್ರ ಕಳವಳ ವ್ಯಕ್ತಪಡಿಸಿದೆ.

1900ನೇ ಇಸವಿಯ ಪಹಣಿ ನಕ್ಷೆಗಳಿಗೆ ಹೋಲಿಸಿದರೆ ಬಿಬಿಎಂಪಿ ವ್ಯಾಪ್ತಿಯ ಕೋರಮಂಗಲ ಕಣಿವೆ ಪ್ರದೇಶದ ಜಲಕಾಯಗಳ ಸಂಖ್ಯೆ 41ರಿಂದ 8ಕ್ಕೆ ಇಳಿದಿದೆ. ಈ ಕಣಿವೆಯಲ್ಲಿ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳ ಉದ್ದ 113.24 ಕಿ.ಮೀ.ಯಿಂದ 62.84 ಕಿ.ಮೀಗೆ ಇಳಿದಿದೆ. ವೃಷಭಾವತಿ ಕಣಿವೆಯ ಜಲಕಾಯಗಳ ಸಂಖ್ಯೆ 51ರಿಂದ 13ಕ್ಕೆ ಇಳಿದಿದೆ. ಈ ಕಣಿವೆಯ ಪ್ರಾಥಮಿಕ ಹಾಗೂ ದ್ವಿತೀಯ ಹಂತದ ರಾಜಕಾಲುವೆಗಳ ಉದ್ದ 226.29 ಕಿ.ಮೀ.ಯಿಂದ 111.72 ಕಿ.ಮೀ.ಗೆ ಇಳಿದಿದೆ.

ಕರ್ನಾಟಕವು 2002ರಲ್ಲಿ ನಗರ ಕುಡಿಯುವ ನೀರು ಮತ್ತು ನೈರ್ಮಲ್ಯ ನೀತಿಯನ್ನು ಜಾರಿಗೆ ತಂದಿದೆ. 2011ರಲ್ಲಿ ಅಂತರ್ಜಲ (ಅಭಿವೃದ್ಧಿ, ನಿರ್ವಹಣೆ ಮತ್ತು ನಿಯಂತ್ರಣ) ಕಾಯ್ದೆಯನ್ನು ಜಾರಿಗೊಳಿಸಿದೆ. ಇವೆರಡರಲ್ಲೂ ಮಳೆ ನೀರಿನ ನಿರ್ವಹಣೆಯ ಅಗತ್ಯವನ್ನು ಕಡೆಗಣಿಸಿರುವುದನ್ನು ವರದಿ ಬೊಟ್ಟು ಮಾಡಿ ತೋರಿಸಿದೆ. 2010ರಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರವು (ಎನ್‌ಡಿಎಂಎ) ನಗರಗಳ ಪ್ರವಾಹವನ್ನು ನದಿ ಪ್ರವಾಹಕ್ಕಿಂತ ಭಿನ್ನವಾದ ವಿಪತ್ತು ಎಂದು ಗುರುತಿಸಿ ಅದರ ನಿರ್ವಹಣೆಗೆ ಸಾಂಸ್ಥಿಕ ಚೌಕಟ್ಟು ರೂಪಿಸಲು ಸೂಚಿಸಿತ್ತು. ಚರಂಡಿಗಳ ವಿನ್ಯಾಸ ಹಾಗೂ ವಿಪತ್ತು ನಿರ್ವಹಣೆಯ ವಿಧಾನಗಳನ್ನು ನಿಗದಿಪಡಿಸಿ ಮಾರ್ಗಸೂಚಿ ರೂಪಿಸಿತ್ತು. ಅವುಗಳನ್ನು ಪಾಲಿಸುವಲ್ಲೂ ಸರ್ಕಾರ ಹಾಗೂ ಬಿಬಿಎಂಪಿ ವಿಫಲವಾಗಿದೆ ಎಂದು ವರದಿಯಲ್ಲಿ ತರಾಟೆಗೆ ತೆಗೆದುಕೊಳ್ಳಲಾಗಿದೆ. ಜಲಸಂಪನ್ಮೂಲ ಇಲಾಖೆ ರೂಪಿಸಿದ ಜಲನೀತಿಯಲ್ಲೂ ಮಳೆ ನೀರಿನ ನಿರ್ವಹಣೆ ನಿಯಂತ್ರಣಕ್ಕೆ ಕ್ರಮಬದ್ಧ ಚೌಕಟ್ಟಿನ ಕೊರತೆ ಇರುವುದನ್ನು ವರದಿ ಎತ್ತಿ ತೋರಿಸಿದೆ.

ಕೇಂದ್ರವು 2012ರಲ್ಲಿ ಜಾರಿಗೆ ತಂದ ಜಲನೀತಿಯು ನದಿ, ನದಿ ಪಾತ್ರ, ಕೆರೆ, ಅದಕ್ಕೆ ಸಂಬಂಧಿಸಿದ ಜೌಗು ಪ್ರದೇಶ, ಪ್ರವಾಹ ಪ್ರದೇಶಗಳು ಹಾಗೂ ಪರಿಸರ ಉದ್ದೇಶಕ್ಕೆ ಕಾಯ್ದಿಟ್ಟ ಪ್ರದೇಶಗಳ ಸಂರಕ್ಷಣೆಗೆ ಒತ್ತು ನೀಡಿದೆ. ಅದಕ್ಕೆ ಪೂರಕವಾಗಿ ರಾಜ್ಯದ ಜಲನೀತಿಯನ್ನು ಪರಿಷ್ಕರಿಸಿಲ್ಲ. ಹೆಚ್ಚುತ್ತಿರುವ ಕೊರತೆ ಹಾಗೂ ಬೇಡಿಕೆಗಳನ್ನು ಪರಿಗಣಿಸಿ ನಗರದಲ್ಲಿ ನೀರಿನ ಹರಿವನ್ನು ಜಲಸಂಪನ್ಮೂಲ ಎಂದು ಗುರುತಿಸುವ ನಿಟ್ಟಿನಲ್ಲಿ ರಾಜ್ಯದ ಜಲನೀತಿಯನ್ನು ಮರುಪರಿಶೀಲಿಸುವ ಅಗತ್ಯವನ್ನು ವರದಿಯು ಪ್ರತಿಪಾದಿಸಿದೆ.

ಕಣಿವೆ– 2008ರಿಂದ 2017ರವರೆಗಿನ ಮಾರ್ಪಾಡು

ಮಾನದಂಡ	ಕೋರಮಂಗಲ ಕಣಿವೆ	ವೃಷಭಾವತಿ ಕಣಿವೆ
ಭೇದ್ಯ ಪದರ	ಶೇ 11ರಷ್ಟು ಇಳಿಕೆ	ಶೇ 14ರಷ್ಟು ಇಳಿಕೆ
ಅಭೇದ್ಯ ಪದರ	ಶೇ 15ರಷ್ಟು ಹೆಚ್ಚಳ	ಶೇ 13ರಷ್ಟು ಹೆಚ್ಚಳ
ಕಟ್ಟಡ ನಿರ್ಮಿತ ಪ್ರದೇಶ	19.98 ಚ.ಕಿ.ಮೀ.ಯಿಂದ ಶೇ 23.88ಚ.ಕಿ.ಮೀ.ಹೆಚ್ಚಳ	39.14 ಚ.ಕಿ.ಮೀ.ಯಿಂದ 44.69 ಚ.ಕಿ.ಮೀ.ಗೆ ಹೆಚ್ಚಳ
ಹಸಿರು ಹೊದಿಕೆ	20.33 ಚ.ಕಿ.ಮೀ.ಯಿಂದ 19.34 ಚ.ಕಿ.ಮೀ.ಗೆ ಇಳಿಕೆ	26.82 ಚ.ಕಿ.ಮೀ.ಯಿಂದ 28.38 ಚ.ಕಿ.ಮೀ.ಗೆ ಹೆಚ್ಚಳ
ಖಾಲಿ ಪ್ರದೇಶ	13.88 ಚ.ಕಿ.ಮೀ.ಯಿಂದ 10.94 ಚ.ಕಿ.ಮೀ.ಗೆ ಇಳಿಕೆ	17.67 ಚ.ಕಿ.ಮೀ.ಯಿಂದ 9.74 ಚ.ಕಿ.ಮೀ.ಗೆ ಇಳಿಕೆ

ರಾಜಕಾಲುವೆ ಕಾಂಕ್ರಿಟೀಕರಣದಿಂದ ಪ್ರವಾಹ ಹೆಚ್ಚಳ

ರಾಜಕಾಲುವೆಗಳ ತಳ ಭಾಗವನ್ನು ಕಾಂಕ್ರಿಟೀಕರಣ ಮಾಡಿರುವುದು ಪದೇ ಪದೇ ಪ್ರವಾಹ ಸೃಷ್ಟಿಯಾಗುವ ಸಾಧ್ಯತೆ ಹೆಚ್ಚಿಸಿದೆ ಎಂಬ ಅಂಶವನ್ನು ಸಿಎಜಿ ವರದಿ ಬೊಟ್ಟು ಮಾಡಿದೆ.

ರಾಜಕಾಲುವೆಗಳ ನೈಸರ್ಗಿಕ ಮಣ್ಣಿನ ತಳವು ನೀರು ಹರಿವಿನ ವೇಗವನ್ನು ಕಡಿಮೆ ಮಾಡುತ್ತದೆ. ಅಂತರ್ಜಲ ಮರುಪೂರಣಕ್ಕೂ ಕಾರಣವಾಗುತ್ತದೆ. ರಾಜಕಾಲುವೆಗಳಲ್ಲಿ ಮಳೆ ನೀರಿನ ಬದಲು ಕೊಳಚೆ ನೀರೇ ಜಾಸ್ತಿ ಹರಿಯುತ್ತಿರುವುದರಿಂದ ಅವುಗಳ ಮೇಲಿನ ಒತ್ತಡ ಹೆಚ್ಚುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ. 'ಕಟ್ಟಡಗಳ ಅವಶೇಷವನ್ನೂ ರಾಜಕಾಲುವೆಗಳಲ್ಲಿ ಸುರಿಯಲಾಗುತ್ತಿದ್ದು, ಇದರಿಂದ ಚರಂಡಿಗಳಲ್ಲಿ ನೀರು ಹರಿಯುವಿಕೆ ಮೇಲೂ ದುಷ್ಪರಿಣಾಮ ಉಂಟಾಗುತ್ತಿದೆ. ಇದನ್ನು ತಪ್ಪಿಸಲು ತಳವನ್ನು ಕಾಂಕ್ರೀಟೀಕರಣ ಮಾಡಲಾಯಿತು' ಎಂಬ ಸರ್ಕಾರದ ವಾದವನ್ನು ಸಿಎಜಿ ಒಪ್ಪಿಲ್ಲ. ಕೋರಮಂಗಲ ಕಣಿವೆಯಲ್ಲಿ ಹಸಿರು ಹೊದಿಕೆ ಶೇ 5ರಷ್ಟು, ಖಾಲಿ ಪ್ರದೇಶವು ಶೇ 21ರಷ್ಟು ಕಡಿಮೆ ಆಗಿದೆ. ವೃಷಭಾವತಿ ಕಣಿವೆಯಲ್ಲಿ ಹಸಿರು ಹೊದಿಕೆ ಶೇ 6ರಷ್ಟು ಹೆಚ್ಚಳವಾಗಿದ್ದರೆ, ಖಾಲಿ ಪ್ರದೇಶವು ಶೇ 45ರಷ್ಟು ಕಡಿಮೆ ಆಗಿದೆ. ಹಸಿರು ಹೊದಿಕೆ ಮತ್ತು ಖಾಲಿ ಪ್ರದೇಶ ಇಳಿಕೆ ಆಗಿರುವುದು ಅಂತರ್ಜಲದ ನೈಸರ್ಗಿಕ ಮರುಪೂರಣದ ಮೇಲೆ ಪರಿಣಾಮ ಬೀರುತ್ತದೆ. ಅಭೇದ್ಯ ಪದರ ಹಾಗೂ ಕಟ್ಟಡ ನಿರ್ಮಿತ ಪ್ರದೇಶ ಹೆಚ್ಚಳವಾಗಿರುವುದು ಪ್ರವಾಹ ಉಂಟಾಗುವುದಕ್ಕೆ ಕಾರಣವಾಗುತ್ತಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

'ಪ್ರಾಧಿಕಾರಗಳ ನಡುವೆ ಸಮನ್ವಯ ಇಲ್ಲ'

ನಗರದಲ್ಲಿ ಚರಂಡಿ ನಿರ್ಮಾಣ, ನಿರ್ವಹಣೆ, ಶುಚಿಗೊಳಿಸುವಿಕೆ ಹಾಗೂ ಕಸ ನಿರ್ವಹಣೆ ಬಿಬಿಎಂಪಿಯ ಹೊಣೆ. ಮಹಾನಗರ ಪ್ರದೇಶಕ್ಕೆ ಸಮಗ್ರ ಅಭಿವೃದ್ಧಿ ಯೋಜನೆ ರೂಪಿಸುವುದು ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ಬಿಡಿಎ ಜವಾಬ್ದಾರಿ. ನೀರು ಪೂರೈಕೆ ಮತ್ತು ಕೊಳಚೆ ನೀರಿನ ವಿಲೇವಾರಿ ಜಲಮಂಡಳಿಯ ಹೊಣೆ. ಪರಸ್ಪರ ಸಂಬಂಧವಿರುವ ಈ ಜವಾಬ್ದಾರಿಗಳನ್ನು ನಿಭಾಯಿಸಲು ಅನೇಕ ಪ್ರಾಧಿಕಾರಗಳನ್ನು ಹೊಂದಿರುವುದು ಅವುಗಳ ಸಮನ್ವಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಿರುವುದನ್ನು ಸಿಎಜಿ ವರದಿಯಲ್ಲಿ ಗುರುತಿಸಲಾಗಿದೆ.

'ಮೂಲಸೌಕರ್ಯಗಳನ್ನು ಒದಗಿಸಲು ಮುಖ್ಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ, ಬಿಡಿಎ, ಜಲಮಂಡಳಿಯಂತಹ ಪಾಲುದಾರ ಸಂಸ್ಥೆಗಳ ಸಮನ್ವಯ ಸಮಿತಿಯನ್ನು ರಾಜ್ಯ ಸರ್ಕಾರ 2015ರ ಜೂನ್‌ನಲ್ಲಿ ರಚಿಸಿದೆ. ಆದರೆ, ಈ ಸಮಿತಿ ಸಭೆಗಳು 2018ರ ಆಗಸ್ಟ್ ಬಳಿಕ ಮಾತ್ರ ನಿಯಮಿತವಾಗಿ ನಡೆಯುತ್ತಿದೆ. ಒತ್ತುವರಿ ತೆರವು ಹಾಗೂ ರಾಜಕಾಲುವೆಗಳಿಗೆ ಕೊಳಚೆ ನೀರು ಹರಿಯುವಿಕೆಯನ್ನು ತಡೆಯಲು ಸಮಿತಿ ಮತ್ತೆ ಮತ್ತೆ ಸೂಚನೆ ನೀಡಿದೆ. ಆ ಬಳಿಕವೂ ಪರಿಸ್ಥಿತಿ ಸುಧಾರಿಸಿಲ್ಲ. ಪ್ರಾಧಿಕಾರಗಳ ನಡುವೆ ಸಮನ್ವಯವೇ ಇಲ್ಲ' ಎಂದು ಸಿಎಜಿ ವರದಿ ಹೇಳಿದೆ.

'ರಾಜಕಾಲುವೆಗೆ ಕೊಳಚೆ ನೀರು ಹರಿವು ತಪ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಕಾಲುವೆಗಳಲ್ಲಿ ಕೊಳಚೆ ನೀರಿನ ಹರಿವು ತಪ್ಪಿಸಲು ಕಾಲಮಿತಿಯ ಕಾರ್ಯಯೋಜನೆಯನ್ನು ಬಿಬಿಎಂಪಿ ಹಾಗೂ ಜಲಮಂಡಳಿ ಜಂಟಿಯಾಗಿ ಸಿದ್ಧಪಡಿಸಬೇಕು ಎಂದು ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರ (ಸಿಎಜಿ) ವರದಿ ಶಿಫಾರಸು ಮಾಡಿದೆ.

ಕೆರೆಗಳು ಮತ್ತು ನೈಸರ್ಗಿಕ ಚರಂಡಿ ವ್ಯವಸ್ಥೆ ಮತ್ತಷ್ಟು ಕ್ಷೀಣಿಸುವುದನ್ನು ಬಿಬಿಎಂಪಿ ತಡೆಯಬೇಕು. ಪರಿಸರ ವ್ಯವಸ್ಥೆಯ ಮತ್ತು ಅಂತರ್ಜಲದ ಸಂರಕ್ಷಣೆಯ ದೃಷ್ಟಿಯಿಂದ ಕೆರೆಗಳ ಅಂತರ್‌ಸಂಪರ್ಕವನ್ನು ಖಚಿತಪಡಿಸಿಕೊಳ್ಳಬೇಕು ಎಂದು ವರದಿಯಲ್ಲಿ ಸಲಹೆ ನೀಡಲಾಗಿದೆ.

ಕೆರೆಗಳು ಹಾಗೂ ರಾಜಕಾಲುವೆಗಳು ಕಣ್ಮರೆಯಾಗಿದ್ದರಿಂದಲೇ ಅವುಗಳ ಪರಸ್ಪರ ಸಂಪರ್ಕ ಕಡಿದು ಹೋಗಿದೆ. ಕೆರೆಗಳ ಜೊತೆ ರಾಜಕಾಲುವೆಗಳ ಸಂಪರ್ಕವನ್ನು ಖಾತರಿಪಡಿಸಿಕೊಳ್ಳುವಲ್ಲಿ ಬಿಬಿಎಂಪಿ ವಿಫಲವಾಗಿತ್ತು. ನಗರದಲ್ಲಿ ಹಲವಾರು ಕೆರೆಗಳು ಒಣಗಲು ಇದು ಕೂಡ ಕಾರಣವಾಯಿತು. ಕೆರೆಗಳ ಆಕಾರ ಮತ್ತು ವಿಸ್ತೀರ್ಣಗಳಲ್ಲಿ ಗಮನಾರ್ಹ ಬದಲಾವಣೆಗಳಾದವು. ಕೆರೆಗಳನ್ನು ಬಸ್ ನಿಲ್ದಾಣ, ಕ್ರೀಡಾಂಗಣ, ರಾಷ್ಟ್ರೀಯ ಕ್ರೀಡಾ ಗ್ರಾಮ, ವಸತಿ ಸಂಕೀರ್ಣ, ವಸತಿ ಉದ್ದೇಶಗಳಿಗೆ ಬಳಸುವುದಕ್ಕೂ ಇದು ಕಾರಣವಾಗಿದೆ ಎಂದು ವಿಶ್ಲೇಷಿಸಲಾಗಿದೆ.

ಮರುಪೂರಣಕ್ಕೇನು ವ್ಯವಸ್ಥೆ?: ಕೊಳಚೆ ನೀರು ಹರಿಯುತ್ತಿರುವ ಅನೇಕ ರಾಜ ಕಾಲುವೆಗಳು ಕೆರೆಯನ್ನು ಸಂಪರ್ಕಿಸುವುದನ್ನು ತಪ್ಪಿಸಲಾಗಿದೆ ಎಂದು ಸರ್ಕಾರವೇ ಹೇಳಿದೆ. ಕೊಳಚೆನೀರು ರಾಜಕಾಲುವೆ ಸೇರುವುದನ್ನು ತಪ್ಪಿಸುವ ಕಾರ್ಯವನ್ನು ಜಲಮಂಡಳಿ ಮಾಡುತ್ತಿದ್ದರೂ ಇದು ಸಂಪೂರ್ಣ ನಿಂತಿಲ್ಲ. ನಗರದ 210 ಕೆರೆಗಳಲ್ಲಿ ಬಿಬಿಎಂಪಿ 89 ಕೆರೆಗಳನ್ನು ಅಭಿವೃದ್ಧಿಪಡಿಸಿದ್ದು, 39 ಕೆರೆಗಳ ಅಭಿವೃದ್ಧಿ ಪ್ರಗತಿಯಲ್ಲಿದೆ. ಹೂಳೆತ್ತುವಿಕೆ, ಬದುಗಳ ರಚನೆ, ಒಳಹರಿಸುವ ಸುಧಾರಣೆ, ಕೊಳಚೆ ನೀರು ಬೇರ್ಪಡಿಸುವಿಕೆಗೆ ಚರಂಡಿ ರಚನೆ, ನಡಿಗೆ ಮಾರ್ಗ ರಚನೆ ಭದ್ರತಾ ಕೊಠಡಿ ರಚನೆಯಂತಹ ಚಟುವಟಿಕೆಗಳು ಕೆರೆಗಳ ಪುನಃಶ್ಚೇತನಕ್ಕೆ ಅನುವು ಮಾಡಿಕೊಡುವುದೇನೋ ನಿಜ. ಆದರೆ, ಕೆರೆ ಮರುಪೂರಣ ಚಟುವಟಿಕೆಯನ್ನು ಸರ್ಕಾರ ಕೈಗೆತ್ತಿಕೊಳ್ಳುತ್ತಿಲ್ಲ ಎಂಬುದನ್ನೂ ವರದಿಯಲ್ಲಿ ಬೊಟ್ಟುಮಾಡಲಾಗಿದೆ.

ಒಣಗಿದ ಕೆರೆಗಳಿಗೆ ಶುದ್ಧೀಕರಿಸಿ ಕೊಳಚೆ ನೀರನ್ನು ಹರಿಸಿ ಅವುಗಳನ್ನು ತುಂಬಿಸಬಹುದು. ಕೆರೆಗಳು ಒಣಗುವುದನ್ನು ಹಾಗೂ ಅವುಗಳ ಸಂಭಾವ್ಯ ಒತ್ತುವರಿ ತಡೆಯಲು ಇದು ಸಹಕಾರಿ. ಸಂಸ್ಕರಿಸಿದ ನೀರು ಮಳೆನೀರಿನ ಜೊತೆ ಸೇರಿ ಅಂತರ್ಜಲ ಮಟ್ಟವನ್ನೂ ಹೆಚ್ಚಿಸಲಿದೆ ಎಂದು ಸಲಹೆ ನೀಡಲಾಗಿದೆ.

ಜೆಒಸಿ ಶಿಕ್ಷಕರ ಕಾಯಂಮಾತಿ: ಶೀಘ್ರ ಸಭೆ- ಸಚಿವ ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೃತ್ತಿ ಶಿಕ್ಷಣ (ಜೆಒಸಿ) ಇಲಾಖೆಯಲ್ಲಿ ಕರ್ತವ್ಯ ಸಲ್ಲಿಸುತ್ತಿರುವ 28 ಬೋಧಕೇತರ ಸಿಬ್ಬಂದಿ ಮತ್ತು 11 ಉಪನ್ಯಾಸಕರ ವಿಲೀನ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ವಿಲೀನಗೊಂಡಿರುವ 90 ಉಪನ್ಯಾಸಕರಿಗೆ ಬಿ.ಇಡ್ ವಿನಾಯಿತಿ ನೀಡಿ ಕಾಯಂಗೊಳಿಸುವ ಬಗ್ಗೆ ಅಧಿವೇಶನ ಮುಗಿದ ಬಳಿ ಮುಖ್ಯಮಂತ್ರಿ ಜೊತೆ ಚರ್ಚಿಸಿ ತೀರ್ಮಾನಕ್ಕೆ ಬರಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ವಿಷಯ ಪ್ರಸ್ತಾಪಿಸಿದ ಜೆಡಿಎಸ್‌ನ ಮರಿತಿಬ್ಬೇಗೌಡ, 'ವೃತ್ತಿ ಶಿಕ್ಷಣ ಇಲಾಖೆಯಲ್ಲಿ 20–25 ವರ್ಷಗಳಿಂದ ಕರ್ತವ್ಯ ಸಲ್ಲಿಸಿದ ಶಿಕ್ಷಕರು ಅತೀ ಕಡಿಮೆ ವೇತನಕ್ಕೆ ಕೆಲಸ ಮಾಡುತ್ತಿದ್ದಾರೆ. ಈ ಶಿಕ್ಷಕರನ್ನು ಕಾಯಂಗೊಳಿಸುವ ಬಗ್ಗೆ ಈ ಹಿಂದೆ ಸರ್ಕಾರ ಭರವಸೆ ನೀಡಿದ್ದರೂ ಈಡೇರಿಸಿಲ್ಲ' ಎಂದರು.

ಇದಕ್ಕೆ ಉತ್ತರಿಸಿದ ಸಚಿವ ನಾಗೇಶ್, '28 ವೃತ್ತಿ ಶಿಕ್ಷಣ ಸಿಬ್ಬಂದಿಯನ್ನು ವಿಲೀನಗೊಳಿಸಲು ಕ್ರಮ ವಹಿಸಲಾಗುತ್ತಿದೆ. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರಿಗೆ ಸ್ನಾತಕೋತ್ತರ ಪದವಿಯಲ್ಲಿ ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಬೇಕು ಮತ್ತು ಬಿ.ಇಡ್ ಪದವಿ ಹೊಂದಿರಬೇಕು ಎಂದು ನಿಗದಿಪಡಿಲಾಗಿದೆ. ಬಿ. ಇಡ್‌ನಿಂದ ವಿನಾಯಿತಿ ನೀಡುವ ಪ್ರಸ್ತಾವನೆ ರಾಷ್ಟ್ರೀಯ ಶಿಕ್ಷಕ ಶಿಕ್ಷಣ ಪರಿಷತ್ (ಎನ್‌ಸಿಟಿಇ) ಷರತ್ತುಗಳಿಗೆ ವ್ಯತಿರಿಕ್ತವಾಗುತ್ತದೆ' ಎಂದರು.

ಅಧಿಕಾರಿಗಳ ಗೈರು: ಸಭಾಪತಿ ಗರಂ

ಶಿಕ್ಷಣ ಇಲಾಖೆಗೆ ಸಂಬಂಧಿಸಿದ ವಿಷಯಗಳು ವಿಧಾನ ಪರಿಷತ್‌ನಲ್ಲಿ ಪ್ರಸ್ತಾವವಾದ ಸಂದರ್ಭದಲ್ಲಿ ಅಧಿಕಾರಿಗಳ ಗ್ಯಾಲರಿಯಲ್ಲಿ ಇಲಾಖೆಯ ಅಧಿಕಾರಿಗಳು ಇರಲಿಲ್ಲ. ಇದನ್ನು ಗಮನಿಸಿದ ಸಭಾಪತಿ ಬಸವರಾಜ ಹೊರಟ್ಟಿ, ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಾಥಮಿಕದಿಂದ ಪ್ರೌಢ ಶಾಲೆ, ಪ್ರೌಢ ಶಾಲೆಯಿಂದ ಪದವಿಪೂರ್ವ ಕಾಲೇಜಿಗೆ ಬಡ್ತಿ ಹೊಂದಿದ ಉಪನ್ಯಾಸಕರಿಗೆ 6ನೇ ವೇತನ ಆಯೋಗ ಶಿಫಾರಸು ಅನ್ವಯ ಬಡ್ತಿ ಪಡೆಯದೆ ಇರುವ ಉಪನ್ಯಾಸಕರಿಗೆ 10, 15, 20,25 ವರ್ಷದ ಕಾಲಮಿತಿ ಬಡ್ತಿ ಮಂಜೂರು ಮಾಡುವ ಬಗ್ಗೆ ಬಿಜೆಪಿಯ ಶಶೀಲ್ ನಮೋಶಿ ವಿಷಯ ಪ್ರಸ್ತಾಪಿಸಿದರು. ಈ ವೇಳೆ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಸದನದಲ್ಲಿದ್ದರು. ಆದರೆ, ಇಲಾಖೆಯ ಯಾವುದೇ ಅಧಿಕಾರಿ ಇರಲಿಲ್ಲ.

ಅಧಿಕಾರಿಗಳ ಅನುಪಸ್ಥಿತಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ, 'ಇದು ಅಕ್ಷಮ್ಯ ಅಪರಾಧ' ಎಂದರು. ಸದನದಲ್ಲಿದ್ದ ಇತರ ಸದಸ್ಯರೂ ಧ್ವನಿಗೂಡಿಸಿದರು. ವಿಷಯ ಪ್ರಸ್ತಾಪವನ್ನು ಮುಂದೂಡಿದ ಸಭಾಪತಿ, ಅಧಿಕಾರಿಗಳ ನಡವಳಿಕೆಯನ್ನು ತರಾಟೆಗೆ ತೆಗೆದುಕೊಂಡರು.

ಸದನದಲ್ಲಿ ಕಾವ್ಯ ವಾಚಿಸಿದ ಸಿದ್ದರಾಮಯ್ಯ

ಬೆಂಗಳೂರು: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಹಳಗನ್ನಡದ ಕಾವ್ಯವೊಂದನ್ನು ವಾಚಿಸಿ, ಬೆಲೆ ಏರಿಕೆಯ ಬಗ್ಗೆ ಸರ್ಕಾರವನ್ನು ಚುಚ್ಚಿದ್ದೂ ಅಲ್ಲದೆ ಕಾವ್ಯ ಸೊಗಸನ್ನೂ ಬಣ್ಣಿಸಿದರು. ಕಾವ್ಯ ಭಾಮಿನಿ ಷಟ್ಪದಿಯಲ್ಲಿದ್ದು, ಅದರಲ್ಲಿ ಲಘು– ಗುರು ಹಾಕುವುದು ಹೇಗೆ ಎಂಬುದನ್ನೂ ವಿವರಿಸಿದರು.

"ಅರಸು ರಾಕ್ಷಸ, ಮಂತ್ರಿ ಎಂಬುವ ಮೊರೆವ ಹುಲಿ
ಪರಿವಾರ ಹದ್ದಿನ ನೆರವಿ,
ಬಡವರ ಭಿನ್ನಪವ ಇನ್ನಾರು ಕೇಳವರು
ಉರಿ ಉರಿಯುತ್ತಿದೆ, ದೇಶ ಉಳಿಯುವುದೆಂತು".

ಇದನ್ನು ನಾರದ ಮುನಿ ಧರ್ಮರಾಯನಿಗೆ ಹೇಳಿದ್ದಾಗಿ ಕುಮಾರವ್ಯಾಸ ಪದ್ಯ ರಚಿಸಿದ್ದಾನೆ. ಇವತ್ತಿನ ಸ್ಥಿತಿಯನ್ನು ಮನಗಂಡು ಆಗಲೇ ಈ ಮಾತುಗಳನ್ನು ಹೇಳಿರಬೇಕು ಎಂದರು.

ಲಾಠಿ ಪ್ರಹಾರ: ಪರಿಷತ್‌ನಲ್ಲಿ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ ವಿರೋಧಿಸಿ ಮಂಗಳವಾರ ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿರುವುದನ್ನು ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಸದಸ್ಯರು ಖಂಡಿಸಿದರು.

ಗಮನ ಸೆಳೆಯುವ ಸೂಚನೆ ಮಂಡಿಸಿ ಮಾತನಾಡಿದ ವಿರೋಧ ಪಕ್ಷದ ಮುಖ್ಯ ಸಚೇತಕ ಎಂ. ನಾರಾಯಣಸ್ವಾಮಿ, 'ರಾಷ್ಟ್ರೀಯ ಶಿಕ್ಷಣ ನೀತಿಯು ಆರ್‌ಎಸ್‌ಎಸ್‌ನ ಗುಪ್ತ ಕಾರ್ಯಸೂಚಿಯ ಭಾಗವಾಗಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿ ದೌರ್ಜನ್ಯ ನಡೆಸಿರುವುದು ಸರಿಯಲ್ಲ. ವಿದ್ಯಾರ್ಥಿಗಳನ್ನು ಮನಬಂದಂತೆ ಥಳಿಸಲಾಗಿದೆ. 25ಕ್ಕೂ ಹೆಚ್ಚು ಮಂದಿ ಆಸ್ಪತ್ರೆಗೆ ದಾಖಲಾಗಿದ್ದಾರೆ' ಎಂದು ದೂರಿದರು.

ವಿದ್ಯಾರ್ಥಿಗಳ ಮೇಲಿನ ಲಾಠಿ ಪ್ರಹಾರ ಕುರಿತು 'ಪ್ರಜಾವಾಣಿ' ಬುಧವಾರದ ಸಂಚಿಕೆಯಲ್ಲಿ ಪ್ರಕಟವಾಗಿದ್ದ ವರದಿಯನ್ನು ಪ್ರದರ್ಶಿಸಿದ ಅವರು, 'ಪ್ರತಿಭಟನೆಯನ್ನು ಹತ್ತಿಕ್ಕಲು ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ವಾಗ್ವಾದವೂ ನಡೆಯಿತು. ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಉತ್ತರ ನೀಡಲಿದ್ದಾರೆ ಎಂದ ವಸತಿ ಸಚಿವ ವಿ. ಸೋಮಣ್ಣ ಎಲ್ಲರನ್ನೂ ಸಮಾಧಾನಿಸಿದರು.

ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರವನ್ನು ಖಂಡಿಸಿ ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್ ಸದಸ್ಯರು ಮಾತನಾಡಿದರು. ಸದಸ್ಯ ಆರ್.ಬಿ.ತಿಮ್ಮಾಪೂರ, ವಿಜಯ್ ಸಿಂಗ್, ಆರ್. ಪ್ರಸನ್ನಕುಮಾರ್, ಎಂ.ವೈ. ಗೋಪಾಲಸ್ವಾಮಿ ಮತ್ತು ಬಸವರಾಜ ಪಾಟೀಲ ಇಟಗಿ ಇದ್ದರು

ಕಂದಾಯ ನಿವೇಶನ ನೋಂದಣಿ: ಐವರು ಉಪ ನೋಂದಣಾಧಿಕಾರಿಗಳ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಯಲ್ಲಿ ಕಂದಾಯ ನಿವೇಶನಗಳನ್ನು ನೋಂದಣಿ ಮಾಡಿದ ಆರೋಪದ ಮೇಲೆ ಐವರು ಉಪ ನೋಂದಣಿ ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಮಾಡಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕಂದಾಯ ನಿವೇಶನಗಳ ನೋಂದಣಿಯಲ್ಲಿನ ಸಮಸ್ಯೆಗಳ ಕುರಿತು ಜೆಡಿಎಸ್‌ನ ಕಾಂತರಾಜ್ ಪ್ರಶ್ನೆಗೆ ಉತ್ತರಿಸಿದ ಅವರು, 'ಶಿವರಾಮ ಕಾರಂತ ಬಡಾವಣೆಯಲ್ಲಿ ಕಂದಾಯ ನಿವೇಶನಗಳ ನೋಂದಣಿ ಮಾಡಿದ ಅಧಿಕಾರಿಗಳನ್ನು ಪತ್ತೆಮಾಡಿ, ಅವರ ವಿರುದ್ಧ ಕ್ರಮ ಜರುಗಿಸುವಂತೆ ಸುಪ್ರೀಂಕೋರ್ಟ್ ಸೂಚಿಸಿತ್ತು. ಐವರು ಉಪ ನೋಂದಣಿ ಅಧಿಕಾರಿಗಳನ್ನು ಇತ್ತೀಚೆಗೆ ಅಮಾನತು ಮಾಡಿದ್ದು, ನ್ಯಾಯಾಲಯಕ್ಕೆ ಈ ಕುರಿತು ಪ್ರಮಾಣಪತ್ರವನ್ನೂ ಸಲ್ಲಿಸಲಾಗಿದೆ' ಎಂದರು.

ಶಿವರಾಮ ಕಾರಂತ ಬಡಾವಣೆಗೆ 416 ಎಕರೆ ಜಮೀನು ಹಸ್ತಾಂತರ ಮಾಡುವಂತೆ ಕಂದಾಯ ಇಲಾಖೆಗೆ ನಿರ್ದೇಶನ ನೀಡಿ ಸುಪ್ರೀಂಕೋರ್ಟ್ ಆದೇಶಿಸಿತ್ತು. ಆಗ, ಅಧಿಕಾರಿಗಳ ವಿರುದ್ಧವೂ ಕ್ರಮ ಜರುಗಿಸಲು ನಿರ್ದೇಶನ ನೀಡಲಾಗಿತ್ತು. ಕಂದಾಯ ನಿವೇಶನಗಳ ನೋಂದಣಿ ಮತ್ತು ಅನಧಿಕೃತ ಬಡಾವಣೆಗಳ ಸಕ್ರಮದ ವಿಚಾರದಲ್ಲಿ ಸರ್ಕಾರ ಮುಕ್ತ ಮನಸ್ಸು ಹೊಂದಿದೆ. ಇದರಿಂದ ಸರ್ಕಾರಕ್ಕೆ ₹ 5,000 ಕೋಟಿಯಿಂದ ₹ 6,000 ಕೋಟಿಯಷ್ಟು ಆದಾಯ ಸಂಗ್ರಹವಾಗಲಿದೆ. ಆದರೆ, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುವಾಗ ಯಾವುದೇ ನಿರ್ಧಾರ ಮಾಡಲಾಗದು ಎಂದು ಹೇಳಿದರು.

ವಿಧಾನ ಪರಿಷತ್ತಿನಲ್ಲಿ ಸದಸ್ಯೆ ಭಾರತಿ ಶೆಟ್ಟಿ ಹಾಗೂ ಸಚಿವ ಆರ್. ಅಶೋಕ ಚರ್ಚೆಯಲ್ಲಿ ತೊಡಗಿದ್ದರು. ಸಚಿವೆ ಶಶಿಕಲಾ ಜೊಲ್ಲೆ ಇದ್ದಾರೆ

'ಸುಬ್ರಮಣಿಯನ್ ಸ್ವಾಮಿ ಫ್ರೀಲ್ಯಾನ್ಸ್ ಪೊಲಿಟಿಷಿಯನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯಸಭಾ ಸದಸ್ಯ ಸುಬ್ರಮಣಿಯನ್ ಸ್ವಾಮಿ 'ಫ್ರೀಲ್ಯಾನ್ಸ್ ಪೊಲಿಟಿಷಿಯನ್'. ಆದರೆ, ಅವರು ಆರ್ಥಿಕ ತಜ್ಞರಾಗಿ ಜೀನಿಯಸ್' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವ್ಯಾಖ್ಯಾನಿಸಿದರು.

ಬೆಲೆ ಏರಿಕೆ ಕುರಿತ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು, ಕೆಲವು ತಿಂಗಳುಗಳ ಹಿಂದೆ ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಕುರಿತು ಸುಬ್ರಮಣಿಯನ್ ಸ್ವಾಮಿ ಮಾಡಿದ್ದ ಟ್ವೀಟ್ ಉಲ್ಲೇಖಿಸಿದರು.

'ಪೆಟ್ರೋಲ್ ಬೆಲೆ ರಾಮನ ಭಾರತದಲ್ಲಿ ₹93, ಸೀತೆಯ ನೇಪಾಳದಲ್ಲಿ ₹51, ರಾವಣನ ಶ್ರೀಲಂಕಾದಲ್ಲಿ ₹51' ಎಂದು ಟ್ವೀಟ್ ಮಾಡಿದ್ದು ನಿಮ್ಮ ಪಕ್ಷದವರೇ ಆದ ಸುಬ್ರಮಣಿಯನ್ ಸ್ವಾಮಿ. ಇದಕ್ಕೆ ಏನು ಹೇಳುತ್ತೀರಿ' ಎಂದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯನ್ನು ಕುಟುಕಿದರು.

ಅದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಸ್ವಾಮಿ ಯಾವ ಪಕ್ಷದಲ್ಲಿ ಇರುತ್ತಾರೋ ಆ ಪಕ್ಷವನ್ನು ಟೀಕಿಸಲು ಹಿಂಜರಿಯುವುದಿಲ್ಲ. ಜನತಾ ಪಕ್ಷ, ಜನತಾದಳದಲ್ಲಿ ಇದ್ದಾಗ ಆ ಪಕ್ಷಗಳನ್ನೇ ಟೀಕಿಸಿದ್ದರು. ಪ್ರಧಾನಿ ಚಂದ್ರಶೇಖರ್ ಅವರ ಮಂತ್ರಿಮಂಡಲದಲ್ಲಿ ಇದ್ದಾಗ ಪ್ರಧಾನಿಯನ್ನೇ ಟೀಕಿಸಿದ್ದರು. ಅವರ ಬಗ್ಗೆ ನಿಮಗೂ ಚೆನ್ನಾಗಿ ಗೊತ್ತು ನನಗೂ ಗೊತ್ತಿದೆ' ಎಂದರು.



ಬಸವರಾಜ ಬೊಮ್ಮಾಯಿ

'ಯಾವುದೇ ಪಕ್ಷ ಆದರೂ ಭಿನ್ನ ಅಭಿಪ್ರಾಯಗಳು ಇದ್ದೇ ಇರುತ್ತವೆ. ಕಾಂಗ್ರೆಸ್‌ನಲ್ಲಿ ಜಿ– 23 ಇದೆಯಲ್ಲ' ಎಂದು ಬೊಮ್ಮಾಯಿ ಹೇಳಿದಾಗ, 'ಪ್ರಜಾಪ್ರಭುತ್ವ ಅಂದ ಮೇಲೆ ಇವೆಲ್ಲ ಇರಲೇಬೇಕು' ಎಂದು ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

ದಿಲ್ಲಿಯಲ್ಲಿ ಕರ್ನಾಟಕ ಕಹಳೆಯಾಗಿ: 'ಸಂಸತ್ತಿನಲ್ಲಿ ಎತ್ತ ಬೇಕಾದ ಪ್ರಶ್ನೆಗಳನ್ನು ನೀವು ಇಲ್ಲಿ ಕೇಳುತ್ತಿದ್ದೀರಿ. ಅದಕ್ಕೆ ಈ ಸದನದಲ್ಲಿ ಉತ್ತರ ನೀಡಲು ಸಾಧ್ಯವಾಗುವುದಿಲ್ಲ. ನೀವು ದೆಹಲಿಯಲ್ಲಿ ಕರ್ನಾಟಕದ ಕಹಳೆಯಾಗಿ ಇರಬೇಕು. ಆದ್ದರಿಂದ ದೆಹಲಿಗೆ ಹೋಗಿ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಸಿದ್ದರಾಮಯ್ಯ ಅವರನ್ನು ಛೇಡಿಸಿದರು.

'ಇಲ್ಲ ಇಲ್ಲ ಸಿದ್ರಾಮಣ್ಣ ಕರ್ನಾಟಕದಲ್ಲೇ ಇರಬೇಕು' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

'ಮಾಧುಸ್ವಾಮಿ ಅವರಿಗೆ ನನ್ನ ಮೇಲೆ ಅಭಿಮಾನ ಅದಕ್ಕೆ ಹಾಗೇ ಹೇಳುತ್ತಾರೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಕೆಲವರು ನಿಮ್ಮನ್ನು ಇಲ್ಲಿಂದ ಸಾಗಬೇಕು ಎಂದು ಕಾಯುತ್ತಿದ್ದಾರೆ. ಅಲ್ಲಿಗೆ ಹೋಗುತ್ತೀರಿ ಎಂದರೆ ಅಲ್ಲಿರುವ ಕೆಲವರ ಎದೆಯೊಡೆದು ಹೋಗುತ್ತದೆ' ಎಂದು ಮಾಧುಸ್ವಾಮಿ ಹೇಳಿದರು.

'ಹಿಂದೆ ಎರಡು ಬಾರಿ ಲೋಕಸಭೆಗೆ ನಿಂತು ಸೋತಿದ್ದೆ. ಇನ್ನು ಹೋಗುವ ಆಸೆ ಇಲ್ಲ. ಮುಂದಿನ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಆ ಮೇಲೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ' ಎಂದು ಸಿದ್ದರಾಮಯ್ಯ ತಿಳಿಸಿದರು.

'ಇಡ್ಲಿ–ವಡೆ, ಮಸಾಲೆ ದೋಸೆ ಬೆಲೆ ಎಷ್ಟಪ್ಪಾ?'

'ಮಸಾಲೆ ದೋಸೆ ಬೆಲೆ ಎಷ್ಟ್ರೀ? ಜನಾರ್ದನ ಹೋಟೆಲ್‌ನಲ್ಲಿ ಮಸಾಲೆ ಬೆಲೆ ಎಷ್ಟು? ₹60 ಆಗಿದೆಯಾ,ನಾನು ಯಾವತ್ತೂ ಬಿಲ್ ಕೊಟ್ಟಿಲ್ಲ, ಸ್ನೇಹಿತರೇ ಕೊಡ್ತಾರೆ'.

– ಹೀಗೆಂದು ಬೆಲೆ ಏರಿಕೆಯ ಬಗ್ಗೆ ಸ್ವಾರಸ್ಯಕರ ಚರ್ಚೆಗೆ ಸಿದ್ದರಾಮಯ್ಯ ನಾಂದಿ ಹಾಡಿದರು.

'ಹೋಟೆಲ್‌ಗಳಲ್ಲಿ ತಿಂಡಿ ಬೆಲೆ ದುಬಾರಿಯಾಗಿದೆ. ಇಡ್ಲಿ– ವಡೆ ಬೆಲೆ ಎಷ್ಟಿದೆ' ಎಂದು ತಮ್ಮ ಪಕ್ಷದ ಸದಸ್ಯರತ್ತ ತಿರುಗಿ ಪ್ರಶ್ನಿಸಿದರು. ಯಾರೋ ಒಬ್ಬರು '₹39 ಆಗಿದೆ' ಎಂದರು. 'ಹೋಟೆಲ್‌ಗಳಲ್ಲಿ ತಿಂಡಿ ಬೆಲೆ ಜಾಸ್ತಿ ಆಗಿದ್ದರಿಂದ ಅಲ್ಲಿಗೆ ಹೋಗುತ್ತಿಲ್ಲ' ಎಂದರು ಸಿದ್ದರಾಮಯ್ಯ.

'ಅಡುಗೆ ಅನಿಲ, ಖಾದ್ಯ ತೈಲದ ಬೆಲೆ ಏರಿಕೆ ಆಗಿದ್ದರಿಂದ ತಿಂಡಿಗಳ ಬೆಲೆ ಜಾಸ್ತಿ ಆಗಿದೆ' ಎಂದು ಸಿದ್ದರಾಮಯ್ಯ ವಿವರಿಸುತ್ತಿದ್ದಾಗ, ಗೃಹ ಸಚಿವ ಆರಗ ಜ್ಞಾನೇಂದ್ರ ಮಧ್ಯ ಪ್ರವೇಶಿಸಿ, 'ಕೇವಲ ಅದೇ ಕಾರಣಗಳಿಗೆ ಬೆಲೆ ಜಾಸ್ತಿ ಆಗಿಲ್ಲ, ಅಕ್ಕಿ ಬೆಲೆಯೂ ಹೆಚ್ಚಾಗಿದೆ. ಅಕ್ಕಿ ಬೆಲೆ ಹೆಚ್ಚಾಗಿದ್ದರಿಂದ ರೈತರಿಗೆ ಒಳ್ಳೆ ದರ ಸಿಗುತ್ತಿದೆ' ಎಂದರು.

ಸಿದ್ದರಾಮಯ್ಯ

'ಜ್ಞಾನೇಂದ್ರ ಅವರಿಗೆ ಬೆಲೆ ಏರಿಕೆಯ ಬಿಸಿ ಗೊತ್ತಾಗಿಲ್ಲ. ನಿಮ್ಮ ಹೋಂ ಮಿನಿಸ್ಟರ್‌ಗೆ ಕೇಳಿ ಆಗ ಗೊತ್ತಾಗುತ್ತದೆ. ಡೀಸೆಲ್ ದರ ಹೆಚ್ಚಾದರೆ ಸಾಗಾಣಿಕೆ ದರ ಹೆಚ್ಚುತ್ತದೆ. ಅಡುಗೆ ಅನಿಲ ದರ ದುಪ್ಪಟ್ಟು ಆಗಿಲ್ಲವೇ, ನೀವು ನಿಮ್ಮ ಮನೆಯವರಿಗೆ ಇಂತಿಷ್ಟು ಅಂತ ದುಡ್ಡು ಕೊಟ್ಟು ಸುಮ್ಮನಾಗುತ್ತೀರಿ. ಬೆಲೆ ಏರಿಕೆ ಬಗ್ಗೆ ರಾತ್ರಿ ಹೋಂ ಮಿನಿಸ್ಟರ್ ಬಳಿ ಕೇಳಿ, ಬೆಳಿಗ್ಗೆ ಸದನಕ್ಕೆ ಹೇಳಿ' ಎಂದು ಸಿದ್ದರಾಮಯ್ಯ ತಿಳಿ ಹಾಸ್ಯದಿಂದ ಕುಟುಕಿದರು.

ಕಾಂಗ್ರೆಸ್ ಕದ ತಟ್ಟಿದ ಶಾಸಕ ಶ್ರೀನಿವಾಸ ಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಜೆ.ಟಿ. ದೇವೇಗೌಡ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಸೇರುವುದು ಬಹುತೇಕ ಖಚಿತವಾಗಿರುವ ಬೆನ್ನಲೇ, ಕೋಲಾರ ಕ್ಷೇತ್ರದ ಜೆಡಿಎಸ್ ಶಾಸಕ ಕೆ. ಶ್ರೀನಿವಾಸ ಗೌಡ ಕೂಡ ಕಾಂಗ್ರೆಸ್ ಬಾಗಿಲು ತಟ್ಟಿದ್ದಾರೆ.

ಜೆಡಿಎಸ್ ವಿರುದ್ಧ ಬಹಿರಂಗವಾಗಿಯೇ ಹೇಳಿಕೆ ನೀಡಿರುವ ಅವರು 'ಕೈ' ಹಿಡಿಯಲು ತೆರೆಮರೆಯಲ್ಲಿ ಕಸರತ್ತು ನಡೆಸಿದ್ದು, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರದಲ್ಲಿರುವ ಅವರ ನಿವಾಸದಲ್ಲಿ ಬುಧವಾರ ಭೇಟಿ ಮಾಡಿ ಚರ್ಚಿಸಿರುವುದು ಕುತೂಹಲ ಮೂಡಿಸಿದೆ.

ಕೆಲವು ದಿನಗಳ ಹಿಂದೆ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ವಾಗ್ದಾಳಿ ನಡೆಸಿದ್ದ ಶ್ರೀನಿವಾಸಗೌಡ, 'ಕೋಲಾರ ಜಿಲ್ಲೆಗೆ ಕೆ.ಸಿ. ವ್ಯಾಲಿ ನೀರು ತಂದು ರಮೇಶ್ ಕುಮಾರ್ ಮರೆಯಲಾರದಂಥ ಕೆಲಸ ಮಾಡಿದ್ದಾರೆ. ಆದರೆ, ಕುಮಾರಸ್ವಾಮಿ ಅದನ್ನು ಕೊಳಚೆ ನೀರು ಎಂದು ಹೇಳಿರುವುದು ಸರಿಯಲ್ಲ. ಬರಡು ಭೂಮಿ ಎನಿಸಿಕೊಂಡಿರುವ ಕೋಲಾರಕ್ಕೆ ಕೆ. ಸಿ. ವ್ಯಾಲಿ ನೀರು ಬಹಳ ಮುಖ್ಯವಾಗಿದೆ. ಯೋಜನೆ ನೀರನ್ನು ನಾನೂ ಕುಡಿದಿದ್ದೇನೆ. ನಾನೇನು ಸತ್ತು ಹೋಗಿದ್ದೇನೆಯೇ'ಎಂದು ಪ್ರಶ್ನಿಸಿದ್ದರು.

ಜೆಡಿಎಸ್ ನಾಯಕರ ವಿರುದ್ಧ ಹೇಳಿಕೆ ನೀಡಿದ ಕಾರಣಕ್ಕೆ ಶ್ರೀನಿವಾಸ ಗೌಡ ಅವರ ಮೇಲೆ ಶಿಸ್ತು ಕ್ರಮಕೈಗೊಳ್ಳುವುದಾಗಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದ್ದರು. 'ಕೋಲಾರ ಶಾಸಕರ ವಿಚಾರದಲ್ಲಿ ಇನ್ನು ಸಹಿಸುವುದು ಸಾಧ್ಯವಿಲ್ಲ. ಪಕ್ಷಕ್ಕೆ ಹಾನಿಯಾಗುವ ರೀತಿಯಲ್ಲಿ ಅವರು ಮಾತನಾಡುತ್ತಿದ್ದಾರೆ. ಸೂಕ್ತ ಕ್ರಮ ಜರುಗಿಸುವಂತೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಿಗೆ ಸೂಚಿಸಿದ್ದೇನೆ" ಎಂದು ಹೇಳಿದ್ದರು.

ಈ ನಡುವೆಯೇ ಡಿ.ಕೆ. ಶಿವಕುಮಾರ್ ಅವರನ್ನ ಭೇಟಿ ಮಾಡಿ ಸುಮಾರು ಒಂದು ಗಂಟೆ ಶ್ರೀನಿವಾಸ ಗೌಡ ಮಾತುಕತೆ ನಡೆಸಿದ್ದಾರೆ. ಕಾಂಗ್ರೆಸ್ ಸೇರುವ ಕುರಿತು ಅವರು ಚರ್ಚೆ ನಡೆಸಿದ್ದಾರೆ ಎಂದೂ ಗೊತ್ತಾಗಿದೆ.

'ಯುಕೆಪಿ ಕಾಮಗಾರಿ ಪ್ರಾರಂಭಿಸದಿದ್ದರೆ ಉಪವಾಸ ಸತ್ಯಾಗ್ರಹ'

ಬೆಂಗಳೂರು: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿಗಳನ್ನು ತ್ವರಿತವಾಗಿ ಆರಂಭಿಸದಿದ್ದರೆ ಉಪವಾಸ ಸತ್ಯಾಗ್ರಹ, ಪಾದಯಾತ್ರೆಯ ಮೂಲಕ ಹೋರಾಟ ಆರಂಭಿಸುತ್ತೇವೆ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಪರಿಷತ್‌ನಲ್ಲಿ ಬುಧವಾರ ನಿಯಮ 68ರ ಅಡಿಯಲ್ಲಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಕೃಷ್ಣಾ ಮೇಲ್ದಂಡೆ ಯೋಜನೆಯ ಮೊದಲ ಮತ್ತು ಎರಡನೇ ಹಂತದ ಕಾಮಗಾರಿಗಳಿಗೆ ಹೋಲಿಸಿದರೆ ಬಾಕಿ ಉಳಿದಿರುವುದು ಅತ್ಯಲ್ಪ. ತೆಲಂಗಾಣ ಸರ್ಕಾರ ಕಾಳೇಶ್ವರ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಿದ ಮಾದರಿಯಲ್ಲಿ ಕೃಷ್ಣಾ ಮೇಲ್ದಂಡೆ ಮೂರನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕು' ಎಂದು ಆಗ್ರಹಿಸಿದರು. ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್, ಬಸವರಾಜ ಪಾಟೀಲ ಇಟಗಿ ಕೂಡ ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಕಾಮಗಾರಿ ತ್ವರಿತವಾಗಿ ಆರಂಭಿಸುವಂತೆ ಒತ್ತಾಯಿಸಿದರು.

'ಕೋವಿಡ್ ಪರೀಕ್ಷೆ ಹೆಸರಲ್ಲಿ ಹಗಲು ದರೋಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪರೀಕ್ಷೆ ಹೆಸರಿನಲ್ಲಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹಗಲು ದರೋಡೆ ನಡೆಯುತ್ತಿದೆ ಎಂದು ಕಾಂಗ್ರೆಸ್ ಶಾಸಕಿ ವಿನಿಷಾ ನಿರೋ ವಿಧಾನಸಭೆಯಲ್ಲಿ ದೂರಿದರು.

ಕಾಂಗ್ರೆಸ್‌ನ ಎನ್.ಎ.ಹ್ಯಾರಿಸ್ ಅವರ ಗಮನಸೆಳೆಯುವ ಸೂಚನೆಯಡಿ ಮಧ್ಯ ಪ್ರವೇಶಿಸಿ ಮಾತನಾಡಿದ ವಿನಿಷಾ, ಅಲ್ಲಿನ ಸಿಬ್ಬಂದಿ ಬಾಯಿ ಬಿಟ್ಟು ಲಂಚ ಕೇಳುತ್ತಾರೆ ಎಂದರು.

ಆರ್‌ಟಿ–ಪಿಸಿಆರ್ ಕೋವಿಡ್ ಪರೀಕ್ಷೆಗೆ ₹1,500 ಕೇಳುತ್ತಾರೆ. ಹೆಚ್ಚುವರಿಯಾಗಿ ₹1,500 ಕೊಟ್ಟರೆ ಮೂರು ನಿಮಿಷಗಳಲ್ಲೇ ವರದಿ ನೀಡುತ್ತಾರೆ. ನಾವು ಬೌರಿಂಗ್ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿಸಿಕೊಂಡು ಹೋದ ವರದಿಯನ್ನು ಒಪ್ಪುವುದಿಲ್ಲ. ಶಾಸಕರಾದ ನಮಗೇ ಮೋಸ ಮಾಡುತ್ತಾರೆ, ಸಾಮಾನ್ಯ ಜನರ ಪಾಡೇನು ಎಂದು ವಿನಿಷಾ ಪ್ರಶ್ನಿಸಿದರು.

ವಿದೇಶಗಳಿಗೆ ಹೋಗುವವರು ಅಲ್ಲಿ ಅಸಹಾಯಕರಾಗಿ ಕೇಳಿದಷ್ಟು ಹಣ ಕೊಟ್ಟು ಕೋವಿಡ್ ಪರೀಕ್ಷೆ ನಡೆಸಬೇಕಾಗಿದೆ. ಸರ್ಕಾರ ಇದಕ್ಕೆ ಕಡಿವಾಣ ಹಾಕಲೇಬೇಕು ಎಂದು ಒತ್ತಾಯಿಸಿದರು.

ಹ್ಯಾರಿಸ್ ಮಾತನಾಡಿ, ರ್‍ಯಾಪಿಡ್ ಆ್ಯಂಟಿಜನ್ ಪರೀಕ್ಷೆ ಮತ್ತು ಆರ್‌ಟಿ–ಪಿಸಿಆರ್ ಪರೀಕ್ಷೆಗಳಿಗೆ ದರ ಏಕರೂಪಗೊಳಿಸಬೇಕು. ಆರ್‌ಟಿ–ಪಿಸಿಆರ್ ಪರೀಕ್ಷೆಗೆ ₹3,200 ಶುಲ್ಕ ವಿಧಿಸುವ ಮೂಲಕ ಸುಲಿಗೆ ಮಾಡಲಾಗುತ್ತಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ವಿಮಾನ ನಿಲ್ದಾಣದಲ್ಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂಬುದನ್ನು ಕಡ್ಡಾಯ ಮಾಡಿಲ್ಲ. ಅಲ್ಲಿ ನಡೆಸುವ ಆರ್‌ಟಿ– ಪಿಸಿಆರ್ ಪರೀಕ್ಷೆಯಲ್ಲಿ ಕಾರ್ಟಿಜ್ ಬಳಸಲಾಗುತ್ತದೆ. ಅದರಲ್ಲಿ ಎರಡು ಮೂರು ಬಗೆಯ ಪರೀಕ್ಷೆ ನಡೆಸುವುದರಿಂದ, ಅದರ ಬೆಲೆ ಜಾಸ್ತಿ. ಈ ಬಗ್ಗೆ ಸಂದೇಹ ಇರುವ ಸದಸ್ಯರಿಗೆ ಅಧಿಕಾರಿಗಳ ಜತೆ ಕೂರಿಸಿ ಮಾಹಿತಿ ಕೊಡಿಸುತ್ತೇನೆ ಎಂದರು.

ಕೆಂಪಾಂಬುದಿ ಕೆರೆ ಒತ್ತುವರಿ ತೆರವಿಗೆ ಕ್ರಮ

ಬಸವನಗುಡಿ ಕ್ಷೇತ್ರದಲ್ಲಿರುವ ಕೆಂಪಾಂಬುದಿ ಕೆರೆಯ ಒತ್ತುವರಿ ತೆರವು ಮಾಡಿಸಲು ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಕಂದಾಯ ಸಚಿವ ಆರ್. ಅಶೋಕ ಹೇಳಿದರು.

ಬಿಜೆಪಿ ಶಾಸಕ ಎಲ್.ಎ.ರವಿಸುಬ್ರಮಣ್ಯ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರಿಸಿ, ಕೆರೆ ಒತ್ತುವರಿ ಮಾಡಿ ಪಾರ್ಕಿಂಗ್ ವ್ಯವಸ್ಥೆಯನ್ನು ಮಾಡಿರುವುದನ್ನು ನಿರ್ದಾಕ್ಷಿಣ್ಯವಾಗಿ ತೆರವು ಮಾಡಲಾಗುವುದು. ಕೆರೆಯ ವ್ಯಾಪ್ತಿ 47 ಎಕರೆ 7 ಗುಂಟೆ ಇದೆ. 2015–16 ರಲ್ಲಿ ₹85 ಲಕ್ಷ ವೆಚ್ಚ ಮಾಡಿ ಕೆರೆಯ ಅಭಿವೃದ್ಧಿ ಮಾಡಲಾಗಿತ್ತು. ಒತ್ತುವರಿ ತೆರವಿಗೆ ಸ್ಥಳ ಪರಿಶೀಲನೆಗೆ ಬಿಬಿಎಂಪಿ ಆಯುಕ್ತ ಗೌರವ ಗುಪ್ತಾ ಮತ್ತು ಜಂಟಿ ಆಯುಕ್ತರಿಗೆ ಸೂಚನೆ ನೀಡುತ್ತೇನೆ ಎಂದರು.

ವಿಸ್ತೃತ ಚರ್ಚೆಗೆ ಅವಕಾಶ:

ಸರ್ಕಾರಿ ಜಮೀನುಗಳನ್ನು ಸುಳ್ಳು ದಾಖಲೆ ಸೃಷ್ಟಿಸಿ ಭೂಗಳ್ಳರು ಕಬಳಿಸುತ್ತಿರುವ ವಿಷಯ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣದ ಹೆಚ್ಚಳ ವಿಷಯದ ವಿಸ್ತೃತ ಚರ್ಚೆಗೆ ಹೆಚ್ಚಿನ ಸಮಯ ನೀಡುವಾಗಿ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಪರಿಶಿಷ್ಟ ಪಂಗಡಗಳ ಮೀಸಲಾತಿ ವಿಷಯ ಹೆಚ್ಚಿನ ಸದಸ್ಯರಿಗೆ ಅವಕಾಶ ನೀಡುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿ ಕಾಂಗ್ರೆಸ್‌ನ ಜೆ.ಎನ್.ಗಣೇಶ್ ನೇತೃತ್ವದಲ್ಲಿ ಕಾಂಗ್ರೆಸ್ ಸದಸ್ಯರು ಧರಣಿ ನಡೆಸಿದರು.

ಆರೋಗ್ಯ ಸಚಿವರು ಹೇಳಿದರೂ ಸಿಗದ ವೆಂಟಿಲೇಟರ್!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್ ಶಿಫಾರಸು ಮಾಡಿದರೂ ರೋಗಿಯೊಬ್ಬರಿಗೆ ನಿಮ್ಹಾನ್ಸ್‌ನಲ್ಲಿ ವೆಂಟಿಲೇಟರ್ ಸಿಗದ ವಿಚಾರವು ವಿಧಾನಸಭೆಯಲ್ಲಿ ಬುಧವಾರ ಗಂಭೀರ ಚರ್ಚೆಗೆ ಕಾರಣವಾಯಿತು.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಬಿಜೆಪಿಯ ಹರತಾಳು ಹಾಲಪ್ಪ, 'ಸಾಗರದ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಪಾರ್ಶ್ವವಾಯುವಿಗೆ ತುತ್ತಾಗಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದುಕೊಂಡು ಬರಲಾಯಿತು. ನಿಮ್ಹಾನ್ಸ್‌ನಲ್ಲಿ ವೆಂಟಿಲೇಟರ್ ಸಹಿತ ಬೆಡ್‌ಗಾಗಿ ಬೆಳಿಗ್ಗೆ 7ರಿಂದ 10 ಗಂಟೆಯವರೆಗೂ ಕಾಯಲಾಯಿತು. ವೆಂಟಿಲೇಟರ್ ವ್ಯವಸ್ಥೆ ಮಾಡುವಂತೆ ಸಚಿವ ಸುಧಾಕರ್ ಹೇಳಿದರು. ಕೊನೆಗೂ ಅಲ್ಲಿ ಬೆಡ್ ಸಿಗಲಿಲ್ಲ. ರೋಗಿ ಸಾಯುವ ಸ್ಥಿತಿಯಲ್ಲಿದ್ದಾರೆ. ಬೇರೆ ಪಕ್ಷದವರು ರೋಗಿಯನ್ನು ಬೇರೆ ಆಸ್ಪತ್ರೆಗೆ ದಾಖಲಿಸುವ ವ್ಯವಸ್ಥೆ ಮಾಡುತ್ತಿದ್ದಾರೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಡಾ.ಕೆ.ಸುಧಾಕರ್ ಪ್ರತಿಕ್ರಿಯಿಸಿ, 'ನಿಮ್ಹಾನ್ಸ್‌ನಲ್ಲಿ ವೆಂಟಿಲೇಟರ್ ಬೆಡ್‌ಗೆ ಬೇಡಿಕೆ ಜಾಸ್ತಿ ಇದೆ. ಅಲ್ಲಿ ವ್ಯವಸ್ಥೆ ಆಗದೆ ಇದ್ದಾಗ ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ರೋಗಿಯನ್ನು ದಾಖಲಿಸಲು ವ್ಯವಸ್ಥೆ ಮಾಡಲಾಗಿದೆ' ಎಂದರು. 'ರೋಗಿಯನ್ನು ಇನ್ನೂ ದಾಖಲಿಸಿಲ್ಲ' ಎಂದು ಹಾಲಪ್ಪ ಹೇಳಿದರು.

'ನಿಮ್ಹಾನ್ಸ್ ನಿರ್ದೇಶಕರನ್ನು ಸಂಪರ್ಕಿಸುವುದೇ ಕಷ್ಟ. ಅವರು ನಮ್ಮ ಕರೆಗಳಿಗೆ ಸ್ಪಂದಿಸುವುದೇ ಇಲ್ಲ' ಎಂದು ಜೆಡಿಎಸ್‌ನ ಎಚ್.ಕೆ.ಕುಮಾರಸ್ವಾಮಿ, ಬಿಜೆಪಿಯ ಎ.ಎಸ್.ಪಾಟೀಲ ನಡಹಳ್ಳಿ ಆಕ್ಷೇಪಿಸಿದರು. ನಿರ್ದೇಶಕರನ್ನು ಕರೆಸಿ ಎಚ್ಚರಿಕೆ ನೀಡಬೇಕು ಎಂದು ಬಿಜೆಪಿಯ ಪ್ರೀತಂ ಗೌಡ ಒತ್ತಾಯಿಸಿದರು.

ಕನಿಷ್ಠ 5ರಿಂದ 10 ವೆಂಟಿಲೇಟರ್‌ಗಳ ಸಂಖ್ಯೆಯನ್ನಾದರೂ ಹೆಚ್ಚಿಸಿ ಎಂದು ಹಾಲಪ್ಪ ಮನವಿ ಮಾಡಿದರು.



ಹರತಾಳು ಹಾಲಪ್ಪ

ಸಚಿವ ಡಾ.ಕೆ. ಸುಧಾಕರ್

ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಬೃಹತ್ ರ‍್ಯಾಲಿ

ಗ್ರಾ.ಪಂ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರು ನಗರದಲ್ಲಿ ಬುಧವಾರ ಬೃಹತ್ ಪ್ರತಿಭಟನೆ ನಡೆಸಿದ್ದಾರೆ.

ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ ಹಾಗೂ ಸಿಐಟಿಯು ಸಹಯೋಗದಲ್ಲಿ ನಡೆದ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಭಾಗಗಳ ಸಾವಿರಾರು ನೌಕರರು ಪಾಲ್ಗೊಂಡಿದ್ದರು.

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಹಮ್ಮಿಕೊಂಡಿದ್ದ ರ‍್ಯಾಲಿಯಲ್ಲಿ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮಹಿಳೆಯರು ಹಾಗೂ ಇಳಿ ವಯಸ್ಸಿನವರೂ ಭಾಗಿಯಾಗಿದ್ದರು.

‘ಗ್ರಾಮ ಪಂಚಾಯಿತಿ ಸಿಬ್ಬಂದಿಗೆ ಕನಿಷ್ಠ ವೇತನ ನೀಡಬೇಕೆಂಬ ಆದೇಶ ವಿದ್ದರೂ ಹಿಂದಿನ 10 ತಿಂಗಳಿಂದ ಸಂಬಳವನ್ನೇ ಕೊಟ್ಟಿಲ್ಲ. ಇದರಿಂದ ನೌಕರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ವೇತನ ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ.

‘ಸರ್ಕಾರವು ವೃಂದ ಮತ್ತು ನೇಮಕಾತಿಗೆ ತಿದ್ದುಪಡಿ ತರುತ್ತಿರುವುದು ಸ್ವಾಗತಾರ್ಹ. ಈ ತಿದ್ದುಪಡಿ ವೇಳೆ ಗ್ರಾಮ ಪಂಚಾಯಿತಿ ನೌಕರರ ಹಿತವನ್ನು ಗಮನದಲ್ಲಿಟ್ಟುಕೊಳ್ಳ ಬೇಕು. ಕಾರ್ಯದರ್ಶಿ (ಗ್ರೇಡ್-2) ಹಾಗೂ ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳ ನೇಮಕಾತಿ ವೇಳೆ ಕ್ಲರ್ಕ್/ಡಾಟಾ ಎಂಟ್ರಿ ಆಪರೇಟರ್‌ಗಳನ್ನಷ್ಟೇ ಪರಿಗಣಿಸಲಾಗುತ್ತಿದೆ. ಇವರ ಜೊತೆಗೆ ಇತರ ವರ್ಗದ ನೌಕರರಿಗೂ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಬೇಕು’ ಎಂದು ಮನವಿ ಮಾಡಿದ್ದಾರೆ.

‘ಈ ತಿಂಗಳು ಹೊರಡಿಸಿರುವ ಕಾರ್ಯಕಾರಿ ಆದೇಶದಲ್ಲಿ ಕಾರ್ಯದರ್ಶಿ (ಗ್ರೇಡ್-2), ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗಳ ನೇಮಕಾತಿಗೆ ಅರ್ಹತಾ ಪರೀಕ್ಷೆ ನಿಗದಿಪಡಿಸಲಾಗಿದೆ. ಇದನ್ನು ಕೂಡಲೇ ಕೈಬಿಡಬೇಕು. ಕಂಪ್ಯೂಟರ್ ಆಪರೇಟರ್‌ಗಳಿಗೆ ಸೇವಾ ಅವಧಿಯ ಆಧಾರದಲ್ಲಿ ನೇರ ನೇಮಕಾತಿಯಲ್ಲಿ ಅವಕಾಶ ಕಲ್ಪಿಸಬೇಕು. ಇದಕ್ಕಾಗಿ ವೃಂದ ಮತ್ತು ನೇಮಕಾತಿಗೆ ತಿದ್ದುಪಡಿ ತರಬೇಕು’ ಎಂದು ಆಗ್ರಹಿಸಿದ್ದಾರೆ.

ವಾಹನ ಸವಾರರ ಪರದಾಟ: ಗ್ರಾ.ಪಂ ನೌಕರರ ಪ್ರತಿಭಟನೆಯಿಂದಾಗಿ ಕೆಲ ಕಾಲ ಸಂಚಾರ ದಟ್ಟಣೆ ಉಂಟಾಯಿತು.

ಮೆಜೆಸ್ಟಿಕ್‌ನಿಂದ ಮಲ್ಲೇಶ್ವರಂ, ರೇಸ್‌ಕೋರ್ಸ್ ರಸ್ತೆ, ಕೆ.ಆರ್.ವೃತ್ತ, ವಿಧಾನಸೌಧದತ್ತ ಹೋಗಬೇಕಿದ್ದ ಸವಾರರು ಪರಿತಪಿಸುವಂತಾಯಿತು.

ಬೇಡಿಕೆಗಳು

- ಬೆಲೆ ಏರಿಕೆಯನ್ನು ಗಮನದಲ್ಲಿಟ್ಟುಕೊಂಡು ಕನಿಷ್ಠ ಕೂಲಿಯನ್ನು ಪರಿಷ್ಕರಿಸಬೇಕು. ಈ ಸಂಬಂಧ ಹೊಸ ಆದೇಶ ಹೊರಡಿಸಬೇಕು.
- ಸಿಬ್ಬಂದಿಗೆ ಕಾಂಟ್ರಿಬ್ಯೂಟರಿ ಪಿಂಚಣಿ ನೀಡಲು ಆರ್ಥಿಕ ಇಲಾಖೆ ಒಪ್ಪಿಗೆ ನೀಡಿದೆ. ಹೀಗಾಗಿ ತುರ್ತಾಗಿ ಪಿಂಚಣಿ ವ್ಯವಸ್ಥೆ ಕಲ್ಪಿಸಬೇಕು.
- ಸಿಬ್ಬಂದಿಗೆ ವೇತನ ಹಾಗೂ ವಿ.ಡಿ.ಎ ಕೊಡಲು ಕೂಡಲೇ ₹700 ಕೋಟಿ ಹಣ ಬಿಡುಗಡೆ ಮಾಡಬೇಕು.
- ರಾಜ್ಯದ ಎಲ್ಲಾ ನೌಕರರನ್ನು ಇ.ಎಫ್.ಎಂ.ಎಸ್‌ಗೆ ಸೇರ್ಪಡೆ ಮಾಡಲು ಕ್ರಮ ಕೈಗೊಳ್ಳಬೇಕು.
- ಮೂರು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದವರಿಗೆ ಗ್ರ್ಯಾಚುಟಿ ನೀಡಬೇಕು.
- ನೌಕರರ ಸಾವಿಗೆ ಪರೋಕ್ಷವಾಗಿ ಕಾರಣರಾದ ಗ್ರಾ.ಪಂ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.

‘ಬೇಡಿಕೆ ಈಡೇರಿಕೆಯ ಭರವಸೆ’

‘ಗ್ರಾಮೀಣಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ.ಅತೀಕ್ ಅವರಿಗೆ ನಮ್ಮ ಅಹವಾಲುಗಳನ್ನು ಸಲ್ಲಿಸಿದ್ದೆವು. ಅವರು ಸಚಿವರೊಂದಿಗೆ ಚರ್ಚಿಸಿ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದ್ದಾರೆ. ಹೀಗಾಗಿ ಮುಷ್ಕರ ಕೊನೆಗೊಳಿಸಲು ನಿರ್ಧರಿಸಿದ್ದೇವೆ’ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ರಾಮಕೃಷ್ಣ ತಿಳಿಸಿದರು.

‘ನಮ್ಮೊಂದಿಗೆ ಮತ್ತೊಂದು ಸುತ್ತಿನ ಮಾತುಕತೆ ನಡೆಸುವುದಾಗಿ ಅತೀಕ್ ಅವರು ಹೇಳಿದ್ದಾರೆ. ಬೇಡಿಕೆ ಈಡೇರದಿದ್ದರೆ ಮತ್ತೆ ಪ್ರತಿಭಟನೆ ನಡೆಸುವುದು ಅನಿವಾರ್ಯ’ ಎಂದು ಎಚ್ಚರಿಸಿದರು.

‘5ನೇ ತಾರೀಕಿನೊಳಗೆ ವೇತನಕ್ಕೆ ಕ್ರಮ’

ಬೆಂಗಳೂರು: ‘ಗ್ರಾಮ ಪಂಚಾಯಿತಿ ನೌಕರರಿಗೆ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಲು ಎ.ಎಫ್.ಎಂ.ಎಸ್ ವ್ಯವಸ್ಥೆ ಮಾಡಲಾಗಿದ್ದು, ಪ್ರತಿತಿಂಗಳೂ 5 ನೇ ತಾರೀಖಿನೊಳಗೆ ವೇತನ ಪಾವತಿಸಲಾಗುವುದು’ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಲ್.ಕೆ.ಅತೀಕ್ ತಿಳಿಸಿದ್ದಾರೆ.

ಇದನ್ನು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲಾಗಿದ್ದು, ಅದು ಯಶಸ್ವಿಯೂ ಆಗಿದೆ. ಈ ವ್ಯವಸ್ಥೆಯನ್ನು ರಾಜ್ಯದ ಇತರೆ ಭಾಗಗಳಿಗೂ ವಿಸ್ತರಿಸಲು ಚಿಂತಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಪಿಂಚಣಿ ವ್ಯವಸ್ಥೆ ಅನುಷ್ಠಾನ ಸಂಬಂಧ ಗುರುವಾರ, ಅಧಿಕಾರಿಗಳ ಸಭೆ ನಡೆಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳುತ್ತೇವೆ. ಅರ್ಹತಾ ಪರೀಕ್ಷಾ ಪದ್ಧತಿ ಕೈಬಿಡಬೇಕೆಂಬ ಬೇಡಿಕೆಯನ್ನು ಸಚಿವರ ಗಮನಕ್ಕೆ ತರಲಾಗುತ್ತದೆ. ಗ್ರಾಚ್ಯುಟಿ ಸೇರಿದಂತೆ ಇತರ ಎಲ್ಲಾ ಬೇಡಿಕೆಗಳನ್ನು ಪರಿಶೀಲಿಸಿ ಅವುಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.



ಬೆಲೆ ಹೆಚ್ಚಿಸಿ

ಕನಿಷ್ಠ ಬೆಂಬಲ ಬೆಲೆಗೆ ಕೇಂದ್ರ ಸರ್ಕಾರ ಕಾನೂನು ರೂಪಿಸುವಂತೆ ಆಗ್ರಹಿಸಿ ಹಾಗೂ ಈರುಳ್ಳಿ ಬೆಲೆ ಕುಸಿತ ಖಂಡಿಸಿ ದಾವಣಗೆರೆಯ ತಹಶೀಲ್ದಾರ್ ಕಚೇರಿ ಮುಂಭಾಗದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಕಾರ್ಯಕರ್ತರು ಈರುಳ್ಳಿಯನ್ನು ನೆಲಕ್ಕೆ ಸುರಿದು ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಪರಿಹಾರ ವಿತರಣೆಗೆ ₹ 6 ಲಕ್ಷ ಲಂಚ ಪಡೆದ ಆರೋಪ

ಭೂಸ್ವಾಧೀನಾಧಿಕಾರಿ ಎಸಿಬಿ ಬಲೆಗೆ

ಪ್ರಜಾವಾಣಿ ವಾರ್ತೆ

ವೀರೇಶಕುಮಾರ್

ಎಂ.ಬಿ.ಮೋಹನ್

ಮನ್ಸೂರ್

ಚಿತ್ರದುರ್ಗ: ಹಿರಿಯೂರು ಹೊರವಲಯದಲ್ಲಿ ನಿರ್ಮಾಣವಾಗುತ್ತಿರುವ ರಾಷ್ಟ್ರೀಯ ಹೆದ್ದಾರಿ 150ಕ್ಕೆ ಭೂಮಿ ಕಳೆದುಕೊಂಡ ಮಹಿಳೆಗೆ ಪರಿಹಾರ ನೀಡಲು ₹ 6 ಲಕ್ಷ ಲಂಚ ಪಡೆದ ಭೂಸ್ವಾಧೀನಾಧಿಕಾರಿ ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಬಲೆಗೆ ಬಿದ್ದಿದ್ದಾರೆ.

ವಿಶೇಷ ಭೂಸ್ವಾಧೀನಾಧಿಕಾರಿ ವೀರೇಶಕುಮಾರ್, ಕಚೇರಿಯ ವ್ಯವಸ್ಥಾಪಕ ಎಂ.ಬಿ. ಮೋಹನ್ ಹಾಗೂ ಕಾರು ಚಾಲಕ ಮನ್ಸೂರ್ ಬಂಧಿತರು. ಲಂಚದ ರೂಪದಲ್ಲಿ ಪಡೆದ ₹ 6 ಲಕ್ಷವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹಿರಿಯೂರು ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ 150ರ ವಿಸ್ತರಣೆ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಇದಕ್ಕೆ ಎಚ್.ಕೆ. ನೇತ್ರಾ ಎಂಬುವರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಭೂಮಿಗೆ ಪರಿಹಾರ ಮಂಜೂರು ಮಾಡುವ ಪ್ರಕ್ರಿಯೆ ಹಲವು ದಿನಗಳಿಂದ ಬಾಕಿ ಇದೆ. ಹೀಗಾಗಿ, ನೇತ್ರಾ ಅವರು ಆಗಸ್ಟ್ ತಿಂಗಳಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಯನ್ನು ಭೇಟಿ ಮಾಡಿ ಚರ್ಚಿಸಿದ್ದರು. ಕಚೇರಿಯ ವ್ಯವಸ್ಥಾಪಕರ ಬಳಿ ವ್ಯವಹರಿಸುವಂತೆ ಭೂಸ್ವಾಧೀನಾಧಿಕಾರಿ ಸೂಚಿಸಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೋಹನ್ ಅವರನ್ನು ಭೇಟಿಯಾದ ಮಹಿಳೆ ಜಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದ್ದಾರೆ. ಕೆಲ ದಿನ ಬಿಟ್ಟು ಬರುವಂತೆ ಸೂಚಿಸಿ ಸಾಗಹಾಕಿದ್ದಾರೆ. ಸೆ. 13ರಂದು ವಿಶೇಷ ಭೂಸ್ವಾಧೀನಾಧಿಕಾರಿಯ ಕಾರು ಚಾಲಕ ಮನ್ಸೂರ್ ಮಹಿಳೆಯ ಮನೆಗೆ ಭೇಟಿ ನೀಡಿದ್ದಾರೆ. ₹ 6 ಲಕ್ಷ ಲಂಚ ನೀಡಿದರೆ ಪರಿಹಾರ ಮೊತ್ತದ ಚೆಕ್ ಎರಡು ದಿನಗಳಲ್ಲಿ ನೀಡುವುದಾಗಿ ಅಧಿಕಾರಿ ಒಪ್ಪಿರುವುದಾಗಿ ಹೇಳಿದ್ದಾರೆ. ಈ ಸಂಬಂಧ ನೇತ್ರಾ ಅವರು ಎಸಿಬಿಗೆ ದೂರು ನೀಡಿದ್ದರು.

ಕಸಾಪ ಚುನಾವಣೆ: ಹೈಕೋರ್ಟ್ ಸೂಚನೆ

ಒಂದನೇ ಪುಟದಿಂದ...

ಮೇ 9ರಂದು ನಿಗದಿಯಾಗಿದ್ದ ಕಸಾಪ ಚುನಾವಣೆಯನ್ನು ಕೋವಿಡ್ 2ನೇ ಅಲೆ ತೀವ್ರಗೊಂಡ ಕಾರಣ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು. ನಂತರ ಅವಧಿ ಪೂರ್ಣಗೊಂಡಿದ್ದ ವಿವಿಧ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಜರುಗಿತು. ಆದರೂ ಕಸಾಪ ಚುನಾವಣೆ ನಡೆಸದ ಕುರಿತು ಮಾಲೀಪಾಟೀಲ ಅವರು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು. ಪ್ರಕರಣದಲ್ಲಿ ರಾಜ್ಯ ಸರ್ಕಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಚುನಾವಣಾಧಿಕಾರಿಯನ್ನು ಎದುರುಗಾರರನ್ನಾಗಿ ಮಾಡಿ ರಿಟ್ ಅರ್ಜಿ ಸಲ್ಲಿಸಲಾಗಿತ್ತು.

‘ಚುನಾವಣೆಗೆ ಸಂಬಂಧಿಸಿದಂತೆ ಈಗಾಗಲೇ ಶೇಕಡ 90ರಷ್ಟು ಪ್ರಕ್ರಿಯೆಗಳು ಪೂರ್ಣಗೊಂಡಿದ್ದು, ಚುನಾವಣೆ ಮುಂದೂಡುವಂತೆ ಸರ್ಕಾರ ಹೊರಡಿಸಿರುವ ಸುತ್ತೋಲೆ ಪ್ರಸ್ತುತ ಚುನಾವಣೆಗೆ ಅನ್ವಯವಾಗುವುದಿಲ್ಲ. ಹೀಗಾಗಿ ಕನ್ನಡ ಸಾಹಿತ್ಯ ಪರಿಷತ್‌ನ ಹೊಸ ಆಡಳಿತ ಮಂಡಳಿಗೆ ಚುನಾವಣೆ ನಡೆಸಬೇಕು’ ಎಂದು ಶೇಖರಗೌಡ ಮನವಿ ಮಾಡಿದ್ದರು.

ವಕೀಲರಾದ ಶ್ರೀಹರ್ಷ ನೀಲೋಪಂತ್, ಅವಿನಾಶ ಮಾಲಿಪಾಟೀಲ ಅರ್ಜಿದಾರರ ಪರ ವಕಾಲತ್ತು ವಹಿಸಿದ್ದರು.

ಭಾಲ್ಕಿ ವಿದ್ಯಾರ್ಥಿ 21ನೇ ರ‍್ಯಾಂಕ್

ಚೇತನ ಮಲ್ಲಿಕಾರ್ಜುನ

ಅಂಬಿಕಾ ಪಂಡಪ್ಪ

ಭಾಲ್ಕಿ(ಬೀದರ್): ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಚೇತನ ಮಲ್ಲಿಕಾರ್ಜುನ ರಾಷ್ಟ್ರಮಟ್ಟದ ಜೆಇಇ ಮೇನ್ಸ್ ಪರೀಕ್ಷೆಯಲ್ಲಿ 21ನೇ ರ‍್ಯಾಂಕ್ ಪಡೆದಿದ್ದಾರೆ.

ವಿದ್ಯಾರ್ಥಿನಿ ಅಂಬಿಕಾ ಪಂಡಪ್ಪ 195ನೇ ರ‍್ಯಾಂಕ್ ಪಡೆದಿದ್ದಾರೆ ಎಂದು ಪ್ರಾಚಾರ್ಯ ಬಸವರಾಜ ಮೊಳಕೀರೆ ತಿಳಿಸಿದ್ದಾರೆ.

ಐಐಟಿ ಸೇರುವ ಗುರಿ

ಒಂದನೇ ಪುಟದಿಂದ...

10ನೇ ತರಗತಿ ತನಕ ಉತ್ತರ ಬೆಂಗಳೂರಿನಲ್ಲಿರುವ ದೆಹಲಿ ಪಬ್ಲಿಕ್ ಶಾಲೆಯಲ್ಲಿ (ಡಿಪಿಎಸ್) ಅವರು ವಿದ್ಯಾಭ್ಯಾಸ ಮಾಡಿದ್ದಾರೆ. 11 ಮತ್ತು 12ನೇ ತರಗತಿಗೆ ನಾರಾಯಣ ಇ-ಟೆಕ್ನೋ ಸ್ಕೂಲ್ ಸೇರಿಕೊಂಡರು. ಗೌರಬ್ ಅವರ ತಂದೆ ಗೌತಮ್‌ಕುಮಾರ್ ಅವರು ಶಿಕಾಗೋದಲ್ಲಿ ಯೋಜನಾ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದಾರೆ. ‘ಕೋವಿಡ್ ಸಂದರ್ಭದಲ್ಲಿ ತಂದೆಯಿಂದ ದೂರವಿದ್ದು ವ್ಯಾಸಂಗ ಮಾಡುವುದು ದೊಡ್ಡ ಸವಾಲಾಗಿತ್ತು. ನಿರಂತರ ಅಭ್ಯಾಸವೇ ಸಾಧನೆಗೆ ಸಹಾಯವಾಯಿತು’ ಎಂದು ಹೇಳಿದರು. ‘ತಾಯಿ ಬರ್ನಾಲಿ ದಾಸ್ ಅವರು ಶಾಲಾ ಶಿಕ್ಷಕಿಯಾಗಿದ್ದು, ಅವರ ಪ್ರೇರಣೆಯೂ ಈ ಸಾಧನೆಗೆ ಪ್ರಮುಖ ಕಾರಣ. ಸ್ವಂತ ಶಕ್ತಿಯಿಂದ ಅಧ್ಯಯನ ನಡೆಸಲು ಸಾಂಕ್ರಾಮಿಕ ರೋಗ ಸಹಾಯ ಮಾಡಿತು. ಆದರೆ, ಸ್ನೇಹಿತರು ಮತ್ತು ಶಿಕ್ಷಕರನ್ನು ಭೇಟಿಯಾಗದಂತೆ ಮಾಡಿತು’ ಎಂದು ತಿಳಿಸಿದರು.

ಚೆನ್ನೈ ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ – ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಅಮಿಟೆಡ್ (ಸಿಬಿಐಸಿ–ಟಿಐಟಿಎಲ್)

5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 001.
ಫೋನ್ : 080–22267900, ಫ್ಯಾಕ್ಸ್: 22267901,
website: www.kiadb.in email.mdcbic23@gmail.com

ಸಂಖ್ಯೆ: ಸಿಬಿಐಸಿ ಟಿಐಟಿಎಲ್/ಸಿಒಎಫ್/ಇ–ಹರಾಜು–01/7207/2021–22 ದಿನಾಂಕ: 15.09.2021

ಪತ್ರಿಕಾ ಪ್ರಕಟಣೆ

ಚೆನ್ನೈ ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ – ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್ ಲಿಮಿಟೆಡ್ (ಸಿಬಿಐಸಿ–ಟಿಐಟಿಎಲ್), ತನ್ನ ಹೆಚ್ಚುವರಿ ನಿಧಿಯನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಲ್ಪಾವಧಿ ಠೇವಣಿ ಮಾಡಲು ಉದ್ದೇಶಿಸಿದೆ. ನಿಗದಿತ ಮೊತ್ತ, ಅಲ್ಪಾವಧಿ ಠೇವಣಿಯ ಅವಧಿ ಮತ್ತು ಇತರೆ ವಿವರಗಳು ಈ ಕೆಳಕಂಡಂತಿವೆ.

1) ರೂ .220 ಕೋಟಿ – ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 6 ತಿಂಗಳವರೆಗೆ (181 ದಿನಗಳು).

ಇ–ಹರಾಜಿಗೆ ಸಂಬಂಧಿಸಿದ ಸಂಪೂರ್ಣ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://eproc.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಇ–ಹರಾಜಿಗೆ ಸಂಬಂಧಿಸಿದ ವೇಳಾಪಟ್ಟಿ ಈ ಕೆಳಗಿನಂತಿದೆ:

1) ಇ–ಹರಾಜು ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 17.09.2021,
2) ಅನುಬಂಧ–ಬಿ ಘೋಷಣೆಯನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 24.09.2021ರ ಮಧ್ಯಾಹ್ನ 3.30 ಗಂಟೆ ಒಳಗೆ,
3) ಟೆಂಡರ್ ತೆರೆಯುವ ದಿನಾಂಕ: 27.09.2021, ಸಂಜೆ 4.00 ಗಂಟೆ ನಂತರ
4) ನೇರ ಹರಾಜು: 29.09.2021ರ ಬೆಳಗ್ಗೆ 11.00ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 1.00 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು, ಸಿಬಿಐಸಿಟಿಐಟಿಎಲ್, ಬೆಂಗಳೂರು
DIPR/DDU/Zen/R.O:1526/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ–585105
ಪೋ.ನಂ 08472–278634/256944 Email:eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021–22/1249 ದಿನಾಂಕ : 14–09–2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ : **ಆಳಂದ ತಾಲೂಕಿನ–02 (Indent No-33384 & 33388 call-3),** 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ 1,49,19,726/- ಗರಿಷ್ಠ : 2,43,54,128/-, 3) ಲೆಕ್ಕ ಶೀರ್ಷಿಕೆ : Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ : 2ನೇ ದರ್ಜೆ ಗುತ್ತಿಗೆದಾರರು & ಮೇಲ್ಮಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : **15–09–2021 ರಿಂದ 22–09–2021,** 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ–ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : **22–09–2021 ಸಾಯಂಕಾಲ 4:00 ಗಂಟೆವರೆಗೆ,** 8) ಪ್ರೀ ಬಿಡ್ಡ್ ಸಭೆ ದಿನಾಂಕ : **20–09–2021 ಬೆ. 11.00 ಗಂಟೆಯ ನಂತರ,** 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : **23–09–2021 ಸಾಯಂಕಾಲ 4:01 ಗಂಟೆವರೆಗೆ,** 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : **27–09–2021 ಬೆ. 11.00 ಗಂಟೆಯ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ
ವಾ.ಸಾ.ಸಂ.ಇ/ಕಲಬುರಗಿ/604/ಎಂ.ಸಿ&ಎ/2021–22

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ,1 ನೇ ಮಹಡಿ, ಸ್ಟೇಡಿಯಂ ಎದುರು, ಹದಡಿ ರೋಡ್, ದಾವಣಗೆರೆ – 577002. ದೂ: 08192–250364, ಮೊ: 94483–65262 ಫ್ಯಾಕ್ಸ: 08192–231469

ಸಂ:ಕಾಇಂ(ವಿ)/ಬೃಕಾವಿ/ಸ.ಕಾ.ಇಂ(ಕ)/ಕಿ.ಇಂ(ವಿ)/ದಾ/21–22/1867/72 ದಿನಾಂಕ:15.09.2021

ಪ್ರತಿಕಾ ಪ್ರಕಟಣೆ–ಸಾರ್ವಜನಿಕ ಎಚ್ಚರಿಕೆ

ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಸ್ವ ನಿರ್ಮಾಣ ಅಡಿಯಲ್ಲಿ ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ಗುತ್ತೂರು ಗ್ರಾಮದಲ್ಲಿರುವ 400 ಕೆ.ವಿ. ವಿದ್ಯುತ್ ಸ್ಟೇಶನ್ ನಿಂದ ಹಲಸಬಾಳು ಹತ್ತಿರ ನಿರ್ಮಿಸಿರುವ 66 ಕೆ.ವಿ. ವಿದ್ಯುತ್ ಸಬ್‌ಸ್ಟೇಶನ್ ವರೆಗೆ ಹೊಸದಾಗಿ ನಿರ್ಮಿಸಿರುವ 13.734 ಕಿಮೀ. ಉದ್ದದ 66 ಕೆ.ವಿ. ವಿದ್ಯುತ್ ಮಾರ್ಗದ **ನಿರ್ಮಾಣ ಕಾಮಗಾರಿಯು ಪೂರ್ಣಗೊಂಡಿದ್ದು. ಸದರಿ ಮಾರ್ಗವು ಹರಿಹರ ತಾಲ್ಲೂಕಿನ ಗುತ್ತೂರು ಮತ್ತು ರಾಜನಹಳ್ಳಿ ಹಾಗೂ ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕಿನ ನದಿಹರಳಹಳ್ಳಿ, ವಡೇರಾಯನಹಳ್ಳಿ, ಕರೂರು, ಹುಲಿಕಟ್ಟೆ ಮತ್ತು ಮಾಕನೂರು ಗ್ರಾಮಗಳ ವ್ಯಾಪ್ತಿಯಲ್ಲಿ ಹಾದುಹೋಗಿರುತ್ತದೆ.**

ಆದ್ದರಿಂದ ಮೇಲೆ ತಿಳಿಸಿರುವ ಕಾಮಗಾರಿ ಬಗ್ಗೆ ಸಾರ್ವಜನಿಕರಿಗೆ ತಿಳಿಸಿಯಬಯಸುವುದೇಂದರೆ. ಈ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ದಿನಾಂಕ: **16.09.2021** ರಂದು ಅಥವಾ ತದನಂತರ ವಿದ್ಯುತ್ ಪ್ರವಹಿಸಲಾಗುವುದು. ಕಾರಣ ವಿದ್ಯುತ್ ಗೋಪುರ ಹತ್ತುವುದಾಗಲಿ ಅಥವಾ ಅದಕ್ಕೆ ಪ್ರಾಣಿಗಳನ್ನು ಕಟ್ಟುವುದಾಗಲಿ, ಹಸಿರು ಟೊಂಗೆಗಳನ್ನು ವಿದ್ಯುತ್ ಮಾರ್ಗಕ್ಕೆ ಎಸೆಯುವುದು ಪ್ರಾಣಾಪಾಯಕಾರಿಯಾಗಿರುವುದು. ಆದ್ದರಿಂದ ಸಾರ್ವಜನಿಕರು ಮೇಲ್ಕಾಣಿಸಿದ ಕೃತ್ಯಗಳನ್ನು ಮಾಡಬಾರದೆಂದು ಈ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಇಂತಹ ಕೃತ್ಯಗಳನ್ನು ಯಾರಾದರು ಎಸಗಿದಲ್ಲಿ ಮುಂದೆ ಒದಗಬಹುದಾದ ಅಪಾಯಗಳಿಗೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲ ಎಂದು ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ವಿಭಾಗ ಕ.ವಿ.ಪ್ರ.ನಿ.ನಿ, ದಾವಣಗೆರೆ ರವರು ತಿಳಿಸಿರುತ್ತಾರೆ.

ವಾಸಾಇ/ಡಿವಿಜಿ/386/ಎಂಸಿಎ/2021–22
ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ, ದಾವಣಗೆರೆ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಾಗಲಕೋಟೆ ಜಿಲ್ಲೆ, ಬಾಗಲಕೋಟೆ– 587103
Ph: 08354-235776 E-mail:dudc_bgk@yahoo.co.in, Itstaff dudc_bagalkote@yahoo.co.in

ಸಂಖ್ಯೆ : ಜಿನಕೋಬಾ/ಎಲ್.ಇ.ಡಿ/ಒ.ಎಂ/2021–22 ದಿನಾಂಕ : 14.09.2021.

ತಿದ್ದುಪಡಿ ಟೆಂಡರ್ ಪ್ರಕಟಣೆ
(E-Procurmentnt Portal ಮುಖಾಂತರ)

.ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಬಾಗಲಕೋಟ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಸಾರ್ವಜನಿಕ ಖಾಸಗಿ / ಕಂಪನಿ ಮುಖಾಂತರ ವಾರ್ಷಿಕ ನಿರ್ವಹಣೆ ಕುರಿತು e-protal: https://eproc.karnataka.gov.in ಮುಖಾಂತರ ಟೆಂಡರ ಪ್ರಕಟಣೆಯನ್ನು ತಾಂತ್ರಿಕ ಕಾರಣಗಳಿಂದ ಇಂಡೆಂಟ ನಂಬರನ್ನು INDENT No : DUDC/BGK/ TECHNICAL/ CCMS/ LED2021-22/02 ಓದಿಕೊಳ್ಳುವದು. ಹಾಗೂ ಈ ಕೆಳಗಿನಂತೆ ದಿನಾಂಕಗಳನ್ನು ತಿದ್ದುಪಡಿಮಾಡಲಾಗಿದೆ.

1) Venue, Date and time of Pre-Bid Meeting DUDC, Dc Office Bagalkot : 27.09.2021 at 4.30PM
2) Last date and time for receiving queries/ Clarifications : 04.11.2021 at 4.30 PM
3) Last date and time Receipt of Tenders Date : 04.11.2021 at 5.00 PM
4) Date and time of Opening of Technical Bid : 05.11.2021 at 5.30PM
5) Date and time of Opening of the Financial Bid : 03.12.2021 at 11.30 AM
6) Bids Validity Period (days) : 180.

ಸಹಿ/– ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿಕೋಶ,
ಬಾಗಲಕೋಟೆ.
ಕ.ಟಿ.ಜಿ.ಅ
ವಾಸಾಇ/ಬಾ/289/2021–22/ದೇಶಪಾಂಡೆಪಬ್ಲಿಸಿಟಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
(ಸಾರ್ವಜನಿಕ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
ನಂ. 4, ಡಿ.ಎಸ್.ಇ.ಆರ್.ಟಿ. ಕಟ್ಟಡ, ಹೊಸಕೆರೆಹಳ್ಳಿ,100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು - 560 085.
ದೂರವಾಣಿ : 080-26422238/45
ಇ-ಮೇಲ್ : mdktbs.tender@gmail.com
ವೆಬ್‌ಸೈಟ್ : http://www.ktbs.kar.nic.in

ಸಂಖ್ಯೆ: ಎ6.ಕ.ಪ.ಪು.ಸಂ/ಪಿ.ಯು.ಸಿ–15/2020–21 ದಿನಾಂಕ:15.09.2021

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2021–22 ಮತ್ತು 2022–23ನೇ ಸಾಲಿಗೆ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಅಂದಾಜು 35.52 ಲಕ್ಷ ಪಠ್ಯ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 29.09.2021 ರಂದು ಸಂಜೆ 5.30** ರವರೆಗೂ ಸಲ್ಲಿಸಬಹುದಾಗಿರುತ್ತದೆ.

ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ:
https://www.eproc.karnataka.gov.in
ಸಹಾಯವಾಣಿ: 080–46010000, 080–68948777,
080–22230960 ಮತ್ತು 080–22234115
ಇಲಾಖೆಯ ವೆಬ್‌ಸೈಟ್: http://www.ktbs.kar.nic.in

ಸಹಿ/– (ಎಂ.ಪಿ. ಮಾದೇಗೌಡ) ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ), ಬೆಂಗಳೂರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು–3ರವರ ಕಛೇರಿ,
ಘನತ್ಯಾಜ್ಯ ನಿರ್ವಹಣೆ–1, ದಾಸಪ್ಪ ಆಸ್ಪತ್ರೆ ಕಟ್ಟಡದ ಹಿಂಭಾಗ, ಬೆಂಗಳೂರು–560002

ನಂ.: ಕಾಪಾಅ–3/ಘತ್ಯಾನಿ/ಟೆಂಡರ್/02/2021–22 ದಿನಾಂಕ: 15.09.2021

ಟೆಂಡರ್ ಪ್ರಕಟಣೆ

ಅಲ್ಪಾವಧಿ – ದ್ವಿ ಲಕೋಟೆ ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕಾರ್ಯಪಾಲಕ ಅಭಿಯಂತರರು–3, ಘನತ್ಯಾಜ್ಯ ನಿರ್ವಹಣೆ–1, ಇವರು ಪುರಸಭೆಯ ಸ್ಲಂ ಮನೆಗಳಿಂದ ಘನತ್ಯಾಜ್ಯ ಸಂಗ್ರಹಣೆಗೆ 2000 ಸಂಖ್ಯೆಯ ತಳ್ಳುವ ಗಾಡಿಯನ್ನು ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಿದ್ದಾರೆ.

ಕ್ರ. ಸಂ.	ವಿಷಯ	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಅನುಮೋದಿತ ಡ್ರಾಯಿಂಗ್‌ನಂತೆ ಪುರಸಭೆಯ ಸ್ಲಂ ಮನೆಗಳಿಂದ ಘನತ್ಯಾಜ್ಯ ಸಂಗ್ರಹಣೆಗೆ 2000 ಸಂಖ್ಯೆಯ ತಳ್ಳುವ ಗಾಡಿಯನ್ನು ಸರಬರಾಜು ಮಾಡುವುದು.	570.00

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://eproc.karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ವಿಚಾರಣೆಗಳನ್ನು ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ: **22.09.2021ರ ಸಂಜೆ 4:00 ಗಂಟೆವರೆಗೆ.** (3) ಪೂರ್ವಭಾವಿ ಸಭೆಯು ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ **23.09.2021ರ ಸಂಜೆ 4:00 ಗಂಟೆಗೆ** ನಡೆಯಲಿದೆ. (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: **01.10.2021ರ ಸಂಜೆ 4:00 ಗಂಟೆಯವರೆಗೆ.** (5) ತಾಂತ್ರಿಕ ಬಿಡ್‌ಗಳನ್ನು **04.10.2021ರ ಸಂಜೆ 4:00 ಗಂಟೆಗೆ** ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಅರ್ಹ ತಾಂತ್ರಿಕ ಬಿಡ್ಡರುಗಳಿಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಿಳಿಸಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು–3,
ಘನತ್ಯಾಜ್ಯ ನಿರ್ವಹಣೆ, ಬಿಬಿಎಂಪಿ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋ.ಇ ವಿಭಾಗ, ಶಿವಮೊಗ್ಗ
ಸಂಖ್ಯೆ: ಕಾಪಾಅ/ಶಿವಿಶಿ/ಜೆಇ–3/ಐಎಫ್‌ಟಿ–12/2021–22 ದಿ:13.09.2021

ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೊಂದಾಯಿತ 1ನೇ ದರ್ಜೆ ಗುತ್ತಿಗೆದಾರರಿಂದ ಇ–ಪ್ರಕ್ಯೂರಮೆಂಟ್ ಪೋರ್ಟಲ್ (http://eproc. karnataka.gov.in) ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

8443 ಠೇವಣಿವಂತಿಕೆ : 1. ಸಾಗರ ತಾಲ್ಲೂಕು: 1 ಕಾಮಗಾರಿ(ಇ.ನಂ:141383) ಟೆಂಡರ್ ದಾಖಲಾತಿಗಳನ್ನು ಡೌನ್ಲೋಡ್ ಮಾಡಲು ಮತ್ತು ಸಲ್ಲಿಸಲು ದಿನಾಂಕ:13.09.2021 ರಿಂದ 28.09.2021 ರವರೆಗೆ, ಎಲ್ಲಾ ಕಾಮಗಾರಿಗಳಿಗೆ ಪೂರ್ಣಗೊಳಿಸಲು ಕಾಲಾವಧಿ 9 ತಿಂಗಳು (ಮಳೆಗಾಲ ಸೇರಿ) ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ 08182–274942) ಹಾಗೂ ಸಹಾಯಕ ದೂರವಾಣಿ ಸಂಖ್ಯೆ: 080–23010900 / 080–23010901 ರಿಂದ ಮಾಹಿತಿ ಪಡೆಯಬಹುದು.

ಸಹಿ/– ಕಾ.ಇಂ, ಲೋ.ಬಂ ಮತ್ತು ಒ.ಜ.ಸಾ ಇಲಾಖೆ,
ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–55/09/ಎಂಸಿಎ/21–22/588

ಕರ್ನಾಟಕ ಸರ್ಕಾರ
ಯೋಜನಾ ಸಮನ್ವಯಾಧಿಕಾರಿಯವರ ಕಛೇರಿ,
ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು
ದೂರವಾಣಿ: 08262–220779 E.mail : itdpchikmagalur@gmail.com
ಸಂಖ್ಯೆ: ಗಿಅಯೋಚಿ/ಕವ್ವ/ಸಿಆರ್–01.ಹೊ.ಸಂ.ಟೆ/2021–22 ದಿನಾಂಕ: 13.09.2021

ಇ–ಟೆಂಡರ್ ಪ್ರಕಟಣೆ

ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು ಜಿಲ್ಲೆ ವ್ಯಾಪ್ತಿಯ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ಬಾಲಕ ಮತ್ತು ಬಾಲಕೀಯರ ವಿದ್ಯಾರ್ಥಿ ನಿಲಯ/ ಆಶ್ರಮ ಶಾಲೆ/ ಏಕಲವ್ಯ ಮಾದರಿ ವಸತಿ ಶಾಲೆ/ಮು.ರಾ.ದೇ. ವಸತಿ ಶಾಲೆ/ಡಾ:ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಗಳಲ್ಲಿ ಖಾಲಿ ಇರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಪಡೆಯಲು ಟೆಂಡರ್ ಕರೆಯಲಾಗಿದ್ದು, http://eproc.karnataka.gov.in ಮೂಲಕ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್‌ನ್ನು ಆನ್ ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 08.10.2021 ಸಂಜೆ 4.00 ಗಂಟೆಯವರೆಗೆ ಹಾಗೂ ಟೆಂಡರ್ ತೆರೆಯುವ ದಿನಾಂಕ: 11.10.2021 ರಂದು ಬೆಳಿಗ್ಗೆ 11–00 ಗಂಟೆಗೆ (ಸಾಧ್ಯವಾದಲ್ಲಿ). ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಹಾಗೂ ವೆಬ್ ಸೈಟ್ http://eproc.karnataka.gov.inನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

ಸಹಿ/–ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಚಿಕ್ಕಮಗಳೂರು.

ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ, ಹಾಸನ
ಸಂ/ಉನಿಸಕಇಹಾ/ಡಿ3/ಸಿಆರ್26/2021–22 ದಿ: 9–9–2021

ಟೆಂಡರ್ ಪ್ರಕಟಣೆ

2021–22ನೇ ಸಾಲಿನಲ್ಲಿ ಹಾಸನ ಜಿಲ್ಲೆ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ನಿರ್ವಹಿಸಲಾಗುತ್ತಿರುವ ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ/ಡಾ.ಬಿ.ಆರ್ ಅಂಬೇಡ್ಕರ್/ಇಂದಿರಾ ಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಬೋಧಕ/ ಬೋಧಕೇತರ ಹುದ್ದೆಗಳಿಗೆ ಮಾನವಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರ್ ಮೊತ್ತ ರೂ 447.90 ಲಕ್ಷ ಟೆಂಡರ್ ದಸ್ತಾವೇಜುಗಳನ್ನು ಪಡೆಯಲು ಪ್ರಾರಂಭ ದಿನಾಂಕ:18–9–2021. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 23–11–2021. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: WWW.eproc.karnataka.gov.in ಉಪ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಹಾಸನ ದೂರವಾಣಿ ಸಂ: 08172–268960

ಸಹಿ/– ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ,
ಹಾಸನ ಜಿಲ್ಲೆ, ಹಾಸನ
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/387/2020–21

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
CIN: U85110KA1966SGC001620
ಆಡಳಿತ ಕಚೇರಿ: ಟಿ.ಟಿ.ಎಂ.ಸಿ, ‘ಎ’ ಬ್ಲಾಕ್, 5ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027 ದೂರವಾಣಿ: 080–22278813/14/15/16
ಫ್ಯಾಕ್ಸ್: 080–22213172; ಜಾಲತಾಣ: www.ksmcl.org

ಸಂಖ್ಯೆ: 955/ಕೆಎಸ್ಎಂಸಿಎಲ್/Diesel Bowser/ಸುಕಅಗ/ಇ–ಟೆಂಡರ್/2020–21/1444 ದಿನಾಂಕ: 13–09–2021

ಇ–ಟೆಂಡರ್ ಆಹ್ವಾನ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಯ ಸುಬ್ಬರಾಯನಹಳ್ಳಿ ಕಬ್ಬಿಣದ ಅದಿರು ಗಣಿ, ಸಂಡೂರು, ಬಳ್ಳಾರಿ ಜಿಲ್ಲೆ, ಇಲ್ಲಿಗೆ ಒಂದು 2.5 K.L Diesel Bowser ಖರೀದಿಸಲು ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಟೆಂಡರ್ ವೇಳಾಪಟ್ಟಿ

ಟೆಂಡರ್ ದಾಖಲಾತಿಗಳನ್ನು ಸಲ್ಲಿಸಲು ಕಡೆಯ ದಿನಾಂಕ ಮತ್ತು ಸಮಯ	29–09–2021, 17.30 ಗಂಟೆಯವರೆಗೆ
ಟೆಂಡರ್‌ನ್ನು ತೆರೆಯುವ ದಿನಾಂಕ	01–10–2021, 11.00 ಗಂಟೆಗೆ
ಇ.ಎಂ.ಡಿ. ಮೊತ್ತ	ರೂ. 50,000/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಫ್ಲಾಟ್‌ಫಾರ್ಮ್ ವೆಬ್‌ಸೈಟ್: https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು (ಉ)
ವಾ.ಸಾ.ಸಂ.ಇ/ಬೆಂ.ನಗರ/1516/ಅಕಾರ್/2021–22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ, ಕೊಪ್ಪಳ. ಜಿಲ್ಲಾ ಆಡಳಿತ ಭವನ, 1ನೇ ಮಹಡಿ, ಹೊಸಪೇಟೆ ರಸ್ತೆ, ಕೊಪ್ಪಳ. ದೂರವಾಣಿ/ಫ್ಯಾಕ್ಸ್ ಸಂಖ್ಯೆ : 08539–221303 Email ID:-ddpi.edu.karkpl @nic.in

ಸಂಖ್ಯೆ:ಯೋವಿ1/ಕೆಕೆಆರ್‌ಡಿಬಿ/ಸ್ಮಾರ್ಟ್ ಕ್ಲಾಸ್/ಟೆಂಡರ್/14/2020–21 ದಿನಾಂಕ: 13.09.2021

–:: ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ::–
ಟೆಂಡರ್ ಆಹ್ವಾನ 2 ನೇ ಕರೆ

2020–21ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಯೋಜನೆ ಅಡಿಯಲ್ಲಿ ಕೊಪ್ಪಳ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿವಿಧ ಸರ್ಕಾರಿ ಶಾಲೆಗಳಿಗೆ ಮ್ಯಾಕ್ರೋ ಯೋಜನೆಯಲ್ಲಿ “ಸ್ಮಾರ್ಟ ಕ್ಲಾಸ್” ಅಳವಡಿಸಲು ದ್ವಿ–ಲಕೋಟೆ ಪದ್ಧತಿಯಲ್ಲಿ ಇಚ್ಛೆಯುಳ್ಳ ಟೆಂಡರ್‌ದಾರರಿಂದ ಷರತ್ತುಗಳಿಗೆ ಒಳಪಟ್ಟು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು 2000 ರ ಅಡಿಯಲ್ಲಿ ಸ್ಪರ್ಧಾತ್ಮಕ ದರಗಳಿಗೆ “ಇ” ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಸಂಸ್ಥೆಯವರು ಇ ಪ್ರಕ್ಯೂರ್‌ಮೆಂಟ್ ಪೋರ್ಟಲ್ www.eproc.karnataka.gov.in ಮುಖಾಂತರ ಭಾಗವಹಿಸುವುದು.

1. ಟೆಂಡರ್‌ಗಿಟ್ಟ ಮೊತ್ತ: **ರೂ. 96.00 ಲಕ್ಷಗಳು.** 2. ಟೆಂಡರ್ ಫಾರಂ ಡೌನ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: **14–09–2021.** 3. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **25.09.2021 ರ ಸಂಜೆ 5.00 ಗಂಟೆಯವರೆಗೆ.** 4. Technical Bid ನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: **28.09.2021 ಬೆಳಿಗ್ಗೆ 11.30 ಗಂಟೆಗೆ ಉಪನಿರ್ದೇಶಕರ ಕಾರ್ಯಾಲಯ ಕೊಪ್ಪಳ.** 5. Financial Bid ನ್ನು ತೆರೆಯುವ ಸ್ಥಳ ಮತ್ತು ದಿನಾಂಕ: **ತಾಂತ್ರಿಕ ಬಿಡ್ ಸೂಕ್ತ ಪ್ರಾಧಿಕಾರದಿಂದ ಅನುಮೋದಿಸಿದ ನಂತರ ಅರ್ಹತೆ ಪಡೆದ ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ತೆರೆಯುವ ಸ್ಥಳ ಉಪನಿರ್ದೇಶಕರ ಕಛೇರಿ ಕೊಪ್ಪಳ. ದಿನಾಂಕ:–05.10.2021 ಬೆಳಿಗ್ಗೆ: 11.30 ಗಂಟೆ.** 6. ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: **ಉಪನಿರ್ದೇಶಕರು,[ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾಡಳಿತ ಭವನ, 1ನೇ ಮಹಡಿ, ಹೊಸಪೇಟೆ ರಸ್ತೆ, ಕೊಪ್ಪಳ. ದೂ.ಸಂ:08539–221303 Email ID:-ddpi.edu.karkpl @nic.in.** 7. ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ: **www.eproc.karnataka.gov.in Tender Number SSA/KPL/SMARTCLASSSETUP/2021-22/IND325/CALL-3**

ಟೆಂಡರ್ ತಪಶೀಲುಗಳಿಗಾಗಿ NEFT(Online) ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರು ನಿಗಧಿಪಡಿಸಿದ ದಿನಾಂಕಕ್ಕೆ ಸಲ್ಲಿಸಬೇಕಾಗುತ್ತದೆ.

ಸಹಿ/– ಉಪನಿರ್ದೇಶಕರು,[ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/267/ಎಂಸಿಎ/2021–22

ಸೋಲು ಎನ್ನುವುದು ಜಾಣ್ಮೆಯಿಂದ ಕೂಡಿದ ಮತ್ತೊಂದು ಆರಂಭಕ್ಕೆ ಅವಕಾಶ



ಬಹು ಆಯ್ಕೆ ಪ್ರಶ್ನೆ: ಉತ್ತರ ಗುರುತಿಸುವುದು ಹೇಗೆ?

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಹು ಆಯ್ಕೆ ಪ್ರಶ್ನೆ (ಎಂಸಿಕ್ಯೂ) ಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸುವಾಗ ಕೆಲವು ಉಪಾಯಗಳನ್ನು ರೂಢಿ ಮಾಡಿಕೊಳ್ಳಬೇಕು. ಜೊತೆಗೆ ಸಾಮಾನ್ಯ ಜ್ಞಾನವನ್ನು ಬಳಸಿ ಉತ್ತರ ಬರೆಯಬೇಕಾಗುತ್ತದೆ.

ಅದ್ವಿತ್ ಆರ್. ಕೊಪ್ಪಳ

ಯಾವುದೇ ಪರೀಕ್ಷೆಯಿರಲಿ, ನೀವು ಎಷ್ಟೇ ಕಠಿಣ ತಯಾರಿ ನಡೆಸಿದರೂ ಪರೀಕ್ಷೆಯಲ್ಲಿ ನೀವು ಹೇಗೆ ಬರೆಯುತ್ತೀರಿ ಎನ್ನುವುದರ ಮೇಲೆ ನಿಮ್ಮ ಫಲಿತಾಂಶ ನಿರ್ಣಯವಾಗುತ್ತದೆ. ಪರೀಕ್ಷೆಯಲ್ಲಿ ಎದುರಾಗಬಹುದಾದ ಎಲ್ಲಾ ಸಮಸ್ಯೆಗಳನ್ನು ಊಹಿಸಲೂ ಸಾಧ್ಯವಿಲ್ಲ. ಹೀಗಾಗಿ ಎಲ್ಲಾ ತರಹದ ಪರಿಸ್ಥಿತಿಗಳನ್ನು ಎದುರಿಸಲು ಸನ್ನದ್ಧರಾಗಿರಬೇಕು. ಅದರಲ್ಲೂ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಬಹು ಆಯ್ಕೆ ಪ್ರಶ್ನೆ (ಎಂಸಿಕ್ಯೂ) ಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸುವಾಗ ಕೆಲವು ಉಪಾಯಗಳನ್ನು ರೂಢಿ ಮಾಡಿಕೊಳ್ಳಬೇಕು. ಜೊತೆಗೆ ಸಾಮಾನ್ಯ ಜ್ಞಾನವನ್ನು ಬಳಸಿ ಉತ್ತರ ಬರೆಯಬೇಕಾಗುತ್ತದೆ. ಅಂದರೆ ಸಂಬಂಧಪಟ್ಟ ವಿಷಯಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರೂ ಕೂಡ ಈ ಕ್ರಮಗಳನ್ನು ಬಳಸಿದರೆ ಉತ್ತರಿಸುವುದು ಸುಲಭ.

ಮೊದಲು ನೀವು ಅನುಸರಿಸುವ ಮುಖ್ಯವಾದ ಪದ್ಧತಿಯೆಂದರೆ ತಪ್ಪು ಉತ್ತರಗಳನ್ನು ಗುರುತಿಸುವುದು. ಇದರಿಂದ ಆಯ್ಕೆಗಳಲ್ಲಿರುವ ಉತ್ತರಗಳನ್ನು ಎರಡು ಅಥವಾ ಮೂರಕ್ಕೆ ಇಳಿಸಬಹುದು. ಉದಾಹರಣೆಗೆ ಒಂದು ಆಯ್ಕೆ 'ಎಲ್ಲವೂ ಸರಿ' ಅಂತಿದ್ದರೆ ನಿಮಗೆ ತಪ್ಪು ಉತ್ತರಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುತ್ತದೆ. ಅನುಭವಿಗಳ ಪ್ರಕಾರ 'ಎಲ್ಲವೂ ಸರಿ' ಎನ್ನುವ ಉತ್ತರ ಹೆಚ್ಚಾಗಿ ಸರಿಯಾದ ಆಯ್ಕೆ ಆಗಿರುವುದಿಲ್ಲ.

ಈ ಆಯ್ಕೆಗಳಲ್ಲಿ ಗೊಂದಲವಿದ್ದರೆ ನಿಮಗೆ ಯಾವುದು ತಪ್ಪು ಎನಿಸುತ್ತದೆಯೋ ಅದನ್ನು ಬಿಟ್ಟುಬಿಡಿ. ಮುಂದಿನ ಉತ್ತರಕ್ಕೆ ಹೋಗಿ ಪರಿಶೀಲಿಸಿ. ಇದರಿಂದ ಸಮಯ ವ್ಯರ್ಥವಾಗುವುದನ್ನೂ ತಡೆಯಬಹುದು.

ಉತ್ತರಗಳಲ್ಲಿ 'ಈ ಎಲ್ಲವೂ ಸರಿ' ಅಥವಾ 'ಇದ್ಯಾವುದೂ ಅಲ್ಲ' ಎಂದಿದ್ದರೆ ನೀವು ಸರಿಯಾದ ಉತ್ತರವನ್ನು ಗುರುತಿಸುವುದು ಸುಲಭ. ಸಾಮಾನ್ಯವಾಗಿ ಪ್ರಶ್ನೆಗೆ ಇಂತಹ ಉತ್ತರಗಳಿರುವುದು ಅಪರೂಪ. ಆದರೆ ಎಲ್ಲೋ ಕೆಲವೊಮ್ಮೆ ಇದೇ ಆಯ್ಕೆಗಳನ್ನು ಪ್ರಶ್ನೆಪತ್ರಿಕೆಯಲ್ಲಿ ನೀಡಬಹುದು. ಹೀಗಿರುವಾಗ ನೀವು ಪ್ರಶ್ನೆಯನ್ನು ಸರಿಯಾಗಿ ಓದಿಕೊಂಡು ಎಲ್ಲಾ ಆಯ್ಕೆಗಳನ್ನು ಗಮನವಿಟ್ಟು ನೋಡಿ. ಅವು ಪ್ರಶ್ನೆಗಳಿಗೆ ಸಂಬಂಧಿಸಿವೆಯೇ ಅಥವಾ ಇಲ್ಲವೇ ಎಂಬುದನ್ನು ನಿಮ್ಮ ಜಾಣ್ಮೆಯಿಂದಲೇ ಹುಡುಕಿಕೊಳ್ಳಬೇಕಾಗುತ್ತದೆ.

ಉತ್ತರವು ಸಂಖ್ಯೆಯ ಆಧಾರದ ಮೇಲಿದ್ದರೆ ತೀರಾ ವ್ಯತ್ಯಾಸ ಇರುವ ಉತ್ತರವನ್ನು ಆಯ್ಕೆ ಮಾಡಬೇಡಿ. ಅಂದರೆ ಸಣ್ಣ ಸಂಖ್ಯೆಗಳ ಜೊತೆ, ಒಂದೇ ಒಂದು ದೊಡ್ಡ ಸಂಖ್ಯೆಯನ್ನು ಕೊಟ್ಟರೆ ಅದು ಸರಿಯುತ್ತರವಲ್ಲ ಎಂದು ಮೊದಲೇ ನಿರ್ಧರಿಸಿ. ಇದು ಹೆಚ್ಚಿನ ಸ್ಪರ್ಧಾರ್ಥಿಗಳಲ್ಲಿ ಗೊಂದಲ ಸೃಷ್ಟಿಸುತ್ತದೆ. ಸರಿಯುತ್ತರ ಗೊತ್ತಿದ್ದರೂ ತಪ್ಪು ಉತ್ತರವನ್ನು ಗುರುತಿಸಿ ಅಂಕ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಹೀಗಾಗಿ ನೀವು ಎಷ್ಟೇ ಅಭ್ಯಾಸ ಮಾಡಿದ್ದರೂ ಇಲ್ಲಿ ನಿಮ್ಮ ಜಾಣ್ಮೆಯನ್ನು ಬಳಸಿ ಉತ್ತರ ಗುರುತಿಸಬೇಕಾಗುತ್ತದೆ.

ಗಣಿತ, ವಿಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಪ್ರಶ್ನೆಗಳಿದ್ದಾಗ ಖಚಿತವಾದ ಉತ್ತರ ಗೊತ್ತಿರಬೇಕಾಗುತ್ತದೆ. ಯಾವುದೇ ತರಹದ ಊಹೆಯನ್ನು ಮಾಡದೆ ಉತ್ತರ ಗುರುತಿಸುವುದನ್ನು ಅಭ್ಯಾಸದ ಮೂಲಕವೇ ಪಕ್ಕಾ ಮಾಡಿಕೊಳ್ಳಬೇಕು.

ಪ್ರಜಾವಾಣಿ ಉದ್ಯೋಗ ವಾರ್ತೆ

ಯುಪಿಎಸ್‌ಸಿಯಲ್ಲಿ ವಿವಿಧ ಹುದ್ದೆಗಳು ಖಾಲಿ

ಕೇಂದ್ರ ಲೋಕ ಸೇವಾ ಆಯೋಗ (UPSC) ಖಾಲಿ ಇರುವ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಹುದ್ದೆಗಳು: ಡೆಪ್ಯುಟಿ ಸೆಂಟ್ರಲ್ ಇಂಟೆಲಿಜೆನ್ಸ್ ಆಫೀಸರ್, ಸಹಾಯಕ ಪ್ರಾಧ್ಯಾಪಕ (ಕೆಮಿಸ್ಟ್ರಿ), ಸಹಾಯಕ ಪ್ರಾಧ್ಯಾಪಕ (ಎಲೆಕ್ಟ್ರಿಕಲ್ ಎಂಜಿನಿಯರಿಂಗ್), ಸಹಾಯಕ ಪ್ರಾಧ್ಯಾಪಕ (ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಎಂಜಿನಿಯರಿಂಗ್) ಮುಂತಾದವು

ಹುದ್ದೆಗಳ ಸಂಖ್ಯೆ: 28

ಸ್ಥಳ: ಭಾರತದೆಲ್ಲೆಡೆ

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಅಕ್ಟೋಬರ್ 1, 2021

ಹೆಚ್ಚಿನ ಮಾಹಿತಿಗೆ:upsc.gov.in.

ಓದಲೂ ಇದೆ ಸರಿಯಾದ ಕ್ರಮ

ಮನೋಜ್ ಟಿ.ಪಿ.

ಯಾವುದೇ ಸ್ಪರ್ಧಾತ್ಮಕ ಪರೀಕ್ಷೆಯಿರಲಿ, ಓದುವುದು ಹೇಗೆ ಎಂಬುದು ಬಹಳಷ್ಟು ಸ್ಪರ್ಧಾರ್ಥಿಗಳಲ್ಲಿ ಇರುವ ಗೊಂದಲ. ಕೇವಲ ಓದುತ್ತ ಹೋದರೆ ಯಾವುದೇ ರೀತಿಯ ಪ್ರಯೋಜನವಾಗುವುದಿಲ್ಲ ಎಂಬುದು ತಜ್ಞರ ಅಭಿಮತ. ಏಕೆಂದರೆ ಓದುವಾಗ ನಿಮಗೆ ಮಾಹಿತಿ ಅರ್ಥವಾಗುತ್ತದೆ, ಆದರೆ ನೆನಪಿನಲ್ಲಿ ಉಳಿಯುವುದು ಬಹಳ ಕಷ್ಟ. ಹೀಗಾಗಿ ಕೆಲವೊಂದು ಸುಲಭವಾದ ಅಂಶಗಳನ್ನು ಪಾಲಿಸಿದರೆ ಪ್ರತಿಯೊಂದು ಮಾಹಿತಿಯನ್ನು ನೆನಪಿನಲ್ಲಿಟ್ಟುಕೊಂಡು ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನುಗಳಿಸಬಹುದು.



- ಮೊದಲು ಯಾವುದೇ ವಿಷಯವಿರಲಿ, ಅದರ ಶೀರ್ಷಿಕೆ, ಉಪ ಶೀರ್ಷಿಕೆ, ಆರಂಭದ ಮಾಹಿತಿಯನ್ನು ಓದಿಕೊಂಡು ಕೊನೆಯಲ್ಲಿನ ಸಾರಾಂಶದ ಮೇಲೆ ಕಣ್ಣು ಹಾಯಿಸಿ. ಈ ರೀತಿ ಓದಿದಾಗ ನಿಮಗೆ ಆ ವಿಷಯದ ಬಗ್ಗೆ ಒಟ್ಟಾರೆ ತಿಳಿವಳಿಕೆ ಸಿಗುತ್ತದೆ.
- ನಂತರ ಪುನಃ ವಿಷಯದ ಆರಂಭಕ್ಕೆ ಹೋಗಿ. ನಿಧಾನವಾಗಿ ಓದಲು ಶುರು ಮಾಡಿ. ಪ್ರತಿಯೊಂದು ಪ್ಯಾರಾದ ವಾಕ್ಯಗಳನ್ನು ಗಮನಿಸುತ್ತ, ಸಾಧ್ಯವಾದರೆ ಮುಖ್ಯವಾದ ಅಂಶಗಳ ಕೆಳಗೆ ಗೆರೆ ಎಳೆಯುತ್ತ ಹೋಗಿ. ಕೋಷ್ಟಕ, ಚಿತ್ರಗಳು, ಡಯಾಗ್ರಾಮ್‌ಗಳಿದ್ದರೆ ಮೈಂಡ್ ಮ್ಯಾಪಿಂಗ್ ಮೂಲಕ ನೆನಪಿನಲ್ಲಿಟ್ಟುಕೊಳ್ಳಿ.
- ಈ ಹಂತದಲ್ಲಿ ಇಡೀ ಅಧ್ಯಾಯದಲ್ಲಿ ಅಥವಾ ನಿಮಗೆ ಬೇಕಾದ ವಿಷಯದಲ್ಲಿ ಏನೇನಿದೆ ಎಂಬುದು ಗೊತ್ತಿರುತ್ತದೆ. ಈಗ ಸಮಗ್ರ ಅಧ್ಯಾಯವನ್ನು ಓದಲು ಶುರುಮಾಡಿ. ವಿವರಗಳನ್ನು ಹೆಚ್ಚು ಗಮನವಿಟ್ಟು ಓದಿ.
- ಓದಿ ಮುಗಿದ ಮೇಲೆ ಪುಸ್ತಕವನ್ನು ಬದಿಗಿಟ್ಟು, ನೀವು ಓದಿದ ಪ್ರಮುಖ ಅಂಶಗಳನ್ನು ಬರೆಯುತ್ತ ಹೋಗಿ. ಕೆಲವೇ ವಾಕ್ಯಗಳಲ್ಲಿ ಅಥವಾ ಕೆಲವೇ ಶಬ್ದಗಳಲ್ಲಿ ನಿಮ್ಮದೇ ಟಿಪ್ಪಣಿ ಮಾಡಿಕೊಳ್ಳಿ. ಓದಿದ ತಕ್ಷಣ ಟಿಪ್ಪಣಿ ಮಾಡಿಕೊಂಡರೆ ನಿಮಗೆ ಎಲ್ಲವೂ ನೆನಪಿನಲ್ಲಿರುವುದರಿಂದ ವೇಗವಾಗಿ ಟಿಪ್ಪಣಿ ಮಾಡಿಕೊಳ್ಳಬಹುದು. ಅಧ್ಯಯನ ಮಾಡಿದ ವಿಷಯವೂ ಎರಡನೇ ಸಲ ಮನದಟ್ಟಾಗುತ್ತದೆ.
- ಬರೆದ ಎಲ್ಲ ವಿಷಯಗಳನ್ನೂ ಆಗಾಗ ಓದಿಕೊಳ್ಳುತ್ತ ನೆನಪಿನಲ್ಲಿ ಇಟ್ಟುಕೊಳ್ಳಬಹುದು. ನೆನಪಿಗೆ ಬಂದಾಗಲೆಲ್ಲ ಅದರ ವಿಶ್ಲೇಷಣೆ ಮಾಡುತ್ತ ಮುಖ್ಯವಾದ ಅಂಶಗಳನ್ನು ಬೇರೆ ಅಂಶಗಳ ಜೊತೆ ಜೋಡಿಸಿಕೊಂಡು ಇನ್ನಷ್ಟು ಆಳವಾದ ಅಧ್ಯಯನ ನಡೆಸಬಹುದು.
- ಆರೂ ದಿನಗಳ ಕಾಲ ಓದಿಕೊಂಡು ವಾರದ ಕೊನೆಗೆ ಪುನರಾವರ್ತನೆಗೆ ಮೀಸಲಿಡಿ. ಶಾಲೆಯಲ್ಲಾದರೆ ಕಿರು ಪರೀಕ್ಷೆಗಳಿರುತ್ತವೆ. ಆದರೆ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಣಕು ಪರೀಕ್ಷೆಗಳನ್ನು ನೀವೇ ತೆಗೆದುಕೊಳ್ಳಬೇಕಾಗುತ್ತದೆ. ಈ ತರಹದ ಪುನರಾವರ್ತನೆ ಹಾಗೂ ಅಣಕು ಪರೀಕ್ಷೆಗಳು ನೀವು ಎದುರಿಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಲು ನೆರವಾಗುತ್ತವೆ.

ಎಸ್‌ಡಿಎ
ಸಾಮಾನ್ಯ ಕನ್ನಡ ಪರೀಕ್ಷೆ ಮಾದರಿ ಪ್ರಶ್ನೆ

ಭಾಗ- 3

ಕರ್ನಾಟಕ ಲೋಕಸೇವಾ ಆಯೋಗವು ಇದೇ 18ರಂದು ನಡೆಸಲಿರುವ ದ್ವಿತೀಯ ದರ್ಜೆ ಸಹಾಯಕರ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಯ ಕಡ್ಡಾಯ ಭಾಷಾ ಕನ್ನಡ ಪತ್ರಿಕೆಯ ಮಾದರಿ ಪ್ರಶ್ನೆಗಳು ಇಲ್ಲಿವೆ.

ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಇವುಗಳನ್ನು ಗಮನಿಸಿ
1) ಅನುಪ್ರಾಸ 2) ಯಮಕ 3) ಚಿತ್ರಕವಿತ್ವ
ಈ ಕೆಳಗಿನ ಯಾವುದರಲ್ಲಿ ಕಾಣಬಹುದು?
ಎ) ಅರ್ಥಾಲಂಕಾರ ಬಿ) ಶಬ್ದಾಲಂಕಾರ
ಸಿ) ಉಪಮಾಲಂಕಾರ ಡಿ) ಯಾವುದರಲ್ಲಿಯೂ ಅಲ್ಲ

2) 'ಏರು' ಎಂದರೆ ಹತ್ತು ಎಂದರ್ಥ ಹಾಗಾದರೆ 'ಏಱ' ಎಂದರೆ...........
ಎ) ಗಾಯ ಬಿ) ಪ್ರಾರ್ಥನೆ
ಸಿ) ಕತ್ತರಿಸಿ ಬಿಸಾಡು ಡಿ) ಕೆಳಗೆ ಬೀಳು

3) ಕನ್ನಡ ಪದದೊಡನೆ ಸಂಸ್ಕೃತ ಪದ ಸೇರಿಸಿ ಸಮಾಸ ಮಾಡಿದರೆ ಅದನ್ನು ಯಾವ ಸಮಾಸ ಎನ್ನುತ್ತಾರೆ?
ಎ) ಕರ್ಮಧಾರೆಯ ಸಮಾಸ
ಬಿ) ತತ್ಪುರುಷ ಸಮಾಸ
ಸಿ) ಅರಿ ಸಮಾಸ ಡಿ) ಗಮಕ ಸಮಾಸ

4) 'ಪಾಲಿ ಸಂಸ್ಕೃತ ಮತ್ತು ಕನ್ನಡ ಶಾಸನಗಳು' ಎಂಬ ಕೃತಿ ಬರೆದವರು ಮತ್ತು ಕೆಲವು ಕನ್ನಡ ಲಾವಣಿಗಳನ್ನು ಸಂಗ್ರಹಿಸಿ ಇಂಗ್ಲಿಷ್ ಅನುವಾದದೊಡನೆ ಪ್ರಕಟಿಸಿದವರು, ಭಾರತೀಯ ಶಾಸನ ಶಾಸ್ತ್ರ ಪಿತಾಮಹರೆಂದು ಕರೆಸಿಕೊಂಡ ಇಂಗ್ಲಿಷ್ ಅಧಿಕಾರಿ ಯಾರು?
ಎ) ಕಿಟೆಲ್ ಬಿ) ಇ. ಪಿ. ರೈಸ್
ಸಿ) ಜೆ.ಎಫ್. ಫ್ಲೀಟ್ ಡಿ) ಬಿ. ಎಲ್. ರೈಸ್

5) 'ಕೂಷ್ಮಾಂಡ' ಇದರ ತದ್ಭವ ರೂಪವನ್ನು ತಿಳಿಸಿ.
ಎ) ಸಗ್ಗ ಬಿ) ಕಂಬಳ
ಸಿ) ಕುಂಬಳ ಡಿ) ಕೋಳಿ

6) ಇವುಗಳಲ್ಲಿ ಕೇವಲ ವ್ಯಂಜನ ಮಾತ್ರ ಇರುವ ಗುಂಪನ್ನು ಆರಿಸಿ
ಎ) ಅ, ಚ್, ಛ್, ಡ್ ಬಿ) ದ್, ಪ್, ಬ್, ಅಃ
ಸಿ) ಯ್, ಎ, ಈ, ಮ್ ಡಿ) ತ್, ಗ್, ಟ್, ಖ್

7) 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಪ್ರತಿಪಾದಿಸಿದವನು ಯಾರು ?
ಎ) ಭಾಮಹ ಬಿ) ವಾಮನ
ಸಿ) ದಂಡಿ ಡಿ) ಕುಂತಕ

8) 'ಕಾವ್ಯ ಶೋಭಾಕರಾನ್ ಧರ್ಮಾವಲಂಕಾರಾನ್ ಪ್ರಚಕ್ಷತೇ' ಎಂದ ಅಲಂಕಾರಿಕ ಯಾರು ?
ಎ) ವಿಶ್ವನಾಥ ಬಿ) ವಾಮನ
ಸಿ) ದಂಡಿ ಡಿ) ಭಾಮಹ

9) 'ದೋಸ್ತ್' ಇದು ಯಾವ ಭಾಷೆಯ ಮೂಲ ಶಬ್ದವಾಗಿದೆ?
ಎ) ಮರಾಠಿ ಬಿ) ಪೋರ್ಚುಗೀಸ್
ಸಿ) ಸಂಸ್ಕೃತ ಡಿ) ಅರೇಬಿಕ್

10) ಎಸ್.ವಿ. ಪರಮೇಶ್ವರ ಭಟ್ಟರು ಸಂಸ್ಕೃತದ ಈ ಕೆಳಗಿನ ಯಾವ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ?
ಎ) ಕಾಳಿದಾಸನ ಮಹಾಸಂಪುಟ ಬಿ) ಬಾಣನ ಕೃತಿಗಳು
ಸಿ) ಭವಭೂತಿಯ ಸಂಪುಟ ಡಿ) ಯಾವುದೂ ಅಲ್ಲ

11) 'ಯತಿ' ಎಂದರೆ......................
ಎ) ಪದ್ಯವನ್ನು ಓದುವಾಗ ಅರ್ಥಸ್ಫೂರ್ತಿ ಕೆಡದಂತೆ ಪದ್ಯಪಾದದಲ್ಲಿ ನಿಯತವಾದ ಒಂದೆಡೆಯಲ್ಲಿ ನಿಲ್ಲಿಸುವುದು.
ಬಿ) ನಾಟ್ಯವಾಡುವಾಗ ನಿಲ್ಲದೇ ಕುಣಿಯುವುದು.
ಸಿ) ಹಾಸ್ಯಗಾರನ ಹಾಸ್ಯದ ಹೊನಲನ್ನು ಎಡಬಿಡದೇ ಅನುಭವಿಸುವುದು
ಡಿ) ದೇವರ ಧ್ಯಾನವನ್ನು ಮಾಡುವುದು

12) 'ಲಕ್ಷ್ಮಣನು ಮರವನ್ನು ಕಡಿದನು' ಈ ವಾಕ್ಯದಲ್ಲಿ ಕರ್ತೃಪದ ಯಾವುದು?
ಎ) ಲಕ್ಷ್ಮಣ ಬಿ) ಮರ ಸಿ) ಕಡಿದನು
ಡಿ) ಮೇಲಿನ ಯಾವುದೂ ಅಲ್ಲ

13) 'ರಾಮನು ಚೆಂಡನ್ನು ಎಸೆದನು' ಎಂಬ ವಾಕ್ಯದಲ್ಲಿ ಬರುವ ಮೂರು ಪದಗಳ ಪೈಕಿ ಮೊದಲ ಪದವು ಯಾವ ವಿಭಕ್ತಿ ಪ್ರತ್ಯಯವನ್ನು ಒಳಗೊಂಡಿದೆ?
ಎ) ಪ್ರಥಮ ವಿಭಕ್ತಿ ಬಿ) ದ್ವಿತೀಯ ವಿಭಕ್ತಿ
ಸಿ) ಷಷ್ಠಿ ವಿಭಕ್ತಿ ಡಿ) ಸಂಬೋಧನಾ ವಿಭಕ್ತಿ

ಉತ್ತರ: 1)ಬಿ 2)ಎ 3)ಸಿ 4)ಸಿ 5)ಸಿ 6)ಡಿ 7)ಎ 8)ಸಿ 9)ಡಿ 10)ಎ 11)ಎ 12)ಎ 13)ಎ

ಕೆಳಗೆ ಕೊಟ್ಟಿರುವ ನಾಲ್ಕು ಪದಗಳಲ್ಲಿ ಸಮಾನವಾದ ಅಂಶವಿರುವ ಮೂರು ಪದಗಳಿವೆ, ಭಿನ್ನವಾಗಿರುವ ಒಂದು ಪದವಿದೆ ಅದನ್ನು ಗುರುತಿಸಿ

1) ಎ) ಅಕ್ಕಿ ಬಿ) ಗೋಧಿ
ಸಿ) ಕಡಲೆ ಡಿ) ಸಕ್ಕರೆ
2) ಎ) ವೈದೇಹಿ ಬಿ) ಚನ್ನವೀರ ಕಣವಿ
ಸಿ) ಅನುಪಮಾ ಡಿ) ಜೇಡರ ದಾಸಿಮಯ್ಯ
3) ಎ) ಮಹಾತ್ಮ ಗಾಂಧಿ ಬಿ) ಆರ್ಯಭಟ
ಸಿ) ವಿವೇಕಾನಂದ ಡಿ) ಎಸ್. ರಾಧಾಕೃಷ್ಣ
4) ಎ) ಧನ ಬಿ) ದನ
ಸಿ) ಎಮ್ಮೆ ಡಿ) ಕೊಟ್ಟಿಗೆ
5) ಎ) ವಿಶ್ವ ಬಿ) ಗ್ರಹ
ಸಿ) ಗೃಹ ಡಿ) ನಕ್ಷತ್ರ
6) ಎ) ರಾಮ ಬಿ) ಬಲಿ
ಸಿ) ಪರಶುರಾಮ ಡಿ) ಕೃಷ್ಣ
7) ಎ) ಅಗಸ ಬಿ) ಆಕಾಶ
ಸಿ) ಅರಸ ಡಿ) ಸೇವಕ

ಉತ್ತರ: 1)ಡಿ 2)ಡಿ 3)ಬಿ 4)ಎ 5)ಸಿ 6)ಬಿ 7)ಬಿ

ಈ ಗಾದೆಗಳ ಅರ್ಥವನ್ನು ಗ್ರಹಿಸಿ, ಕೇಳಲಾದ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಗುರುತಿಸಿ

1) 'ಮಾತೇ ಮುತ್ತು ಮಾತೇ ಮೃತ್ಯು'
ಎ) ಮಾತು ಸಹಜವಾಗಿರಬೇಕು ಕೃತಕತೆ ಇರಬಾರದು
ಬಿ) ಮಾತು ಸಿಡಿಲಾದರೂ ಗುಡುಗು ಇರಬಾರದು
ಸಿ) ಅಹಿತಕರ ಮಾತು ಅನರ್ಥಕ್ಕೆ ಕಾರಣ
ಡಿ) ಹಿತ ಮಿತವಾದ ಮಾತಿನಿಂದ ದೂರದ ಪ್ರಯಾಣ ಸಹಜವಾಗಿ ಮಾಡಬಹುದು

2) 'ಗಾಳಿ ಬಂದಾಗ ತೂರಿಕೊ' ಎಂದರೆ
ಎ) ತಾನಾಗಿ ಬಂದ ಸುಖ, ಸಂಪತ್ತನ್ನು ದೂರ ಮಾಡಬೇಡ
ಬಿ) ಅವಕಾಶ ಒದಗಿದಾಗ ಕಾರ್ಯ ಸಾಧನೆ ಮಾಡು
ಸಿ) ಕಾಲ ನಮಗಾಗಿ ಕಾಯುವುದಿಲ್ಲ
ಡಿ) ನಾವು ಸಮಯವನ್ನು ಕಾಯುವುದು ಲೇಸು

3) 'ಕೈ ಕೆಸರಾದರೆ ಬಾಯಿ ಮೊಸರು' ಎಂದರೆ
ಎ) ಕೈ ಕೊಳೆಯಾದರೆ ಮಾತ್ರ ಹಾಲು, ಮೊಸರು ಸಿಗುತ್ತದೆ
ಬಿ) ಕಷ್ಟಪಟ್ಟು ದುಡಿದರೆ ಸುಖ ತನ್ನಿಂದ ತಾನೇ ಬರುತ್ತದೆ.
ಸಿ) ಕಷ್ಟಪಟ್ಟಾಗ ಸುಖ ಅಸಹಜ
ಡಿ) ಕೈಗೆ ಕೆಸರು ಮೆತ್ತಿಕೊಂಡಾಗಲೇ ಮೊಸರು ಸಿಗುತ್ತದೆ.

4) 'ಆಕಳು ಕಪ್ಪಾದರೆ ಹಾಲು ಕಪ್ಪೇ' ಎಂದರೆ
ಎ) ಆಕಳು ಕಪ್ಪಾದಷ್ಟು ಹಾಲು ಬೆಳ್ಳಗಿರುತ್ತದೆ.
ಬಿ) ಹೊರ ಜಗತ್ತು ಕಂಡಂತೆ ಒಳ ಜಗತ್ತು ಇರುವುದಿಲ್ಲ.
ಸಿ) ಹೊರಗೆ ಕಪ್ಪಾಗಿ ಕಂಡರೂ ಒಳಗೆ ಖಂಡಿತಾ ಬೆಳ್ಳನೆಯ ವಸ್ತು ಇರುತ್ತದೆ.
ಡಿ) ವ್ಯಕ್ತಿಯ ಬಾಹ್ಯರೂಪ ನೋಡಿ ಅಂತರಂಗ ಅಳೆಯಲು ಸಾಧ್ಯವಿಲ್ಲ.

5) 'ಮಕ್ಕಳಿಲ್ಲದ ಮನೆ, ಒಕ್ಕಲಿಲ್ಲದ ಊರು ಎಕ್ಕಡಕ್ಕಿಂತಲೂ ಕಡೆ' ಎಂದರೆ
ಎ) ಮನೆ ಅಭಿವೃದ್ಧಿಗೆ ಸಂತಾನ ಬೇಕು, ಊರಿನ ಅಭಿವೃದ್ಧಿಗೆ ಕೃಷಿ /ಒಕ್ಕಲುತನ ಬೇಕು. ಅವೇ ಇಲ್ಲವೆಂದರೆ ಬೆಲೆ ಸಿಗಲಾರದು.
ಬಿ) ಮಕ್ಕಳಿದ್ದರೆ ಮನೆ ಚೆಂದ ಒಕ್ಕಲಿದ್ದರೆ ಊರು ಚೆನ್ನ ಎಕ್ಕಡವಿದ್ದರೆ ಕಾಲು ಚೆನ್ನಾಗಿರುತ್ತದೆ
ಸಿ) ಮಕ್ಕಳು ಮತ್ತು ಒಕ್ಕಲು ಊರಿನ ಉದಾರತೆಯ ಸಂಕೇತ
ಡಿ) ಯಾವುದೂ ಅಲ್ಲ

6) 'ಉಂಡದ್ದು ಉಳಿಯದೇ ಹೋದರೂ ಆಡಿದ್ದು ಉಳಿಯುತ್ತದೆ' ಎಂದರೆ
ಎ) ಊಟ ಮಾಡಿದ್ದು ಜೀರ್ಣವಾಗಿ ಹೋಗಬಹುದು, ಆದರೆ ಆಟವಾಡಿದ್ದು ಮಾತ್ರ ಶಾಶ್ವತವಾಗಿ ನೆನಪಿರುತ್ತದೆ.
ಬಿ) ಮಾತು ಶಾಶ್ವತವಾಗಿರದಿದ್ದರೂ ಊಟ ಶಾಶ್ವತ
ಸಿ) ಊಟ ಶಾಶ್ವತವಾಗಿರದಿದ್ದರೂ ಮಾತು ಶಾಶ್ವತವಾಗಿರುತ್ತದೆ. ಹೀಗಾಗಿ ಮಾತನಾಡುವಾಗ ಎಚ್ಚರವಾಗಿರು.
ಡಿ) ಊಟ ಮತ್ತು ಆಟ ಎಚ್ಚರಿಕೆಯಿಂದ ಮಾಡು

7) 'ಚಾಡಿ ಮಾತಿಂದ ಚಾವಡಿ ಹಾಳಾಯ್ತು' ಎಂದರೆ
ಎ) ನಿರ್ಣಯ ನೀಡಬೇಕಾದ ಚಾವಡಿ ಇನ್ನೊಬ್ಬರ ಮಾತು (ಚಾಡಿ ಮಾತು) ಕೇಳಿ ನಿರ್ಣಯ ತೆಗೆದುಕೊಂಡರೆ ಅ ನಿರ್ಣಯವು ಯೋಗ್ಯವಾಗಿರಲಾರದು
ಬಿ) ಬೇರೆಯವರ ಮಾತು ಕೇಳಿ ನಿರ್ಣಯ ನೀಡಿದರೆ ಮನೆತನ ಉದ್ಧಾರವಾಗುವುದು ಆದರೆ ಪಂಚಾಯತಿ ಹಾಳಾಗುವುದು
ಸಿ) ಚಾಡಿ ಮಾತು ನಾಡನ್ನೆಲ್ಲ ಉದ್ಧಾರ ಮಾಡಿತು ಆದರೆ ಮನೆತನವನ್ನಲ್ಲ
ಡಿ) ಊರಿನ ಒಗ್ಗಟ್ಟು ಮುರಿದು ಉತ್ತಮ ಕಾರ್ಯ ಮಾಡಲು ಸಾಧ್ಯವಿಲ್ಲ

ಉತ್ತರ: 1)ಸಿ 2)ಬಿ 3)ಬಿ 4)ಡಿ 5)ಎ 6)ಸಿ 7)ಎ

ಖಾಲಿ ಜಾಗದಲ್ಲಿರಬೇಕಾದ ಸೂಕ್ತ ಪದವನ್ನು ಸಂಕೇತದ ಮೂಲಕ ಗುರುತಿಸಿ.

ಭಾರತದ ಪಕ್ಕದಲ್ಲಿರುವ (1)..... ಬಾಂಗ್ಲಾದೇಶವಾಗಿದೆ. ಇದನ್ನು ಮೊದಲು ಪೂರ್ವ ಪಾಕಿಸ್ತಾನವೆಂದು ಕರೆಯುತ್ತಿದ್ದರು. ಅಲ್ಲಿ 'ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ'ಯ ಖಾಲೀದಾ ಜಿಯಾ ಪ್ರಧಾನಿಯಾಗಿದ್ದರು, ಹಾಗೆಯೇ ಅಲ್ಲಿನ ವಿರೋಧ ಪಕ್ಷದ ಪ್ರಮುಖರೂ ಮಹಿಳೆಯೇ ಆಗಿದ್ದಾರೆ. ಬಾಂಗ್ಲಾ ಮತ್ತು ಭಾರತದ ರಾಷ್ಟ್ರ ಗೀತೆಯನ್ನು ರಚಿಸಿದವರು (2)...... ಎನ್ನುವುದು ವಿಶೇಷ, ಅವರೇ ನಮ್ಮ ಗುರುದೇವ ರವೀದ್ರನಾಥ ಟ್ಯಾಗೋರ್. ಬಾಂಗ್ಲಾದ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತದ ಪಾತ್ರ (3).... . ಭಾರತದ ಉಪಖಂಡದಲ್ಲಿ ವ್ಯಾಪಾರದ ಅಭಿವೃದ್ಧಿಯ (4)..... ಸಾರ್ಕ್ ಸಂಘಟನೆಯ ಸ್ಥಾಪನೆಯಲ್ಲಿ ಬಾಂಗ್ಲಾದೇಶದ ಕೊಡುಗೆ ಅಪಾರ. ಇಂತಹ ಬಾಂಗ್ಲಾದಲ್ಲಿ ಐಎಸ್‌ಐ ಪ್ರೇರಿತ ಉಗ್ರವಾದಿಗಳು ಭಾರತದ ವಿರುದ್ಧ ಚಟುವಟಿಕೆಯನ್ನು ಆರಂಭಿಸಿರುವುದು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ಶಾಂತಿಯ ವಿಷಯಕ್ಕೆ ಸಂಬಂಧಿಸಿದಂತೆ ಆತಂಕವನ್ನು ಉಂಟುಮಾಡಿದೆ.

(1) ಎ) ರಾಜ್ಯವೇ ಬಿ) ದೇಶವೇ
ಸಿ) ರಾಜಧಾನಿಯೇ ಡಿ) ಯಾವುದೂ ಅಲ್ಲ
2) ಎ) ಒಬ್ಬರೇ ಬಿ) ಇಬ್ಬರು
ಸಿ) ಇವರಾರು ಡಿ) ನಾಲ್ವರು
3) ಎ) ದೊಡ್ಡದು ಬಿ) ಚಿಕ್ಕದು
ಸಿ) ಸಣ್ಣದು ಡಿ) ಯಾವುದೂ ಅಲ್ಲ
(4) ಎ) ಸೃಷ್ಟಿಯಿಂದ ಬಿ) ದೃಷ್ಟಿಯಿಂದ
ಸಿ) ವಿಷಯದಿಂದ ಡಿ) ವಿಶಾಲವಾಗಿ

ಉತ್ತರ: 1)ಬಿ 2)ಎ 3)ಎ 4)ಬಿ

ಮಾಹಿತಿ: Spardha Bharati UPSC ಯೂಟ್ಯೂಬ್ ಚಾನೆಲ್

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 60

816. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ ಸಂಕೇತಗಳ ಸಹಾಯದಿಂದ ಉತ್ತರಿಸಿ
ಎ) ಪರಿವರ್ತನಾ ಮಂಡಲ (Troposphere) ವಾಯುಮಂಡಲದ ಅತ್ಯಂತ ಕೆಳಪದರು ಆಗಿದೆ
ಬಿ) ಈ ವಲಯದಲ್ಲಿ ಮಾತ್ರ ಹವಾಮಾನದ ಎಲ್ಲಾ ಬದಲಾವಣೆಗಳು ಕಂಡುಬರುತ್ತವೆ
ಸಿ) ಈ ಮಂಡಲವು ರೇಡಿಯೊ ತರಂಗಗಳನ್ನು ಪುನಃ ಭೂಮಿಯ ಕಡೆಗೆ ಪ್ರತಿಫಲಿಸುತ್ತದೆ
ಸಂಕೇತಗಳು:
ಎ) ಎ ಮಾತ್ರ ಸರಿ ಬಿ) ಎ ಮತ್ತು ಬಿ ಸರಿ
ಸಿ) ಎ ಮತ್ತು ಸಿ ಸರಿ ಡಿ) ಎ, ಬಿ ಮತ್ತು ಸಿ ಸರಿ

817. ಇವುಗಳಲ್ಲಿ ಹಣದುಬ್ಬರ ನಿಯಂತ್ರಣದ ಕ್ರಮ?
ಎ) ತೆರಿಗೆ ಏರಿಸುವುದು
ಬಿ) ಸಾರ್ವಜನಿಕ ವೆಚ್ಚ ಹೆಚ್ಚಿಸುವುದು
ಸಿ) ಸಾರ್ವಜನಿಕ ವೆಚ್ಚ ಕಡಿತಗೊಳಿಸುವುದು
ಡಿ) ಹೆಚ್ಚುವರಿ ಮುಂಗಡ ಪತ್ರ ಮಂಡಿಸುವುದು

818. ಅಂತರರಾಷ್ಟ್ರೀಯ ಹಣಕಾಸು ನಿಗಮ (IFC) ಯಾವಾಗ ಸ್ಥಾಪನೆಯಾಯಿತು?
ಎ) 1976 ಬಿ) 1956 ಸಿ) 1988 ಡಿ) 1993

819. ಅಭಯ್ ಘಾಟ್ ಯಾರಿಗೆ ಸಂಬಂಧಿಸಿದೆ?
ಎ) ಮೊರಾರ್ಜಿ ದೇಸಾಯಿ
ಬಿ) ಚರಣ್ ಸಿಂಗ್
ಸಿ) ಲಾಲ್ ಬಹದ್ದೂರ್ ಶಾಸ್ತ್ರಿ
ಡಿ) ರಾಜೀವ್ ಗಾಂಧಿ

820. ಶಿವಪುರಿ ರಾಷ್ಟ್ರೀಯ ಉದ್ಯಾನ ಇರುವ ರಾಜ್ಯ
ಎ) ಗುಜರಾತ್ ಬಿ) ಉತ್ತರ ಪ್ರದೇಶ
ಸಿ) ಮಧ್ಯಪ್ರದೇಶ ಡಿ) ತೆಲಂಗಾಣ

821. 'ಥಾಲಿ' ಯಾವ ರಾಜ್ಯದ ಜಾನಪದ ನೃತ್ಯ?
ಎ) ಮಣಿಪುರ ಬಿ) ಹಿಮಾಚಲ ಪ್ರದೇಶ
ಸಿ) ಅಸ್ಸಾಂ ಡಿ) ಸಿಕ್ಕಿಂ

822. ನೌಕಾದಳದ ಪ್ರಥಮ ಮುಖ್ಯಸ್ಥ
ಎ) ಜನರಲ್ ಮಾಣಿಕ್ ಶಾ ಬಿ) ಎಸ್.ಮುಖರ್ಜಿ
ಸಿ) ಆರ್.ಡಿ.ಕಟಾರಿ ಡಿ) ಕೆ.ಎಂ.ಕಾರಿಯಪ್ಪ

823. ಭಾರತದ ದೊಡ್ಡ ಸಸ್ಯೋದ್ಯಾನ ಯಾವುದು?
ಎ) ಲಾಲ್‌ಬಾಗ್, ಬೆಂಗಳೂರು
ಬಿ) ಬಟಾನಿಕಲ್ ಗಾರ್ಡನ್, ಊಟಿ
ಸಿ) ರಾಷ್ಟ್ರೀಯ ಸಸ್ಯೋದ್ಯಾನ, ಕೋಲ್ಕತ್ತಾ
ಡಿ) ಪರಾಹತ್ ಗಾರ್ಡನ್, ಉತ್ತರ ಪ್ರದೇಶ

824. ಮ್ಯಾಗ್ಸೆಸ್ಸೆ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ
ಎ) ಆಚಾರ್ಯ ವಿನೋಭಾ ಭಾವೆ
ಬಿ) ಸತ್ಯಜಿತ್ ರೇ
ಸಿ) ದಾದಾಬಾಯಿ ನವರೋಜಿ
ಡಿ) ರವೀಂದ್ರನಾಥ ಟ್ಯಾಗೋರ್

825. SEBI ವಿಸ್ತೃತ ರೂಪ
ಎ) Science and Engineering Board of India
ಬಿ) Securities and Exchange Board of India
ಸಿ) Social Equity Bureau of India
ಡಿ) Science and Educational Council

826. ಭಾರತದ ಅತಿದೊಡ್ಡ ವಾಣಿಜ್ಯ ಬ್ಯಾಂಕ್?
ಎ) Bank of Baroda
ಬಿ) State Bank of India
ಸಿ) ICICI Bank
ಡಿ) Bank of India

827. ಆರ್‌ಬಿಐ ಅನ್ನು ಯಾವಾಗ ಸ್ಥಾಪಿಸಲಾಯಿತು?
ಎ) 1935 ಬಿ) 1920
ಸಿ) 1928 ಡಿ) 1947

828. ಅಡಾಲ್ಫ್ ಹಿಟ್ಲರ್ ಈ ಕೆಳಕಂಡ ಯಾವ ಪಕ್ಷದ ನಾಯಕರಾಗಿದ್ದರು?
ಎ) ಲೇಬರ್ ಪಾರ್ಟಿ
ಬಿ) ನಾಜಿ ಪಕ್ಷ
ಸಿ) ಕು-ಕ್ಲುಕ್ಸ್-ಕ್ಲಾನ್
ಡಿ) ಡೆಮಾಕ್ರಟಿಕ್ ಪಕ್ಷ

829. 'ಕರ್ನಾಟಕ ಸಂಗೀತ ಪಿತಾಮಹ' ಎಂದು ಯಾರನ್ನು ಕರೆಯುತ್ತಾರೆ?
ಎ) ಕನಕದಾಸರು
ಬಿ) ಪುರಂದರದಾಸರು
ಸಿ) ರಾಘವಾಂಕ
ಡಿ) ಕುಮಾರವ್ಯಾಸ

830. 'ಅಂಕಾರಾ' ಯಾವ ದೇಶದ ರಾಜಧಾನಿ?
ಎ) ಉರುಗ್ವೆ ಬಿ) ಟರ್ಕಿ
ಸಿ) ಉಗಾಂಡಾ ಡಿ) ಕಜಕಸ್ತಾನ್

(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 59ರ ಉತ್ತರಗಳು: 801. ಎ, 802. ಎ, 803. ಎ, 804. ಸಿ, 805. ಸಿ, 806. ಸಿ, 807. ಎ, 808. ಡಿ, 809. ಸಿ, 810. ಡಿ, 811. ಎ, 812. ಡಿ, 813. ಸಿ, 814. ಎ, 815. ಬಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ–ಮೇಲ್ : editpage@prajavani.co.in

ಸುಭಾಷಿತ

ಇವನೊಬ್ಬ ಅತ್ಯಂತ ಶ್ರೀಮಂತ ವ್ಯಕ್ತಿಯಾಗಿದ್ದ ಎಂದು ಸತ್ತಾಗ ಅನ್ನಿಸಿಕೊಳ್ಳುವುದು ನನಗೆ ಮುಖ್ಯವಲ್ಲ. ಇಂದು ಅದ್ಭುತವಾದ ಕಾರ್ಯವನ್ನು ಮಾಡಿದೆವು ಎಂಬ ಭಾವನೆ ರಾತ್ರಿ ಮಲಗುವುದಕ್ಕೆ ಮುನ್ನ ನನ್ನಲ್ಲಿ ಮೂಡುವಂತೆ ಆಗುವುದು ನನಗೆ ಮುಖ್ಯ. –ಸ್ಟೀವ್ ಜಾಬ್ಸ್

ಅನಧಿಕೃತ ಪ್ರಾರ್ಥನಾ ಸ್ಥಳಗಳ ತೆರವು ಭಾವನೆ ಕೆರಳಿಸುವ ಮೇಲಾಟ ಸಲ್ಲದು

ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಪ್ರಾರ್ಥನಾ ಮಂದಿರಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದಂತೆ ತೆರವುಗೊಳಿಸುವುದಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ವಿವಾದವು ಸರ್ಕಾರ ಮತ್ತು ಜನಪ್ರತಿನಿಧಿಗಳ ನಡುವೆ ತಾಳಮೇಳ ಇಲ್ಲದಿರುವುದರ ಸ್ಪಷ್ಟ ನಿದರ್ಶನ. ಆತುರದಲ್ಲಿ ಯಾವುದೇ ದೇವಸ್ಥಾನ ಕೆಡವದಿರಿ ಎಂದು ಜಿಲ್ಲಾಧಿಕಾರಿಗಳಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ ನೀಡಿದ್ದಾರೆ. ಧಾರ್ಮಿಕ ಕಟ್ಟಡಗಳನ್ನು ದಿಢೀರ್ ಎಂದು ನೆಲಸಮಗೊಳಿಸುವುದು ಸರಿಯಲ್ಲ ಎಂದು ಕಂದಾಯ ಸಚಿವ ಆರ್. ಅಶೋಕ ಹೇಳಿದ್ದಾರೆ. ಮುಖ್ಯಮಂತ್ರಿ ಮತ್ತು ಸಚಿವರ ಮಾತುಗಳು, ಅನಧಿಕೃತ ಪೂಜಾಸ್ಥಳಗಳನ್ನು ತೆರವುಗೊಳಿಸುವ ಕುರಿತಂತೆ ಸುಪ್ರೀಂ ಕೋರ್ಟ್ ನಿರ್ದೇಶನವನ್ನು ಜಾರಿಗೊಳಿಸುವಲ್ಲಿ ಸರ್ಕಾರಕ್ಕಿರುವ ಇಚ್ಛಾಶಕ್ತಿಯ ಕೊರತೆಯನ್ನು ಸೂಚಿಸುವಂತಿವೆ. 2009ರ ಮೊದಲು ನಿರ್ಮಾಣಗೊಂಡಿರುವ ಎಲ್ಲ ಅನಧಿಕೃತ ಪ್ರಾರ್ಥನಾ ಸ್ಥಳಗಳನ್ನು ಗುರುತಿಸಿ, ಅವುಗಳನ್ನು ತೆರವುಗೊಳಿಸುವ ಬಗ್ಗೆ ನಿರ್ಧಾರ ಕೈಗೊಳ್ಳುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಮಂದಿರ, ಮಸೀದಿ, ಚರ್ಚ್, ಗುರುದ್ವಾರ ಸೇರಿದಂತೆ ಅನಧಿಕೃತವಾಗಿ ನಿರ್ಮಾಣಗೊಂಡ ಎಲ್ಲ ಪೂಜಾಸ್ಥಳಗಳನ್ನು ಗುರುತಿಸಿ ಅವುಗಳನ್ನು ತೆರವುಗೊಳಿಸುವುದು, ಸ್ಥಳಾಂತರಿಸುವುದು ಅಥವಾ ಸಕ್ರಮಗೊಳಿಸುವುದು ರಾಜ್ಯ ಸರ್ಕಾರಗಳ ಜವಾಬ್ದಾರಿ; 2009ರ ನಂತರ ಅಕ್ರಮವಾಗಿ ನಿರ್ಮಾಣಗೊಂಡ ಪೂಜಾಸ್ಥಳಗಳನ್ನು ಕಡ್ಡಾಯವಾಗಿ ತೆರವುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಈ ಆದೇಶ ಪ್ರಕಟಗೊಂಡ ಹನ್ನೊಂದು ವರ್ಷಗಳ ನಂತರವೂ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವುಗೊಳಿಸುವುದಕ್ಕೆ ಆತುರ ಬೇಡ ಎಂದು ಸರ್ಕಾರ ಹೇಳುತ್ತಿದೆ. ಹಾಗಾದರೆ, ಅನಧಿಕೃತ ಪ್ರಾರ್ಥನಾ ಸ್ಥಳಗಳ ಕುರಿತು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಇನ್ನೆಷ್ಟು ಸಮಯ ಬೇಕು? ಅನಧಿಕೃತ ಪೂಜಾಸ್ಥಳಗಳನ್ನು ತೆರವುಗೊಳಿಸುವ ಪ್ರಕ್ರಿಯೆ ಆಮೆವೇಗದಲ್ಲಿ ನಡೆಯುತ್ತಿರುವುದರ ಬಗ್ಗೆ ಹೈಕೋರ್ಟ್ ಕಳವಳ ವ್ಯಕ್ತಪಡಿಸಿತ್ತು. ಆ ಹಿನ್ನೆಲೆಯಲ್ಲಿ, ಪ್ರತೀ ವಾರ ತಮ್ಮ ವ್ಯಾಪ್ತಿಯಲ್ಲಿನ ಒಂದಾದರೂ ಅನಧಿಕೃತ ಪೂಜಾಸ್ಥಳವನ್ನು ತೆರವುಗೊಳಿಸಲು ಸಾಧ್ಯವಾಗುವಂತೆ ಕ್ರಿಯಾ ಯೋಜನೆಯನ್ನು ರೂಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಪತ್ರ ಬರೆದಿದ್ದರು. ಈಗ ವರಸೆ ಬದಲಿಸಿರುವ ಸರ್ಕಾರ, ದೇಗುಲಗಳನ್ನು ತೆರವುಗೊಳಿಸಲು ಆತುರದ ತೀರ್ಮಾನ ಸಲ್ಲದೆಂದು ಹೇಳುತ್ತಿದೆ.

ರಾಜಕೀಯವನ್ನು ಬದಿಗಿಟ್ಟು, ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಲು ಯಾರಿಗೂ ಅವಕಾಶ ಮಾಡಿಕೊಡದಿರುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು

ಸಾರ್ವಜನಿಕ ಸ್ಥಳಗಳಲ್ಲಿರುವ 93 ಧಾರ್ಮಿಕ ರಚನೆಗಳನ್ನು ಗುರುತಿಸಿರುವ ಮೈಸೂರು ಜಿಲ್ಲಾಡಳಿತವು ಅವುಗಳ ತೆರವಿಗೆ ಮುಂದಾಗಿರುವುದು ಮೈಸೂರು–ಕೊಡಗು ಸಂಸದ ಪ್ರತಾಪ ಸಿಂಹ ಅವರಿಗೆ ನಸುಕಿನಲ್ಲಿ ಕಳ್ಳರು ನಡೆಸುವ ಕಾರ್ಯಾಚರಣೆಯಂತೆ ಕಾಣಿಸಿದೆ. ಬರೀ ಮಂದಿರಗಳನ್ನಷ್ಟೇ ನೆಲಸಮಗೊಳಿಸಲಾಗುತ್ತಿದೆ ಎನ್ನುವ ಅವರ ಆರೋಪ ಹಾಗೂ 'ದೇವಸ್ಥಾನಗಳನ್ನು ಉಳಿಸಿ' ಆಂದೋಲನ ಕೈಗೊಳ್ಳುವ ಹೇಳಿಕೆ, ಕೋಮು ಸಾಮರಸ್ಯದ ಜೇನುಗೂಡಿಗೆ ಕಲ್ಲು ಹೊಡೆಯುವ ಪ್ರಯತ್ನವಾಗಿದೆ. ಕೇಂದ್ರ, ರಾಜ್ಯ ಹಾಗೂ ಮೈಸೂರು ಮಹಾನಗರ ಪಾಲಿಕೆ– ಎಲ್ಲೆಡೆಯೂ ಅವರು ಪ್ರತಿನಿಧಿಸುವ ಬಿಜೆಪಿಯೇ ಅಧಿಕಾರದಲ್ಲಿರುವಾಗ 'ದೇವಸ್ಥಾನ ಉಳಿಸಿ' ಆಂದೋಲನವನ್ನು ಯಾರ ವಿರುದ್ಧ ಕೈಗೊಳ್ಳಲಾಗುತ್ತಿದೆ ಎನ್ನುವುದನ್ನು ಸಂಸದರು ಸ್ಪಷ್ಟಪಡಿಸಬೇಕು. ಅದೂ ಅಲ್ಲದೆ, ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಎಲ್ಲ ಧಾರ್ಮಿಕ ರಚನೆಗಳನ್ನೂ ತೆರವು ಮಾಡಲು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಸೂಚಿಸಿದೆ. ಅದರಲ್ಲಿ ಮಂದಿರ, ಮಸೀದಿ, ಚರ್ಚ್ ಹೀಗೆ ಎಲ್ಲವೂ ಸೇರುತ್ತವೆ. ಹೀಗಿರುವಾಗ ದೇವಸ್ಥಾನಗಳನ್ನಷ್ಟೇ ಕೆಡವಲಾಗುತ್ತಿದೆ ಎಂದು ಬಿಂಬಿಸಿ, ಜನರ ಭಾವನೆ ಕೆರಳಿಸುವ ಪ್ರಯತ್ನವು ಸರಿಯಲ್ಲ. ಧಾರ್ಮಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಯಾವುದೇ ಕೋಮನ್ನು ಬೆಂಬಲಿಸುವ ಪ್ರಯತ್ನಗಳಿಂದ ಜನಪ್ರತಿನಿಧಿಗಳು ದೂರವಿರುವುದು ಅವಶ್ಯಕ. ಜನರನ್ನು ಭಾವಾವೇಶಕ್ಕೆ ಸುಲಭವಾಗಿ ಗುರಿಮಾಡುವ ಧರ್ಮದ ವಿಷಯದಲ್ಲಂತೂ ರಾಜಕಾರಣಿಗಳು ಅತೀವ ಸಂಯಮ ಮತ್ತು ವಿವೇಕವನ್ನು ಪ್ರದರ್ಶಿಸಬೇಕು. ಆದರೆ, ಪ್ರಾರ್ಥನಾ ಸ್ಥಳಗಳನ್ನು ತೆರವುಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ರಾಜಕಾರಣಿಗಳ ವರ್ತನೆಗಳು ವಿವೇಚನಾರಹಿತವಾಗಿವೆ ಹಾಗೂ ಬೆಂಕಿಗೆ ತುಪ್ಪ ಸುರಿಯುವ ಪ್ರಯತ್ನಗಳಾಗಿವೆ. ಜನರಿಗೆ ಅಗತ್ಯವಾದ ಮೂಲ ಸೌಕರ್ಯಗಳನ್ನು ಒದಗಿಸುವುದರ ಬಗ್ಗೆ ತಲೆಕೆಡಿಸಿಕೊಳ್ಳದ ರಾಜಕಾರಣಿಗಳಿಗೆ, ಮಂದಿರಗಳ ಅಸ್ತಿತ್ವ ಆದ್ಯತೆಯ ವಿಷಯವಾಗಿರುವುದು ದುರದೃಷ್ಟಕರ. ವಿರೋಧ ಪಕ್ಷಗಳು ಕೂಡ ಈ ಪ್ರಕರಣದಲ್ಲಿ ತಮಗೆ ಆಗಬಹುದಾದ ಲಾಭವನ್ನು ದಕ್ಕಿಸಿ ಕೊಳ್ಳಲು ತುದಿಗಾಲಲ್ಲಿವೆ. ಅನಧಿಕೃತವಾಗಿ ರೂಪುಗೊಂಡ ಪೂಜಾಸ್ಥಳಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ಸಹಜವಾಗಿಯೇ ಸಾರ್ವಜನಿಕರ ಪ್ರತಿರೋಧ ಎದುರಾಗುವುದರಿಂದ, ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಅಗತ್ಯ. ಈ ಕೆಲಸದಲ್ಲಿ ಜಿಲ್ಲಾಡಳಿತದೊಂದಿಗೆ ಜನಪ್ರತಿನಿಧಿಗಳು ಕೂಡ ಪಕ್ಷಾತೀತವಾಗಿ ವರ್ತಿಸಿ, ಸಾರ್ವಜನಿಕರ ಮನವೊಲಿಸಬೇಕಾಗುತ್ತದೆ. ಆದರೆ, ಮೈಸೂರಿನ ಸಂದರ್ಭದಲ್ಲಿ ಜನಪ್ರತಿನಿಧಿಗಳದು ಜನರನ್ನು ಕೆರಳಿಸುವ ವರ್ತನೆಯಾಗಿದೆ.

ಈ ವರ್ಷದ ಜುಲೈ 1ರ ಲೆಕ್ಕಾಚಾರದಂತೆ ರಾಜ್ಯದಲ್ಲಿರುವ ಅನಧಿಕೃತ ಪೂಜಾಸ್ಥಳಗಳ ಸಂಖ್ಯೆ 6,395. ಕಳೆದ ಹನ್ನೆರಡು ವರ್ಷಗಳಲ್ಲಿ ಕರ್ನಾಟಕ ಸರ್ಕಾರ ತೆರವುಗೊಳಿಸಿದ, ಸ್ಥಳಾಂತರಗೊಳಿಸಿದ ಇಲ್ಲವೇ ಸಕ್ರಮಗೊಳಿಸಿದ ಅನಧಿಕೃತ ಪೂಜಾಸ್ಥಳಗಳು 2,887. ಈ ವೇಗದಲ್ಲಿ ಮುಂದುವರಿದರೆ, ಉಳಿದ ಅನಧಿಕೃತ ರಚನೆಗಳ ಬಗ್ಗೆ ಕ್ರಮ ಕೈಗೊಳ್ಳಲು ಕನಿಷ್ಠ ಮತ್ತೊಂದು ದಶಕ ಬೇಕು. ಒಂದೆಡೆ, ಅನಧಿಕೃತ ಆರಾಧನಾಸ್ಥಳಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರ ಹಿಂದೆಮುಂದೆ ನೋಡುತ್ತಿದ್ದರೆ, ಇನ್ನೊಂದೆಡೆ, ಹೊಸ ಪೂಜಾಸ್ಥಳಗಳು ರಸ್ತೆ, ಉದ್ಯಾನ, ಮೈದಾನಗಳಲ್ಲಿ ತಲೆಯೆತ್ತುತ್ತಲೇ ಇವೆ. ಪೂಜಾಕೇಂದ್ರಗಳನ್ನು ನಿರ್ಮಿಸುವ ಮೂಲಕ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸುವ ಕೆಲಸ ನಡೆಯುತ್ತಲೇ ಇದೆ. ಸುಪ್ರೀಂ ಕೋರ್ಟ್ ತೀರ್ಪಿನ ನಂತರವೂ ಸಾವಿರಾರು ಪೂಜಾಸ್ಥಳಗಳ ಅನಧಿಕೃತ ನಿರ್ಮಾಣ ರಾಜ್ಯದಲ್ಲಿ ನಡೆದಿದೆ. ಅವುಗಳನ್ನು ತೆರವುಗೊಳಿಸುವ ದಿಸೆಯಲ್ಲಿ ರಾಜಕೀಯವನ್ನು ಬದಿಗಿಟ್ಟು, ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಲು ಯಾರಿಗೂ ಅವಕಾಶ ಮಾಡಿಕೊಡದಿರುವ ಇಚ್ಛಾಶಕ್ತಿಯನ್ನು ಸರ್ಕಾರ ಪ್ರದರ್ಶಿಸಬೇಕು. ನಿರ್ದಿಷ್ಟ ಕಾಲಮಿತಿಯಲ್ಲಿ ಕ್ರಿಯಾಯೋಜನೆ ರೂಪಿಸಿಕೊಂಡು, ಅನುಷ್ಠಾನಕ್ಕೆ ತಂದಾಗ ಮಾತ್ರ ಸಾರ್ವಜನಿಕ ಸ್ಥಳಗಳ ದುರ್ಬಳಕೆಯನ್ನು ತಪ್ಪಿಸಬಹುದು.

ದಿನದ ಟ್ವೀಟ್

ಉತ್ತಮ ಕಾಮಗಾರಿಗಾಗಿ...

ಸರ್ಕಾರಗಳ ಅನುದಾನಗಳು ಸಮರ್ಪಕವಾಗಿ ಬಳಕೆಯಾಗಬೇಕಾದರೆ ಎಂಜಿನಿಯರ್‌ಗಳು ಶ್ರಮಿಸಬೇಕು. ತಾಂತ್ರಿಕವಾಗಿ ಅವರು ನೀಡುವ ಸಲಹೆಗಳೇ ಕಾಮಗಾರಿಗಳ ಗುಣಮಟ್ಟವನ್ನು ನಿರ್ಧರಿಸುತ್ತವೆ. ಎಲ್ಲರಿಗೂ ಎಂಜಿನಿಯರ್ ದಿನಾಚರಣೆಯ ಶುಭಾಶಯಗಳು.

ಅನಿತಾ ಎಚ್. ಶೆಟ್ಟಿ, ಜಿ.ಪಂ. ಸದಸ್ಯೆ, ದಕ್ಷಿಣ ಕನ್ನಡ

ಕಿಡಿನುಡಿ

ಹೊಸ ಶಿಕ್ಷಣ ನೀತಿಯಲ್ಲಿ ಕೆಲವು ಒಳ್ಳೆಯ ವಿಚಾರಗಳು ಕೂಡ ಇವೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನನ್ನ ಪ್ರಶ್ನೆ ಇಷ್ಟೆ: ನಾವು ಅದಕ್ಕೆಲ್ಲ ತಯಾರಾಗಿದ್ದೀವಾ? ಶಿಕ್ಷಕರು, ಮಕ್ಕಳು, ಮಾನವ ಸಂಪನ್ಮೂಲ ತಯಾರಿದೆಯಾ?

ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ

ಸೋಮವಾರ, 16-9-1996

• ಬದುಕಿನ ಭಾರದಲ್ಲಿ ಹಬ್ಬದ ಹರ್ಷವೆಲ್ಲಿ?– ಗೃಹಿಣಿ ಪ್ರಶ್ನೆ

ಬೆಂಗಳೂರು, ಸೆ. 15– ಹಬ್ಬದ ಕಾಲ ಬಂದಿದೆ. ಶ್ರೀಕೃಷ್ಣ ಜಯಂತಿ ಕಳೆಯಿತು. ಈಗ ಗೌರಿ– ಗಣೇಶನ ಹಬ್ಬ. ಮುಂದೆ ಬರಲಿದೆ ನವರಾತ್ರಿ– ನಾಡಹಬ್ಬ. ದೀಪಾವಳಿಯೂ ದೂರವಿಲ್ಲ. ಹಬ್ಬಕ್ಕೆ ಬೇಕು ವಿಶೇಷ ಅಡುಗೆ, ಮಾಂಸದೂಟ. ಹಬ್ಬ ಬಿಡಿ; ದಿನನಿತ್ಯದ ಬಳಕೆಗೂ ಪಲ್ಯ, ಕೋಸಂಬರಿ, ಅನ್ನ ಸಾರು ಬೇಡವೇ? ಪೂಜೆ ಪುನಸ್ಕಾರಕ್ಕೆ ಸಾಮಗ್ರಿ ಬೇಡವೇ? ಇದಕ್ಕೆಲ್ಲ ಪೆಟ್ಟಿಯಲ್ಲಿ ಗಂಟು ಬಿಚ್ಚಬೇಕು. ಈ ಬಾರಿ ಕಳೆದ ಬಾರಿಗಿಂತ ದೊಡ್ಡ ಗಂಟೇ ಬೇಕು. 'ಪ್ರಜಾವಾಣಿ' ಸಾಮಾನ್ಯ ಜನರನ್ನು ವಿಚಾರಿಸಿದಾಗ ಅವರನ್ನುವ ಪ್ರಕಾರ, ದಿನಸಿ ಪದಾರ್ಥಗಳ ಬೆಲೆ ಕಳೆದ ವರ್ಷಕ್ಕಿಂತ ಶೇ 25ರಷ್ಟು ಏರಿದ್ದರೆ, ತರಕಾರಿ, ಹಣ್ಣು– ಹಂಪಲುಗಳ ಬೆಲೆ ಶೇ 75ರಿಂದ 100ರಷ್ಟು ಏರಿದೆ.

ಆದರೆ ಸರ್ಕಾರದ ಲೆಕ್ಕದ ಪ್ರಕಾರ, ಸಗಟು ಬೆಲೆಗಳು ಏರುತ್ತಿರುವ ಪ್ರಮಾಣ ಅತ್ಯಲ್ಪ.

50 ವರ್ಷಗಳ ಹಿಂದೆ

ಗುರುವಾರ, 16-9-1971

• ವಿದ್ಯಾರ್ಥಿಗಳ ದೂರು ವಿಚಾರಣೆ ಭರವಸೆ

ಬೆಂಗಳೂರು, ಸೆ. 15– ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತದ ಬಗ್ಗೆ ಮಾಡಲಾಗಿರುವ ದೂರುಗಳ ಬಗ್ಗೆ ವಿಚಾರಣೆ ನಡೆಸುವ ಭರವಸೆ ನೀಡಿರುವ ರಾಜ್ಯಪಾಲರು, 'ಮೊದಲು ತರಗತಿಗಳಿಗೆ ಹಿಂತಿರುಗಿ' ಎಂದು ವಿದ್ಯಾರ್ಥಿಗಳಿಗೆ ಸಲಹೆ ಮಾಡಿದ್ದಾರೆ.

ಬೇಡಿಕೆಗಳನ್ನು ಈಡೇರಿಸಿಕೊಳ್ಳಲು 'ಮುಷ್ಕರ ಮಾರ್ಗವಲ್ಲ' ಎಂದು ರಾಜ್ಯಪಾಲರು ವಿದ್ಯಾರ್ಥಿ ನಾಯಕರಿಗೆ ಒತ್ತಿ ಹೇಳಿದರು. ಪುಂಡತನವನ್ನು ಯಾರೂ ಖಂಡಿಸದಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿದರು.

'ವಿದ್ಯಾರ್ಥಿಗಳು ಇದ್ದಕ್ಕಿದ್ದ ಹಾಗೆ ಮುಷ್ಕರ ಹೂಡಬಾರದು. ಸಮಸ್ಯೆಗಳಿಗೆ ಮುಷ್ಕರ ಉತ್ತರವಲ್ಲ ಎಂದು ಹೇಳಿದೆ. ನನ್ನನ್ನಾಗಲೀ ಉಪಕುಲಪತಿಗಳನ್ನಾಗಲೀ ಭೇಟಿ ಮಾಡಬಹುದಾಗಿತ್ತು. ಅಸ್ಪಷ್ಟ ಆಪಾದನೆಗಳನ್ನು ಮಾಡಿ ಪ್ರಯೋಜನವಿಲ್ಲ. ಅವು ನಿರ್ದಿಷ್ಟವಾಗಿರಬೇಕು ಎಂದು ಹೇಳಿದೆ' ಎಂದು ರಾಜ್ಯಪಾಲರು ವರದಿಗಾರರಿಗೆ ತಿಳಿಸಿದರು.

ನೆಲದ ದನಿಗೆ ಕಿವಿಗೊಡುವ, ನೊಂದವರಿಗೆ ನೆರಳಾಗುವ ಹೃದಯವಂತಿಕೆ ತೋರಲಿ ಬೊಮ್ಮಾಯಿ

ಚರಿತ್ರೆ ಸೃಷ್ಟಿಸೋ ಅವಕಾಶ

ಗತಿಬಿಂಬ

ವೈ.ಗ.ಜಗದೀಶ್

ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವ ಸವಾಲಿನೊಂದಿಗೆ ಮುಖ್ಯಮಂತ್ರಿ ಗಾದಿಗೇರಿರುವ ಬಸವರಾಜ ಬೊಮ್ಮಾಯಿ ಅವರ ಸತ್ವಪರೀಕ್ಷೆಗೆ ಹೆಚ್ಚು ಕಾಲವೇನೂ ಇಲ್ಲ. ಆರು ತಿಂಗಳು 'ಮಧುಚಂದ್ರ'ದ ಅವಧಿಯೆಂದು ಅವರು ಸುಮ್ಮನೆ ಕಾಲ ತಳ್ಳಲಾಗದು. ಅಧಿಕಾರ ಹಿಡಿದ ಮೊದಲ ದಿನದಿಂದಲೇ ಸರ್ಕಾರವನ್ನು ಹಳಿಗೆ ತರುವ ಜವಾಬ್ದಾರಿ ಅವರ ಹೆಗಲಿಗೆ ಬಿದ್ದಿದೆ. ಹಿಡಿತ ತಪ್ಪದ ಮಾತುಗಾರಿಕೆ, ಸರಳತೆಯಿಂದಾಗಿ ತಿಂಗಳೊಪ್ಪತ್ತಿನಲ್ಲಿ ಸರ್ಕಾರಕ್ಕೆ ವರ್ಚಸ್ಸು ತಂದು ಕೊಡುವತ್ತ ಹೆಜ್ಜೆ ಇಟ್ಟಿದ್ದಾರೆ.

ಆದರೆ, ಬರೀ ಚೆಂದದ ಮಾತುಗಳು ಹೊಟ್ಟೆ ತುಂಬಿಸುವುದಿಲ್ಲ; ಬದುಕೇ ಬೇಡವೆನ್ನುವಷ್ಟು ಬವಣೆಯಲ್ಲಿ ಬೇಯುತ್ತಿರುವ ಶ್ರಮಿಕ ಸಮುದಾಯದವರಲ್ಲಿ ವಿಶ್ವಾಸವನ್ನೂ ತರುವುದಿಲ್ಲ. ಹೊಟ್ಟೆ ತುಂಬಿದ ಮಂದಿಯ ಮೆಚ್ಚುಗೆಗಷ್ಟೇ ಇದು ಸೀಮಿತವಾಗುತ್ತದೆ. ಮಾತಿನಲ್ಲಿ ಕಟ್ಟಿದ ಗೋಪುರ ಹೆಚ್ಚುಕಾಲ ಬಾಳುವುದೂ ಇಲ್ಲ.

ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ, 'ಮಾತನಾಡುವುದೇ ಸಾಧನೆಯಾಗಬಾರದು; ಸಾಧನೆಗಳೇ ಮಾತನಾಡಬೇಕು' ಹಾಗೂ 'ಕೊಟ್ಟ ಕುದುರೆಯನೇರಲರಿಯದವರು ವೀರರೂ ಅಲ್ಲ, ಶೂರರೂ ಅಲ್ಲ, ಧೀರರೂ ಅಲ್ಲ' ಎಂದು ಹೋದಲ್ಲಿ– ಬಂದಲ್ಲಿ ಹೇಳುತ್ತಲೇ ಇದ್ದರು. ಅದು ಅವರ ಆಚರಣೆಯಲ್ಲಿ ಕಾಣಲಿಲ್ಲ. ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು, ಬೊಮ್ಮಾಯಿ ಅವರನ್ನು ಕರೆದು ಕುದುರೆಯನ್ನು ಕೊಟ್ಟಿದ್ದಾರೆ. ಏಕೆಂದರೆ, ಯಡಿಯೂರಪ್ಪನವರ ಆಡಳಿತದ ತೇರಿಗೆ ಪದೇಪದೇ ಅಡೆತಡೆ ಹಾಕುವವರು ಇದ್ದರು. ಹಾಗಾಗಿ, ಅವರ ಕುದುರೆಯೂ ಓಡಲಿಲ್ಲ; ತೇರೂ ಮುಂಚಲಿಸಲಿಲ್ಲ. ಬೊಮ್ಮಾಯಿ ಅವರಿಗೆ ಮೋದಿ– ಶಾ ಶ್ರೀರಕ್ಷೆ ಇದೆ. ಸರ್ಕಾರವನ್ನು ಸಾಂಗವಾಗಿ ನಡೆಸುವಷ್ಟು ಶಾಸಕರ ಬಲವೂ ಇದೆ. ಶಾಸಕರು ಕೈಕೊಟ್ಟರೆ ಕೈ ಹಿಡಿಯಲು ದೇವೇಗೌಡರಿದ್ದಾರೆ. ಹೀಗಂದ ಮೇಲೆ, ಚರಿತ್ರೆಯನ್ನು ಸೃಷ್ಟಿಸುವ ವಿಶಾಲ ಅವಕಾಶವೂ ಇದೆ.

ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರು ಭ್ರಷ್ಟಾಚಾರವನ್ನು ತೊಡೆದುಹಾಕುವ ಸಂಕಲ್ಪಬಲದಲ್ಲಿ ದೇಶಕ್ಕೆ ಮಾದರಿಯಾದ ಲೋಕಾಯುಕ್ತ ರಚಿಸಿದರು. ಆದರೆ, ಅವರ ಕಾಲದಲ್ಲಿ ಭ್ರಷ್ಟಾಚಾರದ ಹಗರಣಗಳು ನಡೆದಿದ್ದವು ಎಂಬುದನ್ನು ಮರೆಯಲಾಗದು. ಆದರೆ, ಲೋಕಾಯುಕ್ತವು ಕರ್ನಾಟಕದ ಹೆಮ್ಮೆಯ ಸಂಸ್ಥೆ ಆಗಿದ್ದು, ಮುಖ್ಯಮಂತ್ರಿ, ಮಂತ್ರಿಗಳನ್ನೂ ಬಿಡದೆ 'ಸ್ವಚ್ಛ' ಗೊಳಿಸುವ ಕೈಂಕರ್ಯ ಮಾಡಿದ ಕಾರಣಕ್ಕೆ, ಅದೇ ಭಯದಿಂದಲೋ ಏನೋ ಸಿದ್ದರಾಮಯ್ಯ, ಲೋಕಾಯುಕ್ತಕ್ಕೆ ಪರ್ಯಾಯವಾಗಿ ಭ್ರಷ್ಟಾಚಾರ ನಿಗ್ರಹ ದಳ ಸ್ಥಾಪಿಸಿ, ಲೋಕಾಯುಕ್ತದ ಹಲ್ಲು, ಬಾಯಿ, ಕೋರೆ ಎಲ್ಲವನ್ನೂ ಕಿತ್ತು ಸತ್ತ ಮೊಸಳೆಯಾಗಿಸಿದರು.

ಹೆಗಡೆ ಸಮಕಾಲೀನರಾದ ಎಸ್.ಆರ್.ಬೊಮ್ಮಾಯಿ ಅವರ ಮಗನಾದ ಬಸವರಾಜ ಬೊಮ್ಮಾಯಿ, ಆ ತಲೆಮಾರಿನ ರಾಜಕೀಯದ ಮೌಲ್ಯಗಳನ್ನು ಹತ್ತಿರದಿಂದ ಬಲ್ಲವರು. ಬಡತನ, ಬರ, ನಿರುದ್ಯೋಗದಷ್ಟೇ ನಾಡನ್ನು ಸುಡುತ್ತಿರುವುದು ಭ್ರಷ್ಟಾಚಾರ. ಇದನ್ನು ಬೇರು ಸಮೇತ ಕಿತ್ತೊಗೆಯಬೇಕು ಎಂಬುದು ಕೇವಲ ಬಯಕೆಯಾಗಿ ಉಳಿದೀತು. ಆದರೆ, ಜನಪ್ರತಿನಿಧಿಗಳು, ಅಧಿಕಾರಶಾಹಿಯ ಕೊಡುಕೊಳುವಿಕೆಯಲ್ಲಿ ಹೆಮ್ಮರವಾಗಿ ಬೆಳೆದಿರುವ ಭ್ರಷ್ಟಾಚಾರವನ್ನು ನಿಯಂತ್ರಿಸಲು ಲೋಕಾಯುಕ್ತವನ್ನು ಮತ್ತೆ ಬಲಗೊಳಿಸಲೇಬೇಕಾದ ತುರ್ತಂತೂ ಇದೆ. ದೊಡ್ಡ ಯೋಜನೆಗಳನ್ನು ಕೈಗೊಂಡು ಅಭಿವೃದ್ಧಿಯ ನವ ಕರ್ನಾಟಕ ನಿರ್ಮಿಸುವುದು ಅಪಾರ ಸಂಪನ್ಮೂಲವನ್ನು ಬೇಡುತ್ತದೆ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಲೋಕಾಯುಕ್ತ ಬಲಗೊಳಿಸುವುದಕ್ಕೆ ಸಂಕಲ್ಪಶಕ್ತಿಯೊಂದೇ ಸಾಕಾಗುತ್ತದೆ. ಆ ದಿಸೆಯಲ್ಲಿ ಬೊಮ್ಮಾಯಿ ದಿಟ್ಟ ಹೆಜ್ಜೆ ಇಟ್ಟರೆ ಚರಿತ್ರೆ ಸೃಷ್ಟಿಸಲು ಮುಂದಡಿ ಇಟ್ಟಂತಾಗುತ್ತದೆ.

ಮೌಲ್ಯಾಧಾರಿತ ರಾಜಕಾರಣ ಎಂಬ ಮಾತು ಹೆಗಡೆಯವರ ಕಾಲದಲ್ಲಿ ಹೆಚ್ಚು ಚಾಲ್ತಿಯಲ್ಲಿತ್ತು. ಈಗ ಹುಸಿ ಶಬ್ದಗಳ ಅಬ್ಬರದಲ್ಲಿ ಮಾತಿನ ಮೌಲ್ಯವೇ ಕಳೆದು ಹೋಗಿದೆ. ಮೌತಿಗೆ ಮೌಲ್ಯ, ಘನತೆ ಮತ್ತು ವಿಶ್ವಾಸಾರ್ಹತೆ ತರಲು ಬೊಮ್ಮಾಯಿ ಅವರು ಮುನ್ನುಡಿ ಬರೆಯಬೇಕಿದೆ.

ಹೆಗಡೆ ನೇತೃತ್ವದ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಅಬ್ದುಲ್ ನಜೀರ್‌ಸಾಬ್ ಅವರು ಅಧಿಕಾರ ವಿಕೇಂದ್ರೀಕರಣದ ಮೊದಲ ಪಾಠವನ್ನು ದೇಶಕ್ಕೆ ಕಲಿಸಿದರು. ಪಂಚಾಯತ್ ರಾಜ್ ವ್ಯವಸ್ಥೆಯ ಹೊಸ ಮಾದರಿಯನ್ನು ಸೃಜಿಸಿದರು. ಸಿದ್ದರಾಮಯ್ಯನವರು ಕೆ.ಆರ್.ರಮೇಶ್ ಕುಮಾರ್ ನೇತೃತ್ವದ ಸಮಿತಿ ರಚಿಸಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸಬಲಗೊಳಿಸುವ ಮಹತ್ವದ ಹೆಜ್ಜೆಯನ್ನೂ ಇಟ್ಟರು. ನಂತರ ಬಂದವರು ಅದನ್ನು ಜಾಳುಗೊಳಿಸಿ ಹಾಳು ಮಾಡಿದರು. ಮತ್ತೆ ಅದಕ್ಕೆ ಪುನರುಜ್ಜೀವ ಕೊಡಬೇಕಾದ ಹೊಣೆ ಬೊಮ್ಮಾಯಿ ಅವರ ಮೇಲಿದೆ.

ನೆರೆಯ ತಮಿಳುನಾಡಿನಲ್ಲಿ ಎಂ.ಕರುಣಾನಿಧಿ ಅವರ ಮಗ ಎಂ.ಕೆ.ಸ್ಟಾಲಿನ್ ಮುಖ್ಯಮಂತ್ರಿ. ಬೊಮ್ಮಾಯಿ ಅವರಿಗಿಂತ ಕೆಲವೇ ತಿಂಗಳ ಮೊದಲು ಈ ಹುದ್ದೆ ಹಿಡಿದ ಸ್ಟಾಲಿನ್ ಅನೇಕ ಸುಧಾರಣೆಗಳನ್ನು ತರುತ್ತಿದ್ದಾರೆ. ಮಗ್ಗುಲಿನ ರಾಜ್ಯದಲ್ಲಿ ನಡೆಯುತ್ತಿರುವ ಸುಧಾರಣೆಗಳತ್ತ ಗಮನಹರಿಸಿದರೆ ಬೊಮ್ಮಾಯಿ ಅವರಿಗೆ ಹೊಸ ಹೊಳಹುಗಳು ಹೊಳೆಯಲಂತೂ ಸಾಧ್ಯವಿದೆ.

ಕನ್ನಡ ಅನ್ನದ ಭಾಷೆಯಾಗಬೇಕು ಎಂಬ ಬೇಡಿಕೆ ಹಳೆಯದು. ಸರ್ಕಾರಿ ಶಾಲೆಗಳನ್ನು ಮೇಲ್ದರ್ಜೆಗೇರಿಸುವ, ಅಲ್ಲಿ ಕಲಿತವರಿಗೆ ಉದ್ಯೋಗ ಪಕ್ಕಾ ಎಂಬ ವಾತಾವರಣ ಸೃಷ್ಟಿ ಮಾಡಬೇಕಿದೆ. ಅದಕ್ಕೇನೂ ಗುಜರಾತಿಗೋ ಉತ್ತರಪ್ರದೇಶಕ್ಕೋ ಹೋಗಬೇಕಿಲ್ಲ; ಮುಖ್ಯಮಂತ್ರಿ ತಮ್ಮ ವರಿಷ್ಠರನ್ನು ನೋಡಲು ಆಗಾಗ ದೆಹಲಿಗೆ ಹೋದಾಗಲೆಲ್ಲ ಅಲ್ಲಿನ ಶಾಲೆಗಳ ಕಡೆ ಒಮ್ಮೆ ಇಣುಕಿ ಬಂದರೆ, ಶಿಕ್ಷಣ ವ್ಯಾಪಾರೀಕರಣದಿಂದಾಗಿ ಕತ್ತಲಲ್ಲೇ ದಿಕ್ಕೆಟ್ಟು ಕುಳಿತಿರುವ ಕನ್ನಡದ ಮಕ್ಕಳ ಕಡೆಗೆ ಅರಿವಿನ ಕೋಲ್ಮಿಂಚಾದರೂ ಕಾಣಿಸೀತು.

ಪ್ರತಿನಿತ್ಯ ಜನರಿಂದ ಅಹವಾಲು ಸ್ವೀಕರಿಸುವ ಕೆಲಸವನ್ನು ಬೊಮ್ಮಾಯಿ ಮಾಡುತ್ತಿದ್ದಾರೆ. ಕಲಬುರ್ಗಿ, ಬಾಗಲಕೋಟೆಯಂತಹ ದೂರದೂರಿನಿಂದ, ಪಡಿತರ ಚೀಟಿ ಸಿಕ್ಕಿಲ್ಲ, ಮನೆ ಬಿದ್ದುದಕ್ಕೆ ಪರಿಹಾರ ಸಿಕ್ಕಿಲ್ಲ ಎಂದು ದೂರು ಹೊತ್ತು ಬರುವ ಬಡವರ ಕಷ್ಟ ಆಲಿಸುತ್ತಿದ್ದಾರೆ. ಮುಖ್ಯಮಂತ್ರಿಯೇ ಇಂತಹದನ್ನೆಲ್ಲ ಮಾಡುತ್ತಾ ಕೂರುವುದಾದರೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ವ್ಯವಸ್ಥೆಗಳೆಲ್ಲ ಏಕಿರಬೇಕು? 75 ವರ್ಷ ಕಳೆದರೂ ನೆಟ್ಟಗೆ ಒಂದು ಪಡಿತರ ಚೀಟಿ ಪಡೆಯುವ, ಹುಟ್ಟಿದ ಮೇಲೆ ಎಂದೂ ಬದಲಾಗದ ಜಾತಿ ದೃಢೀಕರಣವನ್ನು ಪದೇಪದೇ ಪಡೆಯಬೇಕಾದ ಪಡಿಪಾಟಲು ನಿವಾರಿಸಲಾಗದ ಸರ್ಕಾರ ಇದ್ದರೆಷ್ಟು ಬಿಟ್ಟರೆಷ್ಟು? ಇದಕ್ಕೆಲ್ಲ ಶಾಶ್ವತ ವ್ಯವಸ್ಥೆಯೊಂದನ್ನು ಮಾಡಿದರೆ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿದ್ದಕ್ಕೆ ಜನ ಕೃತಾರ್ಥರಾದಾರು!

ಮಾಧ್ಯಮವೊಂದರ ಸಂವಾದದಲ್ಲಿ ಪಾಲ್ಗೊಂಡ ಬೊಮ್ಮಾಯಿ ಅವರು ಇಬ್ಬರು ಮಕ್ಕಳನ್ನು ಕಳೆದುಕೊಂಡು ಕಣ್ಣೀರಿಡುತ್ತಿದ್ದ ತಾಯಿಯೊಬ್ಬರಿಗೆ 'ಇಬ್ಬರು ಮಕ್ಕಳು ಹೋದರೆಂದು ಬೇಸರ ಪಟ್ಟುಕೊಳ್ಳ ಬೇಡ. ನಾನೂ ನಿನ್ನ ಮಗನೇ' ಎಂದು ಧೈರ್ಯ ತುಂಬಿದ್ದರು. ಇದು ಕೇವಲ ಬೊಮ್ಮಾಯಿ ಅವರ ಭಾವನೆ ಯಾದರೆ ಸಾಲದು. ನಾಡಿನ ಪ್ರತಿಯೊಬ್ಬ ಅಮ್ಮನಲ್ಲೂ 'ನನಗೊಬ್ಬ ಮಗನಿದ್ದಾನೆ' ಎಂಬ ವಿಶ್ವಾಸ ಮೂಡಿಸುವ ಕೆಲಸ ಕಾಯಕದ ಮೂಲಕವೇ ಆಗಬೇಕಿದೆ. ಶಾಸಕನಿಷ್ಠ ಮುಖ್ಯಮಂತ್ರಿ ಆಗುವ ಬದಲು ಜನನಿಷ್ಠ ಮುಖ್ಯಮಂತ್ರಿಯಾದರೆ, ಪ್ರತಿಯೊಬ್ಬರಲ್ಲೂ ಈ ಥರನ ಭರವಸೆ ಹುಟ್ಟೀತು.

ಕೊನೆಯದಾಗಿ; ಹೆಸರು ಬದಲಾವಣೆಯ ಸದ್ದು ದೊಡ್ಡದಾಗಿದೆ. ಇಂತಹ ಕ್ಷುಲ್ಲಕ ರಾಜಕಾರಣಕ್ಕೆ ಸೊಪ್ಪು ಹಾಕಬೇಕಿಲ್ಲ. ಇಂದಿರೆಯ ಅಥವಾ ಅನ್ನಪೂರ್ಣೇಶ್ವರಿಯ ಹೆಸರಿದ್ದರೂ ಅಲ್ಲಿ ಸಿಗುವ ಊಟವೊಂದೇ. ಮಳೆ ಬಂದಾಗ ಓಡಿ ಹೋಗಿ ಮರದ ಕೆಳಗೆ ನಿಲ್ಲುವವನು ಅದು ಯಾವ ಜಾತಿಯ ಮರವೆಂದು ನೋಡುವುದಿಲ್ಲ; ಹಸಿದವನು ತನ್ನ ಒಡಲ ಸಂಕಟ ನೀಗಲು ಅದು ಇಂದಿರಾ ಕ್ಯಾಂಟೀನೊ, ಸಿ.ಟಿ.ರವಿ ಕ್ಯಾಂಟೀನೊ ಎಂದು ನೋಡುವುದಿಲ್ಲ. ಅಂತಹ ರಗಳೆಗಳೆಲ್ಲ ಹೊಟ್ಟೆ ತುಂಬಿದವರ ಉಸಾಬರಿ. ಜನ ನಿಜಕ್ಕೂ ಹಾಗೆ ನೋಡಿದ್ದರೆ, ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್ ಕೊಟ್ಟ ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲುತ್ತಿರಲಿಲ್ಲ; ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರುತ್ತಿತ್ತು. ವಿವಾದದ ಬೆಂಕಿಯಲ್ಲಿ ಮೈ ಕಾಯಿಸಿಕೊಳ್ಳುವುದಕ್ಕಿಂತ ಚಳಿಯಲ್ಲಿ, ಹಸಿವಿನಲ್ಲಿ ಕಂಗೆಟ್ಟವರನ್ನು ಬೆಚ್ಚಗೆ, ನೆಮ್ಮದಿಯಿಂದ ಇಡುವುದು ಹೇಗೆಂದು ಚಿಂತಿಸುವುದು ಮುಖ್ಯಮಂತ್ರಿಯ ಆದ್ಯತೆಯಾಗಲಿ. ನೆಲದ ದನಿ ಕೇಳಿಸುವ ಆರ್ದ್ರತೆಯನ್ನು ತೋರಲಿ.

ಚುರುಮುರಿ

ಕಲಾಪದ ಕಿಕ್‌ಬ್ಯಾಕ್

• ಮಣ್ಣೆರಾಜು

'ವಿಧಾನಮಂಡಲ ಅಧಿವೇಶನಕ್ಕೆ ಎತ್ತಿನಗಾಡಿಯಲ್ಲಿ ಬಂದ ಕಾಂಗ್ರೆಸ್ ಶಾಸಕರನ್ನು ಆಡಳಿತ ಪಕ್ಷದವರು ಬಂದು ಸ್ವಾಗತಿಸುವ ಸೌಜನ್ಯ ತೋರಿಸಲಿಲ್ಲವಲ್ಲಾರೀ...' ಅಂದಳು ಸುಮಿ.

'ಆರತಿ ಎತ್ತಿ ಬರಮಾಡಿಕೊಳ್ಳಲು ಅದೇನು ಮದುವೆ ದಿಬ್ಬಣವೇ? ಹೇಳಿಕೇಳಿ ಅವರು ವಿರೋಧ ಪಕ್ಷದವರು. ಸರ್ಕಾರದ ಚಳಿ ಬಿಡಿಸಲು ಚಳವಳಿ ಮಾಡುವವರನ್ನು ಬರಮಾಡಿಕೊಂಡು ಬಾಗಿನ ಕೊಡಬೇಕಾಗಿತ್ತಾ?' ಅಂದ ಶಂಕ್ರಿ.

'ದಿನಬಳಕೆ ಪದಾರ್ಥಗಳ ಬೆಲೆ ಹೆಚ್ಚಾಗಿ ನಮ್ಮಂಥವರು ಜೀವನ ಮಾಡೋದು ಕಷ್ಟ ಆಗಿದೆ. ಸೇವ್ ಪೆಟ್ರೋಲ್, ಸೇವ್ ಪೀಪಲ್ ಎಂದು ಅವರು ನಮ್ಮ ಪರವಾಗಿ ಎತ್ತಿನಗಾಡಿ ಹೋರಾಟ ಮಾಡಿದ್ರು ಕಣ್ರೀ'.

'ಹೌದು, ಪದಾರ್ಥಗಳ ಬೆಲೆ ಇಳಿಸಿ, ಪರದಾಡುತ್ತಿರುವ ಜನರನ್ನು ಉಳಿಸಿ ಅಂತ ವಿಪಕ್ಷದವರು ಸರ್ಕಾರದ ಬೆವರು ಇಳಿಸಲು ಕಲಾಪ ಕದನ ಶುರು ಮಾಡಿದ್ದಾರೆ. ಏನೇನು ಇಳಿಯುತ್ತದೋ ಕಾದು ನೋಡೋಣ...'

'ಮೊದಲು ಗ್ಯಾಸ್ ಸಿಲಿಂಡರ್ ಬೆಲೆ ಇಳಿಸಿ ಅಡುಗೆಮನೆ ಕಷ್ಟ ನಿವಾರಣೆ ಮಾಡಲಿ'.

'ಅದಕ್ಕೋಸ್ಕರ ಖಾಲಿ ಸಿಲಿಂಡರ್ ಪ್ರದರ್ಶಿಸಿ ಹೋರಾಟ ಮಾಡಿದರು, ಕಾಂಗ್ರೆಸ್ ನಾಯಕರು ಅಡುಗೆ ಮನೆಯಿಂದಲೇ ಟ್ವೀಟ್ ಟೀಕೆ ಮಾಡಿದ್ರು. ಈಗ ಭ್ರಷ್ಟಾಚಾರ ಇಷ್ಟಾಚಾರಗಳ ವಿರುದ್ಧ ಕಲಾಪದಲ್ಲಿ ಸರ್ಕಾರಕ್ಕೆ ಕಿಕ್‌ಬ್ಯಾಕ್ ನೀಡುತ್ತಾರಂತೆ'.

'ಕಿಕ್‌ಬ್ಯಾಕ್ ಅಂದ್ರೆ ಲಂಚವೋ ತಿರುಗೇಟೊ?'

'ಅವರವರ ಭಾವಕ್ಕೆ, ಅವರವರ ಅನುಭವಕ್ಕೆ ತಕ್ಕಂತೆ ಕಿಕ್‌ಬ್ಯಾಕ್‌ಗೆ ಅಪಾರ್ಥ, ಅಪಾರ ಅರ್ಥಗಳಿವೆ. ಇದೆಲ್ಲವನ್ನೂ ಕಂಟ್ರೋಲ್ ಮಾಡಬೇಕಾಗಿದ್ದ ಕಾನೂನು, ಜಾರಿಯಾಗಬೇಕಾದ ಕಡೆಗಳಲ್ಲಿ ಜಾರಿ-ಹೋಗ್ತಿದೆಯಂತೆ. ಸರ್ಕಾರವನ್ನು ಸರಿದಾರಿಗೆ ತಂದು ಸರಿಮಾಡೋವರೆಗೂ ಹೋರಾಟ ನಿಲ್ಲಿಸುವುದಿಲ್ಲ ಅಂತ ವಿಪಕ್ಷ ನಾಯಕರು ಹೇಳಿಕೊಂಡಿದ್ದಾರೆ'.

'ಏನೋ, ಒಳ್ಳೆಯದಾದರೆ ಸಾಕು. ಆಡಳಿತ- ವಿಪಕ್ಷದ ಕಲಾಪ ಕದನವು ಅಕ್ಕಪಕ್ಕದ ಮನೆಯವರಿಗೆ ಮನರಂಜನೆ ನೀಡುವ ಗಂಡಹೆಂಡ್ತಿ ಜಗಳದ ಥರ ಆಗಬಾರದಷ್ಟೇ...' ಎಂದು ಸುಮಿ ಟಿ.ವಿ. ಆಫ್ ಮಾಡಿದಳು.

ಸಂಗತ

ಭೂಮಿಯ ಸನ್‌ಸ್ಕ್ರೀನ್‌ಗೆ ಬೇಕು ರಕ್ಷಣೆ

ಭೂಮಿಯ ಬಿಸಿ ಹೆಚ್ಚುತ್ತಲೇ ಹೋದರೆ ನಮ್ಮ ಆಹಾರ, ನಾವು ಮತ್ತು ಲಸಿಕೆ ಯಾವುದೂ ಸುರಕ್ಷಿತವಲ್ಲ

• ಗುರುರಾಜ್ ಎಸ್. ದಾವಣಗೆರೆ

ಈ ಸಲದ ವಿಶ್ವ ಓಝೋನ್ ದಿನಾಚರಣೆಯನ್ನು 'ಕೀಪಿಂಗ್ ಅಸ್, ಅವರ್ ಫುಡ್ ಆ್ಯಂಡ್ ವ್ಯಾಕ್ಸಿನ್ಸ್ ಕೂಲ್' ಎಂಬ ಧ್ಯೇಯವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ಅಂದರೆ ಶಾಖವರ್ಧಕ ಅನಿಲಗಳ ಹೊಮ್ಮುವಿಕೆಯನ್ನು ಕಡಿತ ಮಾಡಿ ನಮ್ಮ ಆಹಾರ, ಆರೋಗ್ಯ ಮತ್ತು ಲಸಿಕೆಗಳನ್ನು ಸಂರಕ್ಷಿಸಿಕೊಳ್ಳಬೇಕು ಎಂಬುದು ಅದರ ಸಂದೇಶ. ಓಝೋನ್ ಪದರದ ಸುರಕ್ಷತೆಗೂ ಇದಕ್ಕೂ ಏನು ಸಂಬಂಧ ಎನ್ನುತ್ತೀರಾ? ಸಂಬಂಧವಿದೆ.

ಭೂಮಿಯ ಮೇಲೆ 20 ಕಿ.ಮೀ. ಎತ್ತರದಲ್ಲಿ ಶುರುವಾಗಿ 50 ಕಿ.ಮೀ.ವರೆಗೂ ವ್ಯಾಪಿಸಿರುವ ಓಝೋನ್ ಪದರ ಛಿದ್ರವಾಗುವುದನ್ನು ತಡೆಯಲು ಸಿಎಫ್‌ಸಿ (ಕ್ಲೋರೊಫ್ಲೋರೊ ಕಾರ್ಬನ್) ಮತ್ತು ಬಿಎಫ್‌ಸಿ (ಬ್ರೋಮೊಫ್ಲೋರೊ ಕಾರ್ಬನ್) ನಿಷೇಧಿಸಿ ಈಗ ಎಚ್‌ಸಿಎಫ್‌ಸಿಗಳನ್ನು (ಹೈಡ್ರೊ ಕ್ಲೋರೊ ಫ್ಲೋರೊ ಕಾರ್ಬನ್) ಬಳಸಲು ಪ್ರಾರಂಭಿಸಿದ್ದೇವೆ. ಮೊದಲಿನ ಎರಡರಿಂದ ಓಝೋನ್ ಪದರ ಬಚಾವಾಗಿದೆ. ಆದರೆ ಕೊನೆಯದರಿಂದ ಭೂಮಿಯ ಬಿಸಿ ಹೆಚ್ಚುತ್ತಿದೆ. ಆಗ ನಮ್ಮ ಆಹಾರ, ನಾವು ಮತ್ತು ಲಸಿಕೆ ಯಾವುದೂ ಸುರಕ್ಷಿತವಾಗಿ ಇರುವುದಿಲ್ಲ.

ನಾವು ಪ್ರತಿನಿತ್ಯ ಬಳಸುವ ಬಸ್ಸು– ಕಾರು– ರೈಲುಗಳ ಡೀಸೆಲ್ ಹೊಗೆ, ರಸಗೊಬ್ಬರ, ಪೇಂಟ್‌ಗಳು ಹೊಮ್ಮಿಸುವ ಮಾಲಿನ್ಯ, ಎ.ಸಿ, ನೋವು ನಿವಾರಕ ಸ್ಪ್ರೇ, ಸುಗಂಧ ಸೂಸುವ ತುಂತುರು ಡಬ್ಬಿ, ಫ್ರಿಜ್‌ಗಳಲ್ಲಿ ಬಳಸುವ ಸಿಎಫ್‌ಸಿ ಮತ್ತು ಬಿಎಫ್‌ಸಿಗಳಿಂದ ಓಝೋನ್ ಪದರಕ್ಕೆ ತೂತು ಬೀಳುತ್ತದೆ.

ಮೊದಲ ಸಲ, ಅಂಟಾರ್ಕ್ಟಿಕಾದ ಮೇಲಿನ ವಾಯುಮಂಡಲದ ಓಝೋನ್ ಪದರಕ್ಕೆ ತೂತಾಗಿದೆ ಎಂಬ ಮಾಹಿತಿ ಸಿಕ್ಕ ತಕ್ಷಣ ವಿಜ್ಞಾನಿಗಳು ವಾತಾವರಣದಲ್ಲಿನ ಸ್ವತಂತ್ರ ಕ್ಲೋರಿನ್ ಅಣು ಮತ್ತು ಕ್ಲೋರಿನ್ ಮಾನಾಕ್ಸೈಡ್‌ನಿಂದ ತೂತಾಗಿದೆ ಎಂದು ಕಂಡುಹಿಡಿದು ಪರಿಹಾರವನ್ನೂ ಸೂಚಿಸಿದರು. ಇದಲ್ಲದೆ ಸರಿಸುಮಾರು ನೂರು ರಾಸಾಯನಿಕಗಳಿಂದ ಓಝೋನ್ ಪದರಕ್ಕೆ ಅಪಾಯವಿದೆ ಎಂದು ಗೊತ್ತಾದ ಮೇಲೆ 1987ರಲ್ಲಿ ಸಭೆ ಸೇರಿ ಮಾಂಟ್ರಿಯಲ್ ಒಪ್ಪಂದಕ್ಕೆ ಸಹಿ ಹಾಕಿದ ಎಲ್ಲ ದೇಶಗಳ ನಾಯಕರು 'ಆಯಿತು ಸಿಎಫ್‌ಸಿ ಮತ್ತು ಬಿಎಫ್‌ಸಿ ಬಳಕೆ ನಿಲ್ಲಿಸಿ, ವಿಜ್ಞಾನಿಗಳು ಶಿಫಾರಸು ಮಾಡಿರುವ ಹೈಡ್ರೊ ಕ್ಲೋರೊ ಫ್ಲೋರೊ ಕಾರ್ಬನ್ ಬಳಸುತ್ತೇವೆ' ಎಂದರು.

ಮುಂದುವರಿದ ರಾಷ್ಟ್ರಗಳು 2004ರಲ್ಲಿ ಸಿಎಫ್‌ಸಿ ಮತ್ತು ಬಿಎಫ್‌ಸಿ ಉತ್ಪಾದನೆ ಹಾಗೂ ಬಳಕೆಯನ್ನು ನಿಷೇಧಿಸಿದವು. ನಾವು ಅದನ್ನು ಮಾಡಿದ್ದು ಆರು ವರ್ಷಗಳಾದ ನಂತರ. ಆ ವೇಳೆಗೆ ಎಚ್‌ಸಿಎಫ್‌ಸಿಗಳೂ ಸುರಕ್ಷಿತ ಅಲ್ಲ ಮತ್ತು ಅವುಗಳಿಂದ ಓಝೋನ್ ಪದರಕ್ಕೆ ಅಪಾಯವಿದೆ, ಅವು ಕಾರ್ಬನ್ ಡೈ ಆಕ್ಸೈಡ್‌ಗಿಂತ ಸಾವಿರಾರು ಪಟ್ಟು ಹೆಚ್ಚು ಭೂಮಿ ಬಿಸಿ ಮಾಡುವ ಶಾಖವರ್ಧಕಗಳು ಎಂದು ತಿಳಿದುಬಂತು. ಒಂದು ರೀತಿಯಲ್ಲಿ 'ಊದುವುದನ್ನು ಕೊಟ್ಟು ಒದರುವುದನ್ನು ತೆಗೆದುಕೊಂಡಂತಾಯಿತು' ಎಂದು ಸಂಕಟಕ್ಕೆ ಬಿದ್ದ ಮಾಂಟ್ರಿಯಲ್ ಒಪ್ಪಂದದ ರೂವಾರಿಗಳು ನಾಲ್ಕು ವರ್ಷಗಳ ಹಿಂದೆ ರುವಾಂಡದ ಕಿಗಳಿಯಲ್ಲಿ ಸಭೆ ಸೇರಿ, 2030ಕ್ಕೆ ಎಚ್‌ಸಿಎಫ್‌ಸಿಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ನಿರ್ಧರಿಸಿದರು. ವಿಶ್ವದ ಕೆಲವು ದೇಶಗಳು ಮಾತ್ರ ಸಹಿ ಮಾಡಿದ್ದು ಭಾರತ, ಚೀನಾ ಮತ್ತು ಅಮೆರಿಕ ಸದ್ಯಕ್ಕೆ ಸಾಧ್ಯವಿಲ್ಲ ಎಂದಿವೆ.

ಕಿಗಳಿ ಒಪ್ಪಂದ ಕಳೆದ ಜನವರಿಯಿಂದ ಜಾರಿಗೆ ಬಂದಿದೆ. ಶೀತಲೀಕರಣ ಉದ್ಯಮಗಳಲ್ಲಿ ಎಚ್‌ಸಿಎಫ್‌ಸಿಗಳ ಬಳಕೆ ಅತ್ಯಧಿಕವಾಗಿದ್ದು, ರೈತರ ಬೆಳೆಯನ್ನು ಕಾಪಾಡುವ ಕೋಲ್ಡ್ ಸ್ಟೋರೇಜ್ ಮತ್ತು ಗ್ರಾಹಕರು ಬಳಸುವ ಎ.ಸಿ, ರೆಫ್ರಿಜಿರೇಟರ್‌ಗಳಿಗೆ ಅದು ಬೇಕೇ ಬೇಕು. ಇಂಡಿಯಾ ಕೂಲಿಂಗ್ ಆ್ಯಕ್ಷನ್ ಪ್ಲಾನ್ - ICAP ಅನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿದೆ. ಇನ್ನು ಇಪ್ಪತ್ತು ವರ್ಷಗಳಲ್ಲಿ ಶೀತಲೀಕರಣ ಉದ್ಯಮದ ಬೇಡಿಕೆ ಬಹಳಷ್ಟು ಹೆಚ್ಚಲಿದೆ ಮತ್ತು ಎಚ್‌ಸಿಎಫ್‌ಸಿ ಸಂಪೂರ್ಣ ನಿಷೇಧಕ್ಕೆ 30 ವರ್ಷ ಹಿಡಿಯಬಹುದು ಎಂಬ ಅಂದಾಜಿದೆ. ವಿಶ್ವದ ಹವಾನಿಯಂತ್ರಕ ವ್ಯವಸ್ಥೆಯ ಬಹುಪಾಲು ಬೇಡಿಕೆಯನ್ನು ಪೂರೈಸುತ್ತಿರುವ ಚೀನಾ ತನಗೂ ಸಮಯ ಬೇಕು ಎಂದಿದೆ.

ನಮ್ಮ ಫ್ರಿಜ್ ಮತ್ತು ಎ.ಸಿ.ಗಳಲ್ಲಿ ಎಚ್‌ಸಿಎಫ್‌ಸಿ- 22 (ಕ್ಲೋರೊ ಡೈಫ್ಲೋರೊ ಮೀಥೇನ್) ಸಂಯುಕ್ತವನ್ನು ಬಳಸುತ್ತಿದ್ದೇವೆ. ಇದರ ಉತ್ಪಾದನೆಯ ಜೊತೆಗೆ ಬೈಪ್ರಾಡಕ್ಟಾಗಿ ಹೊಮ್ಮುವ ಎಚ್‌ಸಿಎಫ್‌ಸಿ- 23 (ಕ್ಲೋರೊ ಟ್ರೈಫ್ಲೋರೊ ಮೀಥೇನ್) ಸಂಯುಕ್ತವು ಭೂಮಿಯ ಶಾಖ ವರ್ಧಿಸುವುದರಿಂದ ಬೇರೆ ಮಾರ್ಗ ಹುಡುಕಬೇಕಿದೆ. ಅತ್ಯುತ್ತಮ ಶೀತಕಾರಕಗಳು ಮತ್ತು ಕಡಿಮೆ ಶಾಖವರ್ಧಕಗಳಾದ ಬ್ಯುಟೇನ್ ಮತ್ತು ಪ್ರೊಪೇನ್‌ಗಳನ್ನು ಬಳಸುವ ಅವಕಾಶವಿದೆ. ಆದರೆ ಬಳಸಲು ಪರವಾನಗಿ ಇಲ್ಲ. ಅಲ್ಲದೆ ಇವು ತೀವ್ರವಾಗಿ ದಹಿಸುವ ಗುಣ ಹೊಂದಿರುವುದರಿಂದ ಬಳಸುವಾಗ ಭಾರಿ ಎಚ್ಚರಿಕೆ ವಹಿಸಬೇಕಾಗುತ್ತದೆ.

ಒಂದೆಡೆ ಓಝೋನ್ ಪದರದ ರಂಧ್ರ ಮುಚ್ಚಲು ಸಿಎಫ್‌ಸಿ ಬಳಕೆ ನಿಲ್ಲಿಸಿದ್ದೇವೆ. ಈಗ ಬಳಸುತ್ತಿರುವ ಎಚ್‌ಸಿಎಫ್‌ಸಿಗಳಿಂದ ಭೂಮಿಯ ಬಿಸಿ ಏರುತ್ತಿದೆ. ಒಟ್ಟಿನಲ್ಲಿ ಒಂದನ್ನು ಪಡೆದುಕೊಳ್ಳಲು ಇನ್ನೊಂದನ್ನು ಬಿಡಬೇಕು ಎಂಬಂತಾಗಿದೆ. ಆದರೂ ಓಝೋನ್ ಪದರಕ್ಕೆ ತೂತು ಬೀಳದಂತೆ ತಡೆಯಲೇಬೇಕಿದೆ.

ವಾಚಕರ ವಾಣಿ

ಸಚಿವರ ಪ್ರಶ್ನೆ ಸಾರ್ವಕಾಲಿಕ!

'ರಾಜ್ಯದಲ್ಲಿ ವನ್ಯಜೀವಿಗಳ ಸಂಖ್ಯೆ ಕಡಿಮೆ ಎಲ್ಲಿ ಆಗುತ್ತೇರಿ?' ಎಂದು ಅರಣ್ಯ ಸಚಿವರು ಪ್ರಶ್ನಿಸಿರುವುದರಲ್ಲಿ (ಪ್ರ.ವಾ., ಸೆ. 16) ಸೋಜಿಗವೇನೂ ಇಲ್ಲ! ಬೆಟ್ಟಗುಡ್ಡಗಳನ್ನು ಬಗೆದು ಕಲ್ಲನ್ನೇ ನುಂಗುತ್ತಿರುವುದು ದೈತ್ಯ ವನ್ಯಜೀವಿಗಳಲ್ಲವೇ? ನದಿಪಾತ್ರದಲ್ಲಿ ಮರಳು ಬಗೆಯುತ್ತಿರುವುದೇನು ಸಾಮಾನ್ಯ ಜೀವಿಯೇ? ರಸ್ತೆ, ಸರ್ಕಾರಿ ಕಟ್ಟಡ, ಕಾಂಪೌಂಡುಗಳ ನಿರ್ಮಾಣ ಕಾರ್ಯದಲ್ಲಿ ಕಬ್ಬಿಣ, ಸಿಮೆಂಟು, ಇಟ್ಟಿಗೆಗಳನ್ನೆಲ್ಲಾ ಕಬಳಿಸುತ್ತಿರುವುವು ಯಾವ ಕಾಡುಪ್ರಾಣಿಗಳಿಗೇನು ಕಮ್ಮಿಯೇ? ಈ ಲೆಕ್ಕಾಚಾರದಲ್ಲಿ ಮಾತ್ರ ಸಚಿವರ ಪ್ರಶ್ನೆ ಸಕಾಲಿಕ, ಸಾರ್ವಕಾಲಿಕ!

ಜೆ.ಬಿ.ಮಂಜುನಾಥ, ಪಾಂಡವಪುರ

ಬೆಳೆಸಬೇಕಿರುವುದು ಅಪರಿಚಿತ ಭಾಷೆಯನ್ನಲ್ಲ

ಹಿಂದಿಯನ್ನು ಲೋಕಭಾಷೆಯಾಗಿ ಬೆಳೆಸಬೇಕಿದೆ ಎಂದು ಎಚ್.ಎಸ್.ಮಂಜುನಾಥ ಹೇಳಿದ್ದಾರೆ (ವಾ.ವಾ., ಸೆ. 14). ಯಾವ ಕಾರಣಕ್ಕಾಗಿ ಹಿಂದಿಯನ್ನು ಹಾಗೆ ಬೆಳೆಸಬೇಕಿದೆಯೋ ಅರ್ಥವಾಗಲಿಲ್ಲ! ಭಾಷೆ ಇರುವುದು ಪರಸ್ಪರ ಮಾತನಾಡಲು. ಇಂದು ನಾವು ಬ್ಯಾಂಕಿಗೆ ಹೋದರೆ ಅಲ್ಲಿ ನಮ್ಮೊಂದಿಗೆ ನಮ್ಮ ಭಾಷೆಯಲ್ಲಿ ಮಾತನಾಡುವವರೇ ಇಲ್ಲ. ಹೀಗಾಗಿ ಬಡಪಾಯಿ ಗ್ರಾಹಕರಿಗೆ ಆಗುವ ತೊಂದರೆ ಅಷ್ಟಿಷ್ಟಲ್ಲ. ಈ ಹಿನ್ನೆಲೆಯಲ್ಲಿ ಜನರ ಭಾಷೆಯನ್ನು ಬೆಳೆಸಬೇಕಿದೆಯೇ ಹೊರತು ಹಿಂದಿ, ಇಂಗ್ಲಿಷ್‌ನಂಥ ಅಪರಿಚಿತ ಭಾಷೆಗಳನ್ನಲ್ಲ. ಯಾವ ಭಾಷೆಯನ್ನೇ ಆಗಲಿ ಒತ್ತಾಯದಿಂದ ಬೆಳೆಸಲೂ ಆಗುವುದಿಲ್ಲ. ಅಂಥ ಪ್ರಯತ್ನಕ್ಕೆ ಸುರಿಯುವ ಹಣ ವ್ಯರ್ಥವಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಕಸಾಪ ಚುನಾವಣೆ: ಶುರು ಮಾಡಿ

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯು ಕೋವಿಡ್ ಕಾರಣದಿಂದ ಅಂತಿಮ ಹಂತದಲ್ಲಿ ನಿಂತಿತ್ತು. ಇದೀಗ ಜನಜೀವನ ಸಹಜಸ್ಥಿತಿಗೆ ಮರಳುತ್ತಿದೆ. ಇನ್ನು ಕಸಾಪ ಚುನಾವಣೆಗೆ ಹಸಿರು ನಿಶಾನೆ ಸಿಕ್ಕರೆ, ಎಲ್ಲಿ ನಿಂತಿತ್ತೋ ಅಲ್ಲಿಂದ ಆರಂಭವಾಗಿ ಚುನಾವಣಾ ಪ್ರಕ್ರಿಯೆ ಪೂರೈಸಿದರೆ, ಪದಾಧಿಕಾರಿಗಳಾಗ ಬಯಸುವವರು ನಿಟ್ಟುಸಿರುಬಿಡುವಂತಾಗುತ್ತದೆ. ಕನ್ನಡದ ಕೆಲಸ ರಾಜ್ಯದಾದ್ಯಂತ ಸುಗಮವಾಗಿ ಜರುಗಲು ಚುನಾವಣೆ ಮುಗಿದರೆ ಒಳ್ಳೆಯದು.

ಸಂತೆಬೆನ್ನೂರು ಫೈಜ್ನಟ್ರಾಜ್, ಸಂತೆಬೆನ್ನೂರು

ಆನೆ ಬಂದು ನಿಂತಿರುವಾಗ...

'ಹಿಂದಿ ಏಕತಾ ದಿವಸ' ಆಚರಣೆಯಿಂದ ಹಿಂದಿ ಹೇರಿಕೆ ಆಗುತ್ತದೆ ಎಂಬ ಕಾರಣಕ್ಕೆ ಕನ್ನಡ ಸಂಘಟನೆಗಳು ತೀವ್ರ ಪ್ರತಿಭಟನೆ ಮಾಡುತ್ತಿವೆ. ಯಾವುದು ಹೇರಿಕೆ, ಯಾವುದು ಹೇರಿಕೆ ಅಲ್ಲ ಎಂದು ಅರಿಯದಷ್ಟು ಕನ್ನಡಿಗ ಹಿಂದುಳಿದಿರುವುದು ನನ್ನ ಮನೋವ್ಯಥೆಯಾಗಿದೆ. ಪ್ರಾತಃಕಾಲದಿಂದ ಸಂಧ್ಯಾಕಾಲದ ದಿನಂಪ್ರತಿ ನಮ್ಮ ದೈನಂದಿನ ಚಟುವಟಿಕೆಯಲ್ಲಿ ಅನ್ಯ ಸಂಸ್ಕೃತಿಯೇ ಪ್ರತಿಯೊಬ್ಬ ಕನ್ನಡಿಗನ ಮನೆ ಮನ ಮುಟ್ಟುತ್ತಿದೆಯಲ್ಲ! ಇದು ಹೇರಿಕೆಯಲ್ಲವೇ? ಕಲ್ಯಾಣಮಂಟಪದಲ್ಲಿ ಕುಳಿತು ಉಣ್ಣುವ ಅದೆಷ್ಟು ಮಕ್ಕಳ ಬಾಯಲ್ಲಿ 'ಅನ್ನ' ಎಂಬ ಪದ ಬರುತ್ತದೆ? ತಂದೆ ತಾಯಂದಿರನ್ನು ಕನ್ನಡದ ಬಹುತೇಕ ಮಕ್ಕಳು 'ಅಪ್ಪ, ಅಮ್ಮ' ಎಂದು ಕರೆಯುತ್ತಾರೆಯೇ?

ಭಾರತದ ಪ್ರಧಾನಿ ಗದ್ದುಗೆ ಏರಿದ ಕನ್ನಡಿಗ ಎಚ್.ಡಿ.ದೇವೇಗೌಡರು ಹಿಂದಿ ಬಾರದ ಕಾರಣಕ್ಕೆ ಮೂದಲಿಕೆಗೆ ಒಳಗಾದಂತೆ ಮತ್ತೆಷ್ಟು ಕನ್ನಡಿಗರು ಅಪಮಾನಿತರಾಗಬೇಕು? ಒಕ್ಕೂಟ ವ್ಯವಸ್ಥೆಯಲ್ಲಿ ಹೆಚ್ಚು ರಾಜ್ಯಗಳು ಹಿಂದಿಯನ್ನು ಸಂಪರ್ಕ ಭಾಷೆಯಾಗಿ ಬಳಸುತ್ತಿವೆಯೆಂದರೆ, ಅದು ಆ ಭಾಷೆಗಿರುವ ಶಕ್ತಿ ಎಂಬುದನ್ನು ಗಮನಿಸಬೇಕಾಗಿದೆ. ಪರಿಸ್ಥಿತಿ ಹೀಗಿರುವಲ್ಲಿ, ಒಂದು ದಿನದ ಹಿಂದಿ ಆಚರಣೆ ಹೇರಿಕೆಯಾಗಿ ಹೇಗೆ ಕಾಣುತ್ತದೆ? ಬಾಗಿಲಲ್ಲಿ ಈಗಾಗಲೇ ಆನೆ ಬಂದು ನಿಂತಿರುವಾಗ ಬಾಲಕ್ಕೆ ಕೊಸರಾಡಿದರೆ ಅದು ಪ್ರಾಯೋಗಿಕ ಅಲ್ಲ. ಕನ್ನಡ ನಿತ್ಯ ಉಸಿರಾಡುವ ಹಾಗೆ ಅರಿವು, ಅಧ್ಯಯನ, ಅರ್ಹತೆ ಆಧಾರದ ಮೇಲೆ ಪ್ರಯೋಗ ಆಗಬೇಕು.

ಆರ್.ವೆಂಕಟರಾಜು, ಬೆಂಗಳೂರು

ಪಕ್ಷಿಪ್ರೇಮ ಉಳಿಯಲಿ, ಸತ್ಯದ ಅರಿವಾಗಲಿ

ಪಕ್ಷಿಗಳು ಹಿಕ್ಕೆ ಹಾಕಿ ಅರಳಿಕಟ್ಟೆಯನ್ನು ಗಲೀಜು ಮಾಡುತ್ತಿದ್ದವು ಎಂಬ ಕಾರಣಕ್ಕೆ ಟಿ.ನರಸೀಪುರ ತಾಲ್ಲೂಕಿನ ಕುಪ್ಯ ಎಂಬಲ್ಲಿ ಗ್ರಾಮಸ್ಥರು ಮರದ ಕೊಂಬೆಗಳನ್ನು ಏಕಾಏಕಿ ಕತ್ತರಿಸಿದ್ದರಿಂದ, ಬೆಳ್ಳಕ್ಕಿ ಮರಿಗಳು ಕೆಳಗೆ ಬಿದ್ದು ಮೃತಪಟ್ಟಿರುವುದನ್ನು (ಪ್ರ.ವಾ., ಸೆ. 15) ಓದಿ ನೋವಾಯಿತು. ಮಾನವೀಯತೆ ಮರೆತ ಇವರ ಮನಃಸ್ಥಿತಿ ಮೃಗೀಯ, ಅಮಾನವೀಯ. ಇವರ ಮೇಲೆ ಕಾನೂನು ಕ್ರಮ ಜರುಗಿಸಬೇಕಾಗಿದೆ.

ಪ್ರಕೃತಿಯೇ ದೇವರು. ಅದರ ಸಾಂಕೇತಿಕ ರೂಪವಾಗಿ ಅರಳಿ ಮತ್ತು ಬೇವಿನ ಮರಗಳನ್ನು ಬೆಳೆಸಲಾಗುತ್ತದೆ ಹಾಗೂ ಈ ಮರಗಳು ಹಲವು ಪಕ್ಷಿಗಳ ಆಶ್ರಯತಾಣಗಳಾಗಿರುತ್ತವೆ ಎಂಬ ಸಾಮಾನ್ಯ ಸತ್ಯದ ಅರಿವು ಮೂಡದೇ ಇರುವುದು ಇವರ ಅಜ್ಞಾನಕ್ಕೆ ಉದಾಹರಣೆಯಾಗಿದೆ. ಆಧುನಿಕತೆಯ ಓಟದಿಂದ, ನಗರೀಕರಣದ ಪ್ರಭಾವದಿಂದ, ರಸ್ತೆ ವಿಸ್ತರಣೆಯಿಂದ, ಹೊಸ ಬಡಾವಣೆ, ಕಚೇರಿ ನಿರ್ಮಾಣದ ಕಾರಣಗಳಿಂದ ಮರಗಳ ಮಾರಣಹೋಮ ನಿತ್ಯದ ಸುದ್ದಿಯಾದರೂ ಸಂವೇದನಾರಹಿತ ವ್ಯವಸ್ಥೆಗೆ ಏನೂ ಅನ್ನಿಸುವುದಿಲ್ಲ. ಈ ಮರಗಳ ಮೇಲೆ ವಾಸ ಮಾಡುವ ಹಲವು ಬಗೆಯ ಪಕ್ಷಿಗಳು ಇಂದು ಅವಸಾನದ ಅಂಚನ್ನು ತಲುಪಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ.

ದೇವರಕಾಡುಗಳೆಂದು ಕರೆಯಲಾಗುವ ಮರಗಳ ಗುಂಪನ್ನು ಹಿಂದೆ ಯಾವುದೇ ರೀತಿಯಿಂದಲೂ ಅಡ್ಡಿಪಡಿಸದೇ ಕಾಪಾಡುತ್ತಿದ್ದರು. ಇಲ್ಲಿ ಹಲವು ಬಗೆಯ ಹಣ್ಣಿನ ಮರಗಳು, ಗಿಡಮೂಲಿಕೆಗಳು, ಬಗೆ ಬಗೆಯ ಹೂವಿನ ಮರಗಳನ್ನು ಬೆಳೆಸುತ್ತಿದ್ದರು. ಇದರ ಉದ್ದೇಶ ಪಕ್ಷಿಗಳಿಗೆ ಆಶ್ರಯ, ಹೂಗಳಿಂದ ಜೇನಿನ ಪರಾಗಸ್ಪರ್ಶ, ಉತ್ತಮ ಗಾಳಿ. ಇದು ಪರಿಸರ ಸಮತೋಲನ ಕಾಪಾಡುವ ವೈಜ್ಞಾನಿಕ ವಿಧಾನವಾಗಿತ್ತು. ಮನುಷ್ಯನ ಸ್ವಾರ್ಥ, ದುರಾಸೆಯಿಂದಾಗಿ ಇಂದು ಎಲ್ಲವೂ ನಾಶದ ಸ್ಥಿತಿಗೆ ತಲುಪಿವೆ. ಇನ್ನಾದರೂ ಗಿಡ, ಮರ, ಪ್ರಾಣಿ, ಪಕ್ಷಿ, ಕಾಡು, ಬೆಟ್ಟ ಇವುಗಳೊಂದಿಗೆ ಬದುಕು ಕಟ್ಟಿಕೊಳ್ಳೋಣ. ಅವುಗಳಿಗೂ ನಮ್ಮಂತೆಯೇ ಬದುಕುವ ಹಕ್ಕಿದೆ ಎಂಬ ಸತ್ಯವನ್ನು ಅರಿಯೋಣ.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

90% ದೂರುಗಳ ತನಿಖೆಯೇ ಇಲ್ಲ

ಜಾಗೃತ ಆಯೋಗ

ಕೇಂದ್ರ ಜಾಗೃತ ಆಯೋಗವು (ಸಿವಿಸಿ) ಪ್ರತಿ ವರ್ಷ ತನ್ನಲ್ಲಿಗೆ ಬರುವ ಭ್ರಷ್ಟಾಚಾರ ಸಂಬಂಧಿ ದೂರುಗಳಲ್ಲಿ, ಅರ್ಧದಷ್ಟು ದೂರುಗಳನ್ನು ತನ್ನ ವ್ಯಾಪ್ತಿಗೆ ಬರುವುದಿಲ್ಲ ಎಂದು ಬೇರೆ ಪ್ರಾಧಿಕಾರಗಳಿಗೆ ವರ್ಗಾಯಿಸುತ್ತದೆ. ಹೀಗೆ ವರ್ಗಾಯಿಸಲಾದ ದೂರುಗಳ ಸ್ಥಿತಿ ಏನಾಯಿತು ಎಂಬ ಮಾಹಿತಿ ಆಯೋಗದ ಬಳಿ ಇಲ್ಲ. ಅಲ್ಲದೆ, ಪ್ರತಿ ವರ್ಷ ಬರುವ ದೂರುಗಳಲ್ಲಿ ಶೇ 40ರಷ್ಟು ದೂರುಗಳನ್ನು ಅಸ್ಪಷ್ಟ ಎಂದು ತಿರಸ್ಕರಿಸಲಾಗುತ್ತದೆ. ಹೀಗೆ ಶೇ 90ಕ್ಕೂ ಹೆಚ್ಚು ದೂರುಗಳು ತನಿಖೆಯ ಹಂತಕ್ಕೆ ಬರುವುದೇ ಇಲ್ಲ. 2016ರಿಂದ 2020ರ ಅಂತ್ಯದವರೆಗೆ 1.72 ಲಕ್ಷ ದೂರುಗಳು ಆಯೋಗಕ್ಕೆ ಬಂದಿವೆ. ಇವುಗಳಲ್ಲಿ 950 ದೂರುಗಳಷ್ಟೇ ತನಿಖೆಯ ಹಂತಕ್ಕೆ ಹೋಗಿವೆ



* ಅನ್ಯರಿಗೆ ತೊಂದರೆ ಕೊಡುವ ಉದ್ದೇಶದಿಂದಲೇ ಅನಾಮಧೇಯ ದೂರು ಅಥವಾ ಮೂಗರ್ಜಿಗಳನ್ನು ಸಲ್ಲಿಸುವ ಪರಿಪಾಟವಿದೆ. ಹೀಗಾಗಿ ಮೂಗರ್ಜಿಗಳನ್ನು ದೂರುಗಳು ಎಂದು ಪರಿಗಣಿಸಬಾರದು ಎಂಬ ನಿಯಮವಿದೆ. ಮೂಗರ್ಜಿಗಳು ಮತ್ತು ಅಸ್ಪಷ್ಟ ದೂರುಗಳನ್ನು ಪರಿಶೀಲನೆಗೆ ಪರಿಗಣಿಸುವುದಿಲ್ಲ. ಅವುಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುತ್ತದ

ದೂರುಗಳ ಸಂಖ್ಯೆ ಇಳಿಕೆ

ದೇಶದಲ್ಲಿ ಪ್ರತಿವರ್ಷ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಜಾಗೃತ ಆಯೋಗದಲ್ಲಿ ದಾಖಲಾಗುವ ದೂರುಗಳ ಸಂಖ್ಯೆಯಲ್ಲಿ ಇಳಿಕೆಯಾಗುತ್ತಿದೆ. 2016ರಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗಿದ್ದರೆ, 2017ರಲ್ಲಿ ಅತ್ಯಂತ ಕಡಿಮೆ ಪ್ರಕರಣಗಳು ದಾಖಲಾಗಿವೆ. ನಂತರದ ವರ್ಷಗಳಲ್ಲಿಯೂ ದಾಖಲಾದ ದೂರುಗಳ ಸಂಖ್ಯೆಯು 2016ಕ್ಕೆ ಹೋಲಿಸಿದರೆ ಗಣನೀಯ ಪ್ರಮಾಣದ ಇಳಿಕೆಯಾಗಿದೆ. 2016ಕ್ಕೆ ಹೋಲಿಸಿದರೆ 2020ರಲ್ಲಿ ಶೇ 45ರಷ್ಟು ಕಡಿಮೆ ದೂರುಗಳು ದಾಖಲಾಗಿವೆ



ಭ್ರಷ್ಟಾಚಾರ ಪ್ರಕರಣಗಳು

ತನಿಖೆಗೆ ಶಿಫಾರಸು ಮಾಡಲಾದ ದೂರುಗಳಿಗೆ ಸಂಬಂಧಿಸಿ ಪ್ರಕರಣ ದಾಖಲು ಮಾಡಲಾಗುತ್ತದೆ. ಆ ತನಿಖೆಯ ನಂತರ ಭ್ರಷ್ಟಾಚಾರ ನಡೆದಿದೆಯೇ ಎಂದು ತೀರ್ಮಾನಿಸಲಾಗುತ್ತದೆ. ಭ್ರಷ್ಟಾಚಾರ ನಡೆದಿದೆ ಎಂದು ಪರಿಗಣಿಸಲಾದ ಪ್ರಕರಣಗಳ ಸಂಖ್ಯೆಯು ಇಳಿಕೆಯಾಗುತ್ತಲೇ ಹೋಗಿದೆ. 2016ಕ್ಕೆ ಹೋಲಿಸಿದರೆ ನಂತರದ ವರ್ಷಗಳಲ್ಲಿ ಇಂತಹ ಪ್ರಕರಣಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಆದರೆ 2019ಕ್ಕೆ ಹೋಲಿಸಿದರೆ 2020ರಲ್ಲಿ ಇಂತಹ ಪ್ರಕರಣಗಳ ಸಂಖ್ಯೆಯಲ್ಲಿ ಶೇ 300ರಷ್ಟು ಏರಿಕೆಯಾಗಿದೆ

ಶಿಕ್ಷೆಗೆ ಗುರಿಯಾದ ಅಧಿಕಾರಿಗಳು

ಭ್ರಷ್ಟಾಚಾರ ದೂರುಗಳು ಮತ್ತು ಪ್ರಕರಣಗಳ ಸಂಖ್ಯೆ ಇಳಿಕೆಯಾದಂತೆ 2016ರ ನಂತರ ಶಿಕ್ಷೆಗೆ ಗುರಿಯಾದ ಅಧಿಕಾರಿಗಳ ಸಂಖ್ಯೆಯೂ ಇಳಿಕೆಯಾಗಿದೆ. ಆದರೆ 2020ರಲ್ಲಿ ಶಿಕ್ಷೆಗೆ ಗುರಿಯಾದ ಅಧಿಕಾರಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ



ಶಿಕ್ಷೆಯ ಸ್ವರೂಪ

ಭ್ರಷ್ಟಾಚಾರ ನಡೆದಿದೆ ಎಂದು ಸಾಬೀತಾದ ಪ್ರತಿ ಪ್ರಕರಣದಲ್ಲೂ ಹಲವು ಅಧಿಕಾರಿಗಳಿಗೆ ಶಿಕ್ಷೆಯಾಗಿದೆ. ಹೀಗಾಗಿ ಪ್ರಕರಣಗಳ ಸಂಖ್ಯೆ ಕಡಿಮೆ ಇದ್ದರೂ, ಶಿಕ್ಷೆಗೆ ಗುರಿಯಾದ ಅಧಿಕಾರಿಗಳ ಸಂಖ್ಯೆ ಹೆಚ್ಚು. ತಪ್ಪೆಸಗಿದ ಅಧಿಕಾರಿಗೆ ಭಾರಿ ದಂಡ ವಿಧಿಸುವುದೇ, ಆಯೋಗ ನೀಡುತ್ತಿರುವ ಪ್ರಧಾನ ಶಿಕ್ಷೆಯಾಗಿದೆ



ಆಧಾರ: ಕೇಂದ್ರ ಜಾಗೃತ ಆಯೋಗ ವಾರ್ಷಿಕ ವರದಿ 2016, 2017, 2018, 2019, 2020

ಗಾಂಧಿನಗರದಲ್ಲಿ ಹಾಕಿದ್ದ ಪೋಸ್ಟರ್‌ಗಳನ್ನು, ಕಾರ್ಯಕ್ರಮ ರದ್ದಾದ ನಂತರ ಕಾರ್ಮಿಕರು ತೆರವು ಮಾಡಿದರು – ಪಿಟಿಐ ಚಿತ್ರ

ಗುಜರಾತ್: ಸಂಪುಟ ಕಗ್ಗಂಟು

ಸಚಿವ ಸ್ಥಾನಕ್ಕಾಗಿ ಜಟಾಪಟಿ ತೀವ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಬುಧವಾರ ಮಧ್ಯಾಹ್ನಕ್ಕೆ ನಿಗದಿಯಾಗಿದ್ದ ಕಾರ್ಯಕ್ರಮ
- ಪೋಸ್ಟರ್, ಬ್ಯಾನರ್‌ಗಳನ್ನು ಹರಿದುಹಾಕಿದ ಪಕ್ಷದ ಕಾರ್ಯಕರ್ತರು
- ಗುರುವಾರ ಮಧ್ಯಾಹ್ನಕ್ಕೆ ಮತ್ತೆ ಕಾರ್ಯಕ್ರಮ ನಿಗದಿ

ಗಾಂಧಿನಗರ: ಗುಜರಾತ್‌ನ ಹೊಸ ಸಚಿವ ಸಂಪುಟ ರಚನೆಯ ವಿಚಾರವು ಬಿಜೆಪಿ ಮುಖಂಡರ ನಡುವೆ ಜಟಾಪಟಿಗೆ ಕಾರಣವಾಗಿದೆ. ಹಾಗಾಗಿ, ಬುಧವಾರ ನಿಗದಿಯಾಗಿದ್ದ ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ರದ್ದಾಗಿದೆ. ಕಾರ್ಯಕ್ರಮವನ್ನು ಗುರುವಾರಕ್ಕೆ ಮುಂದೂಡಲಾಗಿದೆ. ಆದರೆ ಗುರುವಾರವೂ ಕಾರ್ಯಕ್ರಮ ನಡೆಯುವುದು ಅನಿಶ್ಚಿತವಾಗಿದೆ.

ನಿಕಟಪೂರ್ವ ಮುಖ್ಯಮಂತ್ರಿ ವಿಜಯ ರೂಪಾಣಿ ಅವರ ಸಂಪುಟದಲ್ಲಿ ಇದ್ದ ಬಹುತೇಕ ಮಂದಿಯನ್ನು ಭೂಪೇಂದ್ರ ಪಟೇಲ್ ಅವರು ಕೈಬಿಟ್ಟಿದ್ದಾರೆ. ಇದರಿಂದ ಅಸಮಾಧಾನಗೊಂಡಿರುವ ಮಾಜಿ ಸಚಿವರು, ಬುಧವಾರ ಇಲ್ಲಿನ ಪಕ್ಷದ ಕಚೇರಿ ಬಳಿ ಪ್ರತಿಭಟನೆ ನಡೆಸಿದ್ದಾರೆ.

ಇಲ್ಲಿನ ರಾಜಭವನದಲ್ಲಿ ಬುಧವಾರ ಮಧ್ಯಾಹ್ನ 2.30ಕ್ಕೆ ಕಾರ್ಯಕ್ರಮ ನಡೆಯಬೇಕಿತ್ತು. ಇದಕ್ಕಾಗಿ ದೊಡ್ಡ ಹೋರ್ಡಿಂಗ್‌ಗಳು ಮತ್ತು ಪೋಸ್ಟರ್‌ಗಳನ್ನು ಅಳವಡಿಸಲಾಗಿತ್ತು. ಅಲ್ಲದೆ, ರಾಜಭವನವನ್ನು ಹೂವಿನಿಂದ ಅಲಂಕರಿಸಲಾಗಿತ್ತು. ಆದರೆ ರೂಪಾಣಿ ಸಂಪುಟದಲ್ಲಿದ್ದ ಹಲವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು ಮತ್ತು ಕೆಲವರು ಪ್ರತಿಭಟನೆ ನಡೆಸಿದ ಕಾರಣ ಕಾರ್ಯಕ್ರಮವನ್ನು ರದ್ದುಪಡಿಸಲಾಯಿತು.

ಕಾರ್ಯಕ್ರಮ ರದ್ದಾದ ಬೆನ್ನಲ್ಲೇ ಪಕ್ಷದ ಕಾರ್ಯಕರ್ತರು ಪೋಸ್ಟರ್ ಮತ್ತು ಹೋರ್ಡಿಂಗ್‌ಗಳನ್ನು ತೆಗೆದು ಹಾಕಿದ್ದಾರೆ. ಅಸಮಾಧಾನಗೊಂಡಿದ್ದ ಪಕ್ಷದ ನಾಯಕರ ಜತೆಗೆ ಭೂಪೇಂದ್ರ ಪಟೇಲ್ ಅವರು ಸಮಾಲೋಚನೆ ನಡೆಸಿ, ಗುರುವಾರ ಮಧ್ಯಾಹ್ನಕ್ಕೆ ಕಾರ್ಯಕ್ರಮ ನಿಗದಿ ಮಾಡಿದ್ದಾರೆ. ಕೆಲವೇ ಗಂಟೆಗಳಲ್ಲಿ ಗುರುವಾರದ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಪಕ್ಷದ ಕೇಂದ್ರ ಕಚೇರಿ, ರಸ್ತೆಗಳು ಮತ್ತು ರಾಜಭವನದಲ್ಲಿ ಹಾಕಲಾಗಿದೆ. ಆದರೆ ಪಕ್ಷದ ಕಚೇರಿ ಬಳಿ ಮತ್ತೆ ಜಟಾಪಟಿ

> ರಾಜ್ಯದ ಸೌರಾಷ್ಟ್ರದಲ್ಲಿ ಜನರು ಪ್ರವಾಹದಿಂದ ಸಂಕಷ್ಟ ಎದುರಿಸುತ್ತಿದ್ದಾರೆ. ಆದರೆ ಬಿಜೆಪಿ ನಾಯಕರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾರೆ, ಜನರ ಸಂಕಷ್ಟದ ಕಡೆ ನೋಡುತ್ತಿಲ್ಲ
> **ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿ**

ಉಂಟಾದ ಕಾರಣ ಪೋಸ್ಟರ್‌ಗಳನ್ನು ಹರಿದುಹಾಕಲಾಯಿತು. ಗುರುವಾರ ಮಧ್ಯಾಹ್ನ 1.30ಕ್ಕೆ ಕಾರ್ಯಕ್ರಮ ನಡೆಯಲಿದೆ ಎಂದು ಪಕ್ಷವು ಟ್ವೀಟ್ ಮಾಡಿದೆ.

ಬುಧವಾರದ ಕಾರ್ಯಕ್ರಮದಲ್ಲಿ 20 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲು ಸಿದ್ಧರಾಗಿದ್ದರು. ಇವರಲ್ಲಿ ಬಹುತೇಕ ಮಂದಿ ಇದೇ ಮೊದಲ ಬಾರಿ ಶಾಸಕರಾದವರು. ಭೂಪೇಂದ್ರ ಅವರ ಸಂಪುಟದಲ್ಲಿ ಹಿರಿಯರನ್ನು ಕಡೆಗಣಿಸಲಾಗುತ್ತಿದೆ ಎಂದು ಪಕ್ಷದ ಹಿರಿಯ ಮುಖಂಡರು ಆರೋಪಿಸಿದ್ದಾರೆ. ಕಾರ್ಯಕ್ರಮ ರದ್ದಾದ ನಂತರ ಒಂದು ಬಣದ ನಾಯಕರು, ವಿಜಯ ರೂಪಾಣಿ ಅವರ ಮನೆಗೆ ಹೋಗಿ ಮಾತುಕತೆ ನಡೆಸಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಸಮ್ಮುಖದಲ್ಲಿ ಭೂಪೇಂದ್ರ ಪಟೇಲ್ ಅವರು ನೂತನ ಮುಖ್ಯಮಂತ್ರಿಯಾಗಿ ಸೋಮವಾರ ಅಧಿಕಾರ ಸ್ವೀಕರಿಸಿದ್ದರು. ಸಚಿವ ಸ್ಥಾನವನ್ನು ತೊರೆಯುವಂತೆ ಬಹುತೇಕ ಎಲ್ಲಾ ಸಚಿವರಿಗೆ ಅಮಿತ್ ಶಾ ಅವರು ಸೋಮವಾರವೇ ಸೂಚನೆ ನೀಡಿದ್ದರು. ನೂತನ ಸಚಿವರ ಪಟ್ಟಿಯನ್ನೂ ಶಾ ಅವರೇ ಅಂತಿಮಗೊಳಿಸಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

'ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದಕ್ಕೆ ಭಗತ್ ಸಿಂಗ್ ಅವರನ್ನು ಬ್ರಿಟಿಷ್ ಪೊಲೀಸರು ಕಟ್ಟಿ ಹೊಡೆಯುತ್ತಿರುವ ಚಿತ್ರ ನೋಡಿ. ಭಾರತೀಯರೆಲ್ಲರಲ್ಲೂ ಭಯ ಹುಟ್ಟಿಸಲು ಈ ಚಿತ್ರವನ್ನು ಅಂದು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಗಾಂಧೀಜಿ, ನೆಹರೂ ಯಾವತ್ತಾದರೂ ಈ ರೀತಿ ಶಿಕ್ಷೆ ಅನುಭವಿಸುತ್ತಿರುವ ಚಿತ್ರ ನೋಡಿದ್ದೀರಾ? ಕೇವಲ ಚರಕ ತಿರುಗಿಸುವುದರಿಂದ ಸ್ವಾತಂತ್ರ್ಯ ಬಂತು ಎಂದರೆ ನಂಬಬೇಕೆ?' ಎಂದು ಹೇಳಿರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಇದರ ಜತೆ ಸಿಖ್ ವ್ಯಕ್ತಿಯೊಬ್ಬನನ್ನು ಏಣಿಗೆ ಕಟ್ಟಿ ಹಾಕಿ, ಅರೆಬೆತ್ತಲುಗೊಳಿಸಿ ಪೊಲೀಸರು ಹೊಡೆಯುತ್ತಿರುವ ಚಿತ್ರವೂ ವೈರಲ್ ಆಗಿದೆ.

'ಇದು 1920ರಲ್ಲಿ ಬ್ರಿಟನ್‌ನಲ್ಲಿ ಪ್ರಕಟವಾಗಿದ್ದ 'ಬ್ರಿಟಿಷ್ ಟೆರರ್ ಇನ್ ಇಂಡಿಯಾ' ಪುಸ್ತಕದಲ್ಲಿರುವ ಚಿತ್ರ. ಅದನ್ನು ತಿರುಚಿ, ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಮಾರ್ಪಾಡು ಮಾಡಲಾಗಿದೆ. ಇದು 1919ರ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ನಂತರ, ಪಂಜಾಬ್‌ನ ಕಸೂರ್‌ನಲ್ಲಿ ಜನಸಾಮಾನ್ಯರ ಮೇಲೆ ಬ್ರಿಟಿಷ್ ಪೊಲೀಸರು ನಡೆಸಿದ ದೌರ್ಜನ್ಯದ ಚಿತ್ರ ಎಂದು ಪುಸ್ತಕದಲ್ಲಿ ವಿವರಿಸಲಾಗಿದೆ. ಇಂತಹ ಎರಡು ಚಿತ್ರಗಳನ್ನು ಬ್ರಿಟಿಷ್ ಪತ್ರಕರ್ತ ಬೆಂಜಮಿನ್ ಹಾರ್ನಿಮ್ಯಾನ್ ಪೊಲೀಸರ ಕಣ್ತಪ್ಪಿಸಿ, ಬ್ರಿಟನ್‌ಗೆ ಕಳ್ಳಸಾಗಣೆ ಮಾಡಿದ್ದರು. ಜಲಿಯನ್ ವಾಲಾಬಾಗ್ ಹತ್ಯಾಕಾಂಡ ನಡೆದಾಗ ಭಗತ್ ಸಿಂಗ್ ಅವರಿಗೆ ಕೇವಲ 12 ವರ್ಷ. ಆದರೆ ಚಿತ್ರದಲ್ಲಿರುವ ವ್ಯಕ್ತಿಯು ಯುವಕನಾಗಿದ್ದಾನೆ. ಅದು ಭಗತ್ ಸಿಂಗ್ ಅಲ್ಲ. ಅದೇ ಚಿತ್ರಗಳನ್ನು ಈಗ ತಪ್ಪು ಮಾಹಿತಿಯೊಂದಿಗೆ ಹಂಚಿಕೊಳ್ಳಲಾಗುತ್ತಿದೆ' ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ದಿನ ಭವಿಷ್ಯ

ಗುರುವಾರ ಸೆಪ್ಟೆಂಬರ್ 16, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ದಶಮಿ ಗಂ. 9-54 (ಹ. 10-14) ಗುರುವಾರ ನಿತ್ಯ ನಕ್ಷತ್ರ ಪೂರ್ವಾಷಾಢ ಗಂ. 0-57 (ಬೆ. 6-38) ಉಪರಿ ಉತ್ತರಾಷಾಢ ಗಂ. 57-13 (ಬೆ.ಝಾ. 5-31) ಶೋಭನ ನಾಮ ಯೋಗ ಗಂ. 46-35 ಗರಜ ಕರಣ ಗಂ. 9-58 ವಿಷ ಗಂ. 20-1 ಅಮೃತ ಗಂ 42-53: ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30: ಸೂರ್ಯೋದಯ: 6-12 ಸೂರ್ಯಾಸ್ತ: 6-17 ಅದೃಷ್ಟ ಸಂಖ್ಯೆ 2, 7

ಮೇಷ: ಅನಗತ್ಯ ಸಿಟ್ಟಿನಿಂದ ಉಂಟಾಗುವ ನಷ್ಟ ತಪ್ಪಿಸಲು ಸಮಾಧಾನದಿಂದ ವರ್ತಿಸಿ. ನ್ಯಾಯಾಲಯದಲ್ಲಿನ ವ್ಯವಹಾರವನ್ನು ಮುಂದಕ್ಕೆ ಹಾಕಿ. ಕೂಲಿ ಕಾರ್ಮಿಕರಿಗೆ ಕೆಲಸದ ಒತ್ತಡ.

ವೃಷಭ: ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳು ಅಂತ್ಯಗೊಂಡು ನೆಮ್ಮದಿ. ಮಾತಿನಿಂದುಂಟಾಗುವ ವೈಮನಸ್ಸಿಗಿಂತಲೂ ಮೌನವೇ ವಾಸಿ. ಕೆಲಸ ಕಾರ್ಯಗಳಲ್ಲಿ ಶ್ರದ್ಧೆಯಿಂದ ತೊಡಗಿಕೊಳ್ಳುವುದು ಉತ್ತಮ.

ಮಿಥುನ: ಉದ್ಯೋಗದಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕತನ ಅವಶ್ಯ. ಸಹೋದ್ಯೋಗಿಗಳೊಂದಿಗೆ ಸಹಕಾರ. ನೆರೆಹೊರೆಯವರೊಂದಿಗಿನ ಬಾಂಧವ್ಯ ಹಳಸುವ ಸಾಧ್ಯತೆ. ಹಣಕಾಸಿನ ವಿಷಯದಲ್ಲಿ ಎಚ್ಚರಿಕೆ ಅಗತ್ಯ.

ಕರ್ಕಾಟಕ: ವಾಹನ ಚಾಲನೆಯಲ್ಲಿ ಮುಂಜಾಗ್ರತೆ ವಹಿಸಿ. ವಿದೇಶ ಪ್ರಯಾಣ ಸಾಧ್ಯತೆ. ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಆಪ್ತರೊಂದಿಗೆ ಮನದಿಂಗಿತವನ್ನು ಮುಕ್ತವಾಗಿ ಹಂಚಿಕೊಳ್ಳಿ.

ಸಿಂಹ: ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಉತ್ತಮ ದಿನ. ಕ್ರೀಡಾಪಟುಗಳಿಗೆ ಅವಕಾಶಗಳು ಹೆಚ್ಚಿ ಪುರಸ್ಕಾರಕ್ಕೆ ಪಾತ್ರರಾಗುವ ಸಾಧ್ಯತೆ. ಶತ್ರುಗಳು ಮಿತ್ರರಾಗುವ ಕಾಲ ಸನ್ನಿಹಿತವಾಗಲಿದೆ.

ಕನ್ಯಾ: ಹಣಕಾಸಿನ ವಿಷಯದಲ್ಲಿ ಯಾವುದೇ ಆತಂಕಕ್ಕೆ ಅವಕಾಶವಿಲ್ಲ. ಹೊಸ ಹೊಸ ವ್ಯವಹಾರ ಆರಂಭಿಸುವ ಯೋಜನೆ ಕೈಗೂಡಲಿದೆ. ಆಸ್ತಿಪಾಸ್ತಿಗಳ ವಿಷಯದಲ್ಲಿ ಜತನ ಮಾಡುವುದು ಒಳಿತು.

ತುಲಾ: ಬೇರೆಯವರ ಒಳಸಂಚಿಗೆ ಬಲಿಪಶುವಾಗದೇ ವಿವೇಚನೆಯಿಂದ ವ್ಯವಹರಿಸುವುದು ಒಳಿತು. ಆರ್ಥಿಕ ಒತ್ತಡಗಳಿಂದಾಗಿ ಕಿರಿಕಿರಿ ಉಂಟಾದೀತು. ವೆಚ್ಚದ ಮೇಲೆ ಹಿಡಿತ ಅಗತ್ಯವೆನಿಸುತ್ತಿದೆ.

ವೃಶ್ಚಿಕ: ನಿಮ್ಮ ವೈಯಕ್ತಿಕ ವಿಚಾರಗಳನ್ನು ಇತರರೊಡನೆ ಚರ್ಚಿಸುವುದರಿಂದ ತೊಂದರೆ. ಉತ್ಪಾದನಾ ಕ್ಷೇತ್ರದಲ್ಲಿ ಉತ್ತಮ ವ್ಯವಹಾರದಿಂದಾಗಿ ಲಾಭ. ಮನೆಯಲ್ಲಿ ನೆಮ್ಮದಿಯ ವಾತಾವರಣ ಮೂಡಲಿದೆ.

ಧನು: ಉದ್ಯೋಗಾಕಾಂಕ್ಷಿಗಳಿಗೆ ಉದ್ಯೋಗಾವಕಾಶಗಳು ದೊರಕಲಿವೆ. ಮನೆಯವರ ವರಾತಕ್ಕೆ ಮಣಿದು ಅಧಿಕ ವೆಚ್ಚ ಭರಿಸಬೇಕಾದ ಸಾಧ್ಯತೆ. ಪ್ರೀತಿಪಾತ್ರರೊಂದಿಗೆ ಸಂಬಂಧ ಬೆಸೆಯುವ ಸಾಧ್ಯತೆ.

ಮಕರ: ವೈದ್ಯಕೀಯ ಕ್ಷೇತ್ರದಲ್ಲಿ ವ್ಯವಹರಿಸುವವರಿಗೆ ವೃಥಾ ಆರೋಪಗಳನ್ನು ಎದುರಿಸಬೇಕಾದೀತು. ಯೋಜನೆಗಳು ಕೈಗೂಡಿ ಯಶಸ್ಸು. ಆತ್ಮೀಯರೊಂದಿಗೆ ದೂರ ಪ್ರಯಾಣ ಸಾಧ್ಯತೆ.

ಕುಂಭ: ಕಂಪ್ಯೂಟರ್ ಮುಂತಾದ ತಾಂತ್ರಿಕ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಉತ್ತಮ ಲಾಭ. ವಿದ್ಯಾರ್ಥಿಗಳಿ ಮಾನಸಿಕ ಚಂಚಲತೆಯಿಂದಾಗಿ ಓದಿನಲ್ಲಿ ಹಿನ್ನಡೆ. ನ್ಯಾಯಾಲಯದಲ್ಲಿನ ಕಟ್ಟಳೆಗಳಲ್ಲಿ ಯಶ.

ಮೀನ: ಹಮ್ಮಿಕೊಂಡ ಯೋಜನೆಗಳಿಗೆ ಸಹಕಾರ ದೊರೆಯುವುದರಿಂದ ಯಶಸ್ಸು. ಆರ್ಥಿಕ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಹಿನ್ನಡೆ. ದಿನಸಿ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿನ ಹೆಚ್ಚಳದಿಂದಾಗಿ ಉತ್ತಮ ಆದಾಯ.

ನಿಮ್ಮ ಜನ್ಮದಿನ 16-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕ. ಕೆಲಸ ಕಾರ್ಯಗಳಲ್ಲೂ ಧೈರ್ಯದಿಂದ ಮುನ್ನುಗ್ಗಿ ಯಶಸ್ಸು. ಆರ್ಥಿಕ ಬಲ ವೃದ್ಧಿಗಾಗಿ ಹೊಸ ಯೋಜನೆಯೊಂದನ್ನು ರೂಪಿಸಿಕೊಳ್ಳುವಿರಿ. ಸಾಂಸಾರಿಕ ಸಂಪನ್ನತೆಗಾಗಿ ದೇವತಾ ಆರಾಧನೆ ಕೈಗೊಳ್ಳುವುದು ಒಳಿತು ತರಲಿದೆ. ಸಂಗಾತಿಯ ಹಿತವನ್ನು ಕಡೆಗಣಿಸುವುದು ಸರಿಯಲ್ಲ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಕ್ಷೇಮಕರವಾದ ಬಂಧುಪ್ರೇಮ

ರಾಮನುಂ ಭರತನುಂ ತಬ್ಬಿಕೊಂಡತ್ತಂದು |
ಪ್ರೇಮಾಶ್ರುವುಕ್ಕೆ ನದಿಯಾಗಿ ಪರಿದಂದು ||
ಸೀಮೆಯಂ ಮುಟ್ಟಿತಲ ಬಾಂಧವ್ಯ ಸೌಂದರ್ಯ |
ಕ್ಷೇಮವದು ಜೀವಕ್ಕೆ – ಮಂಕುತಿಮ್ಮ || 461 ||

ಪದ-ಅರ್ಥ: ತಬ್ಬಿಕೊಂಡತ್ತಂದು = ತಬ್ಬಿಕೊಂಡು+ಅತ್ತಂದು(ಅತ್ತಾಗ), ಪ್ರೇಮಾಶ್ರುವುಕ್ಕೆ = ಪ್ರೇಮಾಶ್ರು (ಪ್ರೇಮದ ಕಣ್ಣೀರು) + ಉಕ್ಕಿ, ಪರಿದಂದು = ಹರಿದಂದು, ಸೀಮೆಯಂ = ಸೀಮೆಯನ್ನು (ಗಡಿಯನ್ನು, ಮಿತಿಯನ್ನು).

ವಾಚ್ಯಾರ್ಥ: ರಾಮ ಮತ್ತು ಭರತರು ತಬ್ಬಿಕೊಂಡು ಅತ್ತಾಗ, ಅವರ ಪ್ರೇಮದ ಕಣ್ಣೀರು ಹರಿದು ನದಿಯಾದಾಗ, ಬಾಂಧವ್ಯದ ಸೌಂದರ್ಯವೆನ್ನುವುದು ತನ್ನ ಗರಿಮೆಯ ಗಡಿಯನ್ನು ಮುಟ್ಟಿತು. ಅದು ಜೀವಕ್ಕೆ ಕ್ಷೇಮಕರವಾದದ್ದು.

ವಿವರಣೆ: ಭಾರತೀಯ ಸಂಸ್ಕೃತಿಯ ಮೂಲಸ್ರೋತಗಳಲ್ಲಿ ರಾಮಾಯಣ ಪ್ರಮುಖವಾದದ್ದು. ಅದರಲ್ಲಿ ಅನೇಕ ರಸಘಟ್ಟಗಳು. ಒಂದಕ್ಕಿಂತ ಒಂದು ಶ್ರೇಷ್ಠವಾದವುಗಳು. ಶ್ರೀರಾಮನನ್ನು ಕಾಣಲು ಓಡಿ ಚಿತ್ರಕೂಟಕ್ಕೆ ಬಂದ ಭರತ. ರಾಮ-ಭರತರ ಮಿಲನ, ಪ್ರಪಂಚ ಸಾಹಿತ್ಯದಲ್ಲೇ ಸರಿ ಮಿಗಿಲಿಲ್ಲದ ಬಾಂಧವ್ಯ ಪ್ರೇಮದ ಉದಾಹರಣೆ. ಅದು ಪರಮಾದರ್ಶದ ಎರಡು ಮಹೋನ್ನತ ಶಿಖರಗಳ ನಡುವಿನ ತಾಕಲಾಟ. ಅಲ್ಲಿ ಭರತನ ತ್ಯಾಗ ದೊಡ್ಡದೋ, ರಾಮನ ತ್ಯಾಗ ದೊಡ್ಡದೋ ಎಂದು ತೀರ್ಮಾನ ಮಾಡಲಾದೀತೇ? ಇಬ್ಬರಿಬ್ಬರಲ್ಲಿ ಅತ್ಯುನ್ನತರಾರು? ಆ ಮಹಾಪುರುಷರ ಸ್ವಭಾವದ ಔನ್ನತ್ಯವನ್ನು ನಮ್ಮ ತಿಳಿವಳಿಕೆಯ ಮಾನದಂಡದಿಂದ ಅಳೆಯುವುದು ಸಾಧ್ಯವಿಲ್ಲ. ನಾವು ಅವರಿಬ್ಬರಿಗೂ ದೂರದಿಂದ ತಲೆಬಾಗಿ ಕೈಮುಗಿಯ ತಕ್ಕವರು.

ಕೇಕಯದಿಂದ ಓಡಿ ಬಂದ ಭರತನಿಗೆ ತಂದೆಯ ಸಾವಿನ ಸುದ್ದಿ ಮೊದಲನೆಯ ಆಘಾತ. ನಂತರ ತನಗಾಗಿ ರಾಜ್ಯತ್ಯಾಗ ಮಾಡಿ ಅರಣ್ಯಕ್ಕೆ ಹೋದ ರಾಮನ ವಿಷಯ ವಜ್ರಾಘಾತ. ಅಷ್ಟು ದೂರದಿಂದ – ಕೇಕಯದಿಂದ ಅಯೋಧ್ಯೆಗೆ, ಅಯೋಧ್ಯೆಯಿಂದ ಚಿತ್ರಕೂಟಕ್ಕೆ ಎಳೆಗರುವಿನಂತೆ ಧಾವಿಸಿ ಬಂದು ಅಣ್ಣನ ಪಾದದ ಮೇಲೆ ಬಿದ್ದಿದ್ದಾನೆ. ಆಕ್ರಂದನ ಬಿಟ್ಟು ಬೇರೊಂದು ಮಾತು ಬಾಯಿಯಿಂದ ಬರುತ್ತಿಲ್ಲ.

ಇಬ್ಬರೂ ಒಂದೊಂದು ರೀತಿಯಲ್ಲಿ ಸಿಂಹಾಸನಕ್ಕೆ ಹಕ್ಕುದಾರರೆ. ಮಂಥರೆ ಕೈಕೇಯಿಗೆ ಹೇಳಿಕೊಡದಿದ್ದರೆ, ಕೋಸಲ ರಾಜ್ಯದ ಸಿಂಹಾಸನ, ದೇಶ ಸಂಪ್ರದಾಯದಂತೆ ಶ್ರೀರಾಮನಿಗೇ ದೊರಕಬೇಕಾಗಿತ್ತು. ಆದರೆ ರಾಮ ಪಿತೃವಾಕ್ಯ ಪರಿಪಾಲನೆಗಾಗಿ ಅದನ್ನು ತ್ಯಾಗ ಮಾಡಿ ನಡೆದಿದ್ದ. ಭರತನಿಗೆ ಈ ಸಿಂಹಾಸನ ಎರಡು ಬಾರಿ ಪ್ರದತ್ತವಾಗಿತ್ತು. ಮೊದಲನೆಯ ಬಾರಿಗೆ, ದಶರಥ ಕೈಕೇಯಿಯನ್ನು ಮದುವೆಯಾಗುವಾಗ, ಅವಳ ಮಗನೇ ಮುಂದೆ ರಾಜನಾಗುತ್ತಾನೆಂದು ಮಾತುಕೊಟ್ಟಾಗ ಅವನಿಗೆ ದಕ್ಕಿತ್ತು. ಎರಡನೆಯ ಬಾರಿಗೆ ಕೈಕೇಯಿಯ ಮಾತಿಗೆ ಅನಿವಾರ್ಯವಾಗಿ ಒಪ್ಪಿಗೆಕೊಟ್ಟ ದಶರಥನ ಮಾತಿನಿಂದ ದೊರೆತಿತ್ತು. ಈಗ ಇಬ್ಬರೂ ತಮಗೆ ಸಿಂಹಾಸನಬೇಡ ಎಂದು ವಾದ ಮಾಡುವುದು ಅತ್ಯಂತ ಅವರ್ಣನೀಯವಾದದ್ದು. ಸಿಂಹಾಸನಕ್ಕಾಗಿ ಪರಸ್ಪರ ಕಾದಾಡಿದ, ಬಂಧುವನ್ನು ಕೊಲ್ಲಿಸಿದ ಸಾವಿರಾರು ಪ್ರಸಂಗಗಳನ್ನು ಕಂಡ ಪ್ರಪಂಚಕ್ಕೆ ಈ ತ್ಯಾಗವೀರರ ಬಂಧುಪ್ರೇಮ ನಂಬಲಸಾಧ್ಯವಾದದ್ದು.

ಈ ಕಗ್ಗ ಅದನ್ನು ತುಂಬ ಚೆನ್ನಾಗಿ ವರ್ಣಿಸುತ್ತದೆ. ಶ್ರೀರಾಮ, ಭರತರು ಪರಸ್ಪರ ತಬ್ಬಿಕೊಂಡು ಅತ್ತಾಗ ಅವರ ಕಣ್ಣೀರು ನದಿಯಾಗಿ ಹರಿಯಿತಂತೆ. ಈ ಭ್ರಾತೃಪ್ರೇಮ ಬಾಂಧವ್ಯ ಸೌಂದರ್ಯದ ಎಂದೂ ತಲುಪಲಾಗದ ಪರಮಸೀಮೆ. ಇಂಥ ಅವ್ಯಾಜವಾದ ಬಂಧುಪ್ರೇಮ ಜೀವಕ್ಕೆ ಕ್ಷೇಮಕರವಾದದ್ದು. ❖

ಪದಬಂಧ 4720

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ವಾಯಸವು ಚಿನ್ನವನ್ನಿಟ್ಟುಕೊಂಡರೆ ಅಭ್ರಕವಾದೀತೆ? (5)
4.ನೀಚ ಇಲ್ಲಿಗೆ ಬಂದಿದ್ದಾನಲ್ಲಾ? (3)
5.ಇದು ಪ್ರತಿಕೂಲವಾದುದು (3)
9.ಶ್ರಮ ನಿರ್ವಹಿಸುವುದು (2)
10.ದಪ್ಪವಾದ ಸೂಜಿಯಿದು (3)
11.ಅವಳು ನೋಡಿದ್ದಕ್ಕೇ ಈ ಕಣ್ಣೀರು! (2)
12.ಕನಸು ಇಲ್ಲಿ ದಿಟವಾಗಿದೆ (3)
14.ಇದು ನಿಸ್ಸಾರವಾದುದು (3)
15.ಸಾಯುವ ಸಮಯವಿದು (5)

ಮೇಲಿಂದ ಕೆಳಕ್ಕೆ

1.ಸಂಬಂಧಿಕನಿಲ್ಲಿ ತಿರುಗಿ ನಿಂತಿದ್ದಾನೆ (2)
2.ಮನ್ಮಥನ ಇನ್ನೊಂದು ಹೆಸರು (2)
3.ವಿರಮಿಸುತ್ತಿದ್ದಾಗ ಮೂಡಿದ ನೇಸರು (2)
4.ಹೆದರಬೇಡ ರಕ್ಷಿಸುತ್ತೇನೆಂದು ಧೈರ್ಯ ಕೊಡುವುದು (5)
6.ಮಡುವಿನೊಳಗೆ ಕಾಣಿಸಿದ ಮರುಭೂಮಿ (5)
7.ಕೊನೆಗೆ ದನವನ್ನಿಟ್ಟು ತುಂಡು ಮಾಡುವಿಕೆ! (3)
8.ಜಿಂಕೆಯ ಮರಿ ಇಲ್ಲಿದೆ (3)
13.ಸುಗಮವಾಗಿ ಕಿತ್ತು ಮುಡಿದ ಹೂವು (2)
14.ಬರಗಾಲದಲ್ಲಿ ತೋರಿದ ಶಕ್ತಿ (2)
16.ಅಲ್ಪವಾದುದು ಇಲ್ಲಿ ಉಲ್ಟಾಪಲ್ಟಾ ಕಾಣುತ್ತಿದೆ (2)

4719ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜಂಬ 3.ಆಯಾಸ 5.ವಸನ 7.ಕುಡಿನೋಟ 9.ವರದಿ 10.ಕಡಲು 11.ನವೀಕೃತ 13.ಮಣಕ 15.ರಸಿಕ 16.ವಪೆ

ಮೇಲಿಂದ ಕೆಳಕ್ಕೆ: 2.ಬಡವ 3.ಆನನ 4.ಸರಕು 6.ಸರದಿ 8.ಟಪಾಲು 9.ವಪನ 10.ಕಲ್ಯಾಣ 12.ತತ್ವರ 13.ಮಶಕ 14.ಕರ್ತವ

ಸುಡೊಕು 5106

		7	1		2		6	
	1			3				9
2		4				1		
	6	8		5			4	1
						7	9	
9	4			2				
3				8		9		5
		6					8	
	8		3		5	6		2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5105 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕ ತಗ್ಗಿಸಲು ವಿಧಾನಸಭೆ ನಿರ್ಣಯಕ್ಕೆ ಕಾಂಗ್ರೆಸ್ ಒತ್ತಾಯ

ಬೆಲೆ ಏರಿಕೆ ವಿರುದ್ಧ ಗುಡುಗಿದ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬುಧವಾರ ವಿಧಾನಸಭಾ ಕಲಾಪದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿದರು

ಬೆಂಗಳೂರು: ಜನಸಾಮಾನ್ಯರು ಕಣ್ಣೀರಿನಲ್ಲಿ ಕೈತೊಳೆಯುವಂತೆ ಮಾಡಿರುವ ಬೆಲೆ ಏರಿಕೆಗೆ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ ಕಾರಣ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನಸಭೆಯಲ್ಲಿ ನಿಯಮ 69ರಡಿ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ತಗ್ಗಿಸಲು ಕೇಂದ್ರದ ಮೇಲೆ ಒತ್ತಡ ಹೇರಲು ವಿಧಾನಸಭೆ ಒಮ್ಮತದ ನಿರ್ಣಯ ತೆಗೆದುಕೊಳ್ಳಬೇಕು, ಅದಕ್ಕಾಗಿ ನಿರ್ಣಯ ಮಂಡಿಸಲು ನಾನು ಸಿದ್ಧನಿದ್ದೇನೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಒತ್ತಾಯಿಸಿದರು. ಆದರೆ, ಬಿಜೆಪಿ ಸದಸ್ಯರು ಇದನ್ನು ವಿರೋಧಿಸಿದರು.

ರಾಜ್ಯ ಸರ್ಕಾರ ಮಾರಾಟ ತೆರಿಗೆ ಮತ್ತು ಸೆಸ್ ಅನ್ನು ಶೇ 50 ರಷ್ಟು ಕಡಿಮೆ ಮಾಡಬೇಕು ಎಂದೂ ಆಗ್ರಹಿಸಿದರು.

'ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮಾನ್ಯರು ಕಷ್ಟದಲ್ಲಿದ್ದಾರೆ. ಬೇಳೆ- ಕಾಳುಗಳು, ಖಾದ್ಯ ತೈಲ ಸೇರಿ ಎಲ್ಲ ವಸ್ತುಗಳ ಬೆಲೆ ಗಗನಕ್ಕೆ ಏರಿದೆ. ತಮಿಳುನಾಡಿನ ಮುಖ್ಯಮಂತ್ರಿ ಆ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರ ₹ 3 ರಷ್ಟು ಕಡಿಮೆ ಮಾಡಿದ್ದಾರೆ. ಅದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ಕಡಿಮೆ ಮಾಡಬೇಕು' ಎಂದರು.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳಕ್ಕೆ ಕೇಂದ್ರ ಸರ್ಕಾರ ಹೆಚ್ಚುವರಿ ಅಬಕಾರಿ ಸುಂಕ ವಿಧಿಸಿದ್ದೇ ಕಾರಣ. ಮನಮೋಹನಸಿಂಗ್ ಅವರು ಪ್ರಧಾನಿ ಆಗಿದ್ದಾಗ ಪೆಟ್ರೋಲ್ ಮೇಲೆ ವಿಧಿಸುತ್ತಿದ್ದ ತೆರಿಗೆ(ಹೆಚ್ಚುವರಿ ಅಬಕಾರಿ ಸುಂಕ) ₹9.21, ಡೀಸೆಲ್ ಮೇಲೆ ₹3.45 ಇತ್ತು. ಈಗ ಅದು ಕ್ರಮವಾಗಿ ₹32.98 ಮತ್ತು ₹31.84 ಆಗಿದೆ ಎಂದು ಹೇಳಿದರು.

ಕಚ್ಚಾತೈಲ ಬೆಲೆ ಆಧರಿಸಿ ಪೆಟ್ರೋಲ್‌ನ ಇಂದಿನ ಮೂಲ ಬೆಲೆ ₹38, ರಾಜ್ಯ ಮತ್ತು ಕೇಂದ್ರ ಸರ್ಕಾರದ ತೆರಿಗೆ ಒಟ್ಟು ₹67. ಹೀಗಾಗಿ ಪೆಟ್ರೋಲ್ ಬೆಲೆ ಲೀಟರ್‌ಗೆ ₹105 ದಾಟಿದೆ. ಇದಕ್ಕೆ ಅಂತರರಾಷ್ಟ್ರೀಯ ಮಾರುಕಟ್ಟೆ, ತಾಲಿಬಾನ್ ಕಾರಣ ಎಂದರೆ ಹೇಗೆ ಎಂದು ಅವರು ಪ್ರಶ್ನಿಸಿದರು.

ಉಜ್ವಲ ಯೋಜನೆಯಡಿ ನೀಡುತ್ತಿದ್ದ ಸಹಾಯಧನವನ್ನು ನಿಲ್ಲಿಸಲಾಗಿದೆ. ಅಡುಗೆ ಅನಿಲ ಹಿಂದೆ ₹414 ಇತ್ತು, ಅದು ಈಗ ₹980 ಕ್ಕೆ ಏರಿಕೆಯಾಗಿದೆ. ಇದರಿಂದ ಸಾಮಾನ್ಯ ಜನ ಅಡುಗೆ ಅನಿಲ ಖರೀದಿಸಲು ಸಾಧ್ಯವಾಗುತ್ತಿಲ್ಲ ಎಂದರು.

ಕ್ರಿಮಿನಲ್ ಲೂಟಿ: 'ಇಂದಿರಾ ಗಾಂಧಿ ಅವರು 1973ರಲ್ಲಿ ಪೆಟ್ರೋಲ್ ಬೆಲೆಯನ್ನು ಏಳು ಪೈಸೆ ಹೆಚ್ಚಿಸಿದ್ದರು. ಇದನ್ನು ಖಂಡಿಸಿ ಅಟಲ್ ಬಿಹಾರಿ ವಾಜಪೇಯಿ ಅವರು ಎತ್ತಿನ ಬಂಡಿಯಲ್ಲಿ ಸದನಕ್ಕೆ ಬಂದಿದ್ದರು. ಇದೊಂದು ಕ್ರಿಮಿನಲ್ ಲೂಟಿ ಎಂದು ಜರೆದಿದ್ದರು. ಈಗಿನ ಬೆಲೆ ಏರಿಕೆ ವಿರುದ್ಧ ಅದೇ ಮಾತನ್ನು ಪುನರುಚ್ಚರಿಸುತ್ತೇನೆ' ಎಂದು ಸಿದ್ದರಾಮಯ್ಯ ಹೇಳಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ,'ನೀವು ಮಾತನಾಡುತ್ತಿರುವುದು ಕೇಂದ್ರ ಸರ್ಕಾರದ ವಿಷಯ. ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ವಿಷಯಗಳನ್ನಷ್ಟೇ ಇಲ್ಲಿ ಪ್ರಸ್ತಾಪಿಸಿ. ಕೇಂದ್ರದ ವಿಚಾರಗಳನ್ನು ಲೋಕಸಭೆಯಲ್ಲಿ ಪ್ರಸ್ತಾಪಿಸಿ' ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಸಲಹೆ ನೀಡಿದರು.

ಸಿದ್ದರಾಮಯ್ಯ ಪ್ರತಿಕ್ರಿಯಿಸಿ, 'ಬೆಲೆ ಏರಿಕೆಯಿಂದ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ಜನರು ನಿತ್ಯ ಅಳಲು ತೋಡಿಕೊಳ್ಳುತ್ತಿದ್ದಾರೆ. ಅವರ ನೋವನ್ನು ಇಲ್ಲಿ ಪ್ರಸ್ತಾಪಿಸಿದ್ದೇನೆ' ಎಂದರು.



'ಪ್ರಜಾವಾಣಿ' ವರದಿ ಉಲ್ಲೇಖ

ಬೆಲೆ ಏರಿಕೆಯಿಂದ ಜನಸಾಮಾನ್ಯರು ಎದುರಿಸುತ್ತಿರುವ ಬವಣೆಗಳ ಬಗ್ಗೆ ಸೆಪ್ಟೆಂಬರ್ 1ರಂದು 'ಪ್ರಜಾವಾಣಿ'ಯಲ್ಲಿ ಪ್ರಕಟವಾದ ವರದಿಯನ್ನು ಸಿದ್ದರಾಮಯ್ಯ ಅವರು ಉಲ್ಲೇಖಿಸಿದರು.

'ಪ್ರಜಾವಾಣಿಯವರು ಸರ್ವೆ ಮಾಡಿ ಈ ವರದಿ ಪ್ರಕಟಿಸಿದ್ದಾರೆ. ಗಾರೆ ಕೆಲಸದವನೊಬ್ಬ ವರ್ಷಕ್ಕೆ ತೆರಿಗೆ ರೂಪದಲ್ಲಿ ₹1 ಲಕ್ಷದಷ್ಟು ಪಾವತಿಸಬೇಕಾದ ಸ್ಥಿತಿ ಇದೆ ಎಂಬುದು ಸರ್ವೆಯಿಂದ ಗೊತ್ತಾಗಿದೆ' ಎಂದು ಅವರು ಹೇಳಿದರು.

ಬೆಲೆ ಏರಿಕೆ ನಿರಂತರ ಪ್ರಕ್ರಿಯೆ: ಸುಧಾಕರ್

'ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ನಿರಂತರ ಪ್ರಕ್ರಿಯೆ' ಎಂದು ಆರೋಗ್ಯ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ.ಸುಧಾಕರ್ ಸಮಜಾಯಿಷಿ ನೀಡಿದರು.

'ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ಕಾಲದಲ್ಲೂ ಬೆಲೆ ಏರಿಕೆ ಆಗಿತ್ತು. ಈಗಲೂ ಬೆಲೆ ಏರಿಕೆ ಆಗಿದೆ. ಮನಮೋಹನ್ ಸಿಂಗ್ ಕಾಲದಲ್ಲಿ ತೈಲ ಬಾಂಡ್‌ಗಳನ್ನು ಖರೀದಿಸಿದ ಪರಿಣಾಮವನ್ನು ಈಗ ಎದುರಿಸಬೇಕಾಗಿದೆ' ಎಂದರು. ಅವರ ಮಾತಿಗೆ ಕಾಂಗ್ರೆಸ್ ಸದಸ್ಯರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

'ಕಾಂಗ್ರೆಸ್ ಸಾಲ ಎಂದು ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ಮಾಡುತ್ತೀರಿ' ಎಂದು ಕುಣಿಗಲ್ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಡಿ.ರಂಗನಾಥ್ ಕಿಡಿಕಾರಿದರು.

'70 ವರ್ಷಗಳ ಕಾಂಗ್ರೆಸ್ ದುರಾಡಳಿತದಿಂದ ಈ ಪರಿಸ್ಥಿತಿ ಬಂದಿದೆ' ಎಂದು ಬಿಜೆಪಿ ಸದಸ್ಯರು ಚುಚ್ಚಿದರು. 'ಕಾಂಗ್ರೆಸ್ 70 ವರ್ಷಗಳಲ್ಲಿ ಎಲ್ಲವನ್ನೂ ಕಟ್ಟುವ ಕೆಲಸ ಮಾಡಿತ್ತು. ಬಿಜೆಪಿ ಸರ್ಕಾರ ಐದು ವರ್ಷಗಳಲ್ಲೇ ಎಲ್ಲವನ್ನೂ ಮಾರುವ ಕೆಲಸ ಮಾಡುತ್ತಿದೆ' ಎಂದು ಕಾಂಗ್ರೆಸ್ ಸದಸ್ಯರು ತಿರುಗೇಟು ನೀಡಿದರು. 'ಚೌಕಿದಾರ್ ಚೋರ್ ಹೈ' ಎಂದೂ ಘೋಷಣೆ ಕೂಗಿದರು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald--Prajavani Relief Trust' ಹೆಸರಿಗೆ ಕಳುಹಿಸಬಹುದು. ಹಣ ಸಂದಾಯ ಮಾಡಿದ ವಿವರ, ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು dept.finc@printersmysore.co.in ಮೇಲ್ ಮುಖಾಂತರ ತಿಳಿಸಿ.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - **0404101200385**
IFSC code - **CNRB0000404**
MICR Code - **560015009**

ಸೂಚನೆ
ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ
ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್‌ಎಸ್‌ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಮೇಲ್ಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಮೇಲೆ ಪೊಲೀಸರು ನಡೆಸಿದ ಲಾಠಿ ಪ್ರಹಾರವನ್ನು ಖಂಡಿಸಿ ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್ ಸದಸ್ಯರು ಮಾತನಾಡಿದರು. ಸದಸ್ಯ ಆರ್. ಪ್ರಸನ್ನಕುಮಾರ್, ಆರ್.ಬಿ.ತಿಮ್ಮಾಪೂರ, ವಿಜಯ್ ಸಿಂಗ್, ಎಂ.ವೈ. ಗೋಪಾಲಸ್ವಾಮಿ ಮತ್ತು ಬಸವರಾಜ ಪಾಟೀಲ ಇಟಗಿ ಇದ್ದರು.

ಜನವಸತಿಗಳಿಗೆ ಕಂದಾಯ ಗ್ರಾಮಗಳ ಸ್ಥಾನಮಾನ ಪ್ರಕ್ರಿಯೆ ತ್ವರಿತಕ್ಕೆ ನಿರ್ದೇಶನ

803 ಕಂದಾಯ ಗ್ರಾಮ ಘೋಷಣೆ: ಅಶೋಕ

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಬೆಂಗಳೂರು: ಲಂಬಾಣಿ ತಾಂಡಾಗಳು, ಭೋವಿ ಹಟ್ಟಿಗಳು ಸೇರಿದಂತೆ ರಾಜ್ಯದ ವಿವಿಧೆಡೆಯ 803 ಜನವಸತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಿ ಆದೇಶ ಹೊರಡಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬುಧವಾರ ಕಾಂಗ್ರೆಸ್‌ನ ಪ್ರಕಾಶ್ ರಾಥೋಡ್ ಪ್ರಶ್ನೆಗೆ ಉತ್ತರಿಸಿದ ಅವರು, '1,400 ಜನವಸತಿಗಳಿಗೆ ಕಂದಾಯ ಗ್ರಾಮಗಳ ಸ್ಥಾನಮಾನ ನೀಡುವ ಪ್ರಕ್ರಿಯೆ ಆರಂಭವಾಗಿತ್ತು. 803 ಪೂರ್ಣಗೊಂಡಿದೆ. ಬಾಕಿ ಉಳಿದಿರುವ ಜನವಸತಿಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಿ ಆದೇಶ ಹೊರಡಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ' ಎಂದರು.

ಜನವಸತಿಗಳಿಗೆ ಕಂದಾಯ ಗ್ರಾಮದ ಸ್ಥಾನಮಾನ ಇದ್ದರೆ ಮಾತ್ರ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಪಡೆಯುವುದು ಸುಲಭ. ಮೂಲಸೌಕರ್ಯ ಒದಗಿಸುವುದಕ್ಕೂ ಅನುಕೂಲವಾಗುತ್ತದೆ. ಈ ವಿಚಾರವನ್ನು ರಾಜ್ಯ ಸರ್ಕಾರ ಆದ್ಯತೆಯ ಕೆಲಸವನ್ನಾಗಿ ಪರಿಗಣಿಸಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಹಲಗೂರು ಹೋಬಳಿಯ ಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಮಣಿಗಾರನಕಟ್ಟೆ- ಹೊಸದೊಡ್ಡಿ ತಾಂಡಾದ ಜನರ ಮನೆಗಳಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಹಕ್ಕುಪತ್ರ ವಿತರಣೆಗೆ ಪರಿಶೀಲನೆ ನಡೆಯುತ್ತಿದೆ. ದಾಳನಕಟ್ಟೆ ತಾಂಡಾವನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸಲಾಗಿದೆ. ಬಸವಗೌಡನ ದೊಡ್ಡಿಯನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಶ್ನೆಗೆ ಉತ್ತರಿಸಿದರು.

'ರಾಜ್ಯದಲ್ಲಿ 5,000ಕ್ಕೂ ಹೆಚ್ಚು ಲಂಬಾಣಿ ತಾಂಡಾ ಮತ್ತು ಭೋವಿ ಹಟ್ಟಿಗಳಿಗೆ ಕಂದಾಯ ಗ್ರಾಮದ ಮಾನ್ಯತೆ ಇಲ್ಲ. ಈ ಎಲ್ಲ ಜನವಸತಿಗಳನ್ನೂ ಕಂದಾಯ ಗ್ರಾಮಗಳನ್ನಾಗಿ ಘೋಷಿಸಬೇಕು' ಎಂದು ರಾಥೋಡ್ ಆಗ್ರಹಿಸಿದರು.

ತಡೆಯಾಜ್ಞೆ ತೆರವಿಗೆ ಪ್ರಯತ್ನ: ಜೆಡಿಎಸ್‌ನ ಕಾಂತರಾಜ್ ಪ್ರಶ್ನೆಗೆ ಉತ್ತರಿಸಿದ ಅಶೋಕ, 'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಶಿವರಾಮ ಕಾರಂತ ಬಡಾವಣೆ ವ್ಯಾಪ್ತಿಯಲ್ಲಿನ ಕಂದಾಯ ನಿವೇಶನಗಳ ನೋಂದಣಿ ಕುರಿತ ವ್ಯಾಜ್ಯ ಸುಪ್ರೀಂಕೋರ್ಟ್‌ನಲ್ಲಿದೆ. ಇದರಿಂದ ಕಂದಾಯ ನಿವೇಶನಗಳ ನೋಂದಣಿ ಮತ್ತು ಅನಧಿಕೃತ ಬಡಾವಣೆಗಳ ಸಕ್ರಮಕ್ಕೆ ಕಾನೂನು ತೊಡಕು ಉಂಟಾಗಿದೆ. ತಡೆಯಾಜ್ಞೆ ತೆರವುಗೊಳಿಸಲು ಪ್ರಯತ್ನ ಮಾಡಲಾಗುವುದು' ಎಂದು ಭರವಸೆ ನೀಡಿದರು.

ಗ್ರಾಮ ಠಾಣಾ ವ್ಯಾಪ್ತಿಯ ನಿವೇಶನಗಳ ನೋಂದಣಿಗೆ ಇ-ಸ್ವತ್ತು ಕಡ್ಡಾಯಗೊಳಿಸಲಾಗಿದೆ. ಕಂದಾಯ ನಿವೇಶನಗಳ ನೋಂದಣಿಯಲ್ಲಿ ಅಕ್ರಮ ತಡೆಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಸದ್ಯಕ್ಕೆ ಈ ಆದೇಶ ಹಿಂಪಡೆಯುವ ಪ್ರಸ್ತಾವವಿಲ್ಲ ಎಂದರು.

ಗ್ರಾ.ಪಂ ಸದಸ್ಯರ ಗೌರವಧನ ಹೆಚ್ಚಳ; ಕೋಟ ಭರವಸೆ

ಬೆಂಗಳೂರು: 'ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರ ಗೌರವಧನ ಹೆಚ್ಚಳ ಮಾಡುವ ಸಂಬಂಧ ಶೀಘ್ರ ಅಂತಿಮ ತೀರ್ಮಾನಿಸಲಾಗುವುದು' ಎಂದು ವಿಧಾನ ಪರಿಷತ್ ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್‌ನ ಸುನೀಲ್ ಗೌಡ ಪಾಟೀಲ ಅವರು ಪ್ರಸ್ತಾಪಿಸಿದ ವಿಷಯಕ್ಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಪರವಾಗಿ ಉತ್ತರ ನೀಡಿದ ಅವರು, 'ಗೌರವಧನ ಹೆಚ್ಚಿಸುವ ಕುರಿತು ಹಣಕಾಸು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ, ಶೀಘ್ರದಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಗ್ರಾಮ ಪಂಚಾಯಿತಿ ಸದಸ್ಯರಿಗೆ ಕನಿಷ್ಠ ಕೂಲಿಗಿಂತ ಕಡಿಮೆ ಗೌರವಧನ ನೀಡಲಾಗುತ್ತಿದೆ. ಸದ್ಯ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ₹ 3 ಸಾವಿರ, ಉಪಾಧ್ಯಕ್ಷರಿಗೆ ₹ 2 ಸಾವಿರ ಮತ್ತು ಸದಸ್ಯರಿಗೆ ₹ 1 ಸಾವಿರ ತಿಂಗಳಿಗೆ ಗೌರವಧನ ನೀಡಲಾಗುತ್ತಿದೆ. ಅದನ್ನು ಕ್ರಮವಾಗಿ ₹ 5 ಸಾವಿರ, ₹ 4 ಸಾವಿರ ಮತ್ತು ₹ 3 ಸಾವಿರಕ್ಕೆ ಹೆಚ್ಚಿಸಬೇಕು. ಈ ಗೌರವಧನವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಅವರೆಲ್ಲರಿಗೂ ಉಚಿತ ಬಸ್ ಪಾಸ್ ನೀಡಬೇಕು' ಎಂದು ಸುನೀಲ್ ಗೌಡ ಪಾಟೀಲ ಅವರು ಸದನದ ಗಮನ ಸೆಳೆದರು. ವಿರೋಧ ಪಕ್ಷದ ನಾಯಕ ಎಸ್. ಆರ್. ಪಾಟೀಲ ಸೇರಿದಂತೆ ಹಲವು ಸದಸ್ಯರು ಪಾಟೀಲ ಅವರ ಪ್ರಸ್ತಾವಕ್ಕೆ ಬೆಂಬಲ ವ್ಯಕ್ತಪಡಿಸಿದರು.

'ಅಧಿವೇಶನ ಮುಗಿಯುತ್ತಿದ್ದಂತೆ ಸ್ಥಳೀಯ ಸಂಸ್ಥೆಗಳಿಂದ ಆಯ್ಕೆಯಾಗಿರುವ 25 ವಿಧಾನ ಪರಿಷತ್ ಸದಸ್ಯರ ಸಭೆ ಕರೆದು ಈ ಬಗ್ಗೆ ಚರ್ಚೆ ನಡೆಸಲಾಗುವುದು. ಪಂಚಾಯಿತಿ ಸದಸ್ಯರಿಗೆ ಅವರವರ ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಸಂಚರಿಸಲು ಉಚಿತವಾಗಿ ಬಸ್ ಪಾಸ್ ನೀಡುವ ಸಂಬಂಧ ಕೆಎಸ್‌ಆರ್‌ಸಿ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು' ಎಂದೂ ಕೋಟ ತಿಳಿಸಿದರು.

'ನಿಯೋಜನೆಯಲ್ಲಿದ್ದವರು ಇಲಾಖೆಗೆ ವಾಪಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯಿಂದ ನಿಯೋಜನೆ ಮೇರೆಗೆ ಬೇರೆ ಇಲಾಖೆಗೆ ಹೋಗಿರುವ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲಾಗುವುದು ಎಂದು ಸಚಿವ ಕೆ.ಎಸ್.ಈಶ್ವರಪ್ಪ ಹೇಳಿದರು.

ವಿಧಾನಸಭೆಯಲ್ಲಿ ಬುಧವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಸಂಜೀವ ಮಠಂದೂರು ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಇನ್ನು ಮುಂದೆ ಯಾವುದೇ ಅಧಿಕಾರಿಗಳನ್ನು ನಿಯೋಜನೆ ಮೇರೆಗೆ ಕಳುಹಿಸುವುದಿಲ್ಲ. ಈಗಾಗಲೇ ನಿಯೋಜನೆ ಮೇರೆಗೆ ಹೋಗಿರುವವರನ್ನು ವಾಪಸ್ ಕರೆಸಿಕೊಳ್ಳುವುದು ಕಷ್ಟ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಜೆಡಿಎಸ್‌ನ ವೆಂಕಟರಾವ್ ನಾಡಗೌಡ, 'ಪಶು ಸಂಗೋಪನೆ ಇಲಾಖೆಯಿಂದ ನಿಯೋಜನೆ ಮೇರೆಗೆ ಹೋಗಿದ್ದವರನ್ನು ನಾನು ಸಚಿವನಾಗಿದ್ದ ವೇಳೆಗೆ ವಾಪಸ್ ಕರೆಸಿಕೊಂಡಿದ್ದೆ. ನೀವು ಸಹ ಆದೇಶ ಹೊರಡಿಸಿ ಈ ಬಗ್ಗೆ ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿದರು.

ಈಶ್ವರಪ್ಪ, 'ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಆಪ್ತ ಸಹಾಯಕರಾಗಿ ಹಾಕಿಸಿಕೊಡಿ ಎಂದು ಹಲವು ಶಾಸಕರು ನನ್ನ ಮೇಲೆ ನಿರಂತರ ಒತ್ತಡ ಹೇರುತ್ತಿರುತ್ತಾರೆ. ಅನಿವಾರ್ಯವಾಗಿ ನಿಯೋಜನೆ ಮೇರೆಗೆ ಕಳುಹಿಸಬೇಕಾಗುತ್ತದೆ. ಇಲ್ಲಿ ಗದ್ದಲ ಎಬ್ಬಿಸುವವರೇ ಮತ್ತೆ ಪತ್ರ ಹಿಡಿದುಕೊಂಡು ಬರುತ್ತಾರೆ. ಇಡೀ ಸದನ ಒಪ್ಪಿದರೆ ಈ ಅಧಿಕಾರಿಗಳನ್ನು ವಾಪಸ್ ಕರೆಸಿಕೊಳ್ಳಲು ನಾನು ಸಿದ್ಧ' ಎಂದು ಹೇಳಿದರು. ಇಲಾಖೆಗೆ ವಾಪಸ್ ಕರೆಸಿಕೊಳ್ಳಿ ಎಂದು ಹಲವು ಸದಸ್ಯರು ಒತ್ತಾಯಿಸಿದರು.

'ಈ ಬಗ್ಗೆ ಆದೇಶ ಹೊರಡಿಸುತ್ತೇನೆ' ಎಂದು ಈಶ್ವರಪ್ಪ ಭರವಸೆ ನೀಡಿದರು.

ದೇಗುಲ ಒಡೆಯುವುದನ್ನು ಒಪ್ಪುವುದಿಲ್ಲ: ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ಸಂಸ್ಕೃತಿ ನಂಬಿಕೊಂಡು ಇರುವ ಪಕ್ಷ. ರಾಜ್ಯದ ಯಾವುದೇ ದೇವಸ್ಥಾನ ಒಡೆಯುವುದನ್ನೂ ನಾನು ಒಪ್ಪುವುದಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಹೇಳಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, 'ಸುಪ್ರೀಂಕೋರ್ಟ್ ಆದೇಶಗಳು ಬೇಕಾದಷ್ಟಿವೆ. ಒಂದೇ ಒಂದು ದೇವಸ್ಥಾನ ಒಡೆದರೂ ತಪ್ಪು. ಮೈಸೂರಿನ ಘಟನೆಯಿಂದ ಇಡೀ ರಾಜ್ಯದಲ್ಲಿ ದೇವಸ್ಥಾನ ಒಡೆಯುವ ಆತಂಕ ವ್ಯಕ್ತವಾಗಿದೆ. ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇರುವ ಸಂದರ್ಭದಲ್ಲಿ ಜಿಲ್ಲಾಧಿಕಾರಿ ದೇವಸ್ಥಾನಗಳನ್ನು ಒಡೆದಿರುವುದು ಸರಿಯಲ್ಲ' ಎಂದು ಹೇಳಿದರು.

ದೇವಸ್ಥಾನಗಳನ್ನು ಮಾತ್ರ ಜಿಲ್ಲಾಧಿಕಾರಿ ಏಕೆ ತೆರವು ಮಾಡಿಸಿದರು ಎಂಬ ಪ್ರಶ್ನೆ ಕಾಡುತ್ತಿದೆ. ಕಾಂಗ್ರೆಸ್ ನಾಯಕರು ಈ ವಿಚಾರದಲ್ಲಿ ಹೇಳುತ್ತಿರುವುದರಲ್ಲಿ ತಪ್ಪಿಲ್ಲ. ದೇವಸ್ಥಾನಗಳನ್ನು ಉಳಿಸಬೇಕು ಎಂಬ ಭಾವನ ಈಗಲಾದರೂ ಅವರಲ್ಲಿ ಬಂದಿದೆಯಲ್ಲ, ಅದು ಮುಖ್ಯ ಎಂದು ಅವರು ಹೇಳಿದರು.

'ಇಡೀ ರಾಜ್ಯದಲ್ಲಿ ಯಾರೂ ದೇವಸ್ಥಾನಗಳನ್ನು ಕೆಡವಲು ಹೋಗಬಾರದು. ಅಕ್ರಮ, ಅನಧಿಕೃತ ಎಂದು ಎಷ್ಟೇ ದೇವಸ್ಥಾನಗಳನ್ನು ಪಟ್ಟಿ ಮಾಡಿರಲಿ. ಯಾವುದನ್ನೂ ಒಡೆಯಲು ಬಿಡುವುದಿಲ್ಲ. ಈ ಕುರಿತು ಮುಖ್ಯಮಂತ್ರಿ ಚರ್ಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುತ್ತೇವೆ' ಎಂದರು.

ಮಾನ ಉಳಿಸಿಕೊಳ್ಳಲು ಬಿಜೆಪಿ ಯತ್ನ: ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ಸರ್ಕಾರದಲ್ಲಿರುವವರ ಗಮನಕ್ಕೆ ಬಾರದೇ ಮುಖ್ಯ ಕಾರ್ಯದರ್ಶಿಯವರು ದೇವಸ್ಥಾನಗಳ ತೆರವಿಗೆ ಆದೇಶ ನೀಡಿಲ್ಲ. ಈಗ ಬಿಜೆಪಿ ನಾಯಕರು ಮಾನ ಉಳಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅನಧಿಕೃತ ಧಾರ್ಮಿಕ ಕಟ್ಟಡಗಳ ನೆಲಸಮ ಕಾರ್ಯಾಚರಣೆ ತಿಂಗಳಿಂದ ನಡೆಯುತ್ತಿದೆ. ವಿರೋಧ ವ್ಯಕ್ತವಾಗುತ್ತಿದ್ದಂತೆಯೇ ರಾಜ್ಯ ಸರ್ಕಾರ ಬಣ್ಣ ಬದಲಾಯಿಸಿದೆ' ಎಂದರು.

'ಸರ್ಕಾರದ ಗಮನಕ್ಕೆ ಬಾರದೆ ದೇವಸ್ಥಾನ ಒಡೆದಿದ್ದಾರಾ? ಮೈಸೂರು ಸಂಸದರು ಈಗ ವಿರೋಧ ಮಾಡುತ್ತಿದ್ದಾರೆ. ಅದರ ಬದಲಿಗೆ ಸರ್ಕಾರದ ಜತೆ ಮಾತುಕತೆ ನಡೆಸಿ ದೇವಸ್ಥಾನ ಒಡೆಯುವುದನ್ನು ತಡೆಯಬಹುದಿತ್ತಲ್ಲವೆ' ಎಂದು ಪ್ರಶ್ನಿಸಿದರು.

ಬಿಜೆಪಿಯವರು ಮಾತೆತ್ತಿದರೆ ಶ್ರೀರಾಮನ ಹೆಸರು ಹೇಳುತ್ತಾರೆ. ಈಗ ಅವರೇ ಹಿಂದೂ ದೇವಾಲಯಗಳನ್ನು ಧ್ವಂಸ ಮಾಡಿದ್ದಾರೆ. ಇದು ಬಿಜೆಪಿಯವರ ಢೋಂಗಿತನ ತೋರಿಸುತ್ತದೆ. ಹಿಂದುತ್ವ ಅವರಿಗೆ ರಾಜಕಾರಣಕ್ಕೆ ಮಾತ್ರ ಎಂಬುದು ಸಾಬೀತಾಗಿದೆ ಎಂದು ವಾಗ್ದಾಳಿ ನಡೆಸಿದರು.

'ಸುಪ್ರೀಂಕೋರ್ಟ್ ಆದೇಶ ಬಂದು ಬಹಳ ವರ್ಷಗಳಾಗಿವೆ. ಇಷ್ಟು ದಿನ ಇವರು ಏನು ಮಾಡುತ್ತಾ ಇದ್ದರು. ಈಗ ಸಂಪುಟದಲ್ಲಿ ಚರ್ಚಿಸುತ್ತೇವೆ ಅನ್ನುವುದೂ ಢೋಂಗಿತನ' ಎಂದರು.

ಟೋಲ್‌ಗಳಲ್ಲಿ ಶಾಸಕರಿಗೆ ಪ್ರತ್ಯೇಕ ಪಥ ಬೇಕಂತೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾವು ಶಾಸಕರು, ಟೋಲ್‌ಗಳಲ್ಲಿ ನಮ್ಮ ವಾಹನ ತಡೆದು ಗುರುತಿನ ಚೀಟಿ ಕೇಳುವುದೆಂದರೇನು? ನಮಗೇನು ಗೌರವ, ಘನತೆ ಇಲ್ಲವೇ...?

ಹೀಗೆಂದು ವಿಧಾನಸಭೆಯಲ್ಲಿ ಪ್ರಶ್ನಿಸಿದ್ದು ಜೆಡಿಎಸ್‌ನ ಡಾ. ಕೆ. ಅನ್ನದಾನಿ ಮತ್ತು ಕೆ.ಎಂ.ಶಿವಲಿಂಗೇಗೌಡ. ಗಮನ ಸೆಳೆಯುವ ಸೂಚನೆಯಡಿ ಅನ್ನದಾನಿ ಅವರು, ರಾಜ್ಯದ ಟೋಲ್‌ಗಳಲ್ಲಿ ಗಣ್ಯ ಮತ್ತು ಅತಿ ಗಣ್ಯ ವ್ಯಕ್ತಿಗಳಿಗೆ ಪ್ರತ್ಯೇಕ ಪಥ ಗುರುತಿಸಬೇಕು ಎಂಬ ಬೇಡಿಕೆ ಸಲ್ಲಿಸಿದರು.

'ನಮ್ಮ ವಾಹನಗಳನ್ನು ಸಾರ್ವಜನಿಕರ ವಾಹನದ ಜತೆಗೆ ಒಯ್ಯಬೇಕು. ವಿಐಪಿ ಪಥ ಇದ್ದರೂ ಎಲ್ಲರನ್ನೂ ಅದರಲ್ಲಿ ಬಿಡುತ್ತಿದ್ದಾರೆ. ನಮ್ಮ ಐಡಿ ಕೇಳುತ್ತಾರೆ. ನಮಗೇನು ಬೆಲೆ ಇಲ್ಲವೇ' ಎಂದು ಅನ್ನದಾನಿ ಪ್ರಶ್ನಿಸಿದರು.

ಇದಕ್ಕೆ ಧ್ವನಿಗೂಡಿಸಿದ ಶಿವಲಿಂಗೇಗೌಡ ಅವರು, 'ಟೋಲ್‌ಗಳಲ್ಲಿ ನಮಗೆ ಗೌರವ ಸಿಗದಿದ್ದರೆ, ಊರಿನ ಜನ ಏನಂದುಕೊಳ್ಳುತ್ತಾರೆ. ನಮ್ಮ ವಾಹನಗಳಿಗೆ ಎಂಎಲ್‌ಎ ಎಂಬ ಫಲಕ ಇದ್ದರೂ, ವಾಹನದ ಕಿಟಕಿಯಲ್ಲಿ ಬಗ್ಗಿ ಬಗ್ಗಿ ನೋಡುತ್ತಾರೆ. ಇವಕ್ಕೆ ಏನು ಮಾಡೋದು. ಜನಪ್ರತಿನಿಧಿಗಳಿಗೆ ಗೌರವ ಘನತೆ ಇಲ್ಲವೇ. ಪ್ರತ್ಯೇಕ ಪಥ ಮಾಡಲು ಸಾಧ್ಯವಿಲ್ಲದಿದ್ದರೆ, ನಮಗೆ ಕೊಟ್ಟಿರುವ ಪಾಸ್ ಹಿಂದಕ್ಕೆ ಪಡೆಯಿರಿ' ಎಂದು ಖಾರವಾಗಿ ನುಡಿದರು.

ಇಬ್ಬರ ಗದ್ದಲದಿಂದ ಬೇಸತ್ತ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ರಾಜ್ಯ ಆರೂವರೆ ಕೋಟಿ ಜನರ ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆ ಆಗಬೇಕು. 224 ಶಾಸಕರ ಬಗ್ಗೆ ಅಲ್ಲ. ನಿಮ್ಮ ಸಮಸ್ಯೆಗಳನ್ನು ಸಚಿವರ ಜತೆ ಕೂತು ಚರ್ಚಿಸಿಕೊಳ್ಳಿ' ಎಂದರು.

ರಾಜ್ಯ ಟೋಲ್‌ಗಳಲ್ಲಿ ಶಾಸಕರಿಗೆ ಉಚಿತವಾಗಿ ಪ್ರಯಾಣಿಸಲು ಪಾಸ್‌ಗಳನ್ನು ನೀಡಲಾಗುತ್ತಿದೆ. ತಡೆ ಇಲ್ಲದೆ ಸಂಚಾರಕ್ಕೆ ಪ್ರತ್ಯೇಕ ಲೇನ್ ವ್ಯವಸ್ಥೆ ಮಾಡಬೇಕು ಎಂಬುದು ಶಾಸಕರ ಆಗ್ರಹವಾಗಿತ್ತು.

ಅತ್ಯಾಚಾರ ಅಪರಾಧಿಗೆ 20 ವರ್ಷ ಕಠಿಣ ಶಿಕ್ಷೆ

ಶಿವಮೊಗ್ಗ: ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಯುವಕನಿಗೆ ಪೋಕ್ಸೊ ನ್ಯಾಯಾಲಯ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹ 50 ಸಾವಿರ ದಂಡ ವಿಧಿಸಿದೆ.

ಶಿವಮೊಗ್ಗ ಟಿಪ್ಪುನಗರದ ಮೊಹಮದ್ ಗೌಸ್ ಪೀರ್ ಶಿಕ್ಷೆಗೆ ಒಳಗಾದ ಅಪರಾಧಿ. ಆತ ಎರಡು ವರ್ಷಗಳ ಹಿಂದೆ 9 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದ. ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇನ್‌ಸ್ಪೆಕ್ಟರ್ ಬಿ.ಕೆ.ಲತಾ ಪ್ರಕರಣದ ತನಿಖೆ ನಡೆಸಿದ್ದರು.

ನ್ಯಾಯಾಲಯದ ವಿಚಾರಣೆ ನಡೆದು ಆರೋಪ ಸಾಬೀತಾಗಿದ್ದು, ನ್ಯಾಯಾಧೀಶ ದಯಾನಂದ ಮಂಗಳವಾರ ಶಿಕ್ಷೆಯ ಆದೇಶ ಪ್ರಕಟಿಸಿದರು.

ದಂಡದ ಹಣದಲ್ಲಿ ₹ 48 ಸಾವಿರ ಬಾಲಕಿಗೆ ಪರಿಹಾರ ನೀಡಲು ಸೂಚಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ವಕೀಲ ಸತೀಶ್ ವಾದ ಮಂಡಿಸಿದ್ದರು.

ದಟ್ಟಾರಣ್ಯದಲ್ಲಿ ಸೆಟಲೈಟ್ ಫೋನ್ ಸದ್ದು ?

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ದಟ್ಟ ಅರಣ್ಯದ ಕೆಲವು ಪ್ರದೇಶಗಳಲ್ಲಿ ಕಳೆದ ಒಂದು ವಾರದ ಅವಧಿಯಲ್ಲಿ ತುರಾಯಾ ಸ್ಯಾಟಲೈಟ್ ಫೋನ್ ಸದ್ದು ಮಾಡಿರುವ ಮಾಹಿತಿ ಲಭಿಸಿದೆ. ಇಲ್ಲಿಂದ ವಿದೇಶಕ್ಕೆ ಕರೆ ಸಂಪರ್ಕ ಆಗಿರುವುದನ್ನು ಗುಪ್ತಚರ ಅಧಿಕಾರಿಗಳು ಪತ್ತೆ ಮಾಡಿದ್ದಾರೆ ಎಂದು ತಿಳಿದುಬಂದಿದೆ.

ತುರಾಯಾ ಸ್ಯಾಟಲೈಟ್ ಫೋನ್ ಬಳಕೆಯನ್ನು ಭಾರತದಲ್ಲಿ ನಿಷೇಧಿಸಲಾಗಿದ್ದರೂ, ರಾಜ್ಯದ ಕರಾವಳಿಯಲ್ಲಿ ಈ ಫೋನ್ ಸಂಪರ್ಕ ಆಗಿರುವುದನ್ನು ಗುಪ್ತಚರ ಮೂಲಗಳು ದೃಢಪಡಿಸಿವೆ.

ಇತ್ತೀಚೆಗೆ ಶ್ರೀಲಂಕಾದಿಂದ ಐಎಸ್ ಪ್ರೇರಿತ ಶಂಕಿತ ಉಗ್ರರು ಭಾರತದ ಕರಾವಳಿಗೆ ನುಸುಳಿದ್ದಾರೆ ಎಂದು ಸುದ್ದಿಯಾಗಿತ್ತು. ಈ ಕಾರಣದಿಂದ ಕೇಂದ್ರ ಗುಪ್ತಚರ ಇಲಾಖೆಯಿಂದ ಕಟ್ಟೆಚ್ಚರದ ಸೂಚನೆ ಬಂದಿತ್ತು. ಇದರ ಬೆನ್ನಲ್ಲೇ ನಿಷೇಧಿತ ಸ್ಯಾಟಲೈಟ್ ಫೋನ್ ಕರಾವಳಿಯಲ್ಲಿ ಸದ್ದುಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯ ಅರಣ್ಯ, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಅರಣ್ಯ ಪ್ರದೇಶದಲ್ಲಿ ಫೋನ್ ಸಂಪರ್ಕವಾಗಿರುವುದು ಗೊತ್ತಾಗಿದೆ.

ತುರಾಯಾ ಫೋನ್ ಅನ್ನು ಬಳಸಿದವರು ಯಾರು, ಅದರ ಮೂಲಕ ಯಾರನ್ನು ಸಂಪರ್ಕಿಸಲಾಗಿದೆ ಎಂಬುದನ್ನು ಖಚಿತವಾಗಿ ಪತ್ತೆ ಮಾಡಲು ಆಗದು. ಹೀಗಾಗಿ ಈ ಫೋನ್ ಬಳಕೆಯನ್ನು ಭಾರತದಲ್ಲಿ 2012ರಲ್ಲೇ ನಿಷೇಧಿಸಲಾಗಿದೆ. ಈ ಫೋನ್ ಬಳಕೆಯಾಗಿ ಒಂದು ದಿನದ ಬಳಿಕ ಗುಪ್ತಚರ ಪಡೆಗಳಿಗೆ ಸಂದೇಶ ಬರುತ್ತದೆ ಎಂದು ಮೂಲಗಳು ತಿಳಿಸಿವೆ.

ಕೋವಿಡ್ ಎರಡನೇ ಅಲೆ: 271 ಮಕ್ಕಳ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡನೇ ಅಲೆಯ ವೇಳೆಗೆ 0–6 ವಯಸ್ಸಿನ 57,364 ಮಕ್ಕಳು ಕೋವಿಡ್‌ನಿಂದ ಬಳಲಿದ್ದಾರೆ. 271 ಮಕ್ಕಳು ಮೃತಪಟ್ಟಿದ್ದಾರೆ ಎಂದು ವಿಧಾನಮಂಡಲದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಮಿತಿಯ 37ನೇ ವರದಿಯನ್ನು ಸಮಿತಿ ಅಧ್ಯಕ್ಷೆ ಕೆ.ಪೂರ್ಣಿಮಾ ಅವರು ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದರು.

ಮನೆ ಮನೆಗೆ ತೆರಳಿ ಮಕ್ಕಳಲ್ಲಿರುವ ಅಪೌಷ್ಟಿಕತೆ ಕುರಿತು ಅಧ್ಯಯನ ಮಾಡಬೇಕು. ತೀವ್ರ ಅಪೌಷ್ಟಿಕತೆ ಸಮಸ್ಯೆ ಇರುವ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕ ಕ್ವಾರಂಟೈನ್ ಕೇಂದ್ರ ಸ್ಥಾಪಿಸಬೇಕು ಎಂದೂ ಸಮಿತಿ ಶಿಫಾರಸು ಮಾಡಿದೆ.

ಭಿಕ್ಷಾಟನೆ ನಡೆಸುವವರ ಹಿಂದೆ ದೊಡ್ಡ ಜಾಲ ಇದ್ದು, ಅದನ್ನು ಮಟ್ಟ ಹಾಕುವಲ್ಲಿ ಗೃಹ ಇಲಾಖೆ ವಿಫಲವಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿರುವ ಸಮಿತಿ, ಭಿಕ್ಷಾಟನೆ ಪ್ರೋತ್ಸಾಹಿಸುವ ಸಂಸ್ಥೆಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ. ರಾಜ್ಯದಲ್ಲಿ ಭಿಕ್ಷುಕರ ಸಂಖ್ಯೆ ಕಡಿಮೆ ಮಾಡಲು ಇಲಾಖೆ ಕ್ರಮ ಕೈಗೊಳ್ಳಬೇಕು ಎಂದೂ ಹೇಳಿದೆ.

ಸಮಿತಿಯ ಇತರ ಶಿಫಾರಸುಗಳು

- ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಭಿಕ್ಷುಕರ ಪುನರ್‌ವಸತಿ ಕೆಲಸಗಳಿಗೆ ಇಲಾಖೆ ಸಮರ್ಪಕವಾಗಿ ಬಳಸಿಕೊಳ್ಳಬೇಕು.
- ಅಂಗವಿಕಲ ವ್ಯಕ್ತಿಗಳ ಹೆಸರಿನಲ್ಲಿಡುವ ಹೂಡಿಕೆಯ ಹಣವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಏರಿಸಬೇಕು. 5 ವರ್ಷಗಳ ಠೇವಣಿ ಮೊತ್ತವನ್ನು 10 ವರ್ಷಗಳ ವರೆಗೆ ವಿಸ್ತರಿಸಬೇಕು.
- ಅಂಧ ಮಹಿಳೆಯರಿಗೆ ಜನಿಸುವ ಮಗುವಿಗೆ ಆರೈಕೆ ಮಾಡಲು ಪ್ರಸ್ತುತ ನೀಡುತ್ತಿರುವ ಆರೈಕೆ ಭತ್ಯೆಯನ್ನು ₹2 ಸಾವಿರದಿಂದ ₹4 ಸಾವಿರಕ್ಕೆ ಹೆಚ್ಚಿಸಬೇಕು. ಈ ಹಣವನ್ನು 5 ವರ್ಷಗಳ ಬದಲಿಗೆ 10 ವರ್ಷಗಳಿಗೆ ವಿಸ್ತರಿಸಬೇಕು. ಈ ಸೌಲಭ್ಯವನ್ನು ಕನಿಷ್ಠ ಎರಡು ಮಕ್ಕಳಿಗೆ ನೀಡಬೇಕು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಎದುರು ಸಂತ್ರಸ್ತೆ ಹೇಳಿಕೆ

'ವಿವಸ್ತ್ರಗೊಳಿಸಿ ನಾಲ್ವರಿಂದ ಹಲ್ಲೆ; ಇಬ್ಬರಿಂದ ಅತ್ಯಾಚಾರ'

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಶಹಾಪುರ ಬಸ್ ನಿಲ್ದಾಣದಿಂದ ತನ್ನನ್ನು ಬಲವಂತವಾಗಿ ಹೊರವಲಯಕ್ಕೆ ಕರೆದುಕೊಂಡು ಹೋಗಿ ನಗ್ನಗೊಳಿಸಿ ನಾಲ್ವರು ಹಲ್ಲೆ ಮಾಡಿದ್ದಾರೆ. ಅವರಲ್ಲಿ ಇಬ್ಬರು ತನ್ನ ಮೇಲೆ ಅತ್ಯಾಚಾರವೆಸಗಿದ್ದಾರೆ. ಒಂದೂವರೆ ವರ್ಷದ ಹಿಂದೆ ಈ ಘಟನೆ ನಡೆದಿದೆ ಎಂದು ಸಂತ್ರಸ್ತ ಮಹಿಳೆ ಹೇಳಿದ್ದಾಳೆ' ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಆರ್. ಪ್ರಮೀಳಾ ನಾಯ್ಡು ತಿಳಿಸಿದರು.

ಸಂತ್ರಸ್ತ ಮಹಿಳೆಯನ್ನು ಬುಧವಾರ ಭೇಟಿಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಸರ್ಕಾರದಿಂದ ₹3 ಲಕ್ಷ ಸಾಲ ಕೊಡಿಸಿ ಜೀವನ ನಿರ್ವಹಣೆಗೆ ಆ ಮಹಿಳೆಗೆ ಅನುಕೂಲ ಮಾಡಿಕೊಡಲಾಗುವುದು' ಎಂದರು.

'ಜಿಲ್ಲಾಧಿಕಾರಿ ಅವರು ಸಂತ್ರಸ್ತೆಗೆ ಸಹಾಯಧನ ನೀಡಿದ್ದಾರೆ. ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು ಎಂದು ಎಸ್‌ಪಿ ಅವರಿಗೆ ತಿಳಿಸಿದ್ದೇನೆ' ಎಂದು ಹೇಳಿದರು.

ಮಹಿಳೆಯನ್ನು ವಿವಸ್ತ್ರಗೊಳಿಸಿ ಹಲ್ಲೆ ಮಾಡಿದ ವಿಡಿಯೊ ಇತ್ತೀಚೆಗಷ್ಟೇ ವೈರಲ್ ಆಗಿತ್ತು. ಪೊಲೀಸರು ಸಂತ್ರಸ್ತೆಯನ್ನು ಪತ್ತೆಹಚ್ಚಿ, ನಾಲ್ವರು ಆರೋಪಿಗಳನ್ನು ಈಗಾಗಲೇ ಬಂಧಿಸಿದ್ದಾರೆ.

416 ಸ್ವಯಂ ಪ್ರೇರಿತ ದೂರು ದಾಖಲು: 'ರಾಜ್ಯದಲ್ಲಿ ಮಾರ್ಚ್‌ನಿಂದ ಸೆಪ್ಟೆಂಬರ್ ವರೆಗೆ ಮಹಿಳಾ ದೌರ್ಜನ್ಯಕ್ಕೆ ಸಂಬಂಧಿಸಿದ 416 ಸ್ವಯಂ ಪ್ರೇರಿತ ಪ್ರಕರಣಗಳನ್ನು ರಾಜ್ಯ ಮಹಿಳಾ ಅಯೋಗ ದಾಖಲಿಸಿಕೊಂಡಿದೆ. ಒಂದು ವರ್ಷದಲ್ಲಿ 1,600 ಪ್ರಕರಣ ಇತ್ಯರ್ಥ ಪಡಿಸಲಾಗಿದೆ' ಎಂದು ಆರ್. ಪ್ರಮೀಳಾ ನಾಯ್ಡು ತಿಳಿಸಿದರು.

'ದೌರ್ಜನ್ಯ, ಪ್ರೇಮ ಪ್ರಕರಣಗಳು ಸೇರಿವೆ. ಬೆಂಗಳೂರಿನ ಕೆಲಸದ ಸ್ಥಳದಲ್ಲಿ ಮಹಿಳೆ ಮೇಲೆ ಕಿರುಕುಳ ಪ್ರಕರಣಗಳು ಹೆಚ್ಚುತ್ತಿವೆ' ಎಂದು ಕಳವಳ ವ್ಯಕ್ತಪಡಿಸಿದ ಅವರು, 'ಮಹಿಳೆಯರು ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದರೆ ಮಹಿಳಾ ಆಯೋಗವನ್ನು ತಕ್ಷಣವೇ ಸಂಪರ್ಕಿಸಬೇಕು' ಎಂದು ಕೋರಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	116.90	14,425	10,991
ಹಾರಂಗಿ	2,859	2,858.48	5,028	5,628
ಕಬಿನಿ	2284.00	2,283.45	12,015	7,000
ಹೇಮಾವತಿ	2,922	2,916.81	9,978	5,297
ಲಿಂಗನಮಕ್ಕಿ	1,819	1,816.30	20,093	-
ಸೂಪಾ (ಮೀ)	564	556.80	8,177	2,848
ಮಾಣಿ	594	587.80	3,104	-
ತುಂಗಭದ್ರಾ	1,633	1,632.83	36,631	36,660
ಮಲಪ್ರಭಾ	2079.5	2,079.50	5,027	5,194
ಘಟಪ್ರಭಾ	2175	2,175.00	11,993	11,993
ಭದ್ರಾ	186	185.50	12,507	14,023
ಆಲಮಟ್ಟಿ (ಮೀ)	519.6	519.39	91,611	1,23,196
ನಾರಾಯಣಪುರ (ಮೀ)	492.25	491.93	1,60,000	1,81,320

*ನೆಲಮಟ್ಟದಿಂದ

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊ ವರದಿ 2020; ಅಸಹಕಾರ ಪ್ರಕರಣ ದಾಖಲೆ ಏರಿಕೆ

ಕೋವಿಡ್ ಕಾಲದಲ್ಲಿ ಅಪರಾಧ ಇಳಿಕೆ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕ ಮತ್ತು ನಂತರದ ಲಾಕ್‌ಡೌನ್‌ನಲ್ಲಿ ಸಾಂಪ್ರದಾಯಿಕ ಅಪರಾಧಗಳಾದ ಮಹಿಳೆಯರು ಮತ್ತು ಮಕ್ಕಳ ಮೇಲಿನ ಹಲ್ಲೆ, ಕಳ್ಳತನ, ದರೋಡೆಯಂತಹ ಪ್ರಕರಣಗಳು ಇಳಿಕೆಯಾಗಿವೆ. ಆದರೆ ಕೋವಿಡ್ ನಿಯಮಾವಳಿಗಳು ಸೇರಿದಂತೆ ಸರ್ಕಾರದ ಆದೇಶಗಳನ್ನು ಧಿಕ್ಕರಿಸಿ, ಅಸಹಕಾರ ತೋರುವ ಪ್ರಕರಣಗಳು ಹೆಚ್ಚಾಗಿವೆ.

ರಾಷ್ಟ್ರೀಯ ಅಪರಾಧಗಳ ದಾಖಲೆ ಬ್ಯೂರೊ (ಎನ್‌ಸಿಆರ್‌ಬಿ) 2020ರ ವರದಿ ಪ್ರಕಾರ, ಭಾರತೀಯ ದಂಡಸಂಹಿತೆಯ (ಐಪಿಸಿ) 42 ಲಕ್ಷ ಅಪರಾಧಗಳು, ವಿಶೇಷ ಹಾಗೂ ಸ್ಥಳೀಯ ಕಾನೂನುಗಳಿಗೆ (ಎಸ್‌ಎಲ್‌ಎಲ್) ಸಂಬಂಧಿಸಿದ 23 ಲಕ್ಷ ಅಪರಾಧಗಳು ಸೇರಿ ಒಟ್ಟು 66 ಲಕ್ಷ ಪ್ರಕರಣಗಳು ಕಳೆದ ವರ್ಷ ವರದಿಯಾಗಿವೆ.

ಸರ್ಕಾರಿ ಆದೇಶಗಳಿಗೆ ಅವಿಧೇಯತೆ ತೋರಿದ ಆರೋಪದಲ್ಲಿ ದಾಖಲಾದ ಪ್ರಕರಣಗಳಲ್ಲಿ ದಾಖಲೆಯ ಹೆಚ್ಚಳ ಕಂಡುಬಂದಿದೆ. 2019ರಲ್ಲಿ 29,469 ಪ್ರಕರಣಗಳಿದ್ದವು. ಇವುಗಳ ಪ್ರಮಾಣ 2020ರಲ್ಲಿ 6,12,179 ಪ್ರಕರಣಗಳಿಗೆ ಏರಿಕೆಯಾಗಿದೆ. 'ಇತರ ಐಪಿಸಿ ಅಪರಾಧ'ಗಳ ಅಡಿಯಲ್ಲಿ 2019ರಲ್ಲಿ 2,52,268 ಇದ್ದ ಪ್ರಕರಣಗಳ ಸಂಖ್ಯೆ 2020ರಲ್ಲಿ 10,62,399ಕ್ಕೆ ಏರಿಕೆ ಕಂಡಿದೆ ಎಂದು ವರದಿ ಹೇಳಿದೆ.

ಅದೇ ರೀತಿ, ಎಸ್‌ಎಲ್‌ಎಲ್ ವರ್ಗದಡಿ ಇತರೆ ರಾಜ್ಯಗಳ ಸ್ಥಳೀಯ ಕಾಯ್ದೆಗಳ ಅಡಿಯಲ್ಲಿ 2019ರಲ್ಲಿ 89,553 ಪ್ರಕರಣ ವರದಿಯಾಗಿದ್ದವು. ಇವುಗಳ ಸಂಖ್ಯೆ 2020ರಲ್ಲಿ 4,14,589ಕ್ಕೆ ತಲುಪಿದೆ. ಇವೆಲ್ಲವೂ ಬಹುತೇಕ ಕೋವಿಡ್ ನಿಯಮಾವಳಿ ಉಲ್ಲಂಘಿಸಿದ ಪ್ರಕರಣಗಳು. ಹೀಗಾಗಿಯೇ ಸಾಂಪ್ರದಾಯಿಕ ಪ್ರಕರಣಗಳಲ್ಲಿ ಸುಮಾರು 2 ಲಕ್ಷದಷ್ಟು ಇಳಿಕೆ ಕಂಡುಬಂದಿದೆ.

ಹಿಂದಿನ ವರ್ಷದಿಂದ ಬಾಕಿ ಉಳಿದಿರುವ 13,27,167 ಪ್ರಕರಣಗಳು, 2020ರಲ್ಲಿ ವರದಿಯಾದ 42,54,356 ಪ್ರಕರಣಗಳು ಮತ್ತು 2,612 ತನಿಖೆಗೆ ಪುನಃ ತೆರೆಯಲ್ಪಟ್ಟ ಪ್ರಕರಣಗಳು ಸೇರಿ ಒಟ್ಟು 55,84,135 ಐಪಿಸಿ ಪ್ರಕರಣಗಳು ವಿಚಾರಣೆ ಹಂತದಲ್ಲಿವೆ. ಈ ಪೈಕಿ 34,47,285 ಪ್ರಕರಣಗಳನ್ನು ಪೊಲೀಸರು ವಿಲೇವಾರಿ ಮಾಡಿದ್ದಾರೆ ಎಂದು ವರದಿ ತಿಳಿಸಿದೆ.

ಕೋವಿಡ್ ಮೊದಲ ಅಲೆಯಿದ್ದ ಮಾರ್ಚ್ 25ರಿಂದ ಮೇ 31ರ ಅವಧಿಯಲ್ಲಿ ಸಂಪೂರ್ಣ ಲಾಕ್‌ಡೌನ್‌ನಲ್ಲಿ ಇತ್ತು. ಹೀಗಾಗಿ ಸಾರ್ವಜನಿಕ ಸ್ಥಳಗಳಲ್ಲಿ ಜನರ ಸಂಚಾರ ಬಹಳ ಸೀಮಿತವಾಗಿತ್ತು. ಮಹಿಳೆಯರು, ಮಕ್ಕಳು ಮತ್ತು ಹಿರಿಯ ನಾಗರಿಕರ ವಿರುದ್ಧದ ಅಪರಾಧಗಳು, ಕಳ್ಳತನ, ದರೋಡೆ ಮತ್ತು ದೌರ್ಜನ್ಯದ ಅಡಿಯಲ್ಲಿ ದಾಖಲಾದ ಪ್ರಕರಣಗಳು ಕಡಿಮೆಯಾಗಿವೆ ಎಂದು ವರದಿ ಅಭಿಪ್ರಾಯಪಟ್ಟಿದೆ.

ಪ್ರಕರಣಗಳ ಪ್ರಮಾಣ

2019ರಲ್ಲಿ 51.56 ಲಕ್ಷದಷ್ಟಿದ್ದ ಪ್ರಕರಣಗಳು 2020ರಲ್ಲಿ 66 ಲಕ್ಷಕ್ಕೆ ಏರಿಕೆಯಾಗಿವೆ. 2019ಕ್ಕೆ ಹೋಲಿಸಿದರೆ, ಐಪಿಸಿ ಸೆಕ್ಷನ್ ಅಡಿ ದಾಖಲಾದ ಪ್ರಕರಣಗಳ ಪ್ರಮಾಣ ಶೇ 31.9ರಷ್ಟು ಹೆಚ್ಚಳವಾಗಿದೆ. ಹಾಗೆಯೇ, 2019ಕ್ಕೆ ಹೋಲಿಸಿದರೆ, ಎಸ್‌ಎಲ್‌ಎಲ್ ಅಡಿ ದಾಖಲಾದ ಪ್ರಕರಣಗಳ ಪ್ರಮಾಣ ಶೇ 21.6ರಷ್ಟು ಏರಿಕೆ ಕಂಡಿವೆ.



- ದೇಶದಲ್ಲಿ ಒಂದು ದಿನಕ್ಕೆ ಸರಾಸರಿ 79 ಜನರು ಕೊಲೆಯಾಗುತ್ತಿದ್ದಾರೆ
- 2019ಕ್ಕೆ ಹೋಲಿಸಿದರೆ ಶೇ 1ರಷ್ಟು ಏರಿಕೆಯಾಗಿದೆ
- ಕೊಲೆ ಪ್ರಕರಣಗಳಲ್ಲಿ ಉತ್ತರ ಪ್ರದೇಶ ಮುಂದಿದೆ (3,779)
- ಹೆಚ್ಚು ಪ್ರಕರಣಗಳಿಗೆ 'ವ್ಯಾಜ್ಯ' ಮುಖ್ಯ ಕಾರಣವಾಗಿದೆ

- ದೇಶದಲ್ಲಿ ಅಪಹರಣ ಪ್ರಕರಣಗಳ ಪ್ರಮಾಣ ಶೇ 19ರಷ್ಟು ಇಳಿಕೆಯಾಗಿದೆ
- ಅಪಹರಣಕ್ಕೆ ಒಳಗಾದವರ ಪೈಕಿ 56,591 ಮಂದಿ ಮಕ್ಕಳು; ಈ ಪೈಕಿ47,876 ಮಂದಿ ಹೆಣ್ಣುಮಕ್ಕಳು
- ಉತ್ತರ ಪ್ರದೇಶದಲ್ಲೇ ಅತ್ಯಧಿಕ ಅಪಹರಣ ಪ್ರಕರಣ ದಾಖಲು (12,913)

- 2019ಕ್ಕೆ ಹೋಲಿಸಿದರೆ ಮಹಿಳೆ ವಿರುದ್ಧದ ಅಪರಾಧ ಪ್ರಕರಣಗಳಲ್ಲಿ ಶೇ 8.3ರಷ್ಟು ಇಳಿಕೆ ಕಂಡುಬಂದಿದೆ.
- 2019ಕ್ಕೆ ಹೋಲಿಸಿದರೆ ಮಕ್ಕಳ ವಿರುದ್ಧದ ಅಪರಾಧ ಪ್ರಕರಣಗಳಲ್ಲಿ ಶೇ 13.2ರಷ್ಟು ಇಳಿಕೆ ಕಂಡುಬಂದಿದೆ.

ಕೇರಳ: ಕಳ್ಳ ಸಾಗಣೆ ಪ್ರಕರಣ– 30 ಕೆ.ಜಿ ಚಿನ್ನ ಜಪ್ತಿ

ಕೊಚ್ಚಿ (ಪಿಟಿಐ): ಚಿನ್ನ ಕಳ್ಳ ಸಾಗಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಅಧಿಕಾರಿಗಳು 30.245 ಕೆ.ಜಿ ಚಿನ್ನವನ್ನು ಬುಧವಾರ ಜಪ್ತಿ ಮಾಡಿದ್ದಾರೆ.

ತಿರುವನಂತಪುರದಲ್ಲಿರುವ ಯುಎಇಯ ಕಾನ್ಸುಲೇಟ್‌ನ ಮಾಜಿ ಉದ್ಯೋಗಿಗಳಾದ ಸರಿತ್ ಪಿ.ಎಸ್ ಹಾಗೂ ಸ್ವಪ್ನ ಸುರೇಶ್ ಅವರಿಗೆ ಸೇರಿದ ₹ 14 ಲಕ್ಷಕ್ಕೂ ಅಧಿಕ ನಗದನ್ನು ಸಹ ಜಪ್ತಿ ಮಾಡಲಾಗಿದೆ ಎಂದು ಇ.ಡಿ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಳೆದ ವರ್ಷ ಜುಲೈ 5ರಂದು ಗಲ್ಫ್‌ನಿಂದ ಬಂದ ಏರ್ ಕಾರ್ಗೊ ಬ್ಯಾಗ್‌ವೊಂದರಲ್ಲಿ ₹15 ಕೋಟಿ ಮೌಲ್ಯದ 30 ಕೆ.ಜಿ ಚಿನ್ನ ಪತ್ತೆಯಾಗಿತ್ತು. ಇದನ್ನು ತಿರುವನಂತಪುರ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದರು.

ಬಹು ಮಾಧ್ಯಮ ಪ್ರಜಾವಾಣಿ LIVE
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪೆಗಾಸಸ್ ಗೂಢಚರ್ಯೆ: ಕೇಂದ್ರ ಸರ್ಕಾರದ ನಿಲುವು ಸರಿಯೆ?
ಭಾಗವಹಿಸುವವರು:
ಡಿ.ವಿ.ಗುರುಪ್ರಸಾದ್, ನಿವೃತ್ತ ಡಿಜಿಪಿ.
ರವಿವರ್ಮ ಕುಮಾರ್, ನಿವೃತ್ತ ಅಡ್ವೊಕೇಟ್ ಜನರಲ್.
ಗೋ. ಮಧುಸೂದನ್, ಮಾಜಿ ಶಾಸಕ, ಬಿಜೆಪಿ.
ಬಿ.ಆರ್. ಮಂಜುನಾಥ್, ಸಾಮಾಜಿಕ ಕಾರ್ಯಕರ್ತ
ಸಂವಾದ ಬೆಳಿಗ್ಗೆ 11ರಿಂದ 12
ಮಿಸಳ್ ಹಾಪ್ಚಾ
ಕಲ್ಲು ಕಟೆಯುವವರ ನಡುವೆ
https://bit.ly/398dJ1A
ಪಾಡ್‌ಕಾಸ್ಟ್: ಈದಿನದ ವಿಶೇಷ : ಸಂಜೆ 4 ಆಟ ನೋಟ, ಪ್ರತೀ ದಿನ: ಬೆಳಿಗ್ಗೆ 7 ವಚನವಾಣಿ, ಬೆ. 7.30 ದಿನದ ಸೂಕ್ತಿ, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 ಪ್ರಜಾವಾಣಿ ವಾರ್ತೆ ಬುಲೆಟಿನ್, ಬೆಳಿಗ್ಗೆ 9.30 ಸಂಪಾದಕೀಯ, ಬೆಳಿಗ್ಗೆ 9 ಪ್ರಚಲಿತ
ಪ್ರಜಾವಾಣಿ ಕನ್ನಡ ಧ್ವನಿ

ನವದೆಹಲಿಯಲ್ಲಿ ಬುಧವಾರ ನಡೆದ ಅಖಿಲ ಭಾರತ ಮಹಿಳಾ ಕಾಂಗ್ರೆಸ್‌ನ 38ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಕ್ಷದ ಮುಖಂಡ ರಾಹುಲ್ ಗಾಂಧಿ ಅವರಿಗೆ ಮಹಿಳಾ ಕಾರ್ಯಕರ್ತೆಯರು ನೆನಪಿನ ಕಾಣಿಕೆ ನೀಡಿದರು. ಕುಮಾರಿ ಶೆಲ್ಜಾ ಚಿತ್ರದಲ್ಲಿದ್ದಾರೆ —ಪಿಟಿಐ ಚಿತ್ರ

'ಡಿ–ಕಂಪನಿ' ನಂಟು: ಮಹಾರಾಷ್ಟ್ರ ಎಟಿಎಸ್‌ನಿಂದ ಶಂಕಿತ ಉಗ್ರನ ಮನೆ ಶೋಧ

ಧಾರಾವಿಯಲ್ಲಿ ಡ್ರೈವರ್ ಆಗಿದ್ದ ಶೇಖ್

ಪ್ರಜಾವಾಣಿ ವಾರ್ತೆ

ಮುಂಬೈ: ಪಾಕಿಸ್ತಾನದ ಐಎಸ್‌ಐ ಬೆಂಬಲದೊಂದಿಗೆ ಭಾರತದಲ್ಲಿ ಭಯೋತ್ಪಾದಕ ದಾಳಿ ನಡೆಸಲು ಸಂಚು ರೂಪಿಸಿದ್ದವರಲ್ಲಿ, ಒಬ್ಬನಿಗೆ ಮುಂಬೈ ನಂಟು ಇರುವುದಾಗಿ ತಿಳಿದುಬಂದಿದೆ.

ಪಾಕಿಸ್ತಾನದಲ್ಲಿ ತರಬೇತಿ ಪಡೆದ ಇಬ್ಬರು ಉಗ್ರರು ಸೇರಿದಂತೆ ಆರು ಜನರನ್ನು ದೆಹಲಿ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಅವರ ಪೈಕಿ, ಜಾನ್ ಮೊಹಮ್ಮದ್ ಶೇಖ್ ಅಲಿಯಾಸ್ ಸಮೀರ್ ಕಾಲಿಯಾ ಎಂಬಾತ ಮುಂಬೈನ ಧಾರಾವಿ ಕೊಳೆಗೇರಿಯಲ್ಲಿ ನೆಲೆಸಿದ್ದ. ಚಿಕ್ಕದಾದ ಒಂದೇ ಕೊಠಡಿಯ ಮನೆಯಲ್ಲಿ ತನ್ನ ಕುಟುಂಬದವರೊಂದಿಗೆ ವಾಸವಿದ್ದ ಆತ, ವಾಹನ ಚಾಲಕನಾಗಿ ಕೆಲಸ ಮಾಡುತ್ತಿದ್ದ ಎಂದು ತಿಳಿದುಬಂದಿದೆ.

ದೆಹಲಿ ಪೊಲೀಸರು ಭಯೋತ್ಪಾದಕ ಕೃತ್ಯದ ಷಡ್ಯಂತ್ರವನ್ನು ಬಯಲು ಮಾಡುತ್ತಿದ್ದಂತೆಯೇ, ಮುಂಬೈ ಪೊಲೀಸ್‌ನ ಸಿಐಡಿ ಅಪರಾಧ ವಿಭಾಗ, ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ಸಿಬ್ಬಂದಿಯು ಕಾರ್ಯಪ್ರವೃತ್ತರಾಗಿ ಜಾನ್ ಬಗ್ಗೆ ಮಾಹಿತಿ ಕಲೆಹಾಕಿದ್ದಾರೆ.

ಆತನ ಪತ್ನಿ ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಧಾರಾವಿ ಠಾಣೆಗೆ ಕರೆದೊಯ್ದು ವಿಚಾರಣೆ ನಡೆಸಲಾಗಿದೆ. ಆತನ ಮನೆಯನ್ನು ಶೋಧಿಸಲಾಗಿದೆ. ಅಲ್ಲಿ ಯಾವುದೇ ಶಸ್ತ್ರಾಸ್ತ್ರಗಳು, ಸ್ಫೋಟಕಗಳು ಅಥವಾ ಜಿಲೆಟಿನ್ ಸಿಕ್ಕಿಲ್ಲ ಎಂದು ಮಹಾರಾಷ್ಟ್ರ ಎಟಿಎಸ್ ಅಧಿಕಾರಿಗಳು ತಿಳಿಸಿದ್ದಾರೆ.

'ಜಾನ್ ಮೊಹಮ್ಮದ್‌ನನ್ನು ನಾನು 30–35 ವರ್ಷಗಳಿಂದ ಬಲ್ಲೆ. ಡ್ರೈವರ್ ಆಗಿ ಕೆಲಸ ಮಾಡಿಕೊಂಡಿದ್ದ. ಶಾಂತ ಸ್ವಭಾವದವನಾಗಿದ್ದ. ಈ ಸುದ್ದಿ ಕೇಳಿ ನಮಗೆ ಆಘಾತವಾಗಿದೆ' ಎನ್ನುತ್ತಾರೆ ಧಾರಾವಿಯಲ್ಲಿನ ಆತನ ಸ್ನೇಹಿತ ಫಯಾಜ್. ಆತನಿದ್ದ ಒಂದೇ ಕೊಠಡಿಯ ಮನೆಗೆ ಈಗ ಬೀಗ ಹಾಕಲಾಗಿದೆ.

'ಡಿ–ಕಂಪನಿ' ನಂಟು: ಮಹಾರಾಷ್ಟ್ರ ಎಟಿಎಸ್

ಮುಂಬೈ (ಪಿಟಿಐ): ಶಂಕಿತ ಉಗ್ರ, ಮುಂಬೈನ ಜಾನ್ ಮೊಹಮ್ಮದ್ ಶೇಖ್‌ನಿಗೆ 20 ವರ್ಷಗಳ ಹಿಂದೆ ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಅಪರಾಧ ಚಟುವಟಿಕೆಗಳ ಜಾಲವಾದ 'ಡಿ–ಕಂಪನಿ'ಯೊಂದಿಗೆ ಸಂಪರ್ಕವಿತ್ತು ಎಂದು ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಅಧಿಕಾರಿಗಳು ಹೇಳಿದ್ದಾರೆ.

20 ವರ್ಷಗಳ ಹಿಂದೆ ಆತ ದಾವೂದ್ ಅನುಯಾಯಿಯಾಗಿದ್ದ ಹಾಗೂ 'ಡಿ–ಕಂಪನಿ'ಯಿಂದ ತನಗೆ ಬಂದ ನಿರ್ದೇಶನಗಳನ್ನು ಪಾಲಿಸುತ್ತಿದ್ದ ಎಟಿಎಸ್ ಮುಖ್ಯಸ್ಥ ವಿನೀತ್ ಅಗರ್‌ವಾಲ್ ತಿಳಿಸಿದ್ದಾರೆ.

ನಗರದಲ್ಲಿ ನಡೆದ ವಿಧ್ವಂಸಕ ಕೃತ್ಯ ಹಾಗೂ ಗುಂಡಿನ ದಾಳಿ ಪ್ರಕರಣವೊಂದರಲ್ಲಿ ಆಗ ಆತನ ವಿರುದ್ಧ ಪ್ರಕರಣವೊಂದು ದಾಖಲಾಗಿತ್ತು. ಹೀಗಾಗಿ, ಇತರರಂತೆ ಈತನ ಚಲನವಲನಗಳ ಮೇಲೆಯೂ ನಿಗಾ ಇಡಲಾಗಿತ್ತು ಎಂದು ಅವರು ಹೇಳಿದರು.

ಆತ ದೆಹಲಿಯ ಹಜರತ್ ನಿಜಾಮುದ್ದೀನ್‌ಗೆ ತೆರಳುವುದಕ್ಕಾಗಿ, ಸೆ.13ರಂದು ಮುಂಬೈನಿಂದ ಸ್ವರ್ಣಮಂದಿರ ರೈಲಿನಲ್ಲಿ ಪ್ರಯಾಣಿಸಿದ್ದ. ಆದರೆ, ರಾಜಸ್ಥಾನದ ಕೋಟದಲ್ಲಿಯೇ ದೆಹಲಿ ಪೊಲೀಸರು ಆತನನ್ನು ಬಂಧಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

'ಗುಪ್ತಚರ ವೈಫಲ್ಯ ಅಲ್ಲ': ಅಪರಾಧ ಪ್ರಕರಣವೊಂದರಲ್ಲಿ, ಜಾನ್ ಮೊಹಮ್ಮದ್ ಶೇಖ್‌ನ ವಿರುದ್ಧ 2001ರಲ್ಲಿ ಪ್ರಕರಣ ದಾಖಲಾಗಿತ್ತು. ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಇತರ ಎಲ್ಲರ ಮೇಲೆ ಕಣ್ಣಿಡುವಂತೆ ಈತನ ಮೇಲೂ ಮಹಾರಾಷ್ಟ್ರ ಪೊಲೀಸರು ನಿಗಾ ಇಟ್ಟಿದ್ದರು. ಇದರಲ್ಲಿ ಯಾವುದೇ ಗುಪ್ತಚರ ವೈಫಲ್ಯ ಇಲ್ಲ ಎಂದು ಮಹಾರಾಷ್ಟ್ರ ಗೃಹಸಚಿವ ದಿಲೀಪ್ ವಾಸ್ಲೆ ಪಾಟೀಲ್ ಬುಧವಾರ ತಿಳಿಸಿದ್ದಾರೆ.

ನಟ ಸೋನು ಸೂದ್ ಮನೆ, ಕಂಪನಿಗಳ ಮೇಲೆ ಐ.ಟಿ ದಾಳಿ

ಮುಂಬೈ: ನಟ ಹಾಗೂ ಸಾಮಾಜಿಕ ಕಾರ್ಯಕರ್ತ ಸೋನು ಸೂದ್ ಅವರ ಮುಂಬೈ ನಿವಾಸ ಹಾಗೂ ಅವರಿಗೆ ಸಂಬಂಧಿಸಿದ ಲಖನೌದಲ್ಲಿನ ಕಂಪನಿಗಳಲ್ಲಿ ಕೇಂದ್ರ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ತಪಾಸಣೆ ನಡೆಸಿದ್ದಾರೆ.

ಸೋನು ಸೂದ್ ಅವರು ತೆರಿಗೆ ತಪ್ಪಿಸಿಕೊಳ್ಳಲು ಯತ್ನಿಸಿದ್ದಾರೆ ಎಂಬ ಆರೋಪದ ಮೇಲೆ ಈ ತಪಾಸಣೆ ನಡೆದಿದ್ದು, ಇದನ್ನು ಐಟಿ ಅಧಿಕಾರಿಗಳು ಖಚಿತಪಡಿಸಿದ್ದಾರೆ. ಐಟಿ ತಪಾಸಣೆ ನಡೆದಿರುವುದನ್ನು ಸೋನು ಸೂದ್ ಇದುವರೆಗೂ ಖಚಿತಪಡಿಸಿಲ್ಲ.

ಇತ್ತೀಚೆಗಷ್ಟೇ ಸೋನು ಸೂದ್ ಅವರನ್ನು ದೆಹಲಿ ಸರ್ಕಾರ ತನ್ನ ಮಹತ್ವಾಕಾಂಕ್ಷೆಯ 'ದೇಶ್ ಕಿ ಮೆಂಟರ್' ಕಾರ್ಯಕ್ರಮದ ರಾಯಭಾರಿಯನ್ನಾಗಿ ಮಾಡಿತ್ತು. ಅವರು ಮಂಗಳವಾರವಷ್ಟೇ ಇದೇ ವಿಚಾರವಾಗಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿರುವ ಬೆನ್ನಲ್ಲೇ ಐಟಿ ತಪಾಸಣೆ ನಡೆದಿದೆ.

ಇನ್ನೊಂದೆಡೆ ಸೋನು ಸೂದ್ ಅವರು ಎಎಪಿ ಪಕ್ಷವನ್ನು ಸೇರಲಿದ್ದಾರೆ ಎಂಬ ವದಂತಿಯನ್ನು ಅವರು ತಳ್ಳಿಹಾಕಿದ್ದರು.

ಧರ್ಮದ ದಲ್ಲಾಳಿಗಳು– ಕಾಂಗ್ರೆಸ್ ನಾಯಕ ವಾಗ್ದಾಳಿ

ಬಿಜೆಪಿ-ಆರ್‌ಎಸ್‌ಎಸ್ 'ನಕಲಿ ಹಿಂದೂಗಳೂ': ರಾಹುಲ್ ಟೀಕೆ

ನವದೆಹಲಿ (ಪಿಟಿಐ): ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಬುಧವಾರ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಇವರೆಲ್ಲ ನಕಲಿ ಹಿಂದೂಗಳು. ತಮ್ಮ ಲಾಭಕ್ಕಾಗಿ ಧರ್ಮವನ್ನು ಬಳಸಿಕೊಳ್ಳುತ್ತಿದ್ದಾರೆ' ಎಂದು ಆರೋಪಿಸಿದ್ದಾರೆ.

ಅಖಿಲ ಭಾರತ ಮಹಿಳಾ ಕಾಂಗ್ರೆಸ್‌ನ 38ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಕಾಂಗ್ರೆಸ್‌ನ ಸಿದ್ಧಾಂತವು ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಿದ್ಧಾಂತಕ್ಕೆ ಸಂಪೂರ್ಣ ವಿರುದ್ಧವಾದುದು.ಈ ಎರಡು ಸಿದ್ಧಾಂತಗಳಲ್ಲಿ ಒಂದು ಮಾತ್ರ ದೇಶವನ್ನು ಆಳಬಲ್ಲದು' ಎಂದರು.

'ಇವರು ಯಾವ ರೀತಿಯ ಹಿಂದೂಗಳು, ಇವರು ನಕಲಿ ಹಿಂದೂಗಳು. ಇವರೆಲ್ಲಾ ಹಿಂದೂ ಧರ್ಮವನ್ನು ಪ್ರಯೋಗಿಸುತ್ತಿದ್ದಾರೆ. ಇವರು ಧರ್ಮದ ದಲ್ಲಾಳಿಗಳು. ಆದರೆ, ಇವರು ಹಿಂದೂಗಳಲ್ಲ' ಎಂದು ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

'ಗುರಿ ಸಾಧನೆಗೆ ಸಹಕರಿಸುವ ಶಕ್ತಿಯನ್ನು ಲಕ್ಷ್ಮಿದೇವಿ ಪ್ರತಿನಿಧಿಸಿದರೆ ಸಂರಕ್ಷಣೆಯ ಶಕ್ತಿಯನ್ನು ದುರ್ಗಾದೇವಿ ಪ್ರತಿನಿಧಿಸುತ್ತಾಳೆ' ಎಂದು ಪ್ರತಿಪಾದಿಸಿದ ರಾಹುಲ್, 'ಕಾಂಗ್ರೆಸ್ ನೇತೃತ್ವದ ಸರ್ಕಾರವಿದ್ದಾಗ ಈ ಶಕ್ತಿಗಳನ್ನು ಬಲಪಡಿಸಲಾಗಿದೆ. ಆದರೆ, ಈಗ ಅಧಿಕಾರದಲ್ಲಿರುವ ಬಿಜೆಪಿ ಈ ಶಕ್ತಿಗಳನ್ನು ದುರ್ಬಲಗೊಳಿಸಿದೆ' ಎಂದರು.

ಟೈಮ್ ಪ್ರಭಾವಿಗಳ ಪಟ್ಟಿಯಲ್ಲಿ ಮೋದಿ, ಮಮತಾ

ನ್ಯೂಯಾರ್ಕ್ (ಪಿಟಿಐ): ಟೈಮ್ ನಿಯತಕಾಲಿಕವು ಸಿದ್ಧಪಡಿಸಿದ 2021ರ ಜಾಗತಿಕ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸಿಇಒ ಅದಾರ್ ಪೂನಾವಾಲಾ ಇದ್ದಾರೆ.

ನೂರು ಪ್ರಭಾವಿಗಳ ಹೆಸರಿನ 2021ರ ವಾರ್ಷಿಕ ಪಟ್ಟಿಯನ್ನು ಟೈಮ್ ಬುಧವಾರ ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್, ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್, ಬ್ರಿಟನ್ ರಾಜಮನೆತನದ ರಾಜಕುಮಾರ ಹ್ಯಾರಿ ಹಾಗೂ ಮೇಘನ್ ದಂಪತಿ, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಇದ್ದಾರೆ.

ತಾಲಿಬಾನ್‌ನ ಸಹಸಂಸ್ಥಾಪಕ ಮುಲ್ಲಾ ಅಬ್ದುಲ್ ಘನಿ ಬರದರ್ ಹೆಸರೂ ಪ್ರಭಾವಿ ವ್ಯಕ್ತಿಗಳ ಪಟ್ಟಿಯಲ್ಲಿದೆ.

'ರಾಜಕಾರಣಕ್ಕೆ ಮಾತ್ರ ಸಂಸತ್ ಸೀಮಿತವಲ್ಲ'

ನವದೆಹಲಿ (ಪಿಟಿಐ): 'ಸಂಸತ್ ಎಂಬುದು ರಾಜಕಾರಣಕ್ಕೆ ಮಾತ್ರ ಸೀಮಿತವಲ್ಲ. ನೀತಿ ನಿರೂಪಣೆಗೂ ಅದು ವೇದಿಕೆಯಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದರು.

'ಸಂಸದ್ ಟಿವಿ'ಗೆ ಚಾಲನೆ ನೀಡಲು ಸಂಸತ್ ಭವನ ಸಂಕೀರ್ಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಮೊದಲಿದ್ದ ಲೋಕಸಭಾ ಟಿವಿ ಹಾಗೂ ರಾಜ್ಯಸಭಾ ಟಿವಿ ವಾಹಿನಿಗಳನ್ನು ವಿಲೀನಗೊಳಿಸಿ, 'ಸಂಸದ್ ಟಿವಿ' ರೂಪಿಸಲಾಗಿದೆ.

ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭಾ ಸಭಾಪತಿ ಎಂ.ವೆಂಕಯ್ಯ ನಾಯ್ಡು ಹಾಗೂ ಪ್ರಧಾನಿ ಮೋದಿ ಜಂಟಿಯಾಗಿ ನೂತನ ಸುದ್ದಿವಾಹಿನಿಗೆ ಚಾಲನೆ ನೀಡಿದರು.

'ಟಿವಿ ವಾಹಿನಿಗಳ ಮೂಲಕ ಹಲವಾರು ವಿಷಯಗಳನ್ನು ಪ್ರಸಾರ ಮಾಡಲಾಗುತ್ತದೆ. ಅವು ಜನರನ್ನು ಬೆಸೆಯುತ್ತವೆ. ಹೀಗಾಗಿ ಅದನ್ನು ಕೇವಲ ವಿಷಯ ಎನ್ನುವುದಕ್ಕಿಂತ 'ಬಾಂಧವ್ಯ' ಎನ್ನುವುದೇ ಸೂಕ್ತ' ಎಂದು ಮೋದಿ ಹೇಳಿದರು.

'ವಾಹಿನಿಗಳ ಮೂಲಕ ಬಿತ್ತರವಾಗುವ ಸುದ್ದಿಗಳ ಮೂಲಕ ಸಾಮಾನ್ಯ ಪ್ರಜೆ ಸಹ ಸಂಸತ್‌ನೊಂದಿಗೆ ಬಾಂಧವ್ಯ ಬೆಳೆಸಿಕೊಳ್ಳುತ್ತಾನೆ. ತಾನು ಕೂಡ ಸಂಸತ್‌ನ ಭಾಗ ಎಂಬ ಭಾವನೆ ಆತನಲ್ಲಿ ಮೂಡುತ್ತದೆ' ಎಂದರು.

ನವದೆಹಲಿಯಲ್ಲಿ ಬುಧವಾರ ಆಯೋಜಿಸಿದ್ದ 'ಸಂಸದ್ ಟಿವಿ'ಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯಸಭಾ ಸಭಾಪತಿ ಎಂ.ವೆಂಕಯ್ಯ ನಾಯ್ಡು ಹಾಗೂ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪಾಲ್ಗೊಂಡಿದ್ದರು —ಪಿಟಿಐ ಚಿತ್ರ

ಎನ್‌ಸಿಎಲ್‌ಎಟಿ ಅಧ್ಯಕ್ಷ ಸ್ಥಾನ ಭರ್ತಿ: 'ಸುಪ್ರೀಂ' ಅಸಮಾಧಾನ

ನವದೆಹಲಿ (ಪಿಟಿಐ): ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಗೆ (ಎನ್‌ಸಿಎಲ್‌ಎಟಿ) ಹಂಗಾಮಿ ಅಧ್ಯಕ್ಷರನ್ನಾಗಿ ನ್ಯಾಯಮೂರ್ತಿ ಎಂ. ವೇಣುಗೋಪಾಲ್ ಅವರನ್ನು ತರಾತುರಿಯಲ್ಲಿ ನೇಮಿಸಿದ್ದಕ್ಕೆ ಸುಪ್ರೀಂಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್. ವಿ.ರಮಣ, ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಎಲ್. ನಾಗೇಶ್ವರ ರಾವ್ ಅವರನ್ನು ಒಳಗೊಂಡ ನ್ಯಾಯ ಪೀಠವು ಈ ಕುರಿತ ವಿಚಾರಣೆಯನ್ನು ಗುರುವಾರ ಕೈಗೆತ್ತಿಕೊಳ್ಳುವುದಾಗಿ ತಿಳಿಸಿದೆ.

ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಗುರುವಾರದ ವಿಚಾರಣೆ ವೇಳೆ ಹಾಜರಿರಬೇಕು ಎಂದು ಪೀಠ ಸೂಚಿಸಿದೆ.

ಎನ್‌ಸಿಎಲ್‌ಎಟಿ ಅಧ್ಯಕ್ಷರಾದ ಚೀಮಾ ಅವರ ನಿವೃತ್ತಿಗೆ 10 ದಿನ ಮೊದಲೇ ವೇಣುಗೋಪಾಲ್ ಅವರನ್ನು ನೇಮಿಸಲಾಗಿದೆ. ಇದು ಹೇಗೆ ನಡೆಯುತ್ತಿದೆ ಎಂಬುದೇ ಗೊತ್ತಾಗುತ್ತಿಲ್ಲ ಎಂದು ಪೀಠ ಅಸಮಾಧಾನ ವ್ಯಕ್ತಪಡಿಸಿತು. ಕೇಂದ್ರ ಸರ್ಕಾರ ಎನ್‌ಸಿಎಲ್‌ಟಿಗೆ 8 ನ್ಯಾಯಾಂಗ ಸದಸ್ಯರು ಮತ್ತು 10 ತಾಂತ್ರಿಕ ಸದಸ್ಯರನ್ನು ನೇಮಿಸುವ ಪ್ರಸ್ತಾವನೆಗೆ ಶನಿವಾರ ಅನುಮೋದನೆ ನೀಡಿತ್ತು.

ದಾಭೋಲ್ಕರ್ ಹತ್ಯೆ ಪ್ರಕರಣ: ಐವರು ಆರೋಪಿಗಳ ವಿರುದ್ಧ ದೋಷಾರೋಪ ನಿಗದಿ

ಪುಣೆ (ಪಿಟಿಐ): ವಿಚಾರವಾದಿ ಹಾಗೂ ಮೌಢ್ಯವಿರೋಧಿ ಹೋರಾಟಗಾರ ಡಾ.ನರೇಂದ್ರ ದಾಭೋಲ್ಕರ್ ಹತ್ಯೆ ಪ್ರಕರಣದ ಐವರು ಆರೋಪಿಗಳ ವಿರುದ್ಧ ಇಲ್ಲಿನ ವಿಶೇಷ ನ್ಯಾಯಾಲಯ ಬುಧವಾರ ದೋಷಾರೋಪಗಳನ್ನು ಹೊರಿಸಿತು.

ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಸ್.ಆರ್.ನವಂದರ್ ಅವರು ವಿಚಾರಣೆ ನಡೆಸಿದರು. ಆರೋಪಿಗಳ ಪೈಕಿ ವೀರೇಂದ್ರ ಸಿನ್ಹ ತಾವ್ಡೆ, ಸಚಿನ್ ಅಂದೂರೆ ಹಾಗೂ ಶರದ್ ಕಳಸ್ಕರ್ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆ ಎದುರಿಸಿದರು. ಆರೋಪಿಗಳಾದ ಶರದ್ ಪುನಾಲೇಕರ್ ಹಾಗೂ ವಿಕ್ರಮ್ ಭಾವೆ ಅವರು ನ್ಯಾಯಾಲಯಕ್ಕೆ ಭೌತಿಕವಾಗಿ ಹಾಜರಾಗಿ, ವಿಚಾರಣೆ ಎದುರಿಸಿದರು.

ನರೇಂದ್ರ ದಾಭೋಲ್ಕರ್

'ನಮ್ಮ ವಕೀಲರೊಂದಿಗೆ ಚರ್ಚಿಸಿ, ಪ್ರತಿಕ್ರಿಯೆ ಸಲ್ಲಿಸಲು ಸಮಯಾವಕಾಶ ಅಗತ್ಯ' ಎಂಬ ಆರೋಪಿಗಳ ಮನವಿಯನ್ನು ನ್ಯಾಯಾಧೀಶ ನವಂದರ್ ತಿರಸ್ಕರಿಸಿದರು.

'ಆರೋಪಿಗಳ ವಿರುದ್ಧ ದೋಷಾರೋಪ ಹೊರಿಸಲಾಗಿದೆ. ಪ್ರಕರಣದ ಮುಂದಿನ ವಿಚಾರಣೆ ಸೆ. 30ರಂದು ನಡೆಯಲಿದೆ' ಎಂದು ನಂತರ ಸಿಬಿಐ ಪರ ವಕೀಲ ಪ್ರಕಾಶ್ ಸೂರ್ಯವಂಶಿ ತಿಳಿಸಿದರು.

'ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿ' ಸ್ಥಾಪಿಸಿದ್ದ ದಾಭೋಲ್ಕರ್ ಅವರು, ಮೌಢ್ಯಗಳ ಆಚರಣೆ ವಿರುದ್ಧ ಹೋರಾಟ ನಡೆಸುತ್ತಿದ್ದರು. ಬಲಪಂಥೀಯ ಸಂಘಟನೆ ಸದಸ್ಯರು ದಾಭೋಲ್ಕರ್ ಅವರನ್ನು 2013ರ ಆಗಸ್ಟ್ 20ರಂದು ಗುಂಡಿಕ್ಕಿ ಹತ್ಯೆ ಮಾಡಿದರು ಎಂದು ಆರೋಪಿಸಲಾಗಿದೆ.

ಆರೋಪಿಗಳ ವಿರುದ್ಧ ಯುಎಪಿಎ ಹಾಗೂ ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ದೋಷಾರೋಪ ಹೊರಿಸಲಾಗಿದೆ.

ಶಿಫಾರಸು ನಿರ್ಲಕ್ಷ್ಯ: 'ಸುಪ್ರೀಂ' ಅತೃಪ್ತಿ

ಒಂದನೇ ಪುಟದಿಂದ...

ಹಾಗಾಗಿ, ಈ ಹುದ್ದೆಗಳನ್ನು ಎರಡು ವಾರಗಳಲ್ಲಿ ಭರ್ತಿ ಮಾಡಬೇಕು ಎಂದು ಪೀಠವು ಸೂಚಿಸಿದೆ. ಹಾಗೆಯೇ, ಶಿಫಾರಸು ಮಾಡಿದ ಪಟ್ಟಿಯಲ್ಲಿರುವ ಹೆಸರುಗಳನ್ನು ಕೈಬಿಟ್ಟಿದ್ದರೆ ಅದಕ್ಕೆ ಕಾರಣ ಏನು ಎಂಬುದನ್ನು ತಿಳಿಸಬೇಕು ಎಂದೂ ಹೇಳಿದೆ.

ಶೋಧ ಮತ್ತು ಆಯ್ಕೆ ಸಮಿತಿಯು ಶಿಫಾರಸು ಮಾಡಿದ ಪಟ್ಟಿಯಿಂದಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಎರಡು ವಾರಗಳಲ್ಲಿ ಇದು ನಡೆಯಲಿದೆ ಎಂದು ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರು ಪೀಠಕ್ಕೆ ಭರವಸೆ ನೀಡಿದ್ದಾರೆ.

ಆದಾಯ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯ ಶೋಧ ಮತ್ತು ಆಯ್ಕೆ ಸಮಿತಿಯು 41 ಜನರ ಹೆಸರನ್ನು ಅಂತಿಮಗೊಳಿಸಿತ್ತು. ಆದರೆ, ಈ ಪಟ್ಟಿಯಿಂದ 13 ಮಂದಿಯನ್ನು ಮಾತ್ರ ಆಯ್ಕೆ ಮಾಡಲಾಗಿದೆ ಎಂಬುದನ್ನು ಹಿರಿಯ ವಕೀಲ ಅರವಿಂದ ದಾತಾರ್ ಅವರು ಪೀಠದ ಗಮನಕ್ಕೆ ತಂದರು.

'ಇದು ಹೊಸದೇನೂ ಅಲ್ಲ. ಪ್ರತಿ ಬಾರಿಯೂ ಹೀಗೆಯೇ ಆಗುತ್ತದೆ' ಎಂದು ಪೀಠವು ಹೇಳಿತು.

ಉತ್ತರ ಕೊರಿಯಾ: ಎರಡು ಕ್ಷಿಪಣಿ ಉಡಾವಣೆ

ಸೋಲ್ (ಎಪಿ): ಉತ್ತರ ಕೊರಿಯಾ ತನ್ನ ಪೂರ್ವ ಕರಾವಳಿಯಲ್ಲಿ ಎರಡು ಖಂಡಾಂತರ ಕ್ಷಿಪಣಿಗಳನ್ನು ಬುಧವಾರ ಉಡಾಯಿಸಿದೆ. ಉತ್ತರ ಕೊರಿಯಾದ ಮಧ್ಯಭಾಗದಿಂದ ಉಡಾಯಿಸಲಾದ ಈ ಎರಡು ಕ್ಷಿಪಣಿಗಳು ಕೊರಿಯನ್ ಪರ್ಯಾಯ ದ್ವೀಪದ ಪೂರ್ವ ಕರಾವಳಿಯ ನೀರಿನ ಕಡೆಗೆ ಹಾರಿದವು ಎಂದು ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಕೊರಿಯಾದ ಈ ಉಡಾವಣೆಗಳ ಕುರಿತು ದಕ್ಷಿಣ ಕೊರಿಯಾ ಮತ್ತು ಅಮೆರಿಕ ಗುಪ್ತಚರ ಅಧಿಕಾರಿಗಳು ಪರಿಶೀಲನೆ ಮತ್ತು ವಿಶ್ಲೇಷಣೆಯಲ್ಲಿ ತೊಡಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಇದರ ಬೆನ್ನಲ್ಲೇ ದಕ್ಷಿಣ ಕೊರಿಯಾ ತನ್ನ ಕಣ್ಗಾವಲನ್ನು ಹೆಚ್ಚಿಸಿದೆ.

ಜಪಾನ್ ಮತ್ತು ಕೊರಿಯನ್ ಪರ್ಯಾಯ ದ್ವೀಪದ ನಡುವೆ ಇರುವ ಜಪಾನಿನ ವಿಶೇಷ ಆರ್ಥಿಕ ವಲಯದ ಹೊರಗೆ ಎರಡು ವಸ್ತುಗಳು ಬಂದು ಬಿದ್ದಿದ್ದನ್ನು ಜಪಾನ್‌ನ ಕರಾವಳಿ ಪಡೆ ಖಚಿತಪಡಿಸಿದೆ. ಇದರಿಂದ ಯಾವುದೇ ಹಡಗುಗಳು ಅಥವಾ ವಿಮಾನಗಳಿಗೆ ಹಾನಿಯಾದ ವರದಿ ಆಗಿಲ್ಲ ಎಂದು ಕರಾವಳಿ ಪಡೆ ತಿಳಿಸಿದೆ.

ಗಡುವು ಮುಗಿದರೂ ಬಗೆಹರಿಯದ ಐ.ಟಿ. ಪೋರ್ಟಲ್ ಸಮಸ್ಯೆ

ನವದೆಹಲಿ (ಪಿಟಿಐ): ಆದಾಯ ತೆರಿಗೆ ಪೋರ್ಟಲ್‌ನಲ್ಲಿನ ತಾಂತ್ರಿಕ ದೋಷಗಳನ್ನು ಸರಿಪಡಿಸಲು ಸರ್ಕಾರವು ಇನ್ಫೊಸಿಸ್ ಕಂಪನಿಗೆ ನೀಡಿದ್ದ ಗಡುವು ಬುಧವಾರಕ್ಕೆ ಮುಗಿದಿದ್ದರೂ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ ಎಂದು ತೆರಿಗೆ ತಜ್ಞರು ಹೇಳಿದ್ದಾರೆ.

ಪೋರ್ಟಲ್‌ನಲ್ಲಿ ಹಲವು ತೊಂದರೆಗಳನ್ನು ಎದುರಿಸುತ್ತಿರುವುದಾಗಿ ತೆರಿಗೆ ತಜ್ಞರು ಹೇಳಿದ್ದಾರೆ. ಸಲ್ಲಿಸಿರುವ ವಿವರಗಳನ್ನು ಸರಿಪಡಿಸಲು, ಮರುಪಾವತಿ ಸ್ಥಿತಿಯನ್ನು ಪರಿಶೀಲಿಸಲು ಆಗುತ್ತಿಲ್ಲ. 2013–14ನೇ ಮೌಲ್ಯಮಾಪನ ವರ್ಷಕ್ಕಿಂತ ಮೊದಲಿನ ಐ.ಟಿ.ಆರ್. ನೋಡಲು ಸಾಧ್ಯವಾಗುತ್ತಿಲ್ಲ ಎಂದು ಅವರು ತಿಳಿಸಿದ್ದಾರೆ.

ಈ ಕುರಿತು ಪಿಟಿಐ ಸುದ್ದಿ ಸಂಸ್ಥೆಯು ಕಳುಹಿಸಿದ ಪ್ರಶ್ನೆಗಳಿಗೆ ಇನ್ಫೊಸಿಸ್ ಮತ್ತು ಆದಾಯ ತೆರಿಗೆ ಇಲಾಖೆ ಪ್ರತಿಕ್ರಿಯೆ ನೀಡಿಲ್ಲ.

'ಒಂದು ದಿನ ಚೆನ್ನಾಗಿ ಕೆಲಸ ಮಾಡಿದರೆ ಮತ್ತೊಂದು ದಿನ ತಾಂತ್ರಿಕ ಸಮಸ್ಯೆ ಎದುರಾಗುತ್ತಿದೆ. ತೆರಿಗೆ ಪಾವತಿದಾರರಿಗೆ ಐ.ಟಿ.ಆರ್ ಸಲ್ಲಿಸಲು ಕಷ್ಟವಾಗುತ್ತಿದೆ' ಎಂದು ನಂಗಿಯಾ ಆ್ಯಂಡ್ ಕೊ ಎಲ್‌ಎಲ್‌ಪಿ ಪಾಲುದಾರ ಶೈಲೇಶ್ ಕುಮಾರ್ ತಿಳಿಸಿದ್ದಾರೆ.

ಸುಂಟಿಕೊಪ್ಪ: ಡೆಲ್ಟಾ ವೈರಸ್ ಪತ್ತೆ– ಆತಂಕ

ಸುಂಟಿಕೊಪ್ಪ: ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ರೂಪಾಂತರಿ ವೈರಸ್ ಡೆಲ್ಟಾ ಪತ್ತೆಯಾಗಿರುವುದರಿಂದ ಸಾರ್ವಜನಿಕರಲ್ಲಿ ಆತಂಕ ಮೂಡಿದೆ.

ಇಲ್ಲಿಗೆ ಸಮೀಪದ ಕೊಡಗರಹಳ್ಳಿ ಗ್ರಾಮ ಪಂಚಾಯಿತಿಯ ಅಂದಗೋವೆಯ 10 ವರ್ಷದ ಹೆಣ್ಣು ಮಗು, 7ನೇ ಹೊಸಕೋಟೆ ತೊಂಡೂರು ಗ್ರಾಮದ ದಂಪತಿಯಲ್ಲಿ ಡೆಲ್ಟಾ ಸೋಂಕು ಪತ್ತೆಯಾಗಿದೆ.

ತೊಂಡೂರಿನ ದಂಪತಿ ಜುಲೈ 26ರಂದು ಮೈಸೂರಿನ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷೆ ಮಾಡಿಸಿದ್ದರು.

ಖರ್ಚೇ ಆಗದ ₹29,826 ಕೋಟಿ

ಒಂದನೇ ಪುಟದಿಂದ...

ನಗದು ಇದ್ದರೂ ಸಾಲ: ರಾಜ್ಯ ಸರ್ಕಾರ ತನ್ನ ಬಳಿ ನಗದು ಶಿಲ್ಕು ಇದ್ದರೂ ಅದನ್ನು ಬಳಕೆ ಮಾಡದೇ ಮಾರುಕಟ್ಟೆಯಲ್ಲಿ ಸಾಲ ಪಡೆದಿರುವುದಕ್ಕೆ ಸಿಎಜಿ ಆಕ್ಷೇಪಿಸಿದೆ.

2019–20ರಲ್ಲಿ ಸರ್ಕಾರ ₹ 48,499 ಕೋಟಿಯಷ್ಟು ಮಾರುಕಟ್ಟೆ ಸಾಲ ಪಡೆದಿತ್ತು. ಇದೇ ಅವಧಿಯಲ್ಲಿ ಸರ್ಕಾರದ ನಗದು ಶಿಲ್ಕು ₹ 5,139 ಕೋಟಿಯಿಂದ ₹ 13,634 ಕೋಟಿಯವರೆಗೂ ಇತ್ತು. ತನ್ನ ಬಳಿ ಲಭ್ಯವಿದ್ದ ಹಣವನ್ನು ಬಳಸಿಕೊಂಡಿದ್ದರೆ, ಸಾಲ ಮಾಡುವುದನ್ನು ತಪ್ಪಿಸಬಹುದಿತ್ತು ಎಂದು ಹೇಳಿದೆ.

ಆರೋಗ್ಯ, ಶಿಕ್ಷಣ ನಿರ್ಲಕ್ಷ್ಯ: 2014–15ರಿಂದ 2019–20ರವರೆಗಿನ ಅವಧಿಯಲ್ಲಿ ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದಲ್ಲಿ ರಾಜ್ಯ ಸರ್ಕಾರ ಹೆಚ್ಚು ವೆಚ್ಚ ಮಾಡಿಲ್ಲ. ಶಿಕ್ಷಣ ಕ್ಷೇತ್ರದ ಮೇಲಿನ ವೆಚ್ಚವು 2014–15ರಿಂದ 2018–19ರವರೆಗೂ ಇಳಿಕೆಯಾಗುತ್ತಲೇ ಇತ್ತು. 2019–20ರಲ್ಲಿ ಅಲ್ಪ ಪ್ರಮಾಣದ ಏರಿಕೆ ಮಾಡಲಾಗಿದೆ. ಆರೋಗ್ಯ ಕ್ಷೇತ್ರದಲ್ಲಿ ನಿರಂತರವಾಗಿ ವೆಚ್ಚ ಕಡಿತವಾಗಿದೆ ಎಂಬ ಅಂಶ ವರದಿಯಲ್ಲಿದೆ.

2019–20ರಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿನ ವೆಚ್ಚದಲ್ಲಿ ಕರ್ನಾಟಕವು ತನ್ನ ನೆರೆಯ ರಾಜ್ಯಗಳು ಹಾಗೂ ಸಮಾನ ದರ್ಜೆಯ ರಾಜ್ಯಗಳಿಗಿಂತ ಕೆಳ ಹಂತದಲ್ಲಿತ್ತು ಎಂದು ವರದಿ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಭಾರತದ ಆಶ್ರಯಕ್ಕೆ 736 ಅಫ್ಗನ್ನರ ಅರ್ಜಿ

ನವದೆಹಲಿ (ಪಿಟಿಐ): ಭಾರತದಲ್ಲಿ ಆಶ್ರಯ ಪಡೆಯುವುದಕ್ಕಾಗಿ ಅಫ್ಗಾನಿಸ್ತಾನದ 736 ಮಂದಿ ಆ.1ರಿಂದ ಸೆ.11ರ ಅವಧಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಹೈಕಮಿಷನರ್ (ಯುಎನ್‌ಎಚ್‌ಸಿಆರ್) ಕಚೇರಿಯು ಹೇಳಿದೆ.

ನೋಂದಣಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗಳು ಬರುತ್ತಿವೆ. ಬೇಡಿಕೆ ಪೂರೈಸಲು ಮತ್ತು ಈಗಾಗಲೇ ಭಾರತದಲ್ಲಿರುವ ಅಫ್ಗನ್ನರಿಗೆ ನೆರವು ನೀಡಲು ತನ್ನ ಸಾಮರ್ಥ್ಯ ಹೆಚ್ಚಿಸುತ್ತಿರುವುದಾಗಿ ಯುಎನ್‌ಎಚ್‌ಸಿಆರ್ ಹೇಳಿದೆ.

ವೀಸಾ ಪಡೆದುಕೊಳ್ಳುವ ಮತ್ತು ವಿಸ್ತರಿಸುವ ಕುರಿತು, ಸಹಕಾರ ಅಥವಾ ಪರಿಹಾರ ಕೇಳಿಕೊಂಡು ಅಫ್ಗನ್ನರು ಕರೆ ಮಾಡುತ್ತಾರೆ. ಅಫ್ಗನ್ನರ ಸಮಸ್ಯೆ ಕುರಿತು ಭಾರತ ಸರ್ಕಾರದ ಜೊತೆ ನಿರಂತರವಾಗಿ ಚರ್ಚೆ ನಡೆಸಲಾಗುತ್ತಿದೆ ಎಂದಿದೆ.

ಅಂಕಿಅಂಶಗಳ ಪ್ರಕಾರ, ಯುಎನ್‌ಎಚ್‌ಸಿಆರ್ ಮೂಲಕ ಭಾರತದಲ್ಲಿ ಆಶ್ರಯ ಪಡೆದಿರುವವರ ಸಂಖ್ಯೆ 43,157. ಅವರಲ್ಲಿ ಅಫ್ಗನ್‌ನ ನಿರಾಶ್ರಿತರು ಮತ್ತು ಆಶ್ರಯ ಕೇಳಿಕೊಂಡು ಬಂದವರ ಸಂಖ್ಯೆ 15,559.

ಯುಎನ್‌ಎಚ್‌ಸಿಆರ್‌ಗೆ ಕಳೆದ ಒಂದು ತಿಂಗಳಲ್ಲಿ ನೆರವು ಕೇಳಿಕೊಂಡು ಬಂದಿರುವ 736 ಜನರಲ್ಲಿ ಬಹುತೇಕರು 2021ರಲ್ಲಿ ಬಂದವರು. ಅಫ್ಗಾನಿಸ್ತಾನದ ಸದ್ಯದ ಪರಿಸ್ಥಿತಿಯಲ್ಲಿ ವಾಪಸ್ಸು ತೆರಳಲು ಸಾಧ್ಯವಾಗದ ಕಾರಣ ವಿದ್ಯಾರ್ಥಿಗಳು, ವ್ಯಾಪಾರಿಗಳು, ವೈದ್ಯಕೀಯ ಚಿಕಿತ್ಸೆ ಪಡೆಯುವ ಕಾರಣ ಭಾರತಕ್ಕೆ ಬಂದಿರುವವರು ಇತ್ತೀಚೆಗೆ ಮುಚ್ಚಲಾದ ಆಶ್ರಯ ಯೋಜನೆಗಳನ್ನು ಪುನಃ ತೆರೆಯಲು ಕೇಳಿಕೊಳ್ಳುತ್ತಿದ್ದಾರೆ.

ಅಫ್ಗಾನಿಸ್ತಾನದಿಂದ ಇತ್ತೀಚೆಗೆ ಬಂದವರಿಗಾಗಿ ಮಾನವೀಯ ನೆರವು ಕಾರ್ಯಕ್ರಮಗಳನ್ನು ಹೆಚ್ಚಿಸಲಾಗಿದೆ. ಮೂಲಭೂತ ಅಗತ್ಯಗಳಾದ ಆಹಾರ, ನಗದು ರೂಪದ ಸಹಾಯ, ಅಗತ್ಯ ಪರಿಹಾರ ಸಾಮಾಗ್ರಿಗಳನ್ನು ಹೊಸದಾಗಿ ಭಾರತಕ್ಕೆ ಬಂದವರಿಗೆ ಮತ್ತು ಈಗಾಗಲೇ ಭಾರತದಲ್ಲಿ ನೆಲೆಸಿರುವವರಿಗೆ ನೀಡಲಾಗುತ್ತಿದೆ. ನೋಂದಣಿ ಮತ್ತು ಲಭ್ಯವಿರುವ ನೆರವಿನ ಕುರಿತು ಮಾಹಿತಿ ನೀಡಲು ಅಫ್ಗನ್ ತುರ್ತು ಪರಿಸ್ಥಿತಿ ಘಟಕ ಮತ್ತು ವೆಬ್‌ಸೈಟ್ ರಚಿಸಲಾಗಿದೆ ಯುಎನ್‌ಎಚ್‌ಸಿಆರ್ ಹೇಳಿದೆ.

ಅಫ್ಗನ್ನರ ಸಮಸ್ಯೆಗಳಿಗೆ ಉತ್ತರಿಸಲು 24 ಗಂಟೆಗಳೂ ತೆರೆದಿರುವ ಸಹಾಯವಾಣಿ ಸ್ಥಾಪಿಸಲಾಗಿದೆ. ದಿನಕ್ಕೆ 130 ಕರೆಗಳನ್ನು ಸ್ವೀಕರಿಸಲಾಗುತ್ತಿದೆ. ಅವುಗಳಲ್ಲಿ ಬಹುತೇಕ ಕರೆಗಳು ಸಹಾಯ ಮತ್ತು ನೋಂದಣಿ ವಿಚಾರಕ್ಕಾಗಿ ಮಾಡಿರುವ ಕರೆಗಳೇ ಆಗಿರುತ್ತವೆ ಎಂದು ಯುಎನ್‌ಎಚ್‌ಸಿಆರ್ ಹೇಳಿದೆ.

ಕಾಬೂಲ್‌ಗೆ ವಿಮಾನ ಹಾರಾಟ ಆರಂಭಿಸಿದ ಇರಾನ್

ಟೆಹರಾನ್ (ಎಪಿ): ತಾಲಿಬಾನ್ ವಶವಾದ ನಂತರ ಅಫ್ಗಾನಿಸ್ತಾನಕ್ಕೆ ವಾಣಿಜ್ಯ ವಿಮಾನಗಳನ್ನು ಸ್ಥಗಿತಗೊಳಿಸಿದ್ದ ಇರಾನ್ ಬುಧವಾರ ತನ್ನ ವಿಮಾನ ಸೇವೆಯನ್ನು ಪುನರಾರಂಭಿಸಿದೆ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿವೆ.

ವಿಶೇಷ ವಿಮಾನವೊಂದು ಪ್ರಯಾಣಿಕರನ್ನು ಟೆಹರಾನ್‌ನಿಂದ ಕಾಬೂಲ್‌ಗೆ ಹೊತ್ತೊಯ್ದಿದೆ. ಈಶಾನ್ಯ ನಗರ ಮಷಾದ್‌ನಿಂದ ಎರಡನೇ ವಿಮಾನವು ಕಾಬೂಲ್‌ಗೆ ಹೊರಟಿದೆ ಎಂದು ಸುದ್ದಿ ಸಂಸ್ಥೆಯ ವರದಿ ಹೇಳಿದೆ.

ಆಗಸ್ಟ್ ತಿಂಗಳ ಮಧ್ಯದಲ್ಲಿ ಇರಾನ್ ಅಫ್ಗಾನಿಸ್ತಾನಕ್ಕೆ ವಿಮಾನ ಸೇವೆ ನಿಲ್ಲಿಸಿತ್ತು.

ಮಾಜಿ ಅಧಿಕಾರಿಗಳ ಸ್ವತ್ತು ಜಪ್ತಿ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನ ಸೈನಿಕರು ಅಪಾರ ಪ್ರಮಾಣದ ಹಣ ಮತ್ತು ಚಿನ್ನವನ್ನು ಅಫ್ಗಾನಿಸ್ತಾನದ ಸೆಂಟ್ರಲ್ ಬ್ಯಾಂಕಿಗೆ ಬುಧವಾರ ಹಸ್ತಾಂತರಿಸಿದ್ದಾರೆ.

ಅಫ್ಗನ್ ಮಾಜಿ ಉಪಾಧ್ಯಕ್ಷ ಅಮ್ರುಲ್ಲಾ ಸಾಲಿಹ್ ಸೇರಿದಂತೆ ಮಾಜಿ ಅಧಿಕಾರಿಗಳ ನಿವಾಸಗಳಿಂದ ವಶಪಡಿಸಿಕೊಂಡಿರುವ ಸುಮಾರು ₹1.23 ಕೋಟಿ ಡಾಲರ್ (ಸುಮಾರು ₹90 ಕೋಟಿ) ನಗದು ಮತ್ತು ಹಲವು ಚಿನ್ನದ ಗಟ್ಟಿಗಳನ್ನು ತಾಲಿಬಾನ್ ಸೈನಿಕರು ತನಗೆ ನೀಡಿದ್ದಾರೆ ಎಂದು ಸೆಂಟ್ರಲ್ ಬ್ಯಾಂಕ್ ಹೇಳಿದೆ.

‘ಹಿಂದಿನ ಸರ್ಕಾರದ ಉನ್ನತ ಶ್ರೇಣಿಯ ಅಧಿಕಾರಿಗಳು ಮತ್ತು ರಾಷ್ಟ್ರೀಯ ಭದ್ರತಾ ಸಂಸ್ಥೆಗಳು ತಮ್ಮ ನಿವಾಸಗಳಲ್ಲಿ ಇರಿಸಿಕೊಂಡಿದ್ದ ನಗದು ಮತ್ತು ಚಿನ್ನವನ್ನು ಜಪ್ತಿ ಮಾಡಲಾಗಿದೆ’ ಎಂದು ಬ್ಯಾಂಕ್ ಹೇಳಿಕೆಯಲ್ಲಿ ತಿಳಿಸಿದೆ.

ಚಿರಸ್ಮರಣೆ

ಶ್ರೀ ಬಿ.ಜಿ. ಭಾಸ್ಕರ್ ನಾಯ್ಡು
ಜನನ : 13–9–1948 ನಿಧನ : 16–9–2013

Chairman : SLN GROUP & M/s. Enviro Green Alloys Inc.

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷಗಳು ಕಳೆದರೂ ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ

ಧರ್ಮಪತ್ನಿ : ಶ್ರೀಮತಿ ಬಿ. ವರಲಕ್ಷ್ಮಿ, ಮಕ್ಕಳು ಮತ್ತು ಬಂಧು–ಮಿತ್ರರು

ಶ್ರದ್ಧಾಂಜಲಿ

ಶ್ರೀಮತಿ ನಂಜಮ್ಮ
1943 - 2021
ಲೇಟ್ ಶ್ರೀ ಎ. ರಾಮಣ್ಣನವರ ಪತ್ನಿ
ಸಂಸ್ಥಾಪಕರು: ಪಲ್ಲವಿ ಕನ್‌ಸ್ಟ್ರಕ್ಷನ್ಸ್

ಶ್ರೀಮತಿ ನಂಜಮ್ಮನವರು ದಿ: 06.09.2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಶ್ರದ್ಧಾಂಜಲಿ ಕಾರ್ಯವನ್ನು ದಿ: 16.09.2021 ರಂದು ಏರ್ಪಡಿಸಲಾಗಿದೆ.

ಭೋಜನ : Tennis Pavillion
Palace Grounds, Bangalore
ಪ್ರವೇಶ: Mount Carmel Gate Vasanthnagar.

ಡಾ. ಪಲ್ಲವಿ ವಿ.ಆರ್., ಮಗಳು
ಡಾ. ರಾಮಚಂದ್ರ ಸಿ., ಅಳಿಯ
ಕುಮಾರಿ ಸಂಹಿತಾ ರಾಮಚಂದ್ರ, ಮೊಮ್ಮಗಳು
ಕುಮಾರಿ ಅನ್ವಿತಾ ರಾಮಚಂದ್ರ, ಮೊಮ್ಮಗಳು
ಹಾಗೂ ಬಂಧು-ಮಿತ್ರರು

ಚಿರಶಾಂತಿ

ಶ್ರೀ ಬಿ. ಅನಿಲ್ ಕುಮಾರ್
ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಬಿ. ಅನಿಲ್ ಕುಮಾರ್‌ರವರು 14.09.2021 ರಂದು ವಿಧಿವಶರಾಗಿರುತ್ತಾರೆಂದು ತಿಳಿಸಲು ವಿಷಾದಿಸುತ್ತೇವೆ. ಭಗವಂತನು ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ.

ಆಡಳಿತ ಮಂಡಲಿ ಮತ್ತು ಸಿಬ್ಬಂದಿ ವರ್ಗ
ಕಬ್ಬಿಣ ಮತ್ತು ಉಕ್ಕು ಕೈಗಾರಿಕಾ ಬಳಕೆದಾರರ ಸಹಕಾರ ಸಂಘ ನಿಯಮಿತ.
ರಾಜಾಜಿನಗರ, ಬೆಂಗಳೂರು

LOOKING FOR JOB OPPORTUNITY — Refer Classifieds on Wednesday

ನಿಫಾ ಶಂಕಿತ ವ್ಯಕ್ತಿಯ ವರದಿ ನೆಗೆಟಿವ್

ಮಂಗಳೂರು: ನಿಫಾ ಸೋಂಕು ತಗುಲಿರುವ ಶಂಕೆಯಲ್ಲಿ ಇಲ್ಲಿನ ವೆನ್ಲಾಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ವ್ಯಕ್ತಿಯ ಪರೀಕ್ಷಾ ವರದಿ ನೆಗೆಟಿವ್ ಬಂದಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕಿಶೋರ್‌ಕುಮಾರ್ ಸ್ಪಷ್ಟಪಡಿಸಿದ್ದಾರೆ.

ಗೋವಾದ ಪ್ರಯೋಗಾಲಯದಲ್ಲಿ ಮೈಕ್ರೊ ಬಯಾಲಜಿಸ್ಟ್ ಆಗಿರುವ ಕಾರವಾರದ ಈ ವ್ಯಕ್ತಿಗೆ ಕೆಲ ದಿನಗಳ ಹಿಂದೆ ಜ್ವರ ಬಂದಿತ್ತು. ಇದರಿಂದ ಆತಂಕಗೊಂಡಿದ್ದ ವ್ಯಕ್ತಿ, ಸ್ವಯಂ ಪ್ರೇರಣೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು.

‘ನಿಫಾ ಸೋಂಕಿನ ಲಕ್ಷಣಗಳು ಇಲ್ಲದಿದ್ದರೂ, ನಿರ್ಲಕ್ಷ್ಯ ಮಾಡಬಾರದೆಂಬ ಕಾರಣಕ್ಕೆ ಅವರ ರಕ್ತ, ಗಂಟಲು ದ್ರವ, ಮೂತ್ರದ ಮಾದರಿಯನ್ನು ಪುಣೆ ಪ್ರಯೋಗಾಲಯಕ್ಕೆ ತಪಾಸಣೆಗೆ ಕಳುಹಿಸಲಾಗಿತ್ತು. ಬುಧವಾರ ತಪಾಸಣಾ ವರದಿ ಬಂದಿದೆ’ ಎಂದು ಅವರು ತಿಳಿಸಿದ್ದಾರೆ.

‘ಅಮೆರಿಕದಲ್ಲಿ ಪಾಕ್ ಬೆಂಬಲಿತ ಖಾಲಿಸ್ತಾನ ಗುಂಪುಗಳು’

ವಾಷಿಂಗ್ಟನ್: ಪಾಕಿಸ್ತಾನ ಬೆಂಬಲಿತ ಪ್ರತ್ಯೇಕತಾವಾದಿ ಖಾಲಿಸ್ತಾನ ಗುಂಪುಗಳು ಅಮೆರಿಕದಲ್ಲಿ ಸದ್ದಿಲ್ಲದೆ ನೆಲೆ ಸ್ಥಾಪಿಸುತ್ತಿವೆ ಎಂದು ವರದಿಯಾಗಿದೆ.

ಹಡ್ಸನ್ ಇನ್‌ಸ್ಟಿಟ್ಯೂಟ್ ಪ್ರಕಟಿಸಿರುವ ವರದಿಯಲ್ಲಿ ಪಾಕಿಸ್ತಾನ ಬೆಂಬಲಿತ ಖಾಲಿಸ್ತಾನ ಮತ್ತು ಕಾಶ್ಮೀರ ಪ್ರತ್ಯೇಕತಾವಾದಿಗಳ ನಡೆಯನ್ನು ಪರಿಶೀಲಿಸಿದೆ. ಭಾರತದಲ್ಲಿ ಉಗ್ರಗಾಮಿ ಮತ್ತು ಭಯೋತ್ಪಾದಕ ಸಂಘಟನೆಗಳೊಂದಿಗಿನ ಈ ಗುಂಪುಗಳ ಸಂಬಂಧ ಮತ್ತು ದಕ್ಷಿಣ ಏಷ್ಯಾದಲ್ಲಿ ಅಮೆರಿಕ ವಿದೇಶಾಂಗ ನೀತಿಯ ಮೇಲೆ ಚಟುವಟಿಕೆಗಳ ದುಷ್ಪರಿಣಾಮಗಳ ಬಗ್ಗೆಯೂ ಈ ವರದಿಯು ವಿಶ್ಲೇಷಣೆ ನಡೆಸಿದೆ. ಪಾಕಿಸ್ತಾನ ಮೂಲದ ಇಸ್ಲಾಮಿಕ್ ಭಯೋತ್ಪಾದಕ ಗುಂಪುಗಳಂತೆ ಖಾಲಿಸ್ತಾನ ಗುಂಪುಗಳು ಹೊಸ ಹೆಸರುಗಳಲ್ಲಿ ಹೊರಹೊಮ್ಮಬಹುದು ಎಂದು ವರದಿಯು ತಿಳಿಸಿದೆ.

ಖಾಲಿಸ್ತಾನ ಬೆಂಬಲಿಗರು ಬ್ರಿಟನ್, ಕೆನಡಾ, ಅಮೆರಿಕದಂತಹ ಪಾಶ್ಚಿಮಾತ್ಯ ದೇಶಗಳಲ್ಲಿ ನೆಲೆಸಿದ್ದಾರೆ. ಖಾಲಿಸ್ತಾನ ಕಾರ್ಯಕರ್ತರು ನಡೆಸಿದ ಹಿಂಸಾಚಾರ ಕುರಿತು ಅಮೆರಿಕ ಸರ್ಕಾರ ಹೆಚ್ಚಿನ ಗಮನ ನೀಡದಿರುವುದು ದುರದೃಷ್ಟಕರ ಎಂದು ವರದಿಯಲ್ಲಿ ಹೇಳಲಾಗಿದೆ.

‘ಮನವಿಗೆ ಸ್ಪಂದನೆ ಸಿಗುತ್ತಿಲ್ಲ’

ಪಾಕಿಸ್ತಾನ ಬೆಂಬಲಿತ ಖಾಲಿಸ್ತಾನ ಪ್ರತ್ಯೇಕತಾವಾದಿಗಳ ಸಂಘಟನೆಗಳನ್ನು ನಿಗ್ರಹಿಸುವಂತೆ ಭಾರತ ಮಾಡಿರುವ ಮನವಿಗೆ ಅಮೆರಿಕ ಕಿವಿಗೊಡುತ್ತಿಲ್ಲ ಎಂದು ಇಲ್ಲಿನ ಚಿಂತಕರು, ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಅಮೆರಿಕ ಮೂಲದ ‘ಸಿಖ್ಸ್ ಫಾರ್ ಜಸ್ಟಿಸ್’ (ಎಸ್‌ಎಫ್‌ಜೆ) ದೇಶ ವಿರೋಧಿ ಕೃತ್ಯಗಳಲ್ಲಿ ತೊಡಗಿದೆ ಎಂಬ ಆರೋಪದ ಮೇಲೆ, ಭಾರತ ಈ ಸಂಘಟನೆಯನ್ನು ನಿಷೇಧಿಸಿದೆ. ಎಸ್‌ಎಫ್‌ಜೆ ಸೇರಿದಂತೆ ಪಾಕಿಸ್ತಾನ ಬೆಂಬಲಿತ ವಿವಿಧ ಪ್ರತ್ಯೇಕತಾವಾದಿಗಳ ಗುಂಪುಗಳ ಚಟುವಟಿಕೆಗಳ ಕುರಿತ ವರದಿಯನ್ನು ಹಡ್ಸನ್ ಇನ್‌ಸ್ಟಿಟ್ಯೂಟ್ ಬಿಡುಗಡೆ ಮಾಡಿದೆ.

ಕೋವಿಡ್: 1,116 ಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ವಾರದಿಂದ ಇಳಿಮುಖ ಮಾಡಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಬುಧವಾರ ಏರಿಕೆ ಕಂಡಿದ್ದು, 1,116 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಮಂಗಳವಾರ ಹೊಸ ಪ್ರಕರಣಗಳು 559ಕ್ಕೆ ಇಳಿಕೆ ಕಂಡಿತ್ತು. ಒಂದು ದಿನದ ಅವಧಿಯಲ್ಲಿ 1.70 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಇದರಿಂದಾಗಿ ಪ್ರಕರಣಗಳೂ ಹೆಚ್ಚಿನ ಸಂಖ್ಯೆಯಲ್ಲಿ ಖಚಿತಪಟ್ಟಿವೆ. ಸೋಂಕು ದೃಢ ಪ್ರಮಾಣವು ಶೇ 0.65ರಷ್ಟು ವರದಿಯಾಗಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.64 ಲಕ್ಷ ದಾಟಿದೆ.

12 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ರಾಯಚೂರು, ರಾಮನಗರ, ವಿಜಯಪುರ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಬೆಂಗಳೂರಿನಲ್ಲಿ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದ್ದು, 462 ಮಂದಿ ಸೋಂಕಿತರಾಗಿದ್ದಾರೆ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡ ದಲ್ಲಿ 102, ಮೈಸೂರಿನಲ್ಲಿ 76, ಕೊಡಗಿನಲ್ಲಿ 67. ಉಡುಪಿಯಲ್ಲಿ 89, ಹಾಸನದಲ್ಲಿ 81, ತುಮಕೂರಿನಲ್ಲಿ 60 ಹಾಗೂ ಚಿಕ್ಕಮಗಳೂರಿನಲ್ಲಿ 50 ಮಂದಿ ಕೋವಿಡ್ ಪೀಡಿತರಾಗಿದ್ದಾರೆ.

ಲಸಿಕೆ ಮುಂಬೈನಲ್ಲಿ ಬುಧವಾರ ಗಣಪತಿ ಪೆಂಡಾಲ್‌ನಲ್ಲಿ ಆರೋಗ್ಯ ಕಾರ್ಯಕರ್ತೆಯೊಬ್ಬರು ವ್ಯಕ್ತಿಯೊಬ್ಬರಿಗೆ ಕೋವಿಡ್ ಲಸಿಕೆ ನೀಡಿದರು –ಪಿಟಿಐ ಚಿತ್ರ

ರಾಜ್ಯ ಕೋವಿಡ್ ಅಂಕಿ–ಅಂಶ

29,64,083	ಒಟ್ಟು ಸೋಂಕಿತರು ▲ (29,62,967 ನಿನ್ನೆಯ ವಿವರ)
15,892	ಸಕ್ರಿಯ ಪ್ರಕರಣಗಳು ▲
29,10,626	ಗುಣಮುಖರಾದವರು ▲
37,537	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	1,116	▲
ಗುಣಮುಖ	970	▼
ಸಾವು	08	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ

ಪ್ರಜಾವಾಣಿ ಗ್ರಾಫಿಕ್ಸ್

ನೀಟ್ ಪರೀಕ್ಷೆ: ವಿದ್ಯಾರ್ಥಿನಿ ಆತ್ಮಹತ್ಯೆ

ಚೆನ್ನೈ (ಪಿಟಿಐ): ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಉತ್ತೀರ್ಣಳಾಗುವುದಿಲ್ಲ ಎಂದು ಎದೆಗುಂದಿದ್ದ ವಿದ್ಯಾರ್ಥಿನಿ ನೇಣು ಬಿಗಿದುಕೊಂಡು ಬುಧವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣ ಆಕಾಂಕ್ಷಿ, ವೆಲ್ಲೂರ್ ಜಿಲ್ಲೆಯ ತಲಯರಂಪಟ್ಟು ಗ್ರಾಮದ ಸೌಂದರ್ಯ (17) ಆತ್ಮ ಹತ್ಯೆ ಮಾಡಿಕೊಂಡ ವಿದ್ಯಾರ್ಥಿನಿ ಎಂದು ಪೊಲೀಸರು ತಿಳಿಸಿದ್ದಾರೆ.

ಇದೇ ಕಾರಣಕ್ಕೆ ತಮಿಳುನಾಡಿನಲ್ಲಿ ಕಳೆದ ನಾಲ್ಕು ದಿನಗಳಲ್ಲಿ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಸಂಖ್ಯೆ ಮೂರಕ್ಕೆ ಏರಿದಂತಾಗಿದೆ.

7.50 ಲಕ್ಷ ಪಿಂಚಣಿದಾರರ ಭೌತಿಕ ಪರಿಶೀಲನೆ

4.19 ಲಕ್ಷ ಮಂದಿ ‘ಅನರ್ಹ’

ಒಂದನೇ ಪುಟದಿಂದ...

‘ಬಿಪಿಎಲ್ ಪಡಿತರ ಚೀಟಿ ಪಡೆಯಲು ಆದಾಯ ಮಿತಿ ವಾರ್ಷಿಕ ₹ 1.20 ಲಕ್ಷ ಇದ್ದರೂ, ಪಿಂಚಣಿ ಪಡೆಯಲು ನಗರ ಪ್ರದೇಶಕ್ಕೆ ₹ 17 ಸಾವಿರ, ಗ್ರಾಮೀಣ ಪ್ರದೇಶಕ್ಕೆ ₹ 12 ಸಾವಿರ ಆದಾಯ ಮಿತಿ ಇತ್ತು. ಅದನ್ನು ಇತ್ತೀಚೆಗೆ ಎಲ್ಲರಿಗೂ ₹ 32 ಸಾವಿರವಾಗಿ ಪರಿಷ್ಕರಿಸಲಾಗಿದೆ. ಪಿಂಚಣಿ ಪಡೆಯಲು ಆದಾಯ ಮಿತಿ ಕಡಿಮೆ ನಮೂದಿಸಿ, ಒಂದೇ ಮನೆಯಲ್ಲಿ ಎರಡು ಪಡಿತರ ಚೀಟಿ ಮಾಡಿಸಿಕೊಂಡ ಕುಟುಂಬಗಳಿವೆ. ಆಧಾರ್ ಜೋಡಣೆ ಆಗದಿರುವುದು, ಆದಾಯ ಮಿತಿ ಹೆಚ್ಚಳ, ವಾಸಸ್ಥಳ ಬದಲು, ವಲಸೆ ಕಾರಣಕ್ಕೆ ಪಿಂಚಣಿ ರದ್ದು ಮಾಡಲಾಗಿದೆ. ಆಧಾರ್ ಜೋಡಣೆಯಾದ ತಕ್ಷಣ ಎರಡು ಯೋಜನೆಗಳಲ್ಲಿ (ಡಿ- ಡುಪ್ಲಿಕೇಷನ್) ಪಿಂಚಣಿ ಪಡೆಯುತ್ತಿರುವ ಪ್ರಕರಣಗಳೂ ಪತ್ತೆ ಆಗಿವೆ. ಹೆಸರುಗಳ ವ್ಯತ್ಯಾಸದಿಂದ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆಯಾಗದೆ ಪಿಂಚಣಿ ತಡೆಹಿಡಿದ ಪ್ರಕರಣಗಳೂ ಇವೆ’ ಎಂದೂ ಅವರು ತಿಳಿಸಿದರು.

ಸ್ವಯಂಚಾಲಿತ ವ್ಯವಸ್ಥೆ ಅಗತ್ಯ: ‘65 ವರ್ಷ ದಾಟದವರಿಗೆ ಸಂಧ್ಯಾ ಸುರಕ್ಷಾ ಯೋಜನೆಯಡಿ ₹ 1,200 ಪಿಂಚಣಿ ನೀಡಲಾಗುತ್ತಿದೆ. ಈಗಾಗಲೇ ವಿಧವಾ, ಅಂಗವಿಕಲ, ಮನಸ್ವಿನಿ ಪಿಂಚಣಿ ಪಡೆಯುತ್ತಿರುವವರು ಸದ್ಯ ಸಿಗುವ ಮೊತ್ತ ಕಡಿಮೆ ಎಂಬ ಕಾರಣಕ್ಕೆ 65 ವರ್ಷ ದಾಟುತ್ತಿದ್ದಂತೆ ಸಂಧ್ಯಾ ಸುರಕ್ಷಾ ಯೋಜನೆಗೆ ಪರಿವರ್ತಿಸಿಕೊಳ್ಳಲು ಅವಕಾಶವಿದೆ. ಈ ಅವಧಿಯಲ್ಲಿ ಪಿಂಚಣಿ ಯೋಜನೆಯಿಂದ ಹೊರಗುಳಿಯಬೇಕಾಗುತ್ತದೆ. ಇದನ್ನು ತಪ್ಪಿಸಲು ತಂತ್ರಾಂಶ ಆಧಾರಿತ ಸ್ವಯಂ ಚಾಲಿತ ವ್ಯವಸ್ಥೆಯನ್ನು ಸರ್ಕಾರ ರೂಪಿಸಬೇಕು’ ಎಂದೂ ಹೇಳಿದರು.

ಸಿಬ್ಬಂದಿ ಕೊರತೆ: ‘ಗ್ರಾಮೀಣ ಭಾಗದಲ್ಲಿ ಅಟಲ್ ಜನಸ್ನೇಹಿ ಕೇಂದ್ರಗಳಲ್ಲಿ ಹೊರಗುತ್ತಿಗೆ ಸಿಬ್ಬಂದಿಯನ್ನು ಮರು ನೇಮಕ ಮಾಡಿಕೊಳ್ಳದೇ ಇರುವುದರಿಂದ, ಸಿಬ್ಬಂದಿ ಇಲ್ಲ ಎಂಬ ಕಾರಣಕ್ಕೆ ಆಧಾರ್ ತಿದ್ದುಪಡಿ ಬಹುತೇಕ ಸ್ಥಗಿತಗೊಂಡಿದೆ. ಮಲೆನಾಡಿನ ಬಹುತೇಕ ಕಡೆ ಈ ಸಮಸ್ಯೆ ಇದೆ. ಪ್ರತಿ ನಾಡಕಚೇರಿಯಲ್ಲಿ ಆಧಾರ್ ತಿದ್ದುಪಡಿ ಕಲ್ಪಿಸಿ, ಪ್ರತ್ಯೇಕ ಸಿಬ್ಬಂದಿಯನ್ನು ನಿಯೋಜಿಸಬೇಕು’ ಎಂದು ಪಿಂಚಣಿದಾರರೊಬ್ಬರು ಹೇಳಿದರು.

‘ತಹಶೀಲ್ದಾರ್ ಕಚೇರಿಗಳಲ್ಲಿ ಕಚೇರಿ ಸಿಬ್ಬಂದಿಗಿಂತ ಮಧ್ಯವರ್ತಿಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಪಿಂಚಣಿಗಾಗಿ, ಪಡಿತರ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣಪತ್ರ, ವಾಸಸ್ಥಳ ಪ್ರಮಾಣಪತ್ರ ಪಡೆಯುವುದೇ ಸಾಹಸದ ಕೆಲಸ. ಪಿಂಚಣಿ ಪಡೆಯಲು ಅರ್ಹತೆ ಇದ್ದರೂ ಅಧಿಕಾರಿಗಳ ವಿಳಂಬ ನೀತಿ, ಬೇಜವಾಬ್ದಾರಿಯಿಂದ ನಿತ್ಯ ಕಚೇರಿಯಿಂದ ಕಚೇರಿಗೆ ಅಲೆಯುವಂತಾಗಿದೆ’ ಎಂದೂ ಅಳಲು ತೋಡಿಕೊಂಡರು.

ಅಂಕಿಅಂಶ

68.24 ಲಕ್ಷ ವಿವಿಧ ಯೋಜನೆಗಳಡಿ ಫಲಾನುಭವಿಗಳು

₹7,861 ಕೋಟಿ 2021–22ನೇ ಸಾಲಿನಲ್ಲಿ ಪಿಂಚಣಿಗೆ ಮೀಸಲಿಟ್ಟ ಹಣ

₹2,000 ಕೋಟಿ ಜುಲೈ ಅಂತ್ಯಕ್ಕೆ ವೆಚ್ಚ

ಯೋಜನೆಗಳು	ಫಲಾನುಭವಿಗಳು
ವೃದ್ಧಾಪ್ಯ	13,55,122
ವಿಧವಾ	17,02,385
ಅಂಗವಿಕಲ	8,60,391
ಸಂಧ್ಯಾ ಸುರಕ್ಷಾ	27,66,667
ಮನಸ್ವಿನಿ	1,27,078
ಮೈತ್ರಿ	1,832
ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿ	4,550
ಆಸಿಡ್ ದಾಳಿಗೆ ಒಳಗಾದ ಮಹಿಳೆಯರು	37
ಎಂಡೋಸಲ್ಫಾನ್ ಸಂತ್ರಸ್ತರು	6,524
ಒಟ್ಟು	68,24,586

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hospital & Medical Jobs

ಹೋಮ್ ನರ್ಸ್ ಕೆಲಸಕ್ಕೆ ಯುವಕ, ಯುವತಿಯರು ಬೇಕಾಗಿದ್ದಾರೆ. 12,000/- ಮೇಲ್ಪಟ್ಟು ಸಂಬಳದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. 9916905188, 0821 - 4524105

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ಕನ್ನಡ ಮತ್ತು ಇಂಗ್ಲೀಷ್ ಓದಲು, ಬರೆಯಲು ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503

★ಮನೆಯಿಂದಲೇ ಮೆಣದಬತ್ತಿ★ ತಯಾರಿಸಿ ನಮಗೆ ಮಾರಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ. ತರಬೇತಿಗಾಗಿ: ಬೆಂಗಳೂರು. 9060472077, ಶಿವಮೊಗ್ಗ. 9008012895

Walk-in

Tata Group (Aerostructures) Hyderabad is Hiring!!!
REQUIREMENT
Position: Assembly Operator (Fitter)
Qualification: ITI - Fitter + Apprenticeship (NCVT)
Experience: 4 to 8 Years
Description: Hands on Experience in Aerostructure Assembly Process. Good understanding on Drawings, Familiar with Hand Tools and Cutting Tools.
Note: Candidates working in Aerospace industry are preferred.
Work Location: Hyderabad
Date & Time of Interview: 18.09.2021 & 09.00 AM - 05.00PM
VENUE ROYAL ORCHID CENTRAL 47/1, Dickenson Road, Manipal Centre, Bangalore - 560042.

Marketing & Sales

ಉದ್ಯೋಗವಕಾಶ: ಗ್ರೀನ್ ಕೈರೋ ಕಂಪೆನಿಯ ಬೆಂಗಳೂರು ಶಾಖೆಯ ಅಭಿವೃದ್ಧಿಗೆ ದ್ವಿಚಕ್ರ ವಾಹನ ಹೊಂದಿರುವ ಅನುಭವಸ್ಥ (ಮಾರ್ಕೆಟಿಂಗ್) ಯುವಕರು ಬೇಕಾಗಿದ್ದಾರೆ. ಫಿಕ್ಸೆಡ್ ವೇತನ (15,000- 25,000) + TA + ಭತ್ಯೆ. ನೋ ಟಾರ್ಗೆಟ್, ಸಂಪರ್ಕಿಸಿ. 7019910428

General

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000- 56,000/- ವಸತಿಯೂಟವಿದೆ. 7204853296, 7204396011

WORK STUDY and settle your future with salary. Are you a student with 10th, Plus-2, willing to work in HOMECARE-SERVICES, if yes call 6366883838, 9606347575. MAJ HEALTH CARE-SERVICES, Gandhinagar, Bangalore.

Part-Time Jobs

WORK FROM Home No Qualification Housewifes, Employes, Students, Visit our Office Near SP Circle, Bellary -8123012124, 7022121569

ವ್ಯಾಪಾರ

Business to Business

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

Business Offers

Finance

ಸಾಲ ಬೇಕಾಗಿದೆಯೇ? ಆಸ್ತಿ, ವ್ಯಾಪಾರ, ವ್ಯವಹಾರ, ಕೃಷಿಸಾಲ, ವೈಯಕ್ತಿಕ ಸಾಲ, ಮನೆ ಸಾಲ ಮತ್ತು ನಗದು ಸಾಲ ಬೇಕಾಗಿದೆಯೇ? 5 ಲಕ್ಷದಿಂದ 5 ಕೋಟಿಯವರೆಗೆ ಸಾಲ ಲಭ್ಯ.ಸುಲಭ ದಾಖಲೆ ಹಾಗೂ ತ್ವರಿತ ಪ್ರಕ್ರಿಯೆಯಲ್ಲಿ ಸಾಲ ಪಡೆಯಿರಿ. ಮಾಹಿತಿಗೆ: 9988022262

ಭವಿಷ್ಯ

Astrology

“ಉಚಿತ ಭವಿಷ್ಯ, ಕ್ಷಣದಲ್ಲಿ ಪರಿಹಾರ” ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ, ಧನವಶೀಕರಣ, ಶತ್ರುವಶೀಕರಣ, ಸ್ತ್ರೀಪುರುಷವಶೀಕರಣ, ನಿಮ್ಮಲ್ಲಿ ಸಮಸ್ಯೆಯೇ?? ಪರಿಹಾರವಾಗಬೇಕೆ?? ಒಂದೇಕರೆಯಲ್ಲಿ ವಶೀಕರಣದ ವಿಶೇಷತಾಂತ್ರಿಕರಾದ ಗುರುರಾಜನ್ “ನಂಬಿದವರ ಪಾಲಿನಬೆಳಕು” 9731309181

★॥ಶ್ರೀಶಾಕಾಂಬರಿದೇವಿ॥★ ಆರಾಧಕರು ಸ್ತ್ರೀ_ಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂಯಾವುದೇ ಕಠಿಣ,ಗುಪ್ತ ಸಮಸ್ಯೆಗಳಿಗೆ 11 ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900222591

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ಕೇರಳ ಮತ್ತು ಕೊಳ್ಳೇಗಾಲದ ಪ್ರಚಂಡ ಅಮಾನುಷ ಮಾಂತ್ರಿಕ ವಿದ್ಯೆಯಿಂದ ಪ್ರೀತಿಯಲ್ಲಿ ನಂಬಿ ಮೋಸ ಇಷ್ಟಪಟ್ಟವರು ನಿಮ್ಮಂತಾಗಲುಸ್ತಿ ಸ್ತ್ರೀ/ ಪುರುಷ ವಶೀಕರಣ, ಇನ್ನೂ ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿದ್ದರೂ ಕೇವಲ 2 ದಿನಗಳಲ್ಲಿ 100% ಪರಿಹಾರ ಮಾಡುತ್ತಾರೆ. 9945530666.

★॥ವಶೀಕರಣ ಸ್ಪೆಷಲಿಸ್ಟ್॥★ ಇಷ್ಟಪಟ್ಟವರು ನಿಮ್ಮಂತೆ ಆಗಲು ನೋಡುವ_ಮೂಲಕ ಮಾತನಾಡುವ ಮೂಲಕ ಹೆಸರಿನ ಮೂಲಕ ಸ್ತ್ರೀವಶೀಕರಣ 27ನಿಮಿಷಗಳಲ್ಲಿ ಶಾಶ್ವತ ಪರಿಹಾರ. 9900511008"

ಶ್ರೀರಾಘವೇಂದ್ರ ಸ್ವಾಮಿ ಜ್ಯೋತಿಷ್ಯಾಲಯ: ಪಂಡಿತ್ ರಾಘವೇಂದ್ರ ಗುರೂಜಿ. ನಿಮ್ಮಾವುದೇ ಸಮಸ್ಯೆಯಿರಲಿ 3ದಿನದಲ್ಲಿ ವಶೀಕರಣ ಸ್ಪೆಷಲಿಸ್ಟ್ ಫೋನಿನ ಮೂಲಕ ಪರಿಹಾರ ಶತಸಿದ್ಧ. ಮಂತ್ರಾಲಯ 7760909072

★ಅಂಬಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ವೈಯಕ್ತಿಕ

Change of Name

I LEONARD Paul S/O A Paul Andrew residing at #23 3rd c main 9th cross St Thomas Town Post Ramaiah Layout Bangalore 560084 has changed the Name to Mohammed Ameen

ಪ್ರವಾಸ

Travel

ಶ್ರೀರಾಜರಾಜೇಶ್ವರಿ ಟೂರ್ಸ್ 9743895346, 9739618243, 11.11.2021, 7/10 ದಿನಗಳ ಅಲಹಾಬಾದ್,ಚಿತ್ರಕೂಟ, ವಾರಣಾಸಿ, ಅಯೋಧ್ಯ,ಗಯಾ, ನೈಮೀಷಾರಣ್ಯ, 18.11.2021, 5/9 ದಿನಗಳ ದೆಹಲಿ, ಬೃಂದಾವನ, ತಾಜ್‌ಮಹಲ್, ವೈಷ್ಣೋದೇವಿ, ಶಿವಕೋರಿ. ಎ/ಸಿ ರೈಲು/ವಿಮಾನ ಪ್ರವಾಸ.

ಅಂಡಮಾನ್ ಹವಳದ್ವೀಪ ಸೆಪ್ಟಂಬರ್, ಅಕ್ಟೊಬರ್, ನವೆಂಬರ್‌ನಲ್ಲಿ 5 ದಿನಗಳು ವಿಮಾನದಲ್ಲಿ. Royal Package. ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ Classifieds
EFFECTIVE FROM JUNE 3rd, 2020
DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನಿಧನ ವಾರ್ತೆ

ಚನ್ನಬಸಪ್ಪ ಹೊಸಮನಿ



ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಪಟ್ಟಣದ ಬಸವ ನಗರ ನಿವಾಸಿ, ಮಕ್ಕಳ ಸಾಹಿತಿ ಚೆನ್ನಬಸಪ್ಪ ನೀಲಪ್ಪ ಹೊಸಮನಿ (ಸತ್ಯಾರ್ಥಿ) (85) ಮಂಗಳವಾರ ರಾತ್ರಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಮೂಲತಃ ಒಕ್ಕುಂದ ಗ್ರಾಮದವರಾದ ಅವರು ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು.

ದಿವ್ಯ ಜೀವಿ, ಕಿತ್ತೂರ ವೀರಶ್ರೀ, ಮಕ್ಕಳ ಸೊಗಸು, ಪುಟ್ಟ ಭಾರತ, ಅನ್ನದಾತ ಮತ್ತಿತರ ಕವನ ಸಂಕಲನ, ‘ಪುಟ್ಟನ ಕನಸು’ ಮಕ್ಕಳ ಕಾದಂಬರಿ, ‘ವೀರಸ್ವರ್ಗದಲ್ಲಿ ಭಾರತೀಯರು’, ‘ತಿರುಳ್ಗನ್ನಡ ಕನ್ನಡತಿಯರು’ ಎಂಬ ಎರಡು ನಾಟಕಗಳನ್ನು ರಚಿಸಿದ್ದಾರೆ. ಬುಧವಾರ ಅವರ ಅಂತ್ಯಕ್ರಿಯೆ ನಡೆಯಿತು.

ಐಪಿಎಲ್ ಗಮ್ಮತ್ತು; ನಲ್ವತ್ತರ ತಾಕತ್ತು

ಮಹೇಂದ್ರಸಿಂಗ್ ಧೋನಿ
ವಿಕೆಟ್‌ಕೀಪರ್-ಬ್ಯಾಟ್ಸ್‌ಮನ್
ಚೆನ್ನೈ ಸೂಪರ್ ಕಿಂಗ್ಸ್

ವಯಸ್ಸು	39
ಪಂದ್ಯ	211
ರನ್	4,669
ಶ್ರೇಷ್ಠ	84
ಅರ್ಧಶತಕ	23
ಸ್ಟ್ರೈಕ್‌ರೇಟ್	136.64

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಇವರು ಸಾಧಿಸುವುದೆಲ್ಲವನ್ನೂ ಸಾಧಿಸಿಯಾಗಿದೆ. ರಾಷ್ಟ್ರೀಯ ತಂಡಗಳಿಗೆ ಮರಳುವ ಒತ್ತಡವೂ ಇವರಿಗಿಲ್ಲ. ಆದರೂ ವೃತ್ತಿಜೀವನದ 'ಸಂಧ್ಯಾ ಕಾಲ'ದಲ್ಲಿಯೂ ಮಿಂಚುವ ಹಂಬಲಕ್ಕೆ ಮಾತ್ರ ಕೊರತೆಯಿಲ್ಲ.

40ರ ಹರೆಯದ ಈ ಉತ್ಸಾಹಿಗಳು ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟೂರ್ನಿಯನ್ನು ತಮ್ಮ ಸಾಮರ್ಥ್ಯ ಪ್ರದರ್ಶನದ ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಅದರೊಂದಿಗೆ ಯುವ ಪ್ರತಿಭೆಗಳಿಗೆ ತಮ್ಮ ಅನುಭವ ಧಾರೆಯೆರೆಯುವ ಕಾರ್ಯವನ್ನೂ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಅದರಲ್ಲಿ ಮಹೇಂದ್ರಸಿಂಗ್ ಧೋನಿ, ಕ್ರಿಸ್ ಗೇಲ್, ಇಮ್ರಾನ್ ತಾಹೀರ್ ಪ್ರಮುಖರು.

ಭಾರತ ತಂಡದ ನಾಯಕರಾಗಿ ಧೋನಿ ಎರಡು ವಿಶ್ವಕಪ್, ಒಂದು ಚಾಂಪಿಯನ್ಸ್ ಟ್ರೋಫಿ ಮತ್ತು ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆದವರು.

ಹೋದ ವರ್ಷ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿರುವ ಧೋನಿ ಈ ಸಲ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತಕ್ಕೆ ಮಾರ್ಗದರ್ಶಕರಾಗಿ ನೇಮಕವಾಗಿದ್ದಾರೆ. ಆದರೆ ಇದೀಗ ಚರ್ಚೆಗೆ ಗ್ರಾಸವಾಗಿದೆ. ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕರೂ ಆಗಿರುವ ಧೋನಿಯನ್ನು ಭಾರತ ತಂಡದಲ್ಲಿ ಮೆಂಟರ್ ಆಗಿ ನೇಮಕ ಮಾಡಿರುವುದು ಹಿತಾಸಕ್ತಿ ಸಂಘರ್ಷ ತಡೆ ನಿಯಮದ ಉಲ್ಲಂಘನೆ ಎಂಬ ದೂರು ಕೂಡ ದಾಖಲಾಗಿದೆ. ಹೋದ ಸಲದ ಐಪಿಎಲ್‌ನಲ್ಲಿ ಅವರ ತಂಡವು ಪ್ಲೇ ಆಫ್‌ಗೂ ಪ್ರವೇಶಿಸಿರಲಿಲ್ಲ. ಆದರೆ ಈ ಬಾರಿ ಮೊದಲಾರ್ಧದದಲ್ಲಿ ತಂಡವು ಮಿಂಚಿದೆ. 'ಡ್ಯಾಡಿಸ್ ಆರ್ಮಿ' ಎಂದೇ ಕರೆಸಿಕೊಳ್ಳುವ ಚೆನ್ನೈ ತಂಡವು ಈ ಬಾರಿ ಪ್ರಶಸ್ತಿಯನ್ನು ಮುನ್ನಡೆಯುವುದೇ ಎಂಬ ಕುತೂಹಲ ಗರಿಗೆದರಿದೆ.

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಮತ್ತು ಐಪಿಎಲ್‌ನಲ್ಲಿ ಶ್ರೇಷ್ಠ ದಾಖಲೆಗಳ ರಾಶಿಯನ್ನೇ ಪೇರಿಸುವ ವಿಂಡೀಸ್ ದೈತ್ಯ ಕ್ರಿಸ್ ಗೇಲ್, ಪಂಜಾಬ್ ತಂಡದಲ್ಲಿ ಮನೋಲ್ಲಾಸ ತುಂಬುವ ಕಾರ್ಯ ಮಾಡುತ್ತಿದ್ದಾರೆ. ಕೆ.ಎಲ್. ರಾಹುಲ್, ಮಯಂಕ್ ಅಗರವಾಲ್, ದೀಪಕ್ ಹೂಡಾ ಅವರಿಗೆ ತಮ್ಮ ಬ್ಯಾಟಿಂಗ್ ಅನುಭವವನ್ನು ಹಂಚಿಕೊಳ್ಳುತ್ತಿದ್ದಾರೆ.

ವಿಕೆಟ್ ಪಡೆದಾಗ ತಮ್ಮ ವಿಶಿಷ್ಟ ರೀತಿಯ ಸಂಭ್ರಮಾಚರಣೆ ಮಾಡುವ ದಕ್ಷಿಣ ಆಫ್ರಿಕಾದ ಇಮ್ರಾನ್ ತಾಹೀರ್ ಈಗಲೂ ಎದುರಾಳಿ ಬ್ಯಾಟ್ಸ್‌ಮನ್‌ಗಳಿಗೆ ಸವಾಲೊಡ್ಡುತ್ತಾರೆ. ಹರಭಜನ್ ಸಿಂಗ್ ಕೋಲ್ಕತ್ತ ನೈಟ್ ರೈಡರ್ಸ್ ನಲ್ಲಿ ಆಡುತ್ತಿದ್ದಾರೆ. ಈ ಋತುವಿನಲ್ಲಿ ಅವರು ಚೆನ್ನೈ ತಂಡದಿಂದ ಕೋಲ್ಕತ್ತಕ್ಕೆ ಹೋಗಿದ್ದರು. ಅಮಿತ್ ಮಿಶ್ರಾ ಕೂಡ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಪ್ರಮುಖ ಲೆಗ್‌ಸ್ಪಿನ್ನರ್ ಆಗಿದ್ದಾರೆ. ಅಮಿತ್ ಬಿಟ್ಟರೆ ಉಳಿದ ನಾಲ್ವರಿಗೂ ಇದು ಕೊನೆಯ ಐಪಿಎಲ್ ಆಗುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ವರ್ಷವಿಡೀ ಕ್ರಿಕೆಟ್‌ನಿಂದ ದೂರ ಉಳಿದೂ ಐಪಿಎಲ್‌ಗಾಗಿ ತಮ್ಮ ಫಿಟ್‌ನೆಸ್ ಕಾದಿಟ್ಟುಕೊಳ್ಳುವುದು ಸಣ್ಣ ಸವಾಲೇನಲ್ಲ. ಅಂತರರಾಷ್ಟ್ರೀಯ ಮತ್ತು ದೇಶಿ ಕ್ರಿಕೆಟ್‌ನಿಂದ ದೂರ ಉಳಿದು ಪ್ರೀಮಿಯರ್ ಲೀಗ್‌ನಲ್ಲಿ ಆಡಲು ಸಿದ್ಧತೆ ಮಾಡುವ ಇವರೆಲ್ಲರ ತಂತ್ರಗಳು ಯುವ ಆಟಗಾರರಿಗೆ ಮಾದರಿಯಾಗುವುದರಲ್ಲಿ ಸಂದೇಹವಿಲ್ಲ. ಅದೂ ಕೊರೊನಾ ಕಾಲಘಟ್ಟದಲ್ಲಿ ಮನೋದೈಹಿಕ ಫಿಟ್‌ನೆಸ್ ಸಾಧಿಸುವುದು ಎಂತಹವರಿಗೂ ಕಠಿಣ ಸವಾಲು. ಅದನ್ನು ಈ 'ಅನುಭವಿ' ಕ್ರಿಕೆಟಿಗರು ನಿರ್ವಹಿಸುವ ರೀತಿ ಕೂಡ ಪಾಠವಾಗಬಲ್ಲದು.

ಕ್ರಿಸ್ ಗೇಲ್
ಬ್ಯಾಟ್ಸ್‌ಮನ್
ಕಿಂಗ್ಸ್ ಪಂಜಾಬ್

ವಯಸ್ಸು	41
ಪಂದ್ಯ	140
ರನ್	4,950
ಶ್ರೇಷ್ಠ	175
ಶತಕ	6
ಅರ್ಧಶತಕ	31
ಸ್ಟ್ರೈಕ್‌ರೇಟ್	149.46

ಅಮಿತ್ ಮಿಶ್ರಾ
ಆಫ್‌ಸ್ಪಿನ್ನರ್
ಡೆಲ್ಲಿ ಕ್ಯಾಪಿಟಲ್ಸ್

ವಯಸ್ಸು	38
ಪಂದ್ಯ	154
ವಿಕೆಟ್	166
ಶ್ರೇಷ್ಠ	17ಕ್ಕೆ5



ಇಮ್ರಾನ್ ತಾಹೀರ್
ಲೆಗ್‌ಸ್ಪಿನ್ನರ್
ಚೆನ್ನೈ ಸೂಪರ್ ಕಿಂಗ್ಸ್

ವಯಸ್ಸು	42
ಪಂದ್ಯ	59
ವಿಕೆಟ್	82
ಶ್ರೇಷ್ಠ	12ಕ್ಕೆ4

ಹರಭಜನ್ ಸಿಂಗ್
ಆಫ್‌ಸ್ಪಿನ್ನರ್
ಕೋಲ್ಕತ್ತ ನೈಟ್ ರೈಡರ್ಸ್

ವಯಸ್ಸು	40
ಪಂದ್ಯ	163
ರನ್	4,030
ವಿಕೆಟ್	150
ಶ್ರೇಷ್ಠ	18ಕ್ಕೆ5

ಕರ್ನಾಟಕ ಕ್ರಿಕೆಟಿಗರಿಗೂ ಫಿಟ್‌ನೆಸ್ ಟೆಸ್ಟ್

ಬೆಂಗಳೂರು: ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರ ಪ್ರಭಾವದಿಂದಾಗಿ ಕರ್ನಾಟಕರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ)ಯು ತನ್ನ ಆಟಗಾರರ ಫಿಟ್‌ನೆಸ್ ಸುಧಾರಣೆಗೆ ಹೆಜ್ಜೆ ಇಟ್ಟಿದೆ. ಕರ್ನಾಟಕ ತಂಡದ ಆಟಗಾರರಿಗೆ ಈ ವರ್ಷದಿಂದ 2ಕೆ ಟೆಸ್ಟ್ ಆರಂಭಿಸಲಾಗುತ್ತಿದೆ.

'ಆಯ್ಕೆ ಪ್ರಕ್ರಿಯೆಯಲ್ಲಿರುವ ಎಲ್ಲ ಆಟಗಾರರ ಫಿಟ್‌ನೆಸ್ ಟೆಸ್ಟ್ ಮಾಡಬೇಕೆಂದು ಕೆಎಸ್‌ಸಿಎ ಆಡಳಿತ ಸೂಚಿಸಿದೆ' ಎಂದು ಕರ್ನಾಟಕ ರಣಜಿ ತಂಡದ ಮುಖ್ಯ ಕೋಚ್ ಯರೇಗೌಡ ಬುಧವಾರ ಹೇಳಿದರು.

'ಯೊ ಯೊ ಟೆಸ್ಟ್‌ನಲ್ಲಿ 17.1ನಿಮಿಷದಲ್ಲಿ ಪರೀಕ್ಷೆಗಳನ್ನು ಯಶ್ವಸಿಯಾಗಿ ಮುಗಿಸಬೇಕು. ಆದರೆ, 2ಕೆ ಟೆಸ್ಟ್‌ನಲ್ಲಿ ವೇಗದ ಬೌಲರ್‌ಗಳಿಗೆ 8.15 ನಿಮಿಷ ಮತ್ತು ಉಳಿದವರಿಗೆಲ್ಲರಿಗೂ 8.30 ನಿಮಿಷ ನಿಗದಿಪಡಿಸಲಾಗಿದೆ. ಸದ್ಯ ಕರ್ನಾಟಕದ ಸಂಭಾವ್ಯ ತಂಡದಲ್ಲಿರುವ ಎಲ್ಲ ಆಟಗಾರರಿಗೂ ಇದು ಕಡ್ಡಾಯ ಟೆಸ್ಟ್ ಆಗಿದೆ' ಎಂದು ಯರೇಗೌಡ ತಿಳಿಸಿದರು.

ಮುಂಬರುವ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಮತ್ತು ವಿಜಯ್ ಹಜಾರೆ ಟ್ರೋಫಿ ಟೂರ್ನಿಗಳಿಗಾಗಿ ಈಚೆಗೆ ಸಂಭವನೀಯರ ತಂಡಗಳನ್ನು ಆಯ್ಕೆ ಮಾಡಲಾಗಿದೆ. ಫಿಟ್‌ನೆಸ್ ಸುಧಾರಣೆಗಾಗಿ ರಾಹುಲ್ ದ್ರಾವಿಡ್ ಸಲಹೆ ಮೇರೆಗೆ 2ಕೆ ಟೆಸ್ಟ್ ಆರಂಭಿಸಲಾಗಿತ್ತು. ಯೊ ಯೊ ಟೆಸ್ಟ್ ಕೂಡ ಅದಕ್ಕಿಂತ ಮೊದಲು ಜಾರಿಯಲ್ಲಿತ್ತು. ಈಗಲೂ ಮುಂದುವರಿದಿದೆ.

ಟಿ20 ರ‍್ಯಾಂಕಿಂಗ್: ವಿರಾಟ್ ಸ್ಥಾನ ಸ್ಥಿರ

ವಿರಾಟ್ ಕೊಹ್ಲಿ

ದುಬೈ (ಪಿಟಿಐ): ಭಾರತ ತಂಡದ ನಾಯಕ ವಿರಾಟ್ ಕೊಹ್ಲಿ ಮತ್ತು ಕೆ.ಎಲ್.ರಾಹುಲ್ ಅವರು ಐಸಿಸಿ ಟಿ20 ಬ್ಯಾಟ್ಸ್‌ಮನ್‌ಗಳ ರ‍್ಯಾಂಕಿಂಗ್‌ನಲ್ಲಿ ಕ್ರಮವಾಗಿ ನಾಲ್ಕು ಮತ್ತು ಆರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ಆದರೆ ಭಾರತದ ಯಾವುದೇ ಬೌಲರ್ ಅಗ್ರ 10ರಲ್ಲಿ ಸ್ಥಾನ ಪಡೆದಿಲ್ಲ.

ಬ್ಯಾಟ್ಸ್‌ಮನ್‌ಗಳ ವಿಭಾಗದ ಅಗ್ರ ಏಳು ಸ್ಥಾನಗಳಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಇಂಗ್ಲೆಂಡ್‌ನ ಡೇವಿಡ್ ಮಲಾನ್ ಮೊದಲನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ. ದಕ್ಷಿಣ ಆಫ್ರಿಕಾದ ವಿಕೆಟ್ ಕೀಪರ್ ಬ್ಯಾಟ್ಸ್‌ಮನ್ ಕ್ವಿಂಟನ್ ಡಿಕಾಕ್ ಎಂಟನೇ ಸ್ಥಾನದಲ್ಲಿದ್ದರೆ, ವೆಸ್ಟ್ ಇಂಡೀಸ್‌ನ ಎವಿನ್ ಲೂಯಿಸ್ ಒಂದು ಸ್ಥಾನ ಕುಸಿದು ಒಂಬತ್ತನೇ ಸ್ಥಾನದಲ್ಲಿದ್ದಾರೆ.

ಐಪಿಎಲ್: ನೀಲಿ ಪೋಷಾಕು ಧರಿಸಿ ಆಡಲಿರುವ ಆರ್‌ಸಿಬಿ

ಬೆಂಗಳೂರು: ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ-20 ಕ್ರಿಕೆಟ್ ಟೂರ್ನಿಯ ದ್ವಿತೀಯಾರ್ಧದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ತನ್ನ ಮೊದಲ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ಸವಾಲನ್ನು ಎದುರಿಸಲಿದೆ. ಸೆಪ್ಟೆಂಬರ್ 20ರಂದು ನಡೆಯಲಿರುವ ಪಂದ್ಯದಲ್ಲಿ ಆರ್‌ಸಿಬಿ ತಂಡದ ಆಟಗಾರರು ನೀಲಿ ಸಮವಸ್ತ್ರದೊಂದಿಗೆ ಕಣಕ್ಕಿಳಿಯಲಿದ್ದಾರೆ.

ಫ್ರಾಂಚೈಸ್ ಈ ಕುರಿತು ಟ್ವೀಟ್ ಮಾಡಿದೆ.ಕೋವಿಡ್-19 ಪಿಡುಗಿನ ಸಮಯದಲ್ಲಿ ಸಮಾಜಕ್ಕೆ ತಮ್ಮ ನಿಸ್ವಾರ್ಥ ಸೇವೆ ಮಾಡಿರುವ ಮುಂಚೂಣಿ ಸೇನಾನಿಗಳಿಗೆ ಗೌರವ ಸಲ್ಲಿಸುವ ಭಾಗವಾಗಿ ಆರ್‌ಸಿಬಿ ಆಟಗಾರರು ನೀಲಿ ಬಣ್ಣದ ಪೋಷಾಕು ತೊಟ್ಟು ಆಡಲಿದ್ದಾರೆ.

ಈ ಹಿಂದೆಯೂ ಪರಿಸರ ಸಂರಕ್ಷಣೆಯ 'ಗೋ ಗ್ರೀನ್' ಅಭಿಯಾನದ ಭಾಗವಾಗಿ ಹಸಿರು ಜೆರ್ಸಿಯಲ್ಲಿ ಆರ್‌ಸಿಬಿ ಕಾಣಿಸಿಕೊಂಡಿತ್ತು. ಈಗ ಕೋವಿಡ್ ಸೇನಾನಿಗಳಿಗೆ ಗೌರವ ಸೂಚಕವಾಗಿ ಪಿಪಿಇ ಕಿಟ್ ಹೋಲುವ ನೀಲಿ ಜೆರ್ಸಿಯಲ್ಲಿ ಆಡಲು ನಿರ್ಧರಿಸಿದೆ.

ಭಾರತದಲ್ಲಿ ನಡೆದ 14ನೇ ಆವೃತ್ತಿಯ ಟೂರ್ನಿಯ ವೇಳೆ ಬಯೋ-ಬಬಲ್‌ನಲ್ಲಿದ್ದ ಕೆಲವು ಆಟಗಾರರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡ ಪರಿಣಾಮ ಉಳಿದಿರುವ ಪಂದ್ಯಗಳನ್ನು ಯುಎಇಗೆ ಸ್ಥಳಾಂತರಿಸಲಾಗಿತ್ತು.

ನೀಲಿ ಪೋಷಾಕಿನಲ್ಲಿ ಆರ್‌ಸಿಬಿ ತಂಡ– ಟ್ವಿಟರ್ ಚಿತ್ರ

ಸೀಮಿತ ಸಂಖ್ಯೆಯ ಪ್ರೇಕ್ಷಕರಿಗೆ ಅವಕಾಶ

ನವದೆಹಲಿ (ಪಿಟಿಐ): ಯುಎಇಯಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಗೆ ಸೀಮಿತ ಸಂಖ್ಯೆಯ ಪ್ರೇಕ್ಷಕರಿಗೆ ಅವಕಾಶ ಕಲ್ಪಿಸಲಾಗುವುದು ಎಂದು ಆಯೋಜಕರು ಬುಧವಾರ ತಿಳಿಸಿದ್ದಾರೆ.

ಈ ಋತುವಿನ ಟೂರ್ನಿಯ ದ್ವಿತೀಯಾರ್ಧವು ಮರುಭೂಮಿ ನಾಡಿನಲ್ಲಿ ಸೆಪ್ಟೆಂಬರ್ 19ರಂದು ನಿಗದಿಯಾಗಿದೆ. ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿಯಾಗಲಿವೆ.

'ಕೋವಿಡ್ ಪಿಡುಗಿನ ಬಿಕ್ಕಟ್ಟಿನ ಬಳಿಕ ಪ್ರೇಕ್ಷಕರು ಐಪಿಎಲ್‌ಗಾಗಿ ಕ್ರೀಡಾಂಗಣಕ್ಕೆ ಬರುವುದರಿಂದ ಈ ಪಂದ್ಯವು ಅತ್ಯಂತ ಮಹತ್ವದ್ದಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಕೋವಿಡ್ ನಿಯಮಾವಳಿಗಳು ಮತ್ತು ಯುಎಇ ಸರ್ಕಾರದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಸೀಮಿತ ಪ್ರೇಕ್ಷಕರಿಗೆ ಅನುಮತಿ ನೀಡಿ ದುಬೈ, ಶಾರ್ಜಾ ಮತ್ತು ಅಬುಧಾಬಿಯಲ್ಲಿ ಪಂದ್ಯಗಳನ್ನು ಆಡಿಸಲಾಗುವುದು' ಎಂದು ಪ್ರಕಟಣೆಯಲ್ಲಿ ಉಲ್ಲೇಖಿಸಲಾಗಿದೆ.

2019ರ ಬಳಿಕ ಮೊದಲ ಬಾರಿ ಪ್ರೇಕ್ಷಕರ ಉಪಸ್ಥಿತಿಯಲ್ಲಿ ಐಪಿಎಲ್ ಟೂರ್ನಿ ನಡೆಯಲಿದೆ. ಕಳೆದ ವರ್ಷ, ಲೀಗ್ ಅನ್ನು ಯುಎಇಯಲ್ಲಿ ಪ್ರೇಕ್ಷಕರಿಲ್ಲದೆ ಆಡಿಸಲಾಗಿತ್ತು. 2021ರ ಆವೃತ್ತಿಯ ಮೊದಲಾರ್ಧವನ್ನು ಕಟ್ಟುನಿಟ್ಟಾದ ಬಯೋಬಬಲ್‌ನೊಂದಿಗೆ ನಡೆಸಲಾಗಿತ್ತು. ಎಷ್ಟು ಮಂದಿ ಪ್ರೇಕ್ಷಕರಿಗೆ ಅವಕಾಶ ನೀಡಲಾಗುತ್ತದೆ ಎಂಬುದನ್ನು ನಿರ್ದಿಷ್ಟವಾಗಿ ಹೇಳಿಲ್ಲವಾದರೂ ಅವರ ಉಪಸ್ಥಿತಿಯು ಕ್ರೀಡಾಂಗಣದ ಸಾಮರ್ಥ್ಯದ ಶೇಕಡಾ 50ರಷ್ಟಿರುತ್ತದೆ ಎಂದು ಮೂಲಗಳು ತಿಳಿಸಿವೆ. 'ಇದೇ 16 ರಿಂದ ವೆಬ್‌ಸೈಟ್ www.iplt20.comನಲ್ಲಿ ಟೂರ್ನಿಯ ಟಿಕೆಟ್ ಖರೀದಿಸಬಹುದು. ಟಿಕೆಟ್‌ಗಳನ್ನು PlatinumList.net ನಲ್ಲಿಯೂ ಖರೀದಿಸಬಹುದು' ಎಂದು ಲೀಗ್ ಆಯೋಜಕರು ತಿಳಿಸಿದ್ದಾರೆ.

ಡುರಾಂಡ್ ಕಪ್: ಬಿಎಫ್‌ಸಿ ಶುಭಾರಂಭ

ಕೋಲ್ಕತ್ತ (ಪಿಟಿಐ): ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯದೊಂದಿಗೆ ತನ್ನ ಅಭಿಯಾನ ಆರಂಭಿಸಿತು.

ಬುಧವಾರ ನಡೆದ ಪಂದ್ಯದಲ್ಲಿ ಬಿಎಫ್‌ಸಿಯು 2-0ಯಿಂದ ಕೇರಳ ಬ್ಲಾಸ್ಟರ್ಸ್ ವಿರುದ್ಧ ಜಯಿಸಿತು.

ನಮಗ್ಯಾಲ್ ಭುಟಿಯಾ (45ನೇ ನಿ) ಮತ್ತು ಲಿಯೊನ್ ಆಗಸ್ಟಿನ್ (71 ನೇ ನಿ) ಹೊಡೆದ ಗೋಲುಗಳಿಂದಾಗಿ ಬಿಎಫ್‌ಸಿ ಜಯ ಸಾಧ್ಯವಾಯಿತು.

ಕೇರಳ ತಂಡವು ಪಂದ್ಯದ ಆರಂಭದಲ್ಲಿ ಉತ್ತಮವಾಗಿ ಆಡಿತು. ಮೊದಲಾರ್ಧದ ಬಹುತೇಕ ಅವಧಿಯಲ್ಲಿ ಬಿಗಿಹಿಡಿತ ಸಾಧಿಸಿತ್ತು. ಆದರೆ ದ್ವಿತೀಯಾರ್ಧದಲ್ಲಿ ಬಿಎಫ್‌ಸಿ ತಂಡವು ಪುಟಿದೆದ್ದಿತು.

ಆಕ್ರಮಣಶೈಲಿಯ ಆಟದೊಂದಿಗೆ ಗೋಲು ವಲಯದಲ್ಲಿ ಪದೇ ಪದೇ ಲಗ್ಗೆ ಹಾಕಿತು. 45ನೇ ನಿಮಿಷದಲ್ಲಿ ಲಭಿಸಿದ ಫ್ರೀ ಕಿಕ್‌ನಲ್ಲಿ ನಮಗ್ಯಾಲ್ ಭುಟಿಯಾ ಅವರ ಮಿಂಚಿನ ಆಟದ ಮುಂದೆ ಕೇರಳ ತಂಡದ ಗೋಲ್ ಕೀಪರ್ ಅಲ್ಬಿನೊ ಗೋಮ್ಸ್ ಅಸಹಾಯಕರಾದರು. ಬಿಎಫ್‌ಸಿ 1-0 ಮುನ್ನಡೆ ಪಡೆಯಿತು. 71ನೇ ನಿಮಿಷದವರೆಗೂ ಈ ಅಂತರ ಕಾಯ್ದುಕೊಂಡ ತಂಡಕ್ಕೆ ಲಿಯೊನ್ ಎರಡನೇ ಗೋಲಿನ ಕಾಣಿಕೆ ಕೊಟ್ಟರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,380
ಇಂದಿನ ಅಂತ್ಯ	17,519
▲	139
ದಿನದ ಗರಿಷ್ಠ	17,532

ವಿನಿಮಯ ದರ

$ ಡಾಲರ್	73.50
£ ಪೌಂಡ್	---
€ ಯುರೊ	86.90
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹452

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1550)
ಸೋಯಾ (ರಿಫೈನ್ಡ್)	₹1353(1350)
ಸೂರ್ಯಕಾಂತಿ(ರಿಫೈನ್ಡ್)	₹1380(1380)
ಪಾಮೋಲಿನ್	₹1270 (1215)

ತಗ್ಗಿದ ಕೌಟುಂಬಿಕ ಸಾಲ ಪ್ರಮಾಣ: ಎಸ್‌ಬಿಐ

ಮುಂಬೈ (ಪಿಟಿಐ): ದೇಶದ ಒಟ್ಟು ಆಂತರಿಕ ಉತ್ಪಾದನೆಗೆ (ಜಿಡಿಪಿ) ಹೋಲಿಸಿದರೆ ಕೌಟುಂಬಿಕದ ಸಾಲದ ಪ್ರಮಾಣವು ಪ್ರಸಕ್ತ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಶೇಕಡ 34ಕ್ಕೆ ಇಳಿಕೆ ಆಗಿರಬಹುದು ಎಂದು ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ಅಂದಾಜಿಸಿದೆ.

2020–21ರಲ್ಲಿ ಸಾಲದ ಪ್ರಮಾಣವು ಒಟ್ಟು ಜಿಡಿಪಿಯ ಶೇ 37.3ಕ್ಕೆ ಹೆಚ್ಚಳವಾಗಿತ್ತು. 2019–20ರಲ್ಲಿ ಸಾಲದ ಪ್ರಮಾಣವು ಶೇ 32.5ರಷ್ಟು ಮಾತ್ರ ಆಗಿತ್ತು ಎಂದು ಎಸ್‌ಬಿಐನ ಎಕೊವ್ರ್ಯಾಪ್ ವರದಿಯು ಹೇಳಿದೆ.

ಪ್ರಮಾಣದ ಲೆಕ್ಕದಲ್ಲಿ ಸಾಲವು ಕಡಿಮೆ ಆಗಿದ್ದರೂ ಮೊತ್ತದ ಲೆಕ್ಕದಲ್ಲಿ ಸಾಲ ಜಾಸ್ತಿ ಆಗಿದೆ. ಹಿಂದಿನ ಹಣಕಾಸು ವರ್ಷದಲ್ಲಿ ₹ 73.59 ಲಕ್ಷ ಕೋಟಿ ಆಗಿದ್ದ ಕೌಟುಂಬಿಕ ಸಾಲವು ಈ ವರ್ಷದ ಮೊದಲ ತ್ರೈಮಾಸಿಕದಲ್ಲಿ ₹ 75 ಲಕ್ಷ ಕೋಟಿಗೆ ಏರಿಕೆ ಆಗಿದೆ.

ಈಚೆಗೆ ಬಿಡುಗಡೆ ಆಗಿರುವ 'ಅಖಿಲ ಭಾರತ ಸಾಲ ಮತ್ತು ಹೂಡಿಕೆ ಸಮೀಕ್ಷೆ – 2018'

(ಎಐಡಿಐಎಸ್) ವರದಿಯ ಪ್ರಕಾರ, ಗ್ರಾಮೀಣ ಕುಟುಂಬಗಳ ಸರಾಸರಿ ಸಾಲದ ಮೊತ್ತವು 2012ರಿಂದ 2018ರ ನಡುವಿನ ಅವಧಿಯಲ್ಲಿ ₹ 59,748 ಆಗಿತ್ತು. ಸರಾಸರಿ ಸಾಲದ ಮೊತ್ತವು ನಗರ ಪ್ರದೇಶಗಳ ಕುಟುಂಬಗಳಲ್ಲಿ ₹ 1.20 ಲಕ್ಷ ಆಗಿತ್ತು.

'2021ರಲ್ಲಿ ಗ್ರಾಮೀಣ ಪ್ರದೇಶಗಳ ಕುಟುಂಬಗಳ ಸರಾಸರಿ ಸಾಲದ ಮೊತ್ತವು ₹ 1.16 ಲಕ್ಷಕ್ಕೆ, ನಗರ ಪ್ರದೇಶಗಳ ಕುಟುಂಬಗಳ ಸರಾಸರಿ ಸಾಲದ ಮೊತ್ತವು ₹ 2.33 ಲಕ್ಷಕ್ಕೆ ಹೆಚ್ಚಳವಾಗುವ ಸಾಧ್ಯತೆ ಇದೆ. ಅಂದರೆ, ಕೋವಿಡ್ ಸಾಂಕ್ರಾಮಿಕವು ಕುಟುಂಬಗಳ ಮೇಲೆ ಗಣನೀಯ ಪರಿಣಾಮ ಉಂಟುಮಾಡಿದೆ' ಎಂದು ಎಸ್‌ಬಿಐ ವರದಿ ಹೇಳಿದೆ.

ಡಿಐಪಿಎಎಂ ಕಾರ್ಯದರ್ಶಿ ಪಾಂಡೆ ಟ್ವೀಟ್

ಏರ್ ಇಂಡಿಯಾ ಖರೀದಿಗೆ ಟಾಟಾ ಹಣಕಾಸಿನ ಬಿಡ್

ನವದೆಹಲಿ (ಪಿಟಿಐ): ಏರ್ ಇಂಡಿಯಾ ಕಂಪನಿಯ ಖರೀದಿಗೆ ಆಸಕ್ತಿ ತೋರಿಸಿ ಹಲವರು ಹಣಕಾಸಿನ ಬಿಡ್ ಸಲ್ಲಿಸಿದ್ದಾರೆ ಎಂದು ಕೇಂದ್ರ ಸರ್ಕಾರವು ಬುಧವಾರ ಹೇಳಿದೆ. ಟಾಟಾ ಸನ್ಸ್ ಕಂಪನಿಯು ತಾನು ಕೂಡ ಬಿಡ್ ಸಲ್ಲಿಸಿರುವುದಾಗಿ ಹೇಳಿದೆ.

'ಏರ್ ಇಂಡಿಯಾ ಖಾಸಗೀಕರಣಕ್ಕೆ ಹಣಕಾಸಿನ ಬಿಡ್‌ಗಳನ್ನು ವಹಿವಾಟು ಸಲಹೆಗಾರರು ಸ್ವೀಕರಿಸಿದ್ದಾರೆ. ಈಗ ಪ್ರಕ್ರಿಯೆಯು ಅಂತಿಮ ಹಂತಕ್ಕೆ ಹೋಗಲಿದೆ' ಎಂದು ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆಯ (ಡಿಐಪಿಎಎಂ) ಕಾರ್ಯದರ್ಶಿ ತುಹಿನ್ ಕಾಂತ ಪಾಂಡೆ ಟ್ವೀಟ್ ಮಾಡಿದ್ದಾರೆ.

ಏರ್ ಇಂಡಿಯಾದಲ್ಲಿ ತಾನು ಹೊಂದಿರುವ ಅಷ್ಟೂ ಷೇರುಗಳನ್ನು ಮಾರಾಟ ಮಾಡಲು ಕೇಂದ್ರವು ಉದ್ದೇಶಿಸಿದೆ. ಅಲ್ಲದೆ, ಎಐ ಎಕ್ಸ್‌ಪ್ರೆಸ್ ಲಿಮಿಟೆಡ್‌ನಲ್ಲಿ ಏರ್ ಇಂಡಿಯಾ ಕಂಪನಿ ಹೊಂದಿರುವ ಅಷ್ಟೂ ಷೇರುಗಳನ್ನು, ಏರ್ ಇಂಡಿಯಾ ಎಸ್‌ಎಟಿಎಸ್ ಏರ್‌ಪೋರ್ಟ್ ಸರ್ವಿಸಸ್ ಪ್ರೈ.ಲಿ. ಕಂಪನಿಯಲ್ಲಿ ಏರ್ ಇಂಡಿಯಾ ಹೊಂದಿರುವ ಶೇ 50ರಷ್ಟು ಷೇರುಗಳನ್ನು ಕೂಡ ಮಾರಾಟ ಮಾಡಲಿದೆ.

2020ರ ಜನವರಿಯಲ್ಲಿ ಆರಂಭವಾದ ಷೇರು ಮಾರಾಟ ಪ್ರಕ್ರಿಯೆಯು ಕೋವಿಡ್–19 ಕಾರಣದಿಂದಾಗಿ ವಿಳಂಬ ಆಯಿತು. ಹಣಕಾಸಿನ ಬಿಡ್ ಸಲ್ಲಿಸಲು ಬುಧವಾರ ಕಡೆಯ ದಿನವಾಗಿತ್ತು. ಏರ್ ಇಂಡಿಯಾ ಖರೀದಿಗೆ ಆರಂಭಿಕ ಹಂತದಲ್ಲಿ ಆಸಕ್ತಿ ತೋರಿಸಿದ್ದ ಕಂಪನಿಗಳ ಪೈಕಿ ಟಾಟಾ ಸಮೂಹ ಕೂಡ ಒಂದು.

ಏರ್ ಇಂಡಿಯಾ ಕಂಪನಿಯನ್ನು 2007ರಲ್ಲಿ ಇಂಡಿಯನ್ ಏರ್‌ಲೈನ್ಸ್ ಜೊತೆ ವಿಲೀನ ಮಾಡಲಾಯಿತು. ಅಂದಿನಿಂದಲೂ ಇದು ನಷ್ಟ ಅನುಭವಿಸುತ್ತಿದೆ. 2019ರ ಮಾರ್ಚ್ 31ರ ಲೆಕ್ಕಾಚಾರದಂತೆ ಏರ್ ಇಂಡಿಯಾ ಸಾಲ ₹ 60,074 ಕೋಟಿ. ಈ ಸಾಲದಲ್ಲಿ ₹ 23,286 ಕೋಟಿಯು, ಏರ್ ಇಂಡಿಯಾವನ್ನು ಖರೀದಿಸುವ ಕಂಪನಿಗೆ ವರ್ಗಾವಣೆ ಆಗುತ್ತದೆ. ಇನ್ನುಳಿದ ಮೊತ್ತವು ಏರ್ ಇಂಡಿಯಾ ಅಸೆಟ್ಸ್ ಹೋಲ್ಡಿಂಗ್ ಲಿ. ಕಂಪನಿಗೆ ವರ್ಗಾವಣೆ ಆಗಲಿದೆ.

AIR INDIA

ಮುಖ್ಯಾಂಶಗಳು

- ಸಂಪೂರ್ಣ ಷೇರು ಮಾರಾಟ ಮಾಡಲಿರುವ ಕೇಂದ್ರ
- ಕೋವಿಡ್‌ನಿಂದಾಗಿ ಷೇರು ಮಾರಾಟ ಪ್ರಕ್ರಿಯೆ ವಿಳಂಬ
- ಏರ್ ಇಂಡಿಯಾದ ಸಾಲ ₹ 60,074 ಕೋಟಿ

'ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಆಯ್ದ ಜಿಲ್ಲಾ ಕೇಂದ್ರಗಳಲ್ಲಿ ವಿಮಾನ ನಿಲ್ದಾಣ ನಿರ್ಮಿಸುವ ಚಿಂತನೆ ಇದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಆಯೋಜಿಸಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, 'ವಿಮಾನ ನಿಲ್ದಾಣ ಸ್ಥಾಪನೆ ಸಂಬಂಧ ಕೇಂದ್ರ ಸರ್ಕಾರದ ಜೊತೆ ಮಾತುಕತೆ ನಡೆಸಿ, ಭೂಸ್ವಾಧೀನ ಪ್ರಕ್ರಿಯೆಯನ್ನು ಶೀಘ್ರದಲ್ಲೇ ನಡೆಸಲಾಗುವುದು. ಅಗತ್ಯವಿರುವ ಕಡೆ ಹೆಲಿಪ್ಯಾಡ್ ಕೂಡ ನಿರ್ಮಿಸಲಾಗುವುದು. ಇದರಿಂದ ರಾಜ್ಯದಲ್ಲಿ ಬಂಡವಾಳ ಹೂಡಿಕೆ, ಉದ್ಯೋಗಾವಕಾಶ ಸೃಷ್ಟಿ ಆಗುತ್ತದೆ' ಎಂದರು.

'ಹೊಸ ಉದ್ಯಮ ಆರಂಭಿಸಲು ಮುಂದಾಗುವವರಿಗೆ ರತ್ನಗಂಬಳಿ ಹಾಸಿ ಬರಮಾಡಿಕೊಳ್ಳಲಾಗುವುದು' ಎಂದು ಹೇಳಿದರು.

ಹೊಸ ಐಫೋನ್ 13 ಸರಣಿ: ಸೆ. 24ರಿಂದ ಖರೀದಿಗೆ ಲಭ್ಯ

ನವದೆಹಲಿ (ಪಿಟಿಐ): ಆ್ಯಪಲ್ ಕಂಪನಿಯ ಹೊಸ 'ಐಫೋನ್ 13' ಸರಣಿಯ ಸ್ಮಾರ್ಟ್‌ಫೋನ್‌ಗಳು ಭಾರತ ಸೇರಿದಂತೆ ಹಲವು ದೇಶಗಳಲ್ಲಿ ಸೆಪ್ಟೆಂಬರ್ 24ರಿಂದ ಲಭ್ಯವಾಗಲಿವೆ. ಬೆಲೆಯು ₹ 69,900ರಿಂದ ಆರಂಭವಾಗುತ್ತದೆ.

'ಭಾರತ, ಕೆನಡಾ, ಚೀನಾ, ಆಸ್ಟ್ರೇಲಿಯಾ, ಜರ್ಮನಿ, ಜಪಾನ್, ಅಮೆರಿಕ ಮತ್ತು ಬ್ರಿಟನ್ ಸೇರಿದಂತೆ 30ಕ್ಕೂ ಅಧಿಕ ದೇಶಗಳಲ್ಲಿ ಐಫೋನ್ 13 ಪ್ರೊ ಮತ್ತು ಐಫೋನ್ 13 ಪ್ರೊ ಮ್ಯಾಕ್ಸ್ ಸ್ಮಾರ್ಟ್‌ಫೋನ್‌ಗಳು ಸೆಪ್ಟೆಂಬರ್ 24ರಿಂದ ಲಭ್ಯವಿರಲಿವೆ' ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಆ್ಯಪಲ್‌ನ ಅಧಿಕೃತ ರಿಸೆಲ್ಲರ್ ಮತ್ತು ಆಯ್ದ ಮಳಿಗೆಗಳಲ್ಲಿಯೂ ಸ್ಮಾರ್ಟ್‌ಫೋನ್ ಖರೀದಿಸಬಹುದಾಗಿದೆ ಎಂದು ತಿಳಿಸಿದೆ.

ವೇಗದ ಕಾರ್ಯಾಚರಣೆ, ಉತ್ತಮ ಗುಣಮಟ್ಟದ ಕ್ಯಾಮೆರಾ, ದೀರ್ಘ ಬಾಳಿಕೆ, ದೊಡ್ಡ ಪರದೆ ಮತ್ತು ಅತ್ಯುತ್ತಮ ವಿನ್ಯಾಸಗಳನ್ನು ಈ ಸ್ಮಾರ್ಟ್‌ಫೋನ್ ಒಳಗೊಂಡಿದೆ ಎಂದು ಕಂಪನಿಯ ಸಿಇಒ ಟಿಮ್ ಕುಕ್ ಅವರು ಹೇಳಿದ್ದಾರೆ.

ಐಫೋನ್ 13 –ಎಪಿ/ಪಿಟಿಐ ಚಿತ್ರ

ಐಪಾಡ್, ಐಪಾಡ್ ಮಿನಿ: 9ನೇ ಪೀಳಿಗೆಯ ಹೊಸ ಐಪಾಡ್ ಬೆಲೆ ₹ 30,900ರಿಂದ, ಐಪಾಡ್ ಮಿನಿ ಬೆಲೆ ₹ 46,900ರಿಂದ ಆರಂಭವಾಗುತ್ತದೆ. ಇವೆರಡೂ ಸೆಪ್ಟೆಂಬರ್ 24ರಿಂದ ಖರೀದಿಗೆ ಲಭ್ಯವಾಗಲಿವೆ. ಆ್ಯಪಲ್ ವಾಚ್ ಸಿರೀಸ್ 7 ಅನ್ನು ಕಂಪನಿ ಪರಿಚಯಿಸಿದ್ದು ಯಾವಾಗ ಸಿಗಲಿದೆ ಎನ್ನುವುದನ್ನು ತಿಳಿಸಿಲ್ಲ.

ಮುಂಬೈ ಧಾರಣೆ

ಶೇಂಗಾ

15-9-2021

ಜಾವಾ 70/80(ಹೊಸ)	10300-10350
ಜಾವಾ 80/90(ಹೊಸ)	9500-9550
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	9400-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1565)
ಒಂದು ವಾರದ ಡೆಲಿವರಿ	1565 (1560)
ಸೋಯಾ ಕಚ್ಚಾ	1300 (1307)
ಪಾಮ್ ವಾರದ ಡೆಲಿವರಿ	1205 (1213)
ಸೂರ್ಯಕಾಂತಿ ಎಣ್ಣೆ ಕಚ್ಚಾ	1310 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,950 (47,000)
ಬೆಳ್ಳಿ ಕೆ.ಜಿ 63,100 (63,050)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಅಂತರ ಕಾಯ್ದುಕೊಳ್ಳಿ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	22500-48000
ಹಳತು	42500-50500
ಕುಮಟ	
ಚಿಪ್ಪು	36099-39609
ಕೋಕ	23109-37019
ಫ್ಯಾಕ್ಟರಿ	17019-23699
ಹೊಸಚಾಲಿ	43599-50010
ಹಳೆಚಾಲಿ	40191-44169
ಪುತ್ತೂರು	
ಕೋಕ	10500-26000
ಹೊಸತು	33500-48000
ಸಿದ್ದಾಪುರ	
ಬಿಳಿಗೋಟು	30099-38099
ಚಾಲಿ	45369-46529
ಕೋಕ	28699-37899
ಕೆಂಪುಗೋಟು	30289-34199
ರಾಶಿ	45469-51299
ತಟ್ಟಿಬೆಟ್ಟೆ	42669-47869
ಶಿರಸಿ	
ಬೆಟ್ಟೆ	32029-49999
ಬಿಳಿಗೋಟು	29099-43500
ಚಾಲಿ	42099-46399
ರಾಶಿ	40699-52599
ಶಿವಮೊಗ್ಗ	
ಗೊರಬಲು	16160-42099
ನ್ಯೂವೆರೈಟಿ	50509-53039
ರಾಶಿ	47069-55199
ಚೆನ್ನಗಿರಿ ತುಮ್ಕೋಸ್	
ರಾಶಿ	49099-54699
ಬೆಟ್ಟೆ	36599-39205
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	298-470
ದ್ವಿತಳಿ (ಬಿ.ವಿ)	349-557

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	13000	13000	185.45ಸೆಂಟ್ಸ್
ಎಸಿ	---	4800	5200	
ಆರ್‌ಪಿ	---	6100	6150	ಲಂಡನ್
ಆರ್‌ಸಿ	---	3500	3600	2063 ಡಾಲರ್ಸ್

ಗರಿಷ್ಠ ಮಟ್ಟಕ್ಕೆ ನಿಫ್ಟಿ, ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಬುಧವಾರ 476 ಅಂಶ ಏರಿಕೆ ಕಂಡು, ಇದುವರೆಗಿನ ಗರಿಷ್ಠ ಮಟ್ಟವಾದ 58,723 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ವಹಿವಾಟಿನ ನಡುವಿನಲ್ಲಿ 58,777 ಅಂಶಗಳಿಗೆ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 139 ಅಂಶ ಹೆಚ್ಚಳ ಆಗಿ, 17,519 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿತು. ಇದು ನಿಫ್ಟಿ ತಲುಪಿರುವ ಇದುವರೆಗಿನ ಗರಿಷ್ಠ ಮಟ್ಟ. ವಹಿವಾಟಿನ ನಡುವಿನಲ್ಲಿ ನಿಫ್ಟಿ 17,532 ಅಂಶಗಳಿಗೆ ಒಮ್ಮೆ ತಲುಪಿತ್ತು.

ಚಿನ್ನ ₹ 438, ಬೆಳ್ಳಿ ₹ 633ರಷ್ಟು ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರ 10 ಗ್ರಾಂಗೆ ₹ 438ರಷ್ಟು ಏರಿಕೆಯಾಗಿ ₹ 46,214ರಂತೆ ಮಾರಾಟವಾಯಿತು. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 633ರಷ್ಟು ಹೆಚ್ಚಾಗಿ ₹ 62,140ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದರಿಂದ ದೇಶಿ ಮಾರುಕಟ್ಟೆಯಲ್ಲಿಯೂ ಅದರ ಪ್ರಭಾವ ಕಂಡುಬಂದಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

₹ 26,058 ಕೋಟಿ ಪ್ಯಾಕೇಜ್‌ಗೆ ಕೇಂದ್ರ ಅನುಮೋದನೆ

ನವದೆಹಲಿ (ಪಿಟಿಐ): ಭಾರತದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಉದ್ದೇಶದಿಂದ ಆಟೊಮೊಬೈಲ್, ವಾಹನದ ಬಿಡಿಭಾಗಗಳು ಮತ್ತು ಡ್ರೋನ್ ಉದ್ಯಮಕ್ಕೆ ₹ 26,058 ಕೋಟಿ ಮೊತ್ತದ ಉತ್ಪಾದನೆ ಆಧಾರಿತ ಪ್ರೋತ್ಸಾಹ (ಪಿಎಲ್‌ಐ) ಯೋಜನೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

₹ 26,058 ಕೋಟಿ ಪ್ರೋತ್ಸಾಹ ಧನವನ್ನು ಐದು ವರ್ಷಗಳಲ್ಲಿ ಉದ್ಯಮಕ್ಕೆ ಒದಗಿಸಲಾಗುವುದು ಎಂದು ಸಂಪುಟ ಸಭೆಯ ನಂತರ, ಸಚಿವ ಅನುರಾಗ್ ಠಾಕೂರ್ ಸುದ್ದಿಗಾರರಿಗೆ ತಿಳಿಸಿದರು. ಪಿಎಲ್‌ಐ ಯೋಜನೆಯು ಐದು ವರ್ಷಗಳಲ್ಲಿ ₹ 42,500 ಕೋಟಿಯಷ್ಟು ಹೊಸ ಹೂಡಿಕೆಯನ್ನು ತರಲಿದೆ ಎಂದು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಏಷ್ಯನ್ ಟೇಬಲ್ ಟೆನಿಸ್ ಟೂರ್ನಿಗೆ ಭಾರತ ತಂಡಗಳ ಆಯ್ಕೆ; ಮಣಿಕಾ ಬಾತ್ರಾಗೆ ಕೊಕ್

ಬೆಂಗಳೂರಿನ ಅರ್ಚನಾಗೆ ಸ್ಥಾನ

ಅರ್ಚನಾ ಕಾಮತ್



ಮಣಿಕಾ ಬಾತ್ರಾ

ನವದೆಹಲಿ (ಪಿಟಿಐ): ಕರ್ನಾಟಕದ ಅರ್ಚನಾ ಕಾಮತ್ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ಆಡಲಿರುವ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ. ಆದರೆ ಒಲಿಂಪಿಯನ್ ಮಣಿಕಾ ಬಾತ್ರಾ ಅವರನ್ನು ಆಯ್ಕೆ ಪರಿಗಣಿಸಿಲ್ಲ.

ದೋಹಾದಲ್ಲಿ ಸೆ. 28ರಿಂದ ಚಾಂಪಿಯನ್‌ಶಿಪ್ ಆರಂಭಗೊಳ್ಳಲಿದೆ. ಈ ಟೂರ್ನಿಯ ಪೂರ್ವಸಿದ್ಧತೆಗಾಗಿ ಸೋನೆಪತ್‌ನಲ್ಲಿ ಈಚೆಗೆ ಆಯೋಜಿಸಲಾಗಿದ್ದ ಕಡ್ಡಾಯ ರಾಷ್ಟ್ರೀಯ ಶಿಬಿರದಲ್ಲಿ ಮಣಿಕಾ ಭಾಗವಹಿಸಿರಲಿಲ್ಲ. ಆದ್ದರಿಂದ ಅವರನ್ನು ಆಯ್ಕೆ ಮಾಡಿಲ್ಲ.

56ನೇ ಶ್ರೇಯಾಂಕದ ಮಣಿಕಾ ಗೈರುಹಾಜರಿಯಲ್ಲಿ 97ನೇ ಶ್ರೇಯಾಂಕದ ಸುತೀರ್ಥ ಮುಖರ್ಜಿ ಮಹಿಳಾ ತಂಡವನ್ನು ಮುನ್ನಡೆಸುವರು.

ಪುರುಷರ ವಿಭಾಗದಲ್ಲಿ ಅನುಭವಿ ಅಚಂತ ಶರತ್ ಕಮಲ್ ತಂಡದ ನಾಯಕತ್ವ ವಹಿಸಲಿದ್ದಾರೆ.

ಶಿಬಿರದಲ್ಲಿ ಪಾಲ್ಗೊಳ್ಳದವರನ್ನು ಆಯ್ಕೆಗೆ ಪರಿಗಣಿಸುವುದಿಲ್ಲವೆಂದು ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್ಐ) ಈ ಮೊದಲೇ ಘೋಷಿಸಿತ್ತು. ಒಲಿಂಪಿಕ್ಸ್‌ನಲ್ಲಿಯೂ ಮಣಿಕಾ ಅವರು ರಾಷ್ಟ್ರೀಯ ಕೋಚ್ ಮಾರ್ಗದರ್ಶನವನ್ನು ನಿರಾಕರಿಸಿದ್ದರು. ನಂತರದ ವಿಚಾರಣೆಯ ಸಂದರ್ಭದಲ್ಲಿ ರಾಷ್ಟ್ರೀಯ ಕೋಚ್ ಅರ್ಹತಾ ಪಂದ್ಯ ಫಿಕ್ಸಿಂಗ್ ಮಾಡಲು ಪ್ರಚೋದಿಸಿದ್ದರು ಎಂದು ಮಣಿಕಾ ದೂರಿದ್ದರು.

ಈ ಟೂರ್ನಿಯಲ್ಲಿ ಬಲಾಢ್ಯ ಚೀನಾ ತಂಡವೂ ಕಣಕ್ಕಿಳಿಯಲಿದೆ. ಪುರುಷರ ಸಿಂಗಲ್ಸ್, ತಂಡ ಮತ್ತು ಡಬಲ್ಸ್ ವಿಭಾಗದಲ್ಲಿ ಸ್ಪರ್ಧೆಗಳು ನಡೆಯಲಿವೆ.

ತಂಡಗಳು: ಪುರುಷರು: ಮಾನವ್ ಠಕ್ಕರ್, ಶರತ್ ಕಮಲ್, ಜಿ. ಸತ್ಯನ್, ಹರ್ಮಿತ್ ದೇಸಾಯಿ, ಸನೀಲ್ ಶೆಟ್ಟಿ.

ಡಬಲ್ಸ್: ಶರತ್ ಕಮಲ್–ಜಿ. ಸತ್ಯನ್, ಮಾನವ್ ಠಕ್ಕರ್–ಹರ್ಮೀತ್ ದೇಸಾಯಿ

ಮಹಿಳೆಯರು: ತಂಡ: ಸುತೀರ್ಥ ಮುಖರ್ಜಿ, ಶ್ರೀಜಾ ಅಕುಲಾ, ಐಹಿಕಾ ಮುಖರ್ಜಿ, ಅರ್ಚನಾ ಕಾಮತ್

ಡಬಲ್ಸ್: ಅರ್ಚನಾ ಕಾಮತ್–ಶ್ರೀಜಾ ಅಕುಲ್, ಸುತೀರ್ಥ ಮುಖರ್ಜಿ–ಐಹಿಕಾ ಮುಖರ್ಜಿ.

ಮಿಶ್ರ ಡಬಲ್ಸ್: ಮಾನವ್ ಠಕ್ಕರ್–ಅರ್ಚನಾ ಕಾಮತ್, ಹರ್ಮೀತ್ ದೇಸಾಯಿ–ಶ್ರೀಜಾ ಅಕುಲಾ.

ಸಮರ್ಥ್‌ಗೆ ಪ್ರಶಸ್ತಿ ‘ಖುಷಿ’

ರಾಜ್ಯ ರ್‍ಯಾಂಕಿಂಗ್ ಟಿಟಿ: ತವಂತ್ ನೀರ್ಲಜೆಗೂ ಗರಿ

ಪ್ರಜಾವಾಣಿ ವಾರ್ತೆ

ಪ್ರಶಸ್ತಿಗಳೊಂದಿಗೆ (ಎಡದಿಂದ) ಖುಷಿ, ತವಂತ್ ಮತ್ತು ಸಮರ್ಥ್

ಬೆಂಗಳೂರು: ಸಮರ್ಥ್ ಕುರಡಿಕೇರಿ ಹಾಗೂ ಖುಷಿ ವಿ. ಅವರು ರಾಜ್ಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ಸಿಂಗಲ್ಸ್ ವಿಭಾಗಗಳ ಪ್ರಶಸ್ತಿ ಜಯಿಸಿದ್ದಾರೆ.

ಪದಕರಹಿತರ ಸಿಂಗಲ್ಸ್ ವಿಭಾಗದಲ್ಲಿ (ಎನ್‌ಎಮ್‌ಎಸ್) ತವಂತ್ ನೀರ್ಲಜೆ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಮಲ್ಲೇಶ್ವರಂ ಸಂಸ್ಥೆಯ ಕ್ರೀಡಾಂಗಣದಲ್ಲಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಸಮರ್ಥ್ 13-11, 11-7, 9-11, 11-9, 11-8ರಿಂದ ಶ್ರೇಯಸ್ ತೆಲಂಗ್ ಅವರನ್ನು ಮಣಿಸಿದರು.

ಸೆಮಿಫೈನಲ್‌ನಲ್ಲಿ ಸಮರ್ಥ್ 11-7, 11-9, 11-9, 13-11ರಿಂದ ಆಕಾಶ್ ಕೆ.ಜೆ. ಅವರ ಸವಾಲು ಮೀರಿದರೆ, ಶ್ರೇಯಸ್ 11-9, 8-11, 11-6, 14-12, 10-12, 12-14, 11-4ರಿಂದ ರಕ್ಷಿತ್ ಆರ್. ಬಾರಿಗಿಡದ ಎದುರು ಗೆದ್ದಿದ್ದರು.

ಖುಷಿ ಅವರು ಮಹಿಳೆಯರ ಸಿಂಗಲ್ಸ್ ಫೈನಲ್ ಪಂದ್ಯದಲ್ಲಿ 11-9, 11-6, 11-9, 8-11, 12-10ರಿಂದ ಮರಿಯಾ ರೋನಿ ಅವರನ್ನು ಸೋಲಿಸಿದರು. ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಖುಷಿ 11-6, 6-11, 5-11, 11-9, 11-9, 11-5ರಿಂದ ಕರುಣಾ ಜಿ. ಎದುರು ಜಯ ಸಾಧಿಸಿದ್ದರು. ಮತ್ತೊಂದು ಪಂದ್ಯದಲ್ಲಿ ಮರಿಯಾ 11-7, 12-10, 8-11, 16- 14, 11-8ರಿಂದ ಅನರ್ಘ್ಯಾ ಮಂಜುನಾಥ್ ಅವರನ್ನು ಸೋಲಿಸಿದ್ದರು.

ಪದಕರಹಿತರ ವಿಭಾಗದಲ್ಲಿ ತವಂತ್ 11-7, 11-7, 11-8ರಿಂದ ರೋಹಿತ್ ರವಿ ಕುಮಾರ್ ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ತವಂತ್ 11-9, 12-10, 8-11, 11-7ರಿಂದ ಸಿದ್ಧಾಂತ್ ವಾಸನ್ ಎದುರು ಮತ್ತು ರೋಹಿತ್ ಅವರು 11-8, 11-8, 11-7ರಿಂದ ಸಂಜಯ್ ಮುರಳಿಕೃಷ್ಣ ವಿರುದ್ಧ ಗೆದ್ದರು.

ಬಾಕ್ಸಿಂಗ್: ಸುಮಿತ್ ಶುಭಾರಂಭ

ಬಳ್ಳಾರಿ: ಏಷ್ಯನ್ ಪದಕವಿಜೇತ ಬಾಕ್ಸರ್ ಸುಮಿತ್ ಸಂಗ್ವಾನ್ ಬುಧವಾರ ಇಲ್ಲಿಯ ಇನ್ಸ್ಪಾಯರ್ ಇನ್ಸ್ಟಿಟ್ಯೂಟ್ ಆಫ್ ಸ್ಪೋರ್ಟ್ಸ್‌ನಲ್ಲಿ ಆರಂಭವಾದ ರಾಷ್ಟ್ರೀಯ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಶುಭಾರಂಭ ಮಾಡಿದರು.

ಹರಿಯಾಣದ ಸುಮಿತ್ 86 ಕೆಜಿ ವಿಭಾಗದ ಬೌಟ್‌ನಲ್ಲಿ ಆಂಧ್ರದ ಹರೀಶ್ ಪ್ರಸಾದುಲಾ ವಿರುದ್ಧ ಜಯಿಸಿದರು. ಹರಿಯಾಣದ ಸುಮಿತ್ 2012ರಲ್ಲಿ ಲಂಡನ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದರು.

2019ರ ಪ್ರೆಸಿಡೆಂಟ್ಸ್ ಕಪ್ ಚಿನ್ನದ ಪದಕ ವಿಜೇತ ನೀರಜ್ ಸ್ವಾಮಿ 48 ಕೆಜಿ ವಿಭಾಗದಲ್ಲಿ 5–0 ಯಿಂದ ಹರಿಯಾಣದ ಸಾಗರ್ ವಿರುದ್ಧ ಜಯಿಸಿದರು.

54 ಕೆಜಿ ವಿಭಾಗದಲ್ಲಿ ಪಂಜಾಬ್‌ನ ರಾಜಪಿಂದರ್ ಸಿಂಗ್ 5–0ಯಿಂದ ರಾಹುಲ್ ನಿಲ್ತು ವಿರುದ್ಧ ಗೆದ್ದರು. 75 ಕೆಜಿ ವಿಭಾಗದಲ್ಲಿ ನಿಖಿಲ್ ದುಬೆ ಗುಜರಾತಿನ ಸೆಜಾದ್ ಲಿಲ್ಗಾರ್ ವಿರುದ್ಧ ಗೆದ್ದರೆ, ಛತ್ತೀಸಗಡದ ದಿನೇಶ್ ಕುಮಾರ್ 3–2ರಿಂದ ಬಂಗಾಳದ ಅಭಿಷೇಕ್ ಶಾ ವಿರುದ್ಧ ಜಯಿಸಿದರು.

ಈ ಟೂರ್ನಿಯಲ್ಲಿ ಚಿನ್ನದ ಪದಕ ಜಯಿಸುವ ಬಾಕ್ಸರ್‌ಗಳು ಮುಂದಿನ ತಿಂಗಳು ಬೆಲ್‌ಗ್ರೇಡ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ನೇರ ಅರ್ಹತೆ ಗಿಟ್ಟಿಸಲಿದ್ದಾರೆ. ಇದೇ 24ರಂದು ಫೈನಲ್ ಪಂದ್ಯಗಳು ನಡೆಯಲಿವೆ ಎಂದು ಬಾಕ್ಸಿಂಗ್ ಫೆಡರೇಷನ್ ಮೂಲಗಳು ತಿಳಿಸಿವೆ

ಪಯೋನಿಯರ್ಸ್ ಎಫ್‌ಸಿಯ ಶ್ರಾವಣಿ (ಎಡ) ಮತ್ತು ಮಾಡರ್ನ್ ಗರ್ಲ್ಸ್ ಎಫ್‌ಸಿ ತಂಡದ ಭೂಮಿಕಾ ನಡುವೆ ಚೆಂಡಿಗಾಗಿ ಪೈಪೋಟಿ– ಪ್ರಜಾವಾಣಿ ಚಿತ್ರ

ರಾಜ್ಯದ ಒಲಿಂಪಿಯನ್ ಹಾಕಿ ಪಟುಗಳಿಗೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದವರಿಗೆ ಬೆಂಗಳೂರಿನಲ್ಲಿ ಬುಧವಾರ ಹಾಕಿ ಕರ್ನಾಟಕ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ (ನಿಂತವರು–ಎಡದಿಂದ) ವಿ.ಆರ್. ರಘುನಾಥ್, ಅಂಪೈರ್ ರಘು ಪ್ರಸಾದ್, ಎಸ್.ವಿ.ಸುನಿಲ್, ಭಾರತ ಜೂನಿಯರ್ ಪುರುಷರ ಹಾಕಿ ತಂಡದ ಕೋಚ್ ಬಿ.ಜೆ.ಕಾರ್ಯಪ್ಪ, ಸುರೇಶ್ ಎಚ್. (ಭಾರತ ಮಹಿಳಾ ತಂಡದ ಸಹಾಯಕ ಕೋಚ್ ಅಂಕಿತಾ ಬಿ.ಎಸ್.ಪರವಾಗಿ) ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ (ಕುಳಿತವರು) ಹಾಕಿ ಕರ್ನಾಟಕ ಖಜಾಂಚಿ ಪಿ.ಎ.ಅಯ್ಯಪ್ಪ, ಅಧ್ಯಕ್ಷ ಎಸ್.ವಿ.ಎಸ್. ಸುಬ್ರಮಣ್ಯ ಗುಪ್ತಾ, ಕೆಒಎ ಅಧ್ಯಕ್ಷ ಕೆ.ಗೋವಿಂದರಾಜ್, ಕ್ರೀಡಾ ಸಚಿವ ಕೆ.ಸಿ.ನಾರಾಯಣ ಗೌಡ, ಕೆಒಎ ಪ್ರಧಾನ ಕಾರ್ಯದರ್ಶಿ ಟಿ.ಅನಂತರಾಜು ಮತ್ತು ಹಾಕಿ ಕರ್ನಾಟಕ ಪ್ರಧಾನ ಕಾರ್ಯದರ್ಶಿ ಎ.ಬಿ.ಸುಬ್ಬಯ್ಯ ಉಪಸ್ಥಿತರಿದ್ದರು

– ಪ್ರಜಾವಾಣಿ ಚಿತ್ರ

ಫುಟ್‌ಬಾಲ್: ರಚನಾ ಹ್ಯಾಟ್ರಿಕ್ ಗೋಲು

ಬೆಂಗಳೂರು: ರಚನಾ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಪಿಂಕ್ ಪ್ಯಾಂಥರ್ಸ್ ತಂಡವು ಕೆಎಸ್‌ಎಫ್‌ಎ ಸ್ಪೋರ್ಟಿಂಗ್ ಪ್ಲಾನೆಟ್ ಟ್ರೋಫಿ ಮಹಿಳಾ ಫುಟ್‌ಬಾಲ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಬೆಂಗಳೂರು ಫುಟ್‌ಬಾಲ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಪಿಂಕ್ ಪ್ಯಾಂಥರ್ಸ್ 7–0 ಗೋಲುಗಳಿಂದ ಸಾಯ್ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿತು. ವಿಜೇತ ತಂಡದ ರಚನಾ 20, 32 ಮತ್ತು 60ನೇ ನಿಮಿಷಗಳಲ್ಲಿ ಗೋಲು ದಾಖಲಿಸಿದರೆ, ಅಂಶಿತಾ (14 ಮತ್ತು 30ನೇ ನಿ.) ಮತ್ತು ನೂತನಾ (23 ಮತ್ತು 53ನೇ ನಿ.) ತಲಾ ಎರಡು ಗೋಲು ಹೊಡೆದರು. ಮತ್ತೊಂದು ಪಂದ್ಯದಲ್ಲಿ ಮೈತ್ರೇಯಿ (29 ಮತ್ತು 46ನೇ ನಿ.) ಮತ್ತು ತ್ರೇಜಾ (43 ಮತ್ತು 53ನೇ ನಿ.) ದಾಖಲಿಸಿದ ಗೋಲುಗಳ ನೆರವಿನಿಂದ 4–2ರಿಂದ ಪಯೋನಿಯರ್ಸ್ ಎಫ್‌ಸಿಯನ್ನು ಸೋಲಿಸಿತು. ಪಯೋನಿಯರ್ಸ್ ಪರ ಪ್ರಿಯಾ ಮತ್ತು ಶ್ರಾವಣಿ ಕಾಲ್ಚಳಕ ತೋರಿದರು.

ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್: ಅಭಿಷೇಕ್, ಪಾರುಲ್ ಪ್ರಥಮ

ವಾರಂಗಲ್ (ಪಿಟಿಐ): ರೈಲ್ವೆಸ್ ತಂಡದ ಅಭಿಷೇಕ್ ಪಾಲ್ ಮತ್ತು ಪಾರುಲ್ ಚೌಧರಿ ಬುಧವಾರ ಇಲ್ಲಿ ಆರಂಭವಾದ 60ನೇ ರಾಷ್ಟ್ರೀಯ ಓಪನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಜವಾಹರ ಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕೂಟದಲ್ಲಿ ರೈಲ್ವೆಸ್ ಮತ್ತು ಸರ್ವಿಸಸ್ ಅಥ್ಲೀಟ್‌ಗಳ ನಡುವೆ ತುರುಸಿನ ಪೈಪೋಟಿ ನಡೆಯಿತು. ಪುರುಷರ 5000 ಮೀಟರ್ಸ್ ಓಟದಲ್ಲಿ ಅಭಿಷೇಕ್ ಮತ್ತು ಮಹಿಳೆಯರ ವಿಭಾಗದಲ್ಲಿ ಪಾರುಲ್ ಚೌಧರಿ ಗೆದ್ದರು.

ಫಲಿತಾಂಶಗಳು: ಪುರುಷರು: 5000 ಮೀ ಓಟ: ಅಭಿಷೇಕ್ ಪಾಲ್ (ರೈಲ್ವೆ: 14ನಿ,16.35ಸೆ) –1, ಧರ್ಮೆಂದರ್ (ಸರ್ವಿಸಸ್)–2, ಅಜಯಕುಮಾರ್ (ಸರ್ವಿಸಸ್)–3

ಮಹಿಳೆಯರು: 5000 ಮೀ ಓಟ: ಪಾರುಲ್ ಚೌಧರಿ (ರೈಲ್ವೆ; 15ನಿ,59.69ಸೆ)–1, ಕೋಮಲ್ ಚಂದ್ರಕಾಂತ್ ಜಗದಾಳೆ (ಮಹಾರಾಷ್ಟ್ರ)–2, ಸಂಜೀವಿನಿ ಬಾಬರ್ ಜಾಧವ್ (ಮಹಾರಾಷ್ಟ್ರ)–3. ಪೋಲ್‌ವಾಲ್ಟ್: ಪವಿತ್ರಾ ವೆಂಕಟೇಶ್ (ತಮಿಳುನಾಡು; 3.90 ಮೀ)–1, ಮರಿಯಾ ಜೈಸನ್ (ರೈಲ್ವೆ)–2, ಕೃಷ್ಣ ರಚನ್ (ರೈಲ್ವೆ)–3.

ಯೂತ್ ಟಿಟಿ: ಯಶಸ್ವಿನಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಯಶಸ್ವಿನಿ ಘೋರ್ಪಡೆ– ಪ್ರಜಾವಾಣಿ ಸಂಗ್ರಹ ಚಿತ್ರ

ಬೆಂಗಳೂರು: ಕರ್ನಾಟಕದ ಯಶಸ್ವಿನಿ ಘೋರ್ಪಡೆ ಅವರು ಟ್ಯೂನಿಷಿಯಾದ ಟ್ಯುನಿಸ್‌ನಲ್ಲಿ ನಡೆದ ಯೂತ್ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 17 ವರ್ಷದೊಳಗಿನವರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಮಂಗಳವಾರ ನಡೆದ ಟೂರ್ನಿಯ ಫೈನಲ್ ಹಣಾಹಣಿಯಲ್ಲಿ ಅವರು 11–6, 14–12, 11–7ರಿಂದ ಈಜಿಪ್ಟ್‌ನ ಫರೀದಾ ಬಾದವಿ ಅವರನ್ನು ಮಣಿಸಿದರು.

ಇದಕ್ಕೂ ಮೊದಲು ನಡೆದ ಸೆಮಿಫೈನಲ್‌ನ ಜಿದ್ದಾಜಿದ್ದಿ ಪೈಪೋಟಿಯಲ್ಲಿ ಭಾರತದವರೇ ಆದ ಲಕ್ಷಿತಾ ನಾರಂಗ್ ಎದುರು 8-11, 11-4, 11-6, 13-11ರಿಂದ ಯಶಸ್ವಿನಿ ಅವರು ಜಯ ಸಾಧಿಸಿದರು.

ಮ್ಯಾಂಚೆಸ್ಟರ್ ಯುನೈಟೆಡ್‌ಗೆ ಸೋಲು

ಬರ್ನ್, ಸ್ವಿಟ್ಜರ್ಲೆಂಡ್ (ಎಎಫ್‌ಪಿ): ಖ್ಯಾತ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಗಳಿಸಿದ ಏಕೈಕ ಗೋಲು ಮ್ಯಾಂಚೆಸ್ಟರ್ ಯುನೈಟೆಡ್ ತಂಡಕ್ಕೆ ಸಾಕಾಗಲಿಲ್ಲ. ಚಾಂಪಿಯನ್ಸ್ ಲೀಗ್ ಟೂರ್ನಿಯಲ್ಲಿ ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ ಆ ತಂಡವು ಯಂಗ್ ಬಾಯ್ಸ್ ತಂಡದ ಎದುರು 1–2ರಿಂದ ಸೋಲು ಅನುಭವಿಸಿತು.

ಮ್ಯಾಂಚೆಸ್ಟರ್ ತಂಡಕ್ಕೆ ರೊನಾಲ್ಡೊ 13ನೇ ನಿಮಿಷದಲ್ಲೇ ಗೋಲು ದಾಖಲಿಸಿ ಮುನ್ನಡೆ ಗಳಿಸಿಕೊಟ್ಟರು. ಆದರೆ ಮೌಮಿ ಗಾಮೇಲು (66ನೇ ನಿಮಿಷ) ಹಾಗೂ ತೀಸನ್ ಸಿಬಾಚು (90 + 5 ನೇ ನಿಮಿಷ) ಕಾಲ್ಚಳಕ ತೋರಿ ಯಂಗ್ ಬಾಯ್ಸ್ ತಂಡದ ಗೆಲುವಿಗೆ ಕಾರಣರಾದರು.

ಟೆನಿಸ್: ಸೆಮಿಫೈನಲ್‌ಗೆ ಕಾಶ್ವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ವಿ ಸುನಿಲ್ ಅವರು ಅಗ್ರಶ್ರೇಯಾಂಕದ ಮಹಿಕಾ ರೆಡ್ಡಿ ಅವರಿಗೆ ಸೋಲುಣಿಸಿ ಎಐಟಿಎ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ತಲುಪಿ ದ್ದಾರೆ.

ರಾಜ್ಯ ಲಾನ್ ಟೆನಿಸ್ ಸಂಸ್ಥೆಯ (ಕೆಎಸ್‌ಎಲ್‌ಟಿಎ) ಆಶ್ರಯದಲ್ಲಿ ನಡೆಯುತ್ತಿರುವ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಬುಧವಾರ ಕಾಶ್ವಿ 6-2, 6-3ರಿಂದ ಮಹಿಕಾ ಎದುರು ಗೆದ್ದರು. ಎಂಟರಘಟ್ಟದ ಇನ್ನೊಂದು ಪಂದ್ಯದಲ್ಲಿ ಶ್ರೀನಿಧಿ ಚೌಧುರಿ, ಮೂರನೇ ಶ್ರೇಯಾಂಕದ ಜೈನಾ ಅಂಬರ್ ಅವರನ್ನು 6-4, 6-3ರಿಂದ ಮಣಿಸಿದರು.

ಬಾಲಕರ ಸಿಂಗಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಅಗ್ರಶ್ರೇಯಾಂಕದ ಆರಾಧ್ಯ ದ್ವಿವೇದಿ 6-2, 6-1ರಿಂದ ಪ್ರಣವ್ ಮಹೇಶ್ ಎದುರು, ಸೆಹಜ್ ಸಿಂಗ್ 6-4, 6-2ರಿಂದ ನಿಖಿಲ್ ಶ್ರೀನಿವಾಸ್ ವಿರುದ್ಧ ಜಯ ಸಾಧಿಸಿದರು. ಲೀತಾಯಿಶ್ 6-0,6-2ರಿಂದ ಅಭಿಷೇಕ್ ಸುಬ್ರಮಣಿಯನ್ ಎದುರು ಗೆಲುವು ಪಡೆದರು.

ಅಭ್ರದೀಪ್ 7-5, 6-2ರಿಂದ ಕ್ರಿಸ್ಟೊ ಬಾಬು ಎದುರು ಜಯ ಸಾಧಿಸಿ ನಾಲ್ಕರ ಘಟ್ಟಕ್ಕೆ ಮುನ್ನಡೆದರು.

ಬಾಲಕಿಯರ ಸಿಂಗಲ್ಸ್ ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಸುಶ್ಮಿತಾ ರವಿ 6-4, 6-4ರಿಂದ ಮೇಘನಾ ಜಿ.ಡಿ. ಎದುರು ಗೆದ್ದರೆ, ಸಾನ್ವಿ ಮಿಶ್ರಾ ಉಮಮ್ ಅಹಮದ್ ಎದುರು ವಾಕ್‌ಓವರ್ ಪಡೆದರು.

ಹೊರಗೆ ಹೋಗುವಾಗ ಮುಖಗವಸು ಧರಿಸಿ